ಸಂವಾದ

ಜುಲೈ ೨೦೦೮ ಸಂ. ೨೦



ನೆನಪು:
ಮಾರ್ಟಿನ್ ಲೂಥರ್ ಕಿಂಗ್

ಬಿಜೆಪಿ ಬಂದ ಮೇಲೆ...

ಸಂವಾದ

ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೯
ಜುಲೈ ೨೦೦೮

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೪೮೦೨೭೮/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23480278, 94480 48306
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಹೊಸ ಪುಸ್ತಕ ೦೪
❑ ಅಂತರಂಗ ೦೫
❑ ಸಂಪಾದಕರೊಂದಿಗೆ ಸಂವಾದ ೦೬
○ ಪ್ರೊ॥ ಕೆ.ಎಸ್. ಭಗವಾನ್
○ ಅಣ್ಣಿ ಮಂಗಳೂರು
❑ ಸಾಮಾಜಿಕ ಅನ್ಯಾಯ ಅಸಮಾನತೆ ಹಾಗೂ ಜಾತಿ ವ್ಯವಸ್ಥೆ ೦೮
○ ಡಾ॥ ಷಣ್ಮುಖ
❑ ಬಿಜೆಪಿ ಬಂದ ಮೇಲೆ... ೧೨
○ ಪ್ರೊ॥ ಜಿ.ಕೆ. ಗೋವಿಂದರಾವ್



❑ ಜಾಗತೀಕರಣ ಮತ್ತು ಸಾಂಸ್ಕೃತಿಕ ತಲ್ಲಣಗಳು ೧೬
○ ಡಾ॥ ಎಚ್.ಟಿ ಪೋತೆ
❑ ಗೊಂದಲಗಳ ಸುಳಿಯಲ್ಲಿ ಟಿಬೆಟ್ ೨೦
○ ನಾ. ದಿವಾಕರ
❑ ಖಾಸಗೀಕರಣದ ಪ್ರಭಾವದಿಂದಾಗಿ ಶಿಕ್ಷಣದ ಮೇಲಾದ ದುಷ್ಪರಿಣಾಮ ೨೪
○ ಗೋಪುರದ ರಮೇಶ್
❑ ಕಥೆ ಮುಗಿಯಿತು ಈಗ ಪೂರ್ಣವಿರಾಮ! ೨೮
○ ಕೇಶವ ಮಳಗಿ
❑ ನನಗೊಂದು ಕನಸಿದೆ/ತಾತ್ವಿಕರ ಸ್ಫೂರ್ತಿ... ೩೦
○ ಡಾ॥ ಕೆ. ಪುಟ್ಟಸ್ವಾಮಿ
❑ ಮೌಲಿಕವಾದ 'ಕುವೆಂಪುಯುಗ' ೪೨
○ ಡಾ॥ ಶ್ರೀಧರ ಪಿಸ್ಸೆ
❑ ರಾಜಕೀಯ ಪ್ರಾತಿನಿಧ್ಯತೆ ಮತ್ತು ಮಹಿಳಾ ಸಬಲೀಕರಣ ೩೮
○ ಡಾ॥ ಅನಂತ ಎಸ್
❑ ಕನಕದಾಸರ 'ಮೋಹನ ತರಂಗಿಣಿ ೪೨
○ ಡಾ॥ ಶ್ರೀಧರ ಪಿಸ್ಸೆ
❑ ದಲಿತ್ ಡೈರಿ ೪೬
○ ಚಂದ್ರಭಾನ್ ಪ್ರಸಾದ್/ ಡೊಮಿನಿಕ್
❑ ಬುದ್ಧಾಯಣ ೫೦
○ ಸಿ.ಎಚ್ ರಾಜಶೇಖರ್

ಕವನಗಳು : ❑ ದೇವರು ೧೧ ❑ ಹಾಯ್ಕುಗಳು ೨೩
❑ ನಾನಿದ್ದ ಜೈಲಿನಲ್ಲಿ ೪೧

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಪತ್ರಾಗಾರ

ಭಾರತೀಯ ಸಂಸ್ಕೃತಿಯ ಅರ್ಥ ಬಿಡಿಸುತ್ತಾ...

ಪ್ರಿಯ ಸಂಪಾದಕರೆ,

ಭಾರತವು ಜನಸಂಖ್ಯಾ ದೃಷ್ಟಿಯಿಂದ ವಿಶ್ವದ ೨ನೇಯ ಅತಿ ದೊಡ್ಡ ರಾಷ್ಟ್ರವಾಗಿದೆ. ಭೌಗೋಳಿಕವಾಗಿ ೭ನೇಯ ಸ್ಥಾನವನ್ನಾಕ್ರಮಿಸಿದೆ. ಭಾರತವನ್ನು ಹಲವಾರು ಐತಿಹಾಸಿಕ ಘಟನೆಗಳು ವಿಶ್ವದ ಮಟ್ಟದಲ್ಲಿ ಜನಪ್ರಿಯಗೊಳಿಸಿವೆ. ಭಾರತದ, ಸಂಸ್ಕೃತಿಯು ವೈವಿಧ್ಯಮಯವಾದ್ದು, ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧರು, ಮುಂತಾದ ಬೇರೆ ಬೇರೆ ಧರ್ಮೀಯರು ಜೀವಿಸುತ್ತಿದ್ದರೂ. ರಾಷ್ಟ್ರದ ಅಖಂಡತೆಯ ದೃಷ್ಟಿಯಿಂದ ಅವರೆಲ್ಲರೂ ಒಂದೆ.

ಭಾರತೀಯ ಸಂಸ್ಕೃತಿಯ ಅರ್ಥವನ್ನು ಬಿಡಿಸುತ್ತಾ ಹೋದರೆ ಸಂಸ್ಕೃತಿಯೆಂಬುದು, ಜೀವನ ವಿಧಾನ ಅಥವಾ ಜೀವನಾಚರಣೆ ಎಂದಾಗುತ್ತದೆ. ಆದರೆ ಪಾಶ್ಚಾತ್ಯ ದೇಶಗಳತ್ತ ನೋಟ ಹರಿಸಿದಾಗ ಸಂಸ್ಕೃತಿಯೆಂಬುದಕ್ಕೆ ಅಲ್ಲಿ ಬೇರೆಯೆದೇ ಆದ ವ್ಯಾಖ್ಯಾನವಿದೆ. ಪಾಶ್ಚಾತ್ಯರು ಸಂಸ್ಕೃತಿಯೆಂಬುದನ್ನು ಸತ್ವಯುತವಾದ ನೆಲೆಗಟ್ಟಿನಲ್ಲಿ ನೋಡುತ್ತಾರೆ. ಸಂಸ್ಕೃತಿ ಅವರ ಬದುಕನ್ನು ಕಟ್ಟುತ್ತದೆ. ಹೀಗೆ ಭಾರತಕ್ಕೂ ಮತ್ತು ಪಾಶ್ಚಾತ್ಯರಿಗೂ ಸಂಸ್ಕೃತಿಯ ಅರ್ಥ ಬೇರೆ ಬೇರೆಯಾಗಿದೆ.

ಹೀಗೆ ಪಾಶ್ಚಾತ್ಯರು ತಮ್ಮ ವಿಭಿನ್ನವಾದಂತಹ ಸಂಸ್ಕೃತಿಯ ಮೂಲಕ ಭಾರತದ ಮೇಲೆ ಯಾವ ರೀತಿಯ ಪ್ರಭಾವವನ್ನು ಬೀರಿದ್ದಾರೆನ್ನುವುದು ತಿಳಿಯುವುದು ಬಹುಮುಖ್ಯವಾಗುತ್ತದೆ.

ಪಾಶ್ಚಾತ್ಯರ ಉಡುಪುಗಳ ಪ್ರಭಾವ, ಅವರ ಮುಕ್ತ ಜೀವನ ಶೈಲಿ ಮತ್ತಿತರ ಶೈಲಿಗಳು ಪ್ರಭಾವ ಬಿರಿದ್ದರೂ, ಇವುಗಳನ್ನು ಹೊರತುಪಡಿಸಿ ಅವರ ಸಂಸ್ಕೃತಿಯ ಪ್ರಭಾವದ ಅನ್ವೇಷಣೆ ಮಾಡ ಹೊರಟರೆ ಹಲವಾರು ಸತ್ಯಸಂಗತಿಗಳು ಗೋಚರವಾಗುತ್ತವೆ. ಪಾಶ್ಚಾತ್ಯರು ವಿಲಾಸಿ ಪ್ರಿಯರು, ಅವರಲ್ಲಿ ಗಟ್ಟಿಯಾದ ಸಾಮಾಜಿಕ ಸಂಬಂಧಗಳಿಲ್ಲ ಎನ್ನುವ ಬಾಲಿಶತನವನ್ನು ತೆಗೆದು ಪಕಕ್ಕಿಡಬೇಕಾಗುತ್ತದೆ. ಮುಖ್ಯವಾಗಿ ಭಾರತೀಯ ಸಂಸ್ಕೃತಿಯ ಮೇಲೆ ಪಾಶ್ಚಾತ್ಯರ ಬೌದ್ಧಿಕ ಸಾಮರ್ಥ್ಯದ ಪ್ರಭಾವ ಹೆಚ್ಚಾಗಿದ್ದನ್ನು ನೋಡಬಹುದು.

ಅದೇನೆಂದರೆ ಸಾಂಪ್ರದಾಯಿಕ ರೂಢಿ, ಸಂಪ್ರಾದಾಯಗಳನ್ನು ಆಚರಿಸಿಕೊಂಡಿದ್ದ ಭಾರತದಲ್ಲಿ ಪಾಶ್ಚಾತ್ಯರು ಇಂಗ್ಲಿಷ್ ಶಿಕ್ಷಣವನ್ನು ಪರಿಚಯಿಸಿ, ಆ ಮೂಲಕ ಬೇರೆ ಬೇರೆ ಸಂಗತಿ, ವಿದ್ಯಮಾನಗಳನ್ನು ತಿಳಿಯಲು ಸಹಾಯ ಮಾಡಿದರು. ಹಾಗೂ ಶತಶತಮಾನಗಳಿಂದ ಭಾರತದಲ್ಲಿ ಭದ್ರವಾಗಿ ತಳವೂರಿದ್ದ ಹೀನ ಆಚರಣೆಗಳಾದ ಸತಿಪದ್ಧತಿ ಮೂಢ ನಂಬಿಕೆಗಳು ಜಾತಿ ಪದ್ಧತಿಗಳನ್ನು ನಿರ್ಮೂಲನೆ ಮಾಡುವಲ್ಲಿ ಅವಿರತವಾಗಿ ಶ್ರಮಿಸಿದರು. ಇದೂ ತಮ್ಮ ಆಡಳಿತದ ಅನುಕೂಲಕೋಸ್ಕರ ಮಾಡಿಕೊಂಡರು, ಇದರ ಕೊನೆಯ ಪಲಾನುಭವಿಗಳು ನಾವೇ ಎಂಬುದು ಜಗಜ್ಜಾಹಿರಾಗುತ್ತದೆ.

ಭಾರತೀಯ ಸಮಾಜದ ಮೇಲೆ ಸಂಸ್ಕೃತಿಯ ಪ್ರಭಾವದಿಂದ ನಮ್ಮ ಸಂಸ್ಕೃತಿಯ ಅಧಃಪತನವಾಗುತ್ತಿದೆ ಎಂದು ಆರೋಪಿಸುತ್ತಾರೆ. ಅದನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ವೈಯಕ್ತಿಕ ನೆಲೆಗಟ್ಟಿನಲ್ಲಿ ಯೋಚಿಸುವುದಾದರೆ ಒಬ್ಬ ವ್ಯಕ್ತಿ ತನಗೆ ಯಾವುದು ಒಳ್ಳೆಯದು ಅದನ್ನು ಒಪ್ಪಿಕೊಳ್ಳುತ್ತಾನೆ. ಬೇಡವಾದದ್ದನ್ನು ಒಪ್ಪಿ



ಪಾಶ್ಚಾತರು ಈ ರೀತಿ ಐತಿಹಾಸಿಕವಾಗಿ ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವ ಬೀರಿ ದ್ದಾರೆ. ಪ್ರಸ್ತುತ ಸನ್ನಿವೇಶದಲ್ಲೂ ಇದರ ಅವಾಹ್ಯತ ಪ್ರಸಾರಕ್ಕೆ ತಡೆಗೊಡೆಯಿಲ್ಲ. ಏಕೆಂದರೆ ಕೆಲವರು ಪಾಶ್ಚಾತ್ಯ ಕೊಂಡು ತನ್ನ ಜೀವನ ಹಾಳು ಮಾಡಿಕೊಳ್ಳಲಾರೆ. ಹಾಗೆಯೇ ಯಾರೋ ಹೇಳಿದರು ಅಂತ ಒಪ್ಪಿಕೊಳ್ಳುವ ಕಾಲ ಹೊರಟಹೋಯಿತು ಹಿಗಿದ್ದಾಗಲೂ ಕೂಡಾ ಪಾಶ್ಚಾತ್ಯ ಸಂಸ್ಕೃ ತಿಯನ್ನು ಒಪ್ಪಿಕೊಳ್ಳುತ್ತಿದ್ದಾರೆಂದರೆ ಅದಕ್ಕೆ ತನ್ನದೆಯಾದ ಸಕಾರಾತ್ಮಕ ಕಾರಣಗಳಿರ ಬಹುದು. ಮುಖ್ಯವಾಗಿ ನಾವು ಗಮನ ಹರಿಸಬೇಕಾದದ್ದು ಪಾಶ್ಚಾತ್ಯರು ಜಗತ್ತಿನಲ್ಲಿಯೆ, ತಾವೇ ಶ್ರೇಷ್ಠರು, ತಾವು ತುಂಬಾ ಬಲಾಢ್ಯರು ಅಂತ ತೋರಿಸಿಕೊಳ್ಳುವುದರ ಹಿಂದೆ ಅವರದೆಯಾದ ಬೌದ್ಧಿಕ ಶ್ರೀಮಂತಿಕೆ ಮತ್ತು ಅದಮ್ಯವಾದ ರಾಷ್ಟ್ರಪ್ರೇಮವಿದೆ. ಈ ಮೂಲಕವಾಗಿ ಅವರು ಬೇರೆ ರಾಷ್ಟ್ರಗಳಿಗೆ ಹೋಲಿಸಿಕೊಂಡು ಬಲಾಢ್ಯರಂತೆ ಬೀಗುತ್ತಿದ್ದಾರೆ. ಈ ರೀತಿ ಬಲಾಢ್ಯರು ಅಂತ ಜಗತ್ತಿಗೆ ತೋರಿಸಿ ಹೊರಟಾಗ ಸಹಜವಾಗಿಯೇ ದುರ್ಬಲನಿಗೆ ಅವನಿಗೆ ಸರಿಸಮಾನವಾಗಿ ಸೆಟೆದು ನಿಲ್ಲುವ ಎದೆಗಾರಿಕೆ ಮೊಳಕೆಯೊಡೆಯುತ್ತದೆ. ಇಂತಹ ಎದೆಗಾರಿಕೆಯ ವಾತಾವರಣಕ್ಕೆ ವೇದಿಕೆಯನ್ನು ಕಲ್ಪಿಸಿಕೊಟ್ಟವರೇ ಪಾಶ್ಚಾತ್ಯರು. ಹೀಗೆ ಪ್ರತಿಯೊಂದ ವಿಷಯದಲ್ಲೂ ಪಾಶ್ಚಾತ್ಯರನ್ನು ನೋಡಿ ಅನುಕರಣೆ ಮಾಡುತ್ತ ಸಾಗಿದೆ ಭಾರತೀಯ ಸಮಾಜವೆಂದರೆ ತಪ್ಪಾಗಲಿಕ್ಕಿಲ್ಲ.

ಆದರೆ ಪಾಶ್ಚಾತ್ಯರು ಎಂದೂ ಮತ್ತೊಬ್ಬರನ್ನು ಅನುಕರಣೆಯನ್ನು ಮಾಡಲು ಇಷ್ಟಪಟ್ಟವರಲ್ಲ. ಏಕೆಂದರೆ ಅವರ ಮನೋಸ್ಥಿತಿ ೫೦ ವರ್ಷಗಳ ಮುಂಚಿನದನ್ನು ಗ್ರಹಿಸುವಂತದ್ದು. ಇಂತಹ ವಿಭಿನ್ನ ಮನೋಸ್ಥಿತಿಗಳು ಅವರನ್ನು ಜಗತ್ತಿನ ಬಲಾಢ್ಯರು ಎನ್ನುವುದಕ್ಕೆ ಪೂರಕವಾಗುತ್ತಿವೆ.

ಹೀಗೆ ಇಂತಹ ವಿಭಿನ್ನ ಕಾರ್ಯ ಚಟುವಟಿಕೆಗಳನ್ನು ಅವರು ಯಾವಾಗಲೂ ಆಚರಣೆಯಲ್ಲಿಡುವ ಮೂಲಕ ಶ್ರೇಷ್ಠರೆನಿಸಿಕೊಳ್ಳುತ್ತಿದ್ದಾರೆ. ಭಾರತಕ್ಕೆ ಇಂತಹ ಬೌದ್ಧಿಕವಲಯ ತುಂಬಾ ಅವಶ್ಯಕವಾಗಿದೆ. ಮೇಲಿಂದ ಮೇಲೆ ಏರ್ಪಡುವ ಸಂಶೋಧನೆಗಳು, ಹೊಸ ವೈಚಾರಿಕತೆಯ ಉಗಮ ಮುಂತಾದವುಗಳನ್ನು ಪಾಶ್ಚಾತ್ಯರಿಂದ ಕಲಿಯಬೇಕಾಗಿದೆ. ಒಳ್ಳೆಯದನ್ನು ಸ್ವಿಕರಿಸುವದರಲ್ಲಿ ತಪ್ಪೇನಿದೆ, ಅದು ಅವರಿಂದ ಬಂದದ್ದು? ಅವರ ಪ್ರಭಾವದ್ದು ಎನ್ನುವ ಮನೋಭಾವವನ್ನು ಬಿಟ್ಟು ಪ್ರಗತಿಯಲ್ಲಿ ಹಾದಿಯಲ್ಲಿ ಅನುಕರಣೆಯನ್ನು ಬಳಸಿಕೊಂಡು ಮುಂದೇ ಸಾಗೋಣ.

ಸಾಯಿಬಣ್ಣ
ಶಂಕರಘಟ್ಟ, ಶಿವಮೊಗ್ಗ

‘ಸಂವಾದ’ ಏನದು ಪಪ್ಪ!

ಪ್ರೀತಿಯ ಇಂದೂಧರ್ ಸಾರ್,

‘ಸಂವಾದ-ಸಂವಾದ’ಅಂತ ಅಂಚೆಯವನಿಗಾಗಿ ಕಾಯುವ ನನಗೆ ಪುಟ್ಟಿ ಹೀಗೆಂದಳು. ಪಪ್ಪಾ ‘ಸಂವಾದ’ ಏನದು? ‘ಸಂವಾದ’ವೆಂದರೆ ಇಂದೂಧರ ಹೊನ್ನಾಪುರರವರ ಸಂಪಾದಕತ್ವದಲ್ಲಿ ಹೊರಬರುತ್ತಿರುವ ಮಾಸಿಕ ಜ್ಞಾನದ ಬುತ್ತಿಯಮ್ಮ ಎಂದೆ. ಹೌದಾ ಪಪ್ಪಾ-ವಿಶೇಷವೇನಿರುತ್ತದೆ ಅನ್ನುವುದಾ!

ಸರ್ಕಾರ ನಡೆಸುವವರ ಗುಂಡಿಗೆಯನ್ನು ನಡುಗಿಸದೆ, ಬುದ್ಧನ ಸಿದ್ಧಾಂತಗಳಾದ ಪ್ರಜಾಸತ್ಮಾತಕ ವ್ಯವಸ್ಥೆಯಡಿಯಲ್ಲಿ ಕರುಣೆ-ದಯೆಗೆ ಪ್ರಾಮುಖ್ಯತೆ ಕೊಟ್ಟು ಕೋಮುವಾದ ಬಿಟ್ಟು ಮಾನವೀಯತೆ, ಶಾಂತಿ-ನೆಮ್ಮದಿ ಯಿಂದ ಸುಖೀ ರಾಜ್ಯವನ್ನು ನಡೆಸಲು ಮಾರ್ಗದರ್ಶನ ನೀಡುತ್ತಿದೆ. ಗಣಿ ದೊರೆ ಗಳ ಭೂಮಾಫಿಯಗಳ ಚಕ್ರವ್ಯಹದಿಂದ ಬಿಡಗಡೆಗೊಳಿಸಲು ಜನರನ್ನು ಎಚ್ಚರಿಸುವ ಎಚ್ಚರಿಕೆ ಗಂಟೆ!

ಹಿಂದುತ್ವ ಬಿಟ್ಟು-ಅಭಿವೃದ್ಧಿ ಮಂತ್ರವನ್ನು ಬೋಧಿಸುತ್ತಾ ಕೇಶವ ಶಿಲ್ಪದ ಮಾರ್ಗದರ್ಶನಕ್ಕಾಗಿ ಕಾಯುವ ಮಾನ್ಯ ಮುಖ್ಯಮಂತ್ರಿಗಳ ಕರಾಮತ್ತು ಏನಿರಬಹುದೆಂಬ ಬಗ್ಗೆ ಆಲೋಚಿಸಬೇಕಾದ ಅನಿವಾರ್ಯತೆಯನ್ನು ಮೂಡಿಸುತ್ತಿದೆ.

ಮುಂಬರುವ ದಿನಗಳಲ್ಲಿ ಸಂವಿಧಾನದ ಆಶಯಗಳಿಗೆ ಧಕ್ಕೆ ಬಾರದೆ-ಸ್ವಾತಂತ್ರ್ಯ ಸಮಾನತೆಯ ಉಳುವಿಗಾಗಿ ಹೋರಾಟ ಮಾಡುವ ರಂಗ ಸಿದ್ಧ ಮಾಡುತ್ತಿದೆ.

ಅಲ್ಪಸಂಖ್ಯಾತರು, ದಲಿತರು, ಹಿಂದುಳಿದ ವರ್ಗದವರು ಸದಾ ಎಚ್ಚರ ತಪ್ಪದೆ ಸಂವಿಧಾನವನ್ನು ಕಾಯಬೇಕೆಂದು ಬೋಧಿಸುತ್ತದೆಂದು ಪುಟ್ಟಿಗೆ ಹೇಳಿದೆ.

ದೊಡ್ಡಯಲ್ಲಪ್ಪ,
ಬೆಂಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಹೊಸ ಪುಸ್ತಕ

ಕುವೆಂಪು ಸಾಹಿತ್ಯ ದರ್ಶನ
ಲೇ: ಡಿ.ಎಸ್. ನಾಗಭೂಷಣ
ಬೆಲೆ: ರೂ. ೫೦/-

ನಾಡಿನ ಖ್ಯಾತ ದಾರ್ಶನಿಕ ಕವಿ ಕುವೆಂಪು ಅವರ ಸಾಹಿತ್ಯ ಕುರಿತಾದ ಅಪರೂಪದ ವಿಮರ್ಶಾ ಕೃತಿ ಇದು. ಈ ಕೃತಿ ಕುವೆಂಪು ಅವರ ಎಲ್ಲ ಸಾಹಿತ್ಯ ಕೃತಿಗಳ ಪರಾಮರ್ಶೆ ಮಾಡುವುದಿಲ್ಲ ವಾದರೂ ಅವರ ಮುಖ್ಯ ಸೃಜನಶೀಲ ಕೃತಿಗಳನ್ನು ಆಯ್ದು, ಒಟ್ಟಾರೆ ಅವರ ಸಾಹಿತ್ಯದ ವಿಶಿಷ್ಟತೆ ಅರ್ಥಪೂರ್ಣತೆ ಹಾಗೂ ಪ್ರಸ್ತುತತೆಯ ಪ್ರಶ್ನೆಗಳನ್ನು ಚರ್ಚಿಸುವ ಮೂಲಕ ಕುವೆಂಪು ಅವರು ಸಾರತಃ ಏನು ಎಂಬುದನ್ನು ಸಮಗ್ರವಾಗಿ ಪರಿಚಯಿಸಲು ಯತ್ನಿಸುತ್ತದೆ. ಹಾಗಾಗಿ ಅತ್ಯಂತ ಗಮನಾರ್ಹವಾದುದಾಗಿದೆ.

ಪ್ರಕಾಶಕರು: ಪ್ರಗತಿ ಗ್ರಾಫಿಕ್ಸ್ ವಿಜಯನಗರ, ಬೆಂಗಳೂರು-೫೬೦೦೪೦



ಧರ್ಮ ಪರೀಕ್ಷೆ
ಲೇ: ಡಾ॥ ರಹಮತ್ ತರೀಕೆರೆ
ಬೆಲೆ: ರೂ. ೧೪೦/-

ಡಾ॥ ರಹಮತ್ ತರೀಕೆರೆ ಅವರು ನಮ್ಮ ನಡುವಿನ ಅಪರೂಪದ ವಿದ್ವಾಂಸರು ಹಾಗೂ ಸಂಸ್ಕೃತಿ ಚಿಂತಕರು. ಅವರ ಬರಹಗಳು ಯಾವಾಗಲೂ ಸೌಜನ್ಯದ ಎಲ್ಲೆಯನ್ನು ಮೀರದಂಥವು. ಧರ್ಮ ಪರೀಕ್ಷೆ ಕೃತಿಯಲ್ಲಿ ಅವರು ರಾಜಕಾಣ, ಧರ್ಮ ಮತ್ತು ಸಂಸ್ಕೃತಿ ಕುರಿತು ತುಂಬಾ ಗಹನವಾದ ವಿಚಾರ ಹಾಗೂ ವಿಶ್ಲೇಷಣೆಗಳನ್ನು ಮಂಡಿಸಿದ್ದಾರೆ. ಧಾರ್ಮಿಕ ಕ್ಷೇತ್ರ ಮೂಲಭೂತವಾದಿಗಳಿಂದ ತುಂಬಿ ಹೋಗಿರುವ ಈ ದಿನಗಳಲ್ಲಿ ರಹಮತ್ ಅವರ ಚಿಂತನೆಗಳು ಹೊಸ ದಿಕ್ಕಿನತ್ತ ಓದುಗರನ್ನು ಕೊಂಡೊಯ್ಯುತ್ತವೆ. ವಿಶೇಷವಾಗಿ ಧರ್ಮ ಮತ್ತು ರಾಜಕಾರಣದ ನಡುವಿನ ಸೂಕ್ಷ್ಮಗಳನ್ನು ಲೇಖಕರು ಪರಿಶೀಲಿಸುವ ಕ್ರಮ ಅನನ್ಯವಾದುದಾಗಿದೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦೦೦೧

ಮಾಧ್ಯಮ-ಉದ್ಯಮ
ಲೇ: ಡಾ॥ ಬಿ. ಕೆ ರವಿ, ಸತ್ಯಪ್ರಕಾಶ್ ಎಂ. ಆರ್
ಬೆಲೆ: ರೂ. ೭೦/-

ಸಮೂಹ ಮಾಧ್ಯಮ ಕ್ಷೇತ್ರದ ಎಲ್ಲಾ ಆಳ ವಿಸ್ತಾರಗಳನ್ನು ಸವಿವರವಾಗಿ ಚರ್ಚಿಸುವ ಕೃತಿ ಇದು. ಭಾರತದ ಮಾಧ್ಯಮ ಕ್ಷೇತ್ರದಲ್ಲಾಗುತ್ತಿರುವ ಕ್ಷೇತ್ರ ಬದಲಾವಣೆ, ಹಾಘೂ ಅವು ಒಡ್ಡಿಕೊಳ್ಳುತ್ತಿರುವ ವ್ಯಾಪಾರೀಕರಣದ ಸವಾಲುಗಳನ್ನು ಕೃತಿಯಲ್ಲಿ ಅರ್ಥಪರ್ಣವಾಗಿ ವಿಶ್ಲೇಷಿಸಲಾಗಿದೆ. ಮಾಧ್ಯಮ ಮಿತ್ರರು, ಆಸಕ್ತವಲಯ ಹಾಗೂ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಕೃತಿ ಇದು. ಮಾಧ್ಯಮ ಕುರಿತ ಕನ್ನಡ ಕೃತಿಗಳ ಕೊರತೆಯನ್ನು ಈ ಕೃತಿ ನೀಗಿಸಬಲ್ಲದು.

ಪ್ರಕಾಶಕರು: ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಭವನ ಬೆಂಗಳೂರು-೫೬೦೦೦೨



ಮತಾಂತರ
ಲೇ: ಕಲಿಗಣನಾಥ ಗುಡದೂರು
ಬೆಲೆ: ರೂ. ೬೫/-

ಹೊಸ ತಲೆ ಮಾರಿನ ಕಥೆಗಾರರಲ್ಲಿ ವಿಶೇಷ ಆಸಕ್ತಿ ಹಾಗು ಗಮನ ಸೆಳೆಯುತ್ತಿರುವ ಕಲಿಗಣನಾಥ ಅವರ ಎರಡನೇ ಕಥಾ ಸಂಕಲನ ಇದು. ಬಿಸಿಲ ನಾಡಿನ ಈ ಕಥೆಗಾರ ಕಥೆಗಾಗಿ ಕಥೆ ಹೆಣಿಯುವ ಕಲೆಗಾರನಲ್ಲ. ಬದುಕಿನ ಹಸಿ ಹಸಿ ರಕ್ತ ಬೆವರುಗಳ, ಕಷ್ಟ ಕಾರ್ಪಣ್ಯಗಳ ಬೇಗುದಿಯನ್ನು ಅಕ್ಷರಗಳ ಮೂಲಕ ಉಣಬಡಿಸುವ ಅಪ್ಪಟ ಪ್ರತಿಭಾವಂತ. ಅವರ ಕಥೆಗಳನ್ನು ಓದುತ್ತಿದ್ದಂತೆ ಭಾರತದ ಒಡಲಾಳದಲ್ಲಿ ಹೊಕ್ಕಿ ಬಂದ ಅನುಭವವಾಗುತ್ತದೆ. ಇಲ್ಲಿರುವ ಎಂಟು ಕಥೆಗಳು ಬದುಕಿನ ತಲ್ಲಣಗಳ ಜೀವಂತ ಚಿತ್ರಣಗಳಂತೆ ಕಣ್ಣ ಮುಂದೆ ಮೂಡಿ ನಿಲ್ಲುತ್ತವೆ.

ಪ್ರಕಾಶಕರು: ಸಂಸ್ಕೃತಿ ಪ್ರಕಾಶನ ಬಳ್ಳಾರಿ-೫೮೩೧೦೨



ಮೀಸಲು
ಲೇ: ಡಾ॥ ಹಿ.ಶಿ ರಾಮಚಂದ್ರೇಗೌಡ
ಬೆಲೆ: ರೂ. ೮೫/-

ಜಾನಪದ ವಿದ್ವಾಂಸ ಡಾ॥ ರಾಮಚಂದ್ರೇಗೌಡ ಅವರು ವಿವಿಧ ಸಂದರ್ಭಗಳಲ್ಲಿ ಬರೆದ ಲೇಖನಗಳ ಸಂಗ್ರಹ ಇದು. ಅವರೇ ಹೇಳುವಂತೆ ಇಲ್ಲಿನ ಲೇಖನಗಳಿಗೆ ಬೇರೆ ವಯೋಮಾನವಿದೆ. ಕೆಲವಕ್ಕೆ ಹದೆಯವಿದ್ದರೆ ಮತ್ತೆ ಕೆಲವಕ್ಕೆ ಮಾಗಿದ ವಯೋಮಾನದ ಹದವಿದೆ. ಮೀಸಲಾತಿ, ಸಾಮಾಜಿಕ ಅಸಮಾನತೆ, ಸಾಂಸ್ಕೃತಿಕ ಅವನತಿ ಇವೇ ಮೊದಲಾದ ವಿಷಯಗಳನ್ನು ಕುರಿತ ವಿಶ್ಲೇಷಣೆಗಳಲ್ಲಿ ಲೇಖಕರು ಕಂಡುಂಡ ಅನಭವಗಳು ಹಾಸು ಹೊಕ್ಕಾಗಿವೆ. ಎಲ್ಲ ಲೇಖನಗಳಿಗೂ ಉಕ್ಕೆ ಹೊಡೆದ ಮಣ್ಣಿನಂತೆ ಆತ್ಮೀಯವಾಗಿದೆ.

ಪ್ರಕಾಶಕರು: ರೂಪ ಪ್ರಕಾಶನ ಕುವೆಂಪುನಗರ, ಮೈಸೂರು-೫೭೦೦೨೩

ಒಡನಾಟ (ವ್ಯಕ್ತಿ ಚಿತ್ರಗಳು)
ಲೇ: ಎಸ್. ಆರ್. ವಿಜಯಶಂಕರ
ಬೆಲೆ: ರೂ. ೧೨೦/-

ಕನ್ನಡ ಸಾಂಸ್ಕೃತಿಕ ಲೋಕದ ಗಣ್ಯರು ಹಾಗೂ ಇತರೆ ಕೆಲವು ಗಣ್ಯ ವ್ಯಕ್ತಿಗಳನ್ನು ಕುರಿತ ವ್ಯಕ್ತಿ ಚಿತ್ರಗಳ ವಿಶೇಷ ಕೃತಿ ಇದು. ಲೇಖಕರು ಮೂಲತಃ ವಿಮರ್ಶಕರಾದರೂ ಇಲ್ಲಿನ ವ್ಯಕ್ತಿ ಚಿತ್ರಗಳಲ್ಲಿ ಸೃಜನಾತ್ಮಕತೆ ಎದ್ದು ಕಾಣುತ್ತದೆ. ಸುಮಾರು ಎರಡು ದಶಕಗಳ ಕಾಲದ ಒಡನಾಟದ ನೆನಪಿನಂಗಳದಿಂದ ಹೆಕ್ಕಿ ತೆಗೆದಿರುವ ಇಲ್ಲಿನ ವ್ಯಕ್ತಿ ಚಿತ್ರಗಳು ಓದುಗರೊಂದಿಗೆ ನೇರ ಸಂವಾದ ನಡೆಸುವಷ್ಟು ಜೀವಂತವಾಗಿವೆ. ಮನುಷ್ಯ ಸಹಜ ಗುಣಾವಗುಣಗಳ ಸಾಧನೆ. ವೈಫಲ್ಯಗಳ ಅರ್ಥಪೂರ್ಣ ವಿವರಣೆಗಳಿವೆ.

ಪ್ರಕಾಶಕರು: ಆನಂದಕಂದ ಗ್ರಂಥ ಮಾಲೆ ಮಲ್ಲಾಡಿಹಳ್ಳಿ-೫೭೭೫೩೧

ಸಂಪಾದಕೀಯ

ಅಂತರಂಗ



ಜನರ 'ಹಾರ'ವೇ ಪರಿಹಾರವೇ?!

ಅಂತೂ ಬಿಜೆಪಿ ಸರ್ಕಾರ ಬಂತು. ಬಂದು ಬೆಳಾಗಾಗುವಷ್ಟರಲ್ಲಿ ಅನ್ನದಾತನ ಎದೆಗೆ ಗುಂಡಿಕ್ಕಿ ತನ್ನ ದಾರಿ ಮತ್ತು ಗುರಿ ಎರಡನ್ನೂ ಸ್ಪಷ್ಟಪಡಿಸಿತು! ಬಹುಶಃ ರಾಜ್ಯದ ಇತಿಹಾಸದಲ್ಲಿ ಯಾವ ಸರ್ಕಾರಗಳೂ ಮಾಡದೇ ಇರುವ ಸಾಧನೆ ಇದು!

ಬಿಜೆಪಿ ಸರ್ಕಾರದ ಈ ಸಾಧನೆ ಪೂರ್ವಯೋಜಿತವಲ್ಲದಿರ ಬಹುದು. ಆದರೆ ಈ ಸರ್ಕಾರದ ಮನೋಧರ್ಮ ಪೊಲೀಸ್ ಗೋಲಿಬಾರ್ ಮೂಲಕ ವ್ಯಕ್ತವಾಗಿದ್ದು ಮಾತ್ರ ಈಗ ಇತಿಹಾಸ. ಕಾನೂನು-ಸುವ್ಯವಸ್ಥೆಯನ್ನು ಶಾಂತಿಯುತವಾಗಿ ಕಾಪಾಡಲಾರದಷ್ಟು ಈ ಸರ್ಕಾರ ಅಸಹಾಯಕವಾಗಿದೆ. ಅಸಹಾಯಕತೆ ಮುಚ್ಚಿ ಹಾಕಲು ಗಲಭೆಗೆ ವಿರೋಧ ಪಕ್ಷಗಳು ಕಾರಣವೆಂದು ಹೇಳಿ ಮುಖ್ಯಮಂತ್ರಿ ಕೈ ತೊಳೆದು ಕೊಂಡಿದ್ದಾರೆ. ಸತ್ತ ರೈತನ ಮನೆಗೆ ಹೋಗಿ ಕಣ್ಣೀರಿಟ್ಟಿದ್ದಾರೆ. ಅಷ್ಟು ಸಾಲದೆಂಬಂತೆ ಇದಕ್ಕೆಲ್ಲ ದೇವರೇ ಹೊಣೆ ಎಂದೂ, ತನ್ನನ್ನು ದೇವರು ಅಗ್ನಿ ಪರೀಕ್ಷೆಗೆ ಒಡ್ಡಿದ್ದಾನೆಂದೂ ಯಡಿಯೂರಪ್ಪ ಬಡಬಡಿಸುತ್ತಿದ್ದಾರೆ. ಆ ಮೂಲಕ ಎಲ್ಲಾ ಅನಾಹುತ ಅವಿವೇಕಿತನಕ್ಕೆಲ್ಲ ದೇವರನ್ನೇ ಹೊಣೆಗಾರರನ್ನಾಗಿ ಮಾಡಿ ತಮ್ಮ ಬೇಜಬ್ದಾರಿತನವನ್ನು ಮೆರೆದಿದ್ದಾರೆ.

ಆದರೆ ವಸ್ತುಸ್ಥಿತಿ ಬೇರೆಯೇ ಇದೆ. ಇದು ಮುಂಗಾರು. ಮುಂಗಾರಿನ ಆರಂಭದಲ್ಲಿ ರೈತನಿಗೆ ಗೊಬ್ಬರ, ಬಿತ್ತನೆ ಬೀಜ ಸಕಾಲದಲ್ಲಿ ಸಿಗದಿದ್ದರೆ ಅವರು ವರ್ಷವಿಡೀ ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿಕೊಂಡು ಆಕಾಶ ನೋಡಬೇಕಾಗುತ್ತದೆ. ಈ ಕನಿಷ್ಠ ಪ್ರಜ್ಞೆ ಹೊಣೆಗಾರಿಕೆಯೂ ಇಲ್ಲದೆ ಸರ್ಕಾರ ಕಣ್ಣು ಮುಚ್ಚಿ ಕುಳಿತರೆ ರೈತ ಏನು ಮಾಡಬೇಕು? ಯಡಿಯೂರಪ್ಪನವರ ರೀತಿ ಕಂಡ ಕಂಡ ದೇವರು, ದಿಂಡಿರು ಮಠಾಧಿಪತಿಗಳ ಬೆನ್ನ ಹತ್ತಬೇಕೆ? ಅಥವಾ ತನ್ನ ಬದುಕುವ ಹಕ್ಕಿಗಾಗಿ ಹೋರಾಟಕ್ಕಿಳಿಯಬೇಕೆ? ರೈತ, ಯಡಿಯೂರಪ್ಪನಷ್ಟು ಹೊಣೆಗೇಡಿಯಲ್ಲ. ಹಾಗಾಗಿ ಆತ ಹೋರಾಟಕ್ಕೆ ಧುಮುಕಿದ. ವಿಚಿತ್ರವೆಂದರೆ ಹೋರಾಟಕ್ಕೆ ಇಳಿದಿರುವ ರೈತರಲ್ಲಿ ಬಹುತೇಕರು ಬಿಜೆಪಿ ಪಕ್ಷದ ಕಾರ್ಯಕರ್ತರು ಇಲ್ಲವೇ ಬೆಂಬಲಿಗರೇ ಆಗಿದ್ದಾರೆ! ಗೋಲಿಬಾರಿನಲ್ಲಿ ಸತ್ತ ರೈತ ಬಿಜೆಪಿ ಪಕ್ಷದ ಸಕ್ರಿಯ ಕಾರ್ಯಕರ್ತ!

ಇಲ್ಲಿ ಬಹಳ ಸರಳವಾದ ಪ್ರಶ್ನೆಯೊಂದಿದೆ. ಮುಂಗಾರು ಇದ್ದಕ್ಕಿದ್ದಂತೆ ಬಂದದ್ದೇನಲ್ಲ. ಅದೇ ರೀತಿ ರಸಗೊಬ್ಬರ ಬಿತ್ತನೇ ಬೀಜದ ಅಗತ್ಯ ಕೂಡ ದಿಢೀರನೇ ಸೃಷ್ಟಿಯಾದದ್ದಲ್ಲ. ಆದರೆ ಸರ್ಕಾರ ಏಕೆ ಈ ಪರಿಸ್ಥಿತಿಯನ್ನು ಸೃಷ್ಟಿಮಾಡಿಕೊಂಡಿತು? ರೈತರ ಹೆಸರಿನಲ್ಲಿ ಅಧಿಕಾರ ಸ್ವೀಕರಿಸಿದ ಮುಖ್ಯಮಂತ್ರಿ ಮಾರನೇ ದಿನವೇ ಸಭೆ ಕರೆದು ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕಾಗಿತ್ತು. ಗೊಬ್ಬರ ಮತ್ತು ಬೀಜ ಸರಬರಾಜಿಗೆ ವ್ಯವಸ್ಥೆ ಮಾಡಬೇಕಾಗಿತ್ತು. ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ತಾಕೀತು ಮಾಡಬೇಕಾಗಿತ್ತು. ಈ ಯಾವುದನ್ನು ಮಾಡದೆ ತೀರ್ಥಯಾತ್ರೆಗೆ ಹೊರಟ ಯಡಿಯೂರಪ್ಪ ಹೇಗೆ ರೈತನ ಮಗನಾಗುತ್ತಾರೆ?

ಸಾಮಾನ್ಯವಾಗಿ ಎಲ್ಲ ಪಕ್ಷಗಳ ರಾಜಕಾರಣಿಗಳೂ ಅಧಿಕಾರಕ್ಕೆ ಬಂದ ನಂತರ ಎಲ್ಲ ಅನಾಹುತಗಳಿಗೂ ಹಿಂದಿನವರನ್ನೇ ಹೊಣೆಗಾರರನ್ನಾಗಿ ಮಾಡುತ್ತಾರೆ. ಇದು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಇರುವ ಸುಲಭ ಮಾರ್ಗ. ಯಡಿಯೂರಪ್ಪ ಅದನ್ನೇ ಮಾಡುತ್ತಿದ್ದಾರೆ. ಅವರ ಸಚಿವ ಸಂಪುಟದ ಬಹುತೇಕ ಜನ ಕೂಡ ಅದನ್ನೇ ಮಾಡುತ್ತಿದ್ದಾರೆ. ಗೊಬ್ಬರ ಮತ್ತು ಬೀಜ ವಿತರಣೆಯಲ್ಲಾದ ತೊಂದರೆಗಳಿಗೆಲ್ಲ ಯಡಿಯೂರಪ್ಪ ಹಿಂದಿನ ರಾಜ್ಯಪಾಲರ ಆಡಳಿತದ ಮೇಲೆ ಗೂಬೆ ಕೂರಿಸುತ್ತಿದ್ದಾರೆ. ಆದರೆ ಅವರು ಒಂದನ್ನು ನೆನಪಿನಲ್ಲಿ ಇಡಬೇಕು. ಅದು ಯಾವುದೇ ಆಡಳಿತವಾದರೂ ಅಧಿಕಾರಶಾಹಿ ಒಂದೇ. ಅದೇ ಅಧಿಕಾರಿಗಳು ಎಲ್ಲ ಕಾಲದಲ್ಲೂ ಇರುತ್ತಾರೆ. ಅವರಿಗೆ ಹಗ್ಗ ಮೂಗುದಾರ ಹಾಕಿ ನಿಯಂತ್ರಿಸಿದರೆ ಎಲ್ಲವೂ ಸರಿಯಾಗಿಯೇ ನಡೆಯುತ್ತದೆ. ಇಲ್ಲದಿದ್ದರೆ ಅಧಿಕಾರಶಾಹಿ ಮತ್ತಷ್ಟು ಕೊಬ್ಬುತ್ತದೆಯೇ ಹೊರತು, ಬಗ್ಗಿ ಕೆಲಸ ಮಾಡುವ ಜಾಯಮಾನಕ್ಕೆ ಒಗ್ಗುವುದೇ ಇಲ್ಲ.

ಆದರೆ ಯಡಿಯೂರಪ್ಪ ಮಾಡಿದ್ದೇನು? ಸರ್ಕಾರ ರಚನೆಯಾದ ದಿನದಿಂದಲೂ ಒಳಗಿನ ಬೇಗುದಿಯನ್ನು ತಣ್ಣಗಾಗಿಸಲು ಹೆಣಗಾಡುವುದು ಆಯಿತೆ ಹೊರತು ಆಡಳಿತಾತ್ಮಕವಾಗಿ ಒಂದೇ ಒಂದು ಹೆಜ್ಜೆಯನ್ನು ಸಹ ಮುಂದೆ ಇಡಲು ಆಗಿಲ್ಲ. ಸರ್ಕಾರ ಬಂದಾಗಿನಿಂದ ಮಾಡಿರುವ ಒಂದೇ ಕೆಲಸ ಅಂದರೆ ತಮಗೆ ಬೇಕಾದ ಅಧಿಕಾರಿಗಳಿಗೆ ಆಯಕಟ್ಟಿನ ಜಾಗ ಒದಗಿಸಿರುವುದು. ಅದನ್ನು ಬಿಟ್ಟರೆ ಬೇರೆನನ್ನೂ ಮಾಡಲಾಗಿಲ್ಲ. ಖಾತೆ ಹಂಚಿಕೆಯಲ್ಲಿನ ಬಿಕ್ಕಟ್ಟು-ಅಸಮಾಧಾನಗಳು ಇನ್ನೂ ತಣ್ಣಗಾಗಿಲ್ಲ. ಒಂದು ಕಡೆ ಅನಂತ ಕುಮಾರ್ ಬಣ್ಣದ ಒಳಏಟನ್ನು ಸಹಿಸಿಕೊಂಡು, ಇನ್ನೊಂದು ಕಡೆ ಬೆಂಬಲ ನೀಡಿರುವ ಪಕ್ಷೇತರರನ್ನು ಸಂಭಾಳಿಸಿಕೊಂಡು ಹೋಗುವದರಲ್ಲೇ ಯಡಿಯೂರಪ್ಪ ಹೈರಾಣಾಗಿ ಹೋಗಿದ್ದಾರೆ.

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ ಯಡಿಯೂರಪ್ಪ ನಿಜಕ್ಕೂ ಕುತೂಹಲ ಮೂಡಿಸಿದ್ದರು. ಮೊದಲನೆಯದಾಗಿ ತಮ್ಮ ಎಂದಿನ ಕೇಸರಿ ಶಾಲಿನ ಬದಲಿಗೆ ಹಸಿರು ಶಾಲು ಹೆಗಲಿಗೇರಿಸಿಕೊಂಡು ಪ್ರಮಾಣವಚನ ಸ್ವೀಕರಿಸಿದ್ದು. ಎರಡನೆಯದು ಪ್ರಮಾಣ ವಚನ ಸ್ವೀಕರಿಸಿ ಕೆಳಗಿಳಿಯುತ್ತಿದ್ದಂತೆ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ್ದು. ಮೂರನೆಯದು 'ಹಿಂದೂ ಮುಸ್ಲಿಮರು ಅಣ್ಣ ತಮ್ಮಂದಿರಿದ್ದಂತೆ. ಅವರ ನಡುವೆ ದ್ವೇಷ ತಂದಿಟ್ಟು ಸಮಾಜದಲ್ಲಿ ಅಶಾಂತಿ ಮೂಡುವಂತೆ ಮಾಡುವವರ ವಿರುದ್ಧ ಉಗ್ರ ಕ್ರಮ ಕೈಗೊಳ್ಳುತ್ತೇನೆ' ಎಂದು ಗುಡುಗಿದ್ದು. ನಾಲ್ಕನೆಯದು ದೆಹಲಿಗೆ ಹೋಗಿದ್ದಾಗ ಗಾಂಧಿ ಸಮಾಧಿಗೆ ತೆರಳಿ ಗೌರವ ಸಲ್ಲಿಸಿದ್ದು. ಐದನೆಯದು ಗಣಿಗಾರಿಕೆಯನ್ನು ರಾಷ್ಟ್ರೀಕರಿಸಬೇಕೆಂದು ಹೇಳಿದ್ದು.

ಈ ಘಟನೆಗಳಿಂದಾಗಿ ಯಡಿಯೂರಪ್ಪ ಕೊಂಚ ಭಿನ್ನವಾಗಿ ಕಾಣಿಸಿಯೊಡಗಿದರು. ಆದರೆ ಆಡಳಿತದ ಮೇಲೆ ಹಿಡಿತ ಸಾಧಿಸುವಲ್ಲಿ ಅವರು ಸೋತರು. ಸ್ವಭಾವತಃ ಕೂಗುಮಾರಿಯಾದ ಯಡಿಯೂರಪ್ಪ ಮುಖ್ಯಮಂತ್ರಿಯಾದ ಕೆಲವೇ ದಿನ ಮಾತು ಕಡಿಮೆ ಮಾಡಿದ್ದರು. ಈಗ ಮತ್ತದೇ ವರಸೆ ಆರಂಭವಾಗಿದೆ. ಯಾವುದೇ ಸರ್ಕಾರದ ಕಾರ್ಯದಕ್ಷತೆಯನ್ನು ಅಳೆಯಲು ಒಂದು ತಿಂಗಳು ಏನೇನೂ ಸಾಲದು. ಆದರೆ ಆರಂಭದ ನಡೆಗಳೇ ಮುಂದಿನ ಭವಿಷ್ಯವನ್ನು ಹೇಳುವುದನ್ನು ಮರೆಯಲಾಗದು.

'ಬಿಜೆಪಿಯೇ ಪರಿಹಾರ! ಎಂಬ ಘೋಷಣೆಯೊಂದಿಗೆ ಅಧಿಕಾರಕ್ಕೆ ಬಂದ ಸರ್ಕಾರದ ಜನರ ಗೋಳು ಸಂಕಷ್ಟಗಳಿಗೆ ಪರಿಹಾರ ನೀಡುವ ಬದಲು ಅವರನ್ನೇ 'ಹಾರ' ತೆಗೆದು ಕೊಳ್ಳಲು ಆರಂಭಿಸಿದೆ. ಇದು ಹೀಗೆ ಮುಂದುವರೆದರೆ ಸರ್ಕಾರವೇ 'ಹಾರ'ವಾಗುವ ಸಮಯ ದೂರವೇನೂ ಇಲ್ಲ!

○ ಇಂದೂಧರ ಹೊನ್ನಾಪುರ

ಸಂಪಾದಕರೊಡನೆ ಸಂವಾದ

‘ಜಾಮೀನು ಬೇಡ ಜಮೀನ್ ಕೊಡಿ’



ಮಾನ್ಯ ಸಂಪಾದಕರೇ,

ಬಲಿಷ್ಠರು ಆಳ್ವಿಕೆ ನಡೆಸಿ ಬಲಹೀನರನ್ನು ದಬ್ಬಿ ತುಳಿದು ಒಡೆಯರೆಂದು ತಮ್ಮನ್ನು ತಾವೇ ಕರೆದು ಮಣ್ಣಿನ ಹಕ್ಕನ್ನು ಕಸಿದು ಹಕ್ಕು ಸ್ಥಾಪಿಸಿದರೂ ಜನತೆಗೆ ಉತ್ತಮ ಆಡಳಿತ ನೀಡಿ ರಾಜ ಮಹಾರಾಜ, ನವಕೋಟಿ ನಾರಾಯಣ ವೀರನರಸಿಂಹ ಎಂಬ ಅನೇಕ ಬಿರುದುಗಳನ್ನು ತಮಗೆ ತಾವೇ ಇಟ್ಟುಕೊಂಡು ಓದಲು ಬರೆಯಲು ಬಾರದ ಬಲಹೀನರಿಂದ ಅದನ್ನೇ ಶಾಸನವಾಗಿ ಕೆತ್ತಿಸಿದ ವೀರ ಪುರುಷರು ತಮ್ಮ ಬಂಧುಗಳನ್ನು ಮರೆತು ಭೂಮಿಯ ಹಕ್ಕಿಗಾಗಿ ಹೊಡೆದಾಡಿ, ಕಾದಾಡಿ ವೀರ ಮರಣವನ್ನಪ್ಪಿದರು. ಎಲ್ಲಿಂದಲೋ ದೇಶ ಬಿಟ್ಟು ಬಂದವರು ವಿದೇಶಿಯರಾಗಿ ವ್ಯಾಪಾರ ಮಾಡಿ ದೇಶೀಯರನ್ನು ಕೊಂದು ತಮ್ಮ ಮಂದಿಯನ್ನು ಬದುಕಿಸಲು ಭೂಮಿಯ ಒಡೆತನವನ್ನು ಸ್ಥಾಪಿಸಲು ಯತ್ನಿಸಿ ಭಾರತೀಯರನ್ನೇ ವಸ್ತುಗಳನ್ನಾಗಿ ಮಾಡಿ ವ್ಯಾಪಾರವನ್ನು ಮರೆತು, ಭೂಮಿ ಒಡೆಯರಾದರು. ಭಾರತೀಯರನ್ನು ಉಕ್ಕಿನಂತೆ ಬಡಿದು, ಗುದ್ದಿ ಬಾಗಿಸಿ ಬೆಂಕಿ ಗಿಡಿದು ‘ಕತ್ತಿ’ ಮಾಡುವಂತೆ ಮಾಡಿ. ಟಿಪ್ಪು ಸುಲ್ತಾನ ನಂತಹ ಹರಿತವಾದ ಖಡ್ಗಗಳನ್ನು ಅವರೇ ನಿರ್ಮಿಸಿದರು. ವಿದೇಶಿಯರಿಗೆ ಪ್ರಬಲವಾದ ಪ್ರತಿಭಟನೆ ಒಡ್ಡಿ ತನ್ನ ಮಕ್ಕಳನ್ನೇ ಅಡವಿಟ್ಟು ಜೀವ ತೆತ್ತ ‘ಹುಲಿ’ಯೂ ಹೋರಾಡಿದ್ದು ತನ್ನ ತಾಯ್ನಾಡಿಗಾಗಿ, ಭೂಮಿಗಾಗಿ.

ತಮ್ಮ ಆಸೆ, ಭಾವನೆ, ಸಂತೋಷವನ್ನೆಲ್ಲಾ ಭಾರತ ಮಾತೆಗೆ ಮುಡಿಪಿಟ್ಟು ರಕ್ತವಿಲ್ಲದೆ. ಶಾಂತಿಯಿಂದ ಸಹನೆ, ಸತ್ಯದಿಂದ ಮೌನವನ್ನೇ ಆಯುಧವಾಗಿಟ್ಟುಕೊಂಡು ಬಿಳಿ ಬಟ್ಟೆ ಧರಿಸಿ ಸ್ವಲ್ಪವು ಕಲೆಯಾಗದಂತೆ ಹೋರಾಡಿ ಬಲವಂತರ ಎದುರು ವಿಭಯ ಸಂಕಟ ಎಬ್ಬಿಸಿ ಅಮರರಾಗಿರುವ ಗಾಂಧೀಜಿಯವರೂ ಹೋರಾಡಿದ್ದು ತನ್ನ ತಾಯ್ನಾಡಿಗಾಗಿ ಅದೇ ಮಣ್ಣಿನ ಅಧಿಕಾರದ ಒಡೆತನಕ್ಕಾಗಿ, ಬಲಹೀನರ ಬದುಕಿಗಾಗಿ.

ಬದುಕನ್ನೇ ಮರೆತು ನಿರ್ಭಯದಿಂದ ನಗುತ್ತಾ ಜ್ವಾಲಾಮುಖಿಯಂತೆ ಹೃದಯಾಳದಲ್ಲಿ ಕುದಿ ಕುದಿದು ಒಮ್ಮೆಲೆ ಸಿಡಿದು ಬೆಂಕಿ ಚೆಂಡಿನಂತೆ ಆವರಿಸಿ ಬ್ರಿಟಿಷರನ್ನು ಧರೆಗುರುಳಿಸಿ “ಕ್ರಾಂತಿಗೆ ಜಯವಾಗಲಿ” ಎಂದು ಕೂಗಿ ಅಬ್ಬರಿಸಿ ವಿದೇಶಿಯದಲ್ಲಿದ್ದ ದೇಶೀಯ ‘ಪಾಸಿ’ಯ ಹಗ್ಗಕ್ಕೆ ನಗುತ್ತಾ ಜೀವ ಕೊಟ್ಟ ಭಗತ್‌ಸಿಂಗ್ ಕೂಡ ಹೆಮ್ಮೆಯಿಂದ ಜೀವತ್ತೆತ್ತದ್ದು ತಾನು ಜನಿಸಿದ ಮಣ್ಣ ಮೇಲಿನ ಪ್ರೀತಿಯಿಂದ ತಾಯ್ನಾಡಿನ ಮೇಲಿನ ಹಕ್ಕಿನ ಅಕ್ಕರೆಯಿಂದ.

ಮಿಂಚಿನಂತೆ ಒಮ್ಮೆಲೆ ವೃದ್ಧರು ಯುವಕರು ಮಹಿಳೆಯರು ಮಕ್ಕಳು, ವಿದ್ಯಾರ್ಥಿಗಳು ಸ್ವಾತಂತ್ರ್ಯವನ್ನು ಬಯಸಿ ಬ್ರಿಟಿಷರ ವಿರುದ್ಧ ಎರಗಿದ್ದು ಭೂಮಿಯ ಹಕ್ಕಿಗಾಗಿ, ದೌರ್ಜನ್ಯ, ಹಿಂಸೆ, ಭಾರತೀಯರೆಂಬ ಶೋಷಣೆ, ಅತ್ಯಾಚಾರಗಳನ್ನು ನಿಲ್ಲಸಬೇಕಾದರೆ ವಿದೇಶಿಯರು “ಭಾರತವನ್ನು ಬಿಟ್ಟು ತೊಲಗಿ” ದರೆ ಮಾತ್ರ ಸಾಧ್ಯ ಒಡೆತನ ನಮ್ಮದಾಗಬೇಕು, ಆಡಳಿತದ ಹಕ್ಕು ನಮ್ಮದಾಗಬೇಕು. ಅಂದರೆ ಈ ಮಣ್ಣು ನಮ್ಮದಾಗಬೇಕು ಈ ಭೂಮಿಯ ಹಕ್ಕು ನಮ್ಮದೂ ಎಂದು.

ಸ್ವಾತಂತ್ರ್ಯ, ಹಕ್ಕು, ಸಮಾನತೆಗಳನ್ನುವ ಹೋರಾಟದ ಒಟ್ಟೊಟ್ಟಿಗೆ ನೆನಪಾಗುವವರು ಗೌರವಾನ್ವಿತ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಅವರ ಮಾತುಗಳು. ಇಡೀ ಭಾರತದ ಜನಸ್ತೋಮ ದೇಶೀಯ ವಿದೇಶಿಯರ ನಡುವಿನ ಅಸಮಾನತೆ, ದಬ್ಬಾಳಿಕೆ, ಶೋಷಣೆಯನ್ನು ವಿರೋಧಿಸಿದರೆ. ಅದರೊಟ್ಟಿಗೆ ದೇಶೀಯ ಅಸಮಾನತೆ ದೌರ್ಜನ್ಯ ಶೋಷಣೆಯನ್ನು ಬಿಂಬಿಸಿ ಮೊದಲು ದೇಶೀಯ ಉತ್ತಮರು, ಅಸ್ಪೃಶ್ಯರು ಎನ್ನುವುದು ನಿಲ್ಲಲಿ. ಎಲ್ಲಾ ಭಾರತೀಯರಿಗೆ ಸಮಾನ ಬದುಕುವ ಹಕ್ಕು ಸಿಗಲಿ ಆ ಮೇಲೆ ವಿದೇಶಿಯರಿಂದ ಮುಕ್ತಿ ಎಂದು ಎರಡುನ್ನೂ ಒಂದೇ ರಥದ ಚಕ್ರಗಳನ್ನಾಗಿಸಿ ಒಟ್ಟೊಟ್ಟಿಗೆ ಎಳೆದು ತಮ್ಮ ಜೀವನವನ್ನೇ ಹೋರಾಟದಲ್ಲಿ ಮುಗಿಸಿಬಿಟ್ಟರು.

ಇವರುಗಳನ್ನೇ ಅನುಸರಿಸಿ ದಕ್ಷಿಣ, ಕನ್ನಡ ಜಿಲ್ಲೆಯಲ್ಲಿ ಬಲಹೀನ ಮುಟ್ಟಸಬಾರದಾದವರನ್ನು ಮುಟ್ಟಿಸಿಕೊಂಡು ಎಂಜಲು, ಸತ್ತ ದನ ತಿಂದು ಬದುಕಿ ಸತ್ತವರಿಗೆ ಭೂಮಿ ಕೊಟ್ಟು ಸ್ವಂತಿಕೆ ಹುಟ್ಟಿಸಿ ಜಾತಿಯಿಂದ ಹೊರದಬ್ಬಲ್ಪಟ್ಟು ಭಾರತೀಯರಿಂದಲೇ ಸೆಗಣಿ ಬಿಸಾಡಿಸಿಕೊಂಡು ವೀರ ನಾಯಕನಾಗಿ ನಂದಿಗುಡ್ಡೆಯ ಸಾರ್ವಜನಿಕ ಮಸಾಣದಲ್ಲಿ ಗೋರಿಯಾಗಿ ನಿಂತವರು ಕುದ್ಮುಲ್ ರಂಗರಾಯರು. ಅಲೆಮಾರಿಗಳಿಗೆ ‘ನೆಲ’ವೆಂಬ ನೆಲೆ ಕೊಟ್ಟು ಮಣ್ಣಾದದ್ದು ಭಾರತೀಯರೆಂಬ ಪ್ರೇಮದಿಂದಲೇ ಇದು ಬ್ರಿಟಿಷರಿಂದ ಸ್ವಾತಂತ್ರ್ಯ ಸಿಕ್ಕಿದ ನಂತರದ ದೇಶೀಯ ಬಲವಂತರಿಂದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟಗಳು ಆದರೂ ಬಲಹೀನರು ಬಲ ವಂತರಾಗಲಿಲ್ಲ. ಸ್ವಾತಂತ್ರ್ಯ ಪಡೆದು ಮಾತ್ರ ಭೂಮಿಯ ಹಕ್ಕನ್ನು ಪಡೆಯಲು ಸಾಧ್ಯವಾಗಲಿಲ್ಲ. ಎಂಜಲು ತಿನ್ನುವು ದನ್ನು ಬಿಟ್ಟು ಕೊರಗರು ಕೊರ ಗದಿರಲೂ ಸಾಧ್ಯವಾಗಿಲ್ಲ.

೧೯೮೪ರಲ್ಲಿ ಶ್ರೀ ದೇವದಾಸ್ ಶೆಟ್ಟಿ ಎಂಬ ವ್ಯಕ್ತಿಯೊಬ್ಬರು. ಈ ಜನರ ಮೂಡಣ ದಿಕ್ಕಿನಿಂದ ಮೂಡಿ ಸೋಗೆ ಮನೆಯ ಎಡೆಯಿಂದ ಬೆಳಕು ಚೆಲ್ಲಿ ಕುದ್ಮುಲ್ ರಂಗರಾಯರ ಹೆಸರಿನಲ್ಲಿರುವ ಕುದ್ಮುಲ್ ಗಾರ್ಡನ್‌ನಲ್ಲಿನ ಹಾಡಿಯಲ್ಲಿದ್ದ ಶ್ರೀಮಾನ್ ಗೋಕುಲ್‌ದಾಸ್‌ರವರನ್ನ ‘ಮನ’ವೆಂಬ ಮನೆಯಿಂದ ಹೊರಬರುವಂತೆ ಮಾಡಿ ಜನರನ್ನು ಸಂಘಟಿಸಿ ತಾಯ್ನಾಡಿನಲ್ಲಿ ಬದುಕುವ ಸ್ವಾತಂತ್ರ್ಯಕ್ಕೆ ಗಾಂಧೀಜಿಯ ಅಹಿಂಸಾತ್ಮಕ ನೀತಿಯನ್ನೇ ಅನುಸರಿಸಿ ಒಂದು ತಿಂಗಳು ಕಾಲ ಜಿಲ್ಲಾದ್ಯಂತ (ದ.ಕ ಹಾಗೂ ಉಡುಪಿ ಜಿಲ್ಲೆಯಲ್ಲಿ) ಪಾದಯಾತ್ರೆ ಮಾಡಿ ಚಳವಳಿ ಹೂಡಿ, ಕೊರಗರ ಬದುಕು ಕಟ್ಟುವ ಕನಸು ಹೊತ್ತು ಕೇಳಿದ್ದು “ಭೂಮಿಯ ಹಕ್ಕು”.

ಟಿಪ್ಪು ಸುಲ್ತಾನ್, ಸುಭಾಷ್ ಚಂದ್ರ ಬೋಸ್‌ರವರನ್ನು ಸೇರಿಸಿ ಅನೇಕ ಮಹಿಳೆಯರು ಹೋರಾಡಿ ಮಾತೃಭೂಮಿಗಾಗಿ ಜೀವ ಲೆಕ್ಕಿಸದೆ ಸತ್ತವರೆಷ್ಟೋ? ಆದರೆ ಹೆಚ್ಚಿನವರು ದಾಖಲಾಗಲೇ ಇಲ್ಲ ಕನಿಷ್ಠ ಸ್ವಾತಂತ್ರ್ಯ ದಿನಾಚರಣೆಯ ದಿನ ಭಾಷಣ ಮಾಡುವಾಗ ಉದಾಹರಣೆ ನೀಡಲೂ ಅವರುಗಳು ಭಾಷಣಕಾರರಿಗೆ ನೆನಪಾಗುವುದೂ ಇಲ್ಲ.

ಶ್ರೀಮಾನ್ ಗೋಕುಲ್‌ದಾಸ್‌ರವರ ನೇತೃತ್ವದಲ್ಲಿ ನಡೆದ ಚಳವಳಿಯ ಕೊನೆಯ ದಿನದಂದು ಸರಕಾರಿ ಭೂಮಿಯಲ್ಲಿ ಸುಮಾರು ೨.೫೦೦ ರಷ್ಟು ಕೊರಗ ಬಾಂಧವರು ಹಕ್ಕು ಸ್ಥಾಪಿಸಿದಾಗ ಬ್ರಿಟಿಷರಂತೆ ಪೊಲೀಸರು ‘ಗನ್’ ಹಿಡಿದು ೨೪ ಮಂದಿಯನ್ನು ಬಂಧಿಸಿ ಕಾರಾಗೃಹದಲ್ಲಿಟ್ಟಾಗ ಚೊಚ್ಚಲ ಬಸುರಿ ಶ್ರೀಮತಿ ಗೌರಿಯವರು ಜೈಲಲ್ಲಿ “ಜಾಮೀನು ಬೇಡ ಜಮೀನ್ ಕೊಡಿ” ಎಂದು ಘೋಷಣೆ ಕೂಗಿ ಮಾತ್ರ ಭೂಮಿಯ ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದ ಮಹಿಳೆ ಯರ ಸಾಲಿಗೆ ಸೇರಿ ಅವರೆಲ್ಲ ರನ್ನು ನೆನಪಿಸಿ ಸ್ವಾತಂತ್ರ್ಯ ಭೂಮಿಯ ಹಕ್ಕನ್ನು ಕೇಳಿ ಕೊರಗ ಯುವಕರನ್ನು ಹೋರಾ ಟದ ಹಾದಿಯಲ್ಲಿ ನಡೆಯುವಂತೆ ಮಾಡಿದೆ.

ಇಂದು ಸ್ವಾತಂತ್ರ್ಯ ದಿನಾಚ ರಣೆ ಭಾರತೀಯರಿಗೆ ಬೃಹತ್ ಹಬ್ಬ ಭಾರತದ ಜನತೆ ಸ್ವಾತಂತ್ರ್ಯ ರಾಷ್ಟ್ರದ ಧ್ವಜಕ್ಕೆ ಸಾಲಾಗಿ ನಿಂತು ಹೆಮ್ಮೆಯಿಂದ ‘ಸೆಲ್ಯೂಟ್’ ಹೊಡೆ ಯುತ್ತಾರೆ. ಭೂಮಿಯ ಹಕ್ಕನ್ನು ಪಡೆದು ಧ್ವಜಗೀತೆ ಮುಗಿಲು ಮುಟ್ಟುವಂತೆ ಹಾಡಿ, ಮಾತ್ರ ಭೂಮಿಯನ್ನು ತಬ್ಬಿಕೊಂಡ ಮಕ್ಕಳಾಗುತ್ತಾರೆ.

ಆದರೆ ಶ್ರೀಮತಿ ಗೌರಿಯವರ ಹೋರಾಟವು ಸಮುದಾಯ ಸ್ವಾತಂತ್ರ್ಯ ಸ್ಥಾಪಿಸುವಂತಾಗಲೂ ಪ್ರೇರಣೆಯಾಗಲಿ ಎಂದು ನಿನ್ನೆ, ಇವತ್ತು, ನಾಳೆ ಬದುಕಿ ಭೂಮಿಯ ಹಕ್ಕು, ಸ್ವಾತಂತ್ರ್ಯ, ಸಮಾನತೆ ಕೊರಗರಾದ್ದಗುವುದೇ ಎನ್ನುವ ಆಸೆಯಿಂದ ಅರಳಿ ಪರಿಮಳ ಸೂಸುವ ಮುನ್ನವೇ ಬಿಸಿಲಿಲ್ಲ ಸುಟ್ಟು ಕೊರಗರಂತೆ ಎಲ್ಲೂ ದಾಖಲಾಗದೆ ಉದುರಿಹೋದ ಭಾರತದ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೆ ಇದೋ ನನ್ನ “ಸೆಲ್ಯೂಟ್”

○ **ಅಣ್ಣಿ**, ಮಂಗಳೂರು

ಸಂಪಾದಕರೊಡನೆ ಸಂವಾದ

ಅಜ್ಞಾನದ ಮಾತು

ಮಾನ್ಯ ಸಂಪಾದಕರೇ,

ಮೈಸೂರಿನ ಪತ್ರಿಕೆಗಳಲ್ಲಿ (೨೫-೦೫-೨೦೦೮) "ಜಗತ್ತಿನ ಆದರ್ಶ ಪುರಷರಲ್ಲಿ ಶಂಕರಾಚಾರ್ಯರು ಅದ್ವಿತೀಯರು" ಎಂದು ಶೃಂಗೇರಿ ಭಾರತಿತೀರ್ಥ ಸ್ವಾಮೀಜಿ ಹೇಳಿದರೆಂದು ವರದಿಯಾಗಿದೆ. ಇದು ಅಜ್ಞಾನದ ಮಾತೇ ಹೊರತು ತೌಲನಿಕ ತಿಳಿವಳಿಕೆ ಇರುವ ವ್ಯಕ್ತಿ ಆಡುವ ನುಡಿಯಲ್ಲ.

ಆದಿ ಶಂಕರಾಚಾರ್ಯನ (ಸು. ಎಂಟನೇ ಶತ.) ಗ್ರಂಥಗಳು ಸಂಸ್ಕೃತದಲಿದ್ದು ಅವುಗಳ ಅನುವಾದಗಳು ಕನ್ನಡಕ್ಕೆ ಬಂದಿವೆ. ಆದರೆ ಅವುಗಳನ್ನು ಓದುವ ವ್ಯವಧಾನ ಜನತೆಗೆ ಇಲ್ಲ. ಏಕೆಂದರೆ ಅವುಗಳ ಪ್ರಸ್ತುತತೆ ಈಗ ಕಾಣದಿರುವುದು. ಹಾಗಾಗಿ ಸಾಮೂಹಿಕ ಅಜ್ಞಾನವನ್ನು ಇಂಥ ಮಠದ ಮುಖ್ಯಸ್ಥರು ಬಂಡವಾಳ ಮಾಡಿಕೊಂಡು ಅಜ್ಞಾನವನ್ನು ಹರಡುತ್ತಾ ಹೋಗುತ್ತಿರುತ್ತಾರೆ. ಪ್ರಬುದ್ಧ ಮನಸ್ಸು ಜ್ಞಾನ ವಿಜ್ಞಾನ ಪ್ರಜ್ಞಾನಗಳನ್ನು ಮತ್ತು ಇವುಗಳಿಂದ ಮೂಡಿದ ಸುಜ್ಞಾನವನ್ನು ಪಸರಿಸುತ್ತದೆ.

ಶಂಕರಾಚಾರ್ಯ ತನ್ನ ಬ್ರಹ್ಮಸೂತ್ರಭಾಷ್ಯದಲ್ಲಿ (೧.೩.೯. ೩೮)- "ಶೂದ್ರರಿಗೆ ವಿದ್ಯೆ ಕೊಡಬಾರದು, ಅವರು ವೇದಗಳನ್ನು ಓದಿದರೆ ಅವರ ನಾಲಗೆ ಸೀಳಬೇಕು, ಕಂಠಸ್ಥವಾಗಿದ್ದರೆ ಅವರ ದೇಹವನ್ನು ಕತ್ತರಿಸಿ ಹಾಕಬೇಕು" ಎಂದು ಬರೆದಿದ್ದಾನೆ. ಪ್ರಪಂಚದ ಬೇರಾವ ಧಾರ್ಮಿಕ ಪುರುಷರು ಈ ರೀತಿ, ನನಗೆ ತಿಳಿದಂತೆ, ಬರೆದಿಲ್ಲ. ಆದ್ದರಿಂದ ಶಂಕರಾಚಾರ್ಯನನ್ನು ದೊಡ್ಡ ಮನುಷ್ಯ ಎನ್ನುವುದು ಹೇಗೆ ಸಾಧ್ಯ? ಎಂದು ಓದುಗರು ವಿಚಾರ ಮಾಡಬೇಕು. ಶೂದ್ರರು ಎಂದರೆ ಜನಿವಾರ ಹಾಕಿಕೊಳ್ಳದವರು, ದೇಹಸವೆಸಿ ದುಡಿಯುವವರು, ದಲಿತರು, ಇತ್ಯಾದಿ, ಎಂದರೆ ರಾಷ್ಟ್ರದ ಶೇ. ತೊಂಭತ್ತೈದು ಜನ ಸಮುದಾಯ ಶಂಕರ ಕಾಪಾಡಿದ್ದು ದ್ವಿಜರನ್ನೇ ಹೊರತು ತಳ ಸಮುದಾಯಗಳನ್ನಲ್ಲ.

ಇದಲ್ಲದೆ ಶಂಕರಾಚಾರ್ಯ ತನ್ನ ಸಿದ್ಧಾಂತಕ್ಕೆ ಬಹಳ ದೊಡ್ಡ ಅಡ್ಡಿ ಎಂದು ತಾನು ಭಾವಿಸಿದ ಬುದ್ಧ ಧಮ್ಮವನ್ನು ನಾಶಪಡಿಸಲು ತೀರಾ ಬರ್ಬರ ಮಾರ್ಗಗಳನ್ನು ಹಿಡಿದ. ಅವನು ನಾಗಾರ್ಜುನಕೊಂಡಕ್ಕೆ ತನ್ನ ಅನಾಗರಿಕ ಪಡೆಗಳನ್ನು ತೆಗೆದುಕೊಂಡು ಹೋಗಿ ಬೌದ್ಧರನ್ನು ಮತ್ತು ಬೌದ್ಧ ವಿಗ್ರಹಗಳನ್ನು ಹಾಳು ಮಾಡಿದ್ದು ಇತಿಹಾಸದಲ್ಲಿ ದಾಖಲಾಗಿದೆ. ಶಂಕರಾಚಾರ್ಯ ಮೂಲಭೂತವಾದ ಮತ್ತು ಧಾರ್ಮಿಕ ಭಯೋತ್ಪಾದನೆಯ ಪಿತಾಮಹನಾಗಿದ್ದಾನೆ. (ನೋಡಿ A.H. Langhourry; The Buddhist ನೋಡಿ. ಈ A.H Longhurst: The Budhist Antiquities of Nagarjuhakanda Archeological Serry of India ಇದು ಮೈಸೂರು ಅರಮನೆ ಗ್ರಂಥಾಲಯದಲ್ಲಿದೆ. ಎಲ್ಲ ಸಂಗತಿಗಳನ್ನು ನನ್ನ ಕೃತಿ ಶಂಕರಾಚಾರ್ಯ ಮತ್ತು ಪ್ರತಿಗಾಮಿತನದಲ್ಲಿ ವಿವರಿಸಿದ್ದೇನೆ. ಇವರ ಹದಿಮೂರನೆಯ ಮುದ್ರಣ ೨೦೦೭ರಲ್ಲಿ ಬಂದಿದೆ. ಈ ಕೃತಿ ಅನೇಕ ಭಾಷೆಗಳಿಗೆ ಅನುವಾದವಾಗಿ ತಮಿಳು ನಾಡಿನಲ್ಲಿ ಅನೇಕ ವಿಚಾರಸಂಕಿರಣಗಳು ನಡೆದಿವೆ. ಎಂಬುವುದರ ಪ್ರಾಸಂಗಿಕಕ್ಕೆ ಕ್ಷಮೆ ಇರಲಿ.

ಆದ್ದರಿಂದ ವಿಚಾರ ಮತ್ತು ಆಚಾರ ಎರಡರಲ್ಲೂ ಪೂರಾ ಕಾಡು ಮನುಷ್ಯನಂತಿದ್ದ ಶಂಕರಾಚಾರ್ಯನನ್ನು 'ಅದ್ವಿತೀಯ' ಎನ್ನಲು ಅಡ್ಡಿಯಿಲ್ಲ. ಆದರೆ ಭಾರತಿ ತೀರ್ಥ ಸ್ವಾಮೀಜಿ ಹೇಳಿದ ಅರ್ಥದಲ್ಲಿ ಖಂಡಿತ ಅಲ್ಲ. ಇಂಥವರನ್ನೇ ಪ್ರಶಂಸಿಸಿರುವ ಇತಿಹಾಸ ಸುಳ್ಳಿನ ಕಂತೆ.

ಆದ್ದರಿಂದ ಸಮಾಜದಲ್ಲಿ ಆದರ್ಶಗಳನ್ನು ಬಿತ್ತುವಾಗ ಸದಾ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಆದರ್ಶಗಳು ಜಾತಿ ಮತಗಳಿಗೆ ಸಂಕುಚಿತವಾಗಿರದೆ ಸರ್ವಜನಾಂಗ ರಕ್ಷಕವಾಗಿರಬೇಕು. ಮನುಷ್ಯ ಎಲ್ಲೆಲ್ಲಿ ಇದ್ದಾನೋ ಅಲ್ಲೆಲ್ಲ ಹಿತಕಾರಿಯಾಗಿ ವಿಶ್ವವ್ಯಾಪಕವಾಗಿರುವುದು ಅಪೇಕ್ಷಣೀಯ ಆದರ್ಶ ಏರುವ ಗಿರಿಯೇವಿನವನಾ ಮುಟ್ಟದ ಮೆಟ್ಟಿಲಲ್ಲ. ಅಲ್ಪ ಆದರ್ಶಗಳು ಅನಾಹುತಕಾರಿ.

ಹಾಗಾದರೆ ನಾವು ಎಂಥವರನ್ನು ಗುರುಗಳನ್ನಾಗಿ ಸ್ವೀಕರಿಸಬೇಕು? ನನ್ನ ಓದಿನ ವ್ಯಾಪ್ತಿಯಲ್ಲ ಬುದ್ಧ, ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿವಿವೇಕಾನಂದರು. ಶಂಕರ ರಾಮಾನುಜ ಮತ್ತು ಮಾಧ್ವರಲ್ಲಿ ಪಾಂಡಿತ್ಯ ಪ್ರತಿಭೆಗಳು ಶುಷ್ಕವಾಗಿವೆ. ಏಕೆಂದರೆ ಅವರಲ್ಲಿ ಸರ್ವಮಾನವ ಪ್ರೇಮ ಇಲ್ಲ. ಅವರು ಶೂದ್ರರನ್ನು ತುಳಿದಿರುವುದರಿಂದ ಅವರಿಗೆ ಬಸವಣ್ಣ ಮುಂತಾದ ಶರಣರಲ್ಲಿದ್ದ ಅಂತಃಕರಣ ಮತ್ತು ಸಹಾನುಭೂತಿ ಇರಲಿಲ್ಲ. ಶ್ರೀರಾಮಕೃಷ್ಣರು ಎಂಥೆಂಥ ಭವ್ಯ ಆಧ್ಯಾತ್ಮಿಕ ಅನುಭವ ಪಡೆದಿದ್ದರು ಎಂದು ತಿಳಿಯಲು ಶ್ರೀರಾಮಕೃಷ್ಣ ವಚನವೇದ ಎಂಬ ಅದ್ಭುತ ಗ್ರಂಥವನ್ನು ಸಾವಧಾನವಾಗಿ ಅಧ್ಯಯನ ಮಾಡಬೇಕು. ಪರಮಹಂಸರಿಗೆ ಹೋಲಿಸಿದರೆ ಈ ಆಚಾರ್ಯತ್ರೆಯರು ಬಹಳ ಸಣ್ಣವರಾಗಿ ಕಾಣುತ್ತಾರೆ. ಪರಮಹಂಸರು 'ಹಿಂದೂ' ಮಾರ್ಗದ ಎಲ್ಲ ವ್ಯವಸ್ಥೆಗಳನ್ನು ಪರಿಶೋಧಿಸಿದರು' ಇಸ್ಲಾಂ ಮತ್ತು ಕ್ರೈಸ್ತ ಮತಗಳನ್ನು ಅರಿತು ಸಾಧನೆ ಮಾಡಿ ಅವುಗಳಲ್ಲಿ ಏಕಸತ್ಯವನ್ನು ಕಂಡುಕೊಂಡರು. ಹೀಗೆ ಅನುಷ್ಠಾನದಿಂದ ಧರ್ಮಸಮನ್ವಯ ಮತ್ತು ಸಮಾನತೆ ಸಾಧಿಸಿ ಬೋಧಿಸಿದರೆಂದರೆ, ಜಾಗತಿಕ ಧರ್ಮಶಾಸ್ತ್ರದಲ್ಲಿ ಇಬ್ಬರೇ ಇಬ್ಬರು; ಶ್ರೀ ರಾಮಕೃಷ್ಣಪರಮಹಂಸರು ಮತ್ತು ಅವರ ಶಿಷ್ಯ ಲೋಕಗುರು ಸ್ವಾಮಿ ವಿವೇಕಾನಂದರು. ಕ್ಲಿಷ್ಟ ಅಗ್ರಾಹ್ಯ ಅಧ್ಯಾತ್ಮಿಕ ಅನುಭಗಳನ್ನು ಪರಮಹಂಸರು ಪೆಪ್ಪರ್‌ಮೆಂಟ್ ಮಾಡಿಕೊಟ್ಟುಬಿಟ್ಟಿದ್ದಾರೆ. ಅತ್ಯುನ್ನತ ಅರಿವುಗಳನ್ನು 'ವಚನವೇದ'ದಷ್ಟು ಸರಳವಾಗಿ ತಿಳಿಯಾಗಿ ತಿಳಿಸುವ ಗ್ರಂಥ ಪ್ರಪಂಚದಲ್ಲಿ ಬೇರೊಂದಿಲ್ಲ ಎಂದು ನನ್ನ ಭಾವನೆ. ನಿಜವಾದ ಅಧ್ಯಾತ್ಮ ಜೀವಿ ಸರ್ವಜನ ಹಿತಚಿಂತಕ ಮತ್ತು ಸಾಧಕ.

ನಿಂತ ಮನಸ್ಸನ್ನು ನಡೆಯುವಂತೆ ಮಾಡುವುದು ವಿಚಾರವಂತಿಕೆ, ಪ್ರಯೋಗ ಶೀಲತೆ, ಸತ್ಯಾನ್ವೇಷಣೆ, ಲೋಕಕಾರುಣ್ಯ. ವಿಜ್ಞಾನದಲ್ಲಿ ಒಂದು ಕಾಲದಲ್ಲಿ ನದಿ ಎಂದು ತಿಳಿದುದು ತಪ್ಪು ಎಂದು ಕಂಡು ಬಂದಾಗ ಅದನ್ನು ತ್ಯಜಿಸುವುದು ವಾಡಿಕೆ. "ಭೂಮಿ ಸ್ಥಿರ, ಸೂರ್ಯ ಚರ" ಎಂಬುದು ಸುಮಾರು ಒಂದುವರೆ ಸಾವಿರ ವರ್ಷಗಳ ಕಾಲ ಪ್ರಚಲಿತವಿತ್ತು. ಇದು ತಪ್ಪು ಎಂದು ಗೆಲಿಲಿಯೊ (೧೫೬೪-೧೬೪೨) ತೋರಿಸಿದಾಗ ಅದನ್ನು ಬಿಟ್ಟು "ಸೂರ್ಯಸ್ಥಿರ, ಭೂಮಿ ಚರ" ಎಂದು ಮನುಷ್ಯ ಒಪ್ಪಿದ" "ಮನುಷ್ಯ ದೇವರ ಸೃಷ್ಟಿಯಲ್ಲ, ವಿಕಾಸ ಪ್ರಕ್ರಿಯೆಯ ಫಲ" ಎಂದು ಚಾರ್ಲ್ಸ್ ಡಾರ್ವಿನ್ (೧೮೦೯-೮೨) ಪ್ರತಿಪಾದಿಸಿದ ಮೇಲೆ ಅದು ವೈಜ್ಞಾನಿಕ ಅಂಶವಾಗಿ ಮಾನ್ಯತೆ ಪಡೆದಿದೆ. ಹೀಗೆಯ ಮತಗಳನ್ನು ಪರೀಕ್ಷೆಗೆ ಗುರಿಪಡಿಸಿ ಸರ್ವಾರ್ಥ ಸಾಧಕಗಳನ್ನು ಮಾತ್ರ ಸ್ವೀಕರಿಸಬೇಕಾದ್ದು' ಯೋಗ್ಯ; ಉಳಿದುದನ್ನೆಲ್ಲ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಬೇಕು. ಇದನ್ನು ಬಿಟ್ಟು ಯಾರೋ ಏನೋ ಹೇಳಿದರೆಂದು ಸುಮ್ಮನೆ ಒತ್ತಿಕೊಂಡರೆ ಗುಗ್ಗುಗಳಾಗುತ್ತೇವೆ.

ಏಸು ಕ್ರಿಸ್ತ ತನ್ನ ಸುವಾರ್ತೆಗಳಲ್ಲಿ ನರಕದ ಭಯ ರಸೆಲ್ ವಿಶ್ಲೇಷಿಸಿ, ಹೀಗೆ ಹೆದರಿಸುವ ಏಸು ಜ್ಞಾನಿಯಲ್ಲ, ಅವನನ್ನು ತಿರಸ್ಕರಿಸುತ್ತೇನೆ (ನೋಡಿ Why I am not christian) ಎನ್ನುವನು. ಶೂದ್ರರನ್ನು ಕೊಂದು ಹಾಕಿ ಎಂದ ಶಂಕರಾಚಾರ್ಯನನ್ನು ಜಗದ್ಗುರು ಎನ್ನುವವರಿಗೆ ಇಲ್ಲಿ ಕೊರತೆ ಇಲ್ಲ. ಬುದ್ಧ ಮತ್ತು ಸಾಕ್ರೆಟೀಸ್-ಈ ಇಬ್ಬನ್ನು ರಸೆಲ್ ಗೌರವಿಸುತ್ತಾನೆ. ಆದರೆ ದುಡಿಯುವ ಜನರು ಮೇಲೆ ಬರಲು ಹವಣಿಸುತ್ತಿದ್ದುದನ್ನ ಸಾಕ್ರೆಟೀಸ್ ಮತ್ತು ಪ್ಲೇಟೊ ಇಷ್ಟಪಡುತ್ತಿರಲಿಲ್ಲ ಎಂದು ವಿಶ್ವವಿಖ್ಯಾತ ಇತಿಹಾಸಕಾರ ವಿಲ್ ಡುರಾಂಟ್ The Lessions of History (ಇದನ್ನು ನಾನು 'ಇತಿಹಾಸದ ಪಾಠಗಳು' ಎಂಬ ಹೆಸರಿನಲ್ಲಿ ಅನುವಾದಿಸಿದ್ದು, ಇದರ ಏಳನೇ ಮುದ್ರಣವಾಗಿದೆ) ಹೇಳುತ್ತಾನೆ. ಆದ್ದರಿಂದ ನಾನು ಬುದ್ಧನನ್ನು ಮಾತ್ರ ಈ ಪಟ್ಟಿಗೆ ಸೇರಿಸಲು ಇಚ್ಛಿಸುತ್ತೇನೆ. ಅವನೊಬ್ಬನೇ ಅದ್ವಿತೀಯ.

ನಮ್ಮಲ್ಲಿ ವಿದ್ವಾಂಸರಿದ್ದಾರೆ, ಎಷ್ಟೊ ಮಂದಿ ವಿದೇಶಗಳಿಗೆ ಹೋಗಿ ಬಂದಿರುವದು. ಅವರೂ ರಸೆಲ್‌ನಂತೆ ತಮ್ಮ ಮಾತಾಚಾರ್ಯರ ಹೀನ ಮತ್ತು ದುಷ್ಟ ಅಂಶಗಳನ್ನು ವಿಶ್ಲೇಷಿಸಿಲ್ಲ. ಆದ್ದರಿಂದ ನನಗನ್ನಿಸುವುದು; ದೇಶದಲ್ಲಿ ಬುದ್ಧಿ ಜೀವಿಗಳಿಲ್ಲ; ಹಾಗೆಂದು ಹೇಳಿಕೊಳ್ಳುವವರೆಲ್ಲ ಬುದ್ಧಿಜೀವಿಗಳಲ್ಲ. ಯಾಕೆಂದರೆ ಯಾರೂ ಜನರಿಗೆ ಸರಿಯಾದ ತಿಳಿವಳಿಕೆ ನೀಡುತ್ತಿಲ್ಲ. ಮತ ಮಠ ಚರ್ಚು ಮಸೀದಿ ದೇವಸ್ಥಾನ ಮುಂತಾದವುಗಳೆಲ್ಲ ಜನರನ್ನು ಸದಾ ಅತಂತ್ರ ಸ್ಥಿತಿಯಲ್ಲೇ ಇಟ್ಟರಲು ನಿರತವಾಗಿವೆ. ಜನರು ಸುಖವಾಗಿ ಬದುಕಲು ಬೇಕಾದ ಹಣಸಂಪಾದನೆಗೆ ಸೂಕ್ತ ವ್ಯವಸ್ಥೆ ಇವು ಮಾಡುವುದಿಲ್ಲ. ಬಹುಪಾಲು ರಾಜಕಾರಣಿಗಳು ತಮ್ಮ ಕೈಗೆ ಎಂಥೆಂಥದೋ ಬಣ್ಣದ ದಾರ ಕಟ್ಟಿಕೊಂಡು ಅದಕ್ಕೂ ರಕ್ಷಿಸುವ ಶಕ್ತಿ ಇದೆ ಎಂಬ ಭ್ರಮೆ ಹುಟ್ಟಿಸುತ್ತಿದ್ದಾರೆ. ಇವರೆಲ್ಲ ವಾಮಾಚಾರದ ದಾಸಾನುದಾಸರು. ರಾಜಕಾರಣಿಗಳು ಮಾತನಾಡುವುದು ಆರ್ಥಿಕ ಪ್ರಗತಿ, ಅವರು ಅನುಸರಿಸುವುದು ಮಾನಸಿಕ ವಿಗತಿ ನನ್ನ ಮನವಿ; ವಿಚಾರವಂತರಾಗಿ. ಜನತೆ ಸ್ವತಂತ್ರ ಬುದ್ಧಿಯುಳ್ಳವರಾಗಬೇಕೆಂಬುದೇ ನನ್ನ ಹಂಬಲ.

○ ಪ್ರೊ|| ಕೆ.ಎಸ್. ಭಗವಾನ್
ಮೈಸೂರು

ಪ್ರತಿಕ್ರಿಯೆ

ಸಾಮಾಜಿಕ ಅನ್ಯಾಯ ಅಸಮಾನತೆ ಹಾಗೂ ಜಾತಿ ವ್ಯವಸ್ಥೆ

'ಜಾತಿ ಎಂಬುದು ಭಾರತದಲ್ಲಿ ಇಲ್ಲ' ಎಂದು ವಾದಿಸುವವರು ಒಂದೋ ಭಾರತದ ಸಮಾಜದ ಬಗ್ಗೆ ಪ್ರಾಥಮಿಕ ಜ್ಞಾನವೂ ಇಲ್ಲದವರಾಗಿರಬೇಕು ಅಥವಾ ಶತಮೂರ್ಖರಾಗಿರಬೇಕು. ನನಗೆ ಗೊತ್ತಿರುವ ಹಾಗೆ ಬಾಲಗಂಗಾಧರರಾಗಲೀ, ಕುವೆಂಪು ವಿ.ವಿಯಲ್ಲಿನ ಸಂಶೋಧನಾ ಗುಂಪಾಗಲೀ ಇವೆರಡೂ ಅಲ್ಲ ಎಂದು ಕೊಂಡಿದ್ದೇನೆ. ಹಾಗಾದರೆ ಅವರ ವಾದವೇನು? ಸಂಕ್ಷಿಪ್ತವಾಗಿ ಹೇಳುವುದಾದರೆ, ಭಾರತದಲ್ಲಿ ಜಾತಿಗಳಿವೆ, ನಿಜ. ಆದರೆ ಇಡೀ ಭಾರತದ ಸಮಾಜಕ್ಕೆ ಆಧಾರಭೂತವಾಗಿ ಕಾರ್ಯನಿರ್ವಹಿಸುವ ಒಂದು ವ್ಯವಸ್ಥೆ ಇದೆ ಎಂಬುದು ಸಮಸ್ಯಾತ್ಮಕವಾದುದಾಗಿದೆ. ಭಾರತದಲ್ಲಿ ಜಾತಿವ್ಯವಸ್ಥೆ ಇದೆ ಎಂದು ಹೇಳುವ ಎಲ್ಲಾ ಸಿದ್ಧಾಂತಗಳೂ ಒಂದು ಸಾಮಾನ್ಯ ಪೂರ್ವಕಲ್ಪನೆಯನ್ನು ಒಪ್ಪಿಕೊಂಡೇ ತಮ್ಮ ಸಿದ್ಧಾಂತಗಳನ್ನು ಸಾಧಿಸುತ್ತವೆ.

ಡಾ|| ಷಣ್ಮುಖ

ಡಾ|| ಡೊಮೆನಿಕ್ ಅವರ "ಜಾತಿ ಮತ್ತು ಸಾಮಾಜಿಕ ತಾರತಮ್ಯ" ಎಂಬ ವಿಚಾರ ಸಂಕಿರಣದ ವರದಿಗೆ ಪ್ರತಿಕ್ರಿಯೆಯಾಗಿ ಈ ವಿಷಯದ ಕುರಿತು ಮುಕ್ತ ಚರ್ಚೆಗೆ ಆಹ್ವಾನಿಸುತ್ತಾ ಈ ಲೇಖನವನ್ನು ಬರೆಯುತ್ತಿದ್ದೇನೆ. ವಿಚಾರ ಸಂಕೀರ್ಣದಲ್ಲಿ ಮಂಡಿಸಲಾದ ಪ್ರಬಂಧಗಳ ಈ ವರದಿಯ ಬಗ್ಗೆ ಮೆಚ್ಚುಗೆ ಇದೆ. ಆದರೆ, ವರದಿಯ ಪೀಠಿಕೆಯಲ್ಲಿ ಈ ವಿಚಾರ ಸಂಕೀರ್ಣವನ್ನು ಕುವೆಂಪು ವಿ.ವಿ.ಯಲ್ಲಿ ಏಕೆ ಸಂಘಟಿಸಲಾಯಿತು ಎಂಬುದಕ್ಕೆ ನೀಡಿರುವ ಕಾರಣ ಮಾತ್ರ ಆಶ್ಚರ್ಯ ಹುಟ್ಟಿಸುತ್ತದೆ. ಏಕೆಂದರೆ, ಬಾಲಗಂಗಾಧರರ ವಾದವೇನೆಂದೇ ಅರ್ಥಮಾಡಿಕೊಳ್ಳದೆ ಅಥವಾ ಮಾಡಿಕೊಳ್ಳುವ ಪ್ರಯತ್ನವನ್ನೂ ಮಾಡದೆ, ಅವರು, "ಜಾತಿ ಎನ್ನೋದು ಭಾರತದಲ್ಲಿ ಇರಲಿಲ್ಲ, ಅದನ್ನು ಪಾಶ್ಚಾತ್ಯರು ಪೌರಾಸ್ತ್ಯವಾದದ ಮೂಲಕ ಭಾರತೀಯರಿಗೆ ಸಂಘಟಿಸಿ ಕೊಟ್ಟಿದ್ದಾರೆ" ಎಂದು ವಾದಿಸುತ್ತಿದ್ದಾರೆ ಎಂಬ ತಮ್ಮದೇ ಕಲ್ಪಿತ ಆರೋಪವನ್ನು ಮಾಡಿ, ಅದಕ್ಕೆ ಪ್ರತಿಯಾಗಿ ಈ ವಿಚಾರಸಂಕಿರಣವನ್ನು ಸಂಘಟಿಸಲಾಯಿತೆಂದು ಹೇಳುತ್ತಾರೆ. ಆದರೆ, ಇಡೀ ವಿಚಾರ ಸಂಕೀರ್ಣದಲ್ಲಿ ಎಲ್ಲೂ ಯಾರೊಬ್ಬರೂ ಬಾಲಗಂಗಾಧರವರ ವಾದವೇನು? ಯಾವ ನೆಲೆಯಲ್ಲಿ ಅವರ ವಾದ ತಪ್ಪು ಎಂಬುದನ್ನು ಪ್ರಶ್ನಿಸುವುದಿರಲಿ, ಅವರ ಬಗೆಗಾಗಲೀ ಅಥವಾ ಅವರ 'ಗುಂಪು' ಕುವೆಂಪು ವಿ.ವಿ.ಯಲ್ಲಿ ಮಾಡುತ್ತಿರುವ ಸಂಶೋಧನೆಯ ಬಗೆಗಾಗಲೀ ಚಕಾರವನ್ನು ಏಕೆ ಎತ್ತಲಿಲ್ಲ ಎಂಬುದು ಆಶ್ಚರ್ಯದ ಸಂಗತಿಯಾಗಿದೆ.

'ಜಾತಿ ಎಂಬುದು ಭಾರತದಲ್ಲಿ ಇಲ್ಲ' ಎಂದು ವಾದಿಸುವವರು ಒಂದೋ ಭಾರತದ ಸಮಾಜದ ಬಗ್ಗೆ ಪ್ರಾಥಮಿಕ ಜ್ಞಾನವೂ ಇಲ್ಲದವರಾಗಿರಬೇಕು ಅಥವಾ ಶತಮೂರ್ಖರಾಗಿರಬೇಕು. ನನಗೆ ಗೊತ್ತಿರುವ ಹಾಗೆ ಬಾಲಗಂಗಾಧರರಾಗಲೀ, ಕುವೆಂಪು ವಿ.ವಿಯಲ್ಲಿನ ಸಂಶೋಧನಾ ಗುಂಪಾಗಲೀ ಇವೆರಡೂ ಅಲ್ಲ ಎಂದು ಕೊಂಡಿದ್ದೇನೆ. ಹಾಗಾದರೆ ಅವರ ವಾದವೇನು? ಸಂಕ್ಷಿಪ್ತವಾಗಿ ಹೇಳುವುದಾದರೆ, ಭಾರತದಲ್ಲಿ ಜಾತಿಗಳಿವೆ, ನಿಜ. ಆದರೆ ಇಡೀ ಭಾರತದ ಸಮಾಜಕ್ಕೆ ಆಧಾರಭೂತವಾಗಿ ಕಾರ್ಯನಿರ್ವಹಿಸುವ ಒಂದು ವ್ಯವಸ್ಥೆ ಇದೆ ಎಂಬುದು ಸಮಸ್ಯಾತ್ಮಕವಾದುದಾಗಿದೆ. ಭಾರತದಲ್ಲಿ ಜಾತಿವ್ಯವಸ್ಥೆ ಇದೆ ಎಂದು ಹೇಳುವ ಎಲ್ಲಾ ಸಿದ್ಧಾಂತಗಳೂ ಒಂದು ಸಾಮಾನ್ಯ ಪೂರ್ವಕಲ್ಪನೆಯನ್ನು ಒಪ್ಪಿಕೊಂಡೇ ತಮ್ಮ ಸಿದ್ಧಾಂತಗಳನ್ನು ಸಾಧಿಸುತ್ತವೆ. ಅದೆಂದರೆ, ಭಾರತದಲ್ಲಿ ಹಿಂದೂಯಿಸಂ ಎಂಬ ರಿಲಿಜಿಯನ್ ಒಂದಿದೆ. ಅದೇ ಜಾತಿವ್ಯವಸ್ಥೆಗೆ ಆಧಾರ. ಹಾಗೆ ನೋಡಿದರೆ ಈ ಸಿದ್ಧಾಂತಗಳಿಗೆ ಹಿಂದೂ ಎಂಬ ರಿಲಿಜಿಯನ್ ಇಲ್ಲದೆ ಜಾತಿವ್ಯವಸ್ಥೆ ಇದೆ ಎಂಬುದನ್ನು ಸಾಧಿಸಲಾಗುವುದಿಲ್ಲ. ಸರಿ, ಇದುವರೆಗೂ ಸಮಾಜವಿಜ್ಞಾನಗಳಲ್ಲಿನ ಜಾತಿ ಸಿದ್ಧಾಂತಗಳ ವಿವರಣೆಗಳು ಏನು ಹೇಳುತ್ತವೆ ಎಂಬುದನ್ನು ಸ್ಥೂಲವಾಗಿ ಹೀಗೆ ವಿವರಿಸಿಕೊಳ್ಳಬಹುದು.

"ಜಾತಿವ್ಯವಸ್ಥೆಯು ಹಿಂದೂ ಧರ್ಮದ ವೇದ, ಪುರುಷ ಸೂಕ್ತ, ಮನುಧರ್ಮಶಾಸ್ತ್ರಗಳನ್ನು ಆಧರಿಸಿದ ವರ್ಣಧರ್ಮದಿಂದ ಹುಟ್ಟಿದೆ. ಈ ಶ್ರೇಣೀಕೃತ ವ್ಯವಸ್ಥೆಯಲ್ಲಿ ಕೆಲವು ಜಾತಿಗಳು ಯಾವಾಗಲೂ ತುಳಿಯುವವರೇ ಆಗಿದ್ದು ಕೆಲವು ಜಾತಿಗಳು ಯಾವಾಗಲೂ ತುಳಿತಕ್ಕೆ ಒಳಪಟ್ಟವರೇ ಆಗಿರುತ್ತಾರೆ. ಇಂತಹ ಜಾತಿವ್ಯವಸ್ಥೆಯನ್ನು ಅಂದರೆ, ಮೇಲ್ಜಾತಿಗಳಿಗೆ ವಿಧೇಯವಾಗಿಯೇ ಇರುವುದನ್ನು ಭಾರತೀಯ ಸಮಾಜದಲ್ಲಿನ ವಿಭಿನ್ನ ಜಾತಿಯ ಸಮುದಾಯಗಳು ಹೇಗೆ ಒಪ್ಪಿಕೊಂಡವು ಎಂದರೆ, ಭಾರತೀಯ ಸಮುದಾಯದ ರಿಲಿಜಿಯನ್ ಆಗಿರುವ ಹಿಂದೂಯಿಸಂನಲ್ಲಿ ಜಾತಿಯ ಈ ನಿಯಮಗಳು ಬೇರೂರಿಕೊಂಡಿವೆ. ಹಾಗಾಗಿ, ಭಾರತದ ಜಾತಿವ್ಯವಸ್ಥೆಯು ಹಿಂದೂ ರಿಲಿಜಿಯನ್‌ನ ಅಖಂಡ ಭಾಗಗಳಾಗಿರುವ ವೇದ, ಪುರುಷಸೂಕ್ತ, ಮನುಧರ್ಮಶಾಸ್ತ್ರ ಮುಂತಾದ ಪವಿತ್ರಗ್ರಂಥಗಳಿಂದ ಹುಟ್ಟಿದ ವರ್ಣಧರ್ಮವನ್ನು ಆಧರಿಸಿರುವುದರಿಂದ ಭಾರತೀಯರು ಅದನ್ನು ಅನುಸರಿಸಿಯೇ ತೀರಬೇಕು. ಏಕೆಂದರೆ, ಹಿಂದೂ ರಿಲಿಜಿಯನ್‌ನ ಪವಿತ್ರಗ್ರಂಥಗಳು ಈ ರೀತಿಯ ನಂಬಿಕೆಗಳನ್ನು ಜನರಲ್ಲಿ ಸೃಷ್ಟಿ ಮಾಡುತ್ತವೆ.

ಬ್ರಾಹ್ಮಣ ಪುರೋಹಿತರು ಈ ಸಾಮಾಜಿಕ ಶ್ರೇಣೀಕರಣದಲ್ಲಿ ತಮ್ಮ ಉನ್ನತ ಸ್ಥಾನ ಸಂರಕ್ಷಿಕೊಳ್ಳುತ್ತಲೇ ಈ ರಿಲಿಜಿಯಸ್ ಗ್ರಂಥಗಳನ್ನು ವ್ಯಾಖ್ಯಾನಿಸುತ್ತಾ ವಿಭಿನ್ನ ಜಾತಿಯ ಸಮುದಾಯಗಳಿಗೆ ವಿಭಿನ್ನ ಸ್ಥಾನಮಾನಗಳನ್ನು ನಿರ್ಧರಿಸುತ್ತಿರುತ್ತಾರೆ. ಇದರ ಫಲವೇ, ಬ್ರಾಹ್ಮಣರು ಅತ್ಯುನ್ನತ ಸ್ಥಾನದಲ್ಲಿರುವ ಮತ್ತು ಅಸ್ಪೃಶ್ಯರು ಅತ್ಯಂತ

ಕೆಳಗಿನ ಸ್ಥಾನದಲ್ಲಿರುವಂತೆ ರೂಪುಗೊಂಡ ಜಟಿಲ ವ್ಯವಸ್ಥೆಯೇ ಜಾತಿ. ಈ ಶ್ರೇಣೀಕೃತ ಸಮಾಜದಲ್ಲಿ ಪ್ರತಿಯೊಂದು ಜಾತಿಯ ಸಾಮಾಜಿಕ ಸ್ಥಾನವನ್ನು ಶುದ್ಧಿ ಮತ್ತು ಅಶುದ್ಧಿ (purity and pollution) ಯ ಮೂಲಕ ನಿರ್ಧಾರವಾಗುತ್ತದೆ. ಈ ಸ್ಥಾನಮಾನಗಳಿಗನುಗುಣವಾಗಿ ಪ್ರತಿಯೊಂದು ಜಾತಿಯೂ ತಮ್ಮ ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ಹಕ್ಕುಗಳನ್ನು ಅನುಭವಿಸುತ್ತವೆ. ಈ ಶೇಣೀಕೃತ ವ್ಯವಸ್ಥೆಯಲ್ಲಿ ಜಾತಿಯ ಸ್ಥಾನ ಕೆಳಗಿಳಿದಷ್ಟೂ ಅವುಗಳ ಹಕ್ಕುಗಳೂ ಕೆಳಗಿಳಿಯುತ್ತಿರುತ್ತವೆ. ಇಲ್ಲಿ, ಪ್ರತಿಯೊಬ್ಬನ ಜಾತಿಯ ಗುರುತು, ವೃತ್ತಿ, ಮತ್ತು ಸ್ಥಾನಮಾನಗಳು ಹುಟ್ಟಿನಿಂದ ನಿರ್ಧಾರವಾಗಿ ಅವನ ಸಾವಿನವರೆಗೂ ಆತನಿಗೆ ಅಂಟಿಕೊಂಡಿರುತ್ತದೆ. ಹೀಗೆ ಕೆಳಜಾತಿಗಳ ಬಗ್ಗೆ ಅನ್ಯಾಯಯುತವಾದ ದಬ್ಬಾಳಿಕೆಯನ್ನು ಹರಡುವ ಈ ದುಷ್ಟ ಜಾತಿವ್ಯವಸ್ಥೆಯನ್ನು ಭಾರತೀಯರು ಅನುಸರಿಸುತ್ತಿದ್ದಾರೆ. ಶತಶತಮಾನಗಳಿಂದಲೂ ಈ ರೀತಿಯ ಅನ್ಯಾಯಯುತ ಮತ್ತು ಅಸಮಾನ ಸಂಬಂಧಗಳನ್ನು ನೆಲೆಗೊಳಿಸಿರುವ ಜಾತಿವ್ಯವಸ್ಥೆಯನ್ನು ಪ್ರತಿಪಾದಿಸುವ ಮತ್ತು ಸಮರ್ಥಿಸುವ ಹಿಂದೂ ರಿಲಿಜಿಯನ್‌ನ ಅನುಯಾಯಿಗಳು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಹಾಗಾಗಿ ಎಲ್ಲಿಯವರೆಗೆ ಹಿಂದೂ ರಿಲಿಜಿಯನ್ ಇರುತ್ತದೋ ಅಲ್ಲಿಯವರೆಗೆ ಜಾತಿವ್ಯವಸ್ಥೆ ಭಾರತದಲ್ಲಿರುತ್ತದೆ; ಎಲ್ಲಿಯವರೆಗೆ ಜಾತಿ ವ್ಯವಸ್ಥೆ ಇರುತ್ತದೆಯೋ ಅಲ್ಲಿಯವರೆಗೆ ಈ ಅಸಮಾನತೆ ಅನ್ಯಾಯಗಳು ಮುಂದುವರಿಯುತ್ತಲೇ ಇರುತ್ತವೆ".

ಸಮಾಜ ವಿಜ್ಞಾನಿಗಳು ಕೊಡುವ ಜಾತಿವ್ಯವಸ್ಥೆಯ ವಿವರಣೆಗಳಲ್ಲಿ ಬಹಳಷ್ಟು ಸೂಕ್ಷ್ಮ ವ್ಯತ್ಯಾಸಗಳಿವೆ ಎಂಬುದು ನಿಜವಾದರೂ, ಇದುವರೆಗೆ ಮಂಡಿಸಲಾದ ಎಲ್ಲ ವಿವರಣೆಗಳಿಗೆ ಅರ್ಥವನ್ನು ನೀಡುವ ಸೈದ್ಧಾಂತಿಕ ಚೌಕಟ್ಟು ಮೇಲೆ ತಿಳಿಸಿದ ರೀತಿಯಲ್ಲೇ ಇರುವುದರಲ್ಲಿ ಯಾವ ಅನುಮಾನವೂ ಇಲ್ಲ. ಜಾತಿ ವ್ಯವಸ್ಥೆಯ ಕುರಿತು ಈ ರೀತಿಯ ಸಿದ್ಧಾಂತಗಳನ್ನು ಪ್ರತಿಪಾದಿಸಿದ ದಿನದಿಂದಲೇ, ಬಗೆಹರಿಸಲಾಗದ ಅನೇಕ ಸಮಸ್ಯೆಗಳು ಈ ಸಿದ್ಧಾಂತಗಳನ್ನು ಬೆನ್ನತ್ತಿ ಬರುತ್ತಿರುವುದು ಅಷ್ಟೇ ಸತ್ಯ. ನಮಗೆ ಈ ಬರವಣಿಗೆಗಳ ಕನಿಷ್ಠ ಜ್ಞಾನವಿದ್ದರೂ ಸಾಕು, ಈ ಸಿದ್ಧಾಂತವು ವಸ್ತುಸ್ಥಿತಿಯನ್ನಾಧರಿಸಿಲ್ಲ ಎಂಬುದನ್ನು ಸ್ವತಃ ನಾವೇ ಮನಗಾಣುತ್ತೇವೆ. ಕಳೆದ ಐವತ್ತು ವರ್ಷಗಳೀಚೆಗೆ ಸಮಾಜಶಾಸ್ತ್ರಜ್ಞರು ಹಲವು ಬಾರಿ ಇದೇ ಚೌಕಟ್ಟಿನೊಳಗೇ ತಮ್ಮ ಸಿದ್ಧಾಂತಗಳನ್ನು ಮತ್ತೆ ಮತ್ತೆ ಮುರಿದು ಕಟ್ಟುತ್ತಿದ್ದಾರೆ. ಆದರೆ ಪ್ರಯೋಜನವಾದದ್ದೇನು?

ನಮ್ಮ ಕೇಂದ್ರದ ಸಂಶೋಧನೆಯು ಈ ಮೇಲೆ ಉಲ್ಲೇಖಿಸಿದ ಸಮಾಜಶಾಸ್ತ್ರೀಯ ಸಂಶೋಧನೆಯ ಸಮಸ್ಯೆಗಳನ್ನು ಉದ್ದೇಶಿಸಿದೆ. ನಮ್ಮ ಸಂಶೋಧನೆಯು ಭಾರತದಲ್ಲಿ ಜಾತಿಗಳಿರುವುದನ್ನಾಗಲೀ ಹಲವು ಜಾತಿಗಳಿಗೆ ಶತಮಾನಗಳಿಂದ ಆಗಿರುವ ಅನ್ಯಾಯಗಳನ್ನಾಗಲೀ ಅಲ್ಲಗಳೆಯುತ್ತಿಲ್ಲ. ಬದಲಿಗೆ ಈ ಅಸಮಾನತೆ ಮತ್ತು ಅನ್ಯಾಯಗಳಿಗೆ ಅಸ್ತಿತ್ವದಲ್ಲಿದೆ ಎಂದು ನಂಬಲಾದ ಜಾತಿ ವ್ಯವಸ್ಥೆ ಮತ್ತು ಹಿಂದೂ ರಿಲಿಜಿಯನ್ ಕಾರಣ ಎನ್ನುವ ನಂಬಿಕೆ ಸಮಸ್ಯಾತ್ಮಕವಾದುದು ಎನ್ನುವ ತಿಳುವಳಿಕೆಯೊಂದಿಗೆ ಸಂಶೋಧನೆ ಪ್ರಾರಂಭವಾಗುತ್ತದೆ. ಏಕೆಂದರೆ, ಜಾತಿವ್ಯವಸ್ಥೆ ಹಿಂದೂಯಿಸಂನ ಒಂದು ವಿಶಿಷ್ಟ ಲಕ್ಷಣ ಅಥವಾ ಜಾತಿ ವ್ಯವಸ್ಥೆಯ ಅಸ್ತಿತ್ವಕ್ಕೆ ಹಿಂದೂಯಿಸಂ ಮೂಲ ಕಾರಣ ಎಂದು ಪ್ರತಿಪಾದಿಸುವ ಮೊದಲು ಹಿಂದೂಯಿಸಂ ಎನ್ನುವ ರಿಲಿಜನ್ ಅಸ್ತಿತ್ವದಲ್ಲಿದೆ ಎಂಬುದನ್ನು ಪ್ರಾಯೋಗಿಕವಾಗಿ ಸಾಧಿಸಿತೋರಿಸಬೇಕಾಗುತ್ತದೆ. ಅನಂತರಷ್ಟೇ ಇವೇ ಈ ಅನ್ಯಾಯ ಮತ್ತು ಅಸಮಾನತೆಗೆ ಹಿಂದೂಯಿಸಂ ಮತ್ತು ಜಾತಿ ವ್ಯವಸ್ಥೆ ಮೂಲ ಕಾರಣ ಎಂದು ಪ್ರತಿಪಾದಿಸಬೇಕಾಗುತ್ತದೆ. ಈ ಮೊದಲೇ ತಿಳಿಸಿದಂತೆ ಜಾತಿವ್ಯವಸ್ಥೆ ಅಥವಾ ಹಿಂದೂಯಿಸಂ ಕುರಿತು ಸಂಶೋಧನೆ ಮಾಡಿದ ಯಾವ ಸಮಾಜ ವಿಜ್ಞಾನಿಯೂ ಹಿಂದೂಯಿಸಂ ಒಂದು ರಿಲಿಜನ್ ಆಗಿ ಅಸ್ತಿತ್ವದಲ್ಲಿದೆ ಎನ್ನುವ ಬಗ್ಗೆಯಾಗಲೀ ಅಥವಾ ಜಾತಿಗಳು ಹಿಂದೂಯಿಸಂನ ಚೌಕಟ್ಟಿನೊಳಗೆ ಒಂದು ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತವೆ ಎಂದಾಗಲಿ ವೈಜ್ಞಾನಿಕವಾಗಿ ಪ್ರತಿಪಾದಿಸಲು ಸಂಪೂರ್ಣವಾಗಿ ಸಫಲರಾಗಿಲ್ಲ.

ನಾವು ಕರ್ನಾಟಕದಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಕಂಡುಬರುವಂತೆ: ಈ ಸಮಾಜದಲ್ಲಿ ಮೇಲ್ಜಾತಿ ಕೆಳಜಾತಿಗಳ ವರ್ಗೀಕರಣಗಳಿವೆ, ನಿಜ. ಆದರೆ ಅವು ಇದುವರೆಗಿನ ಸಿದ್ಧಾಂತಗಳು ಹೇಳುವಂತೆ ಒಂದು ನಿರ್ದಿಷ್ಟ ಶ್ರೇಣೀಕರಣಕ್ಕೆ ಒಳಪಡುವುದಿಲ್ಲ (ಇದನ್ನು ಕಂಡುಕೊಳ್ಳುವಲ್ಲಿ ನಾವೇ ಮೊದಲಿಗರೇನಲ್ಲ ಬಹಳಷ್ಟು ಇತರ ಸಮಾಜಶಾಸ್ತ್ರದ ಚಿಂತಕರು ಈಗಾಗಲೆ ಈ ವಿಷಯವನ್ನು ತಿಳಿಸಿದ್ದಾರೆ). ಅಷ್ಟೇ ಅಲ್ಲ ಜಾತಿಗೆ ಸಂಬಂಧಿಸಿದ ಯಾವುದೇ ಸಂಪ್ರದಾಯವಾಗಲಿ, ಆಚರಣೆಯಾಗಲಿ ಹಿಂದೂ ರಿಲಿಜನ್‌ನ ನಿರ್ಬಂಧ ಅಥವಾ ನಿರ್ದೇಶನಕ್ಕೊಳಪಡುತ್ತವೆ ಎನ್ನುವ ಜನಜನಿತ ನಂಬಿಕೆಗೆ ಯಾವುದೇ ಪುರಾವೆಗಳು ನಮಗೆ ದೊರಕುವುದಿಲ್ಲ. ವಾಸ್ತವವಾಗಿ ತಮ್ಮ ಜಾತಿ ಸಂಪ್ರದಾಯಗಳನ್ನು ಅನುಸರಿಸುವೆವೆಂದು ಹೇಳುವ ಜನರಾರೂ ಈ ಧಾರ್ಮಿಕ ಪವಿತ್ರ ಗ್ರಂಥಗಳ ಬಗ್ಗೆ ಕೇಳಿಯೂ ಇಲ್ಲ ಹಾಗೂ ಹಿಂದೂ ರಿಲಿಜಿಯನ್ನಿನಿಂದ ಹುಟ್ಟು ಹಾಕಲ್ಪಟ್ಟ ನಿರ್ದಿಷ್ಟ ನಂಬಿಕೆಯನ್ನು ಹೊಂದಿರುವಂತೆಯೂ ಕಂಡುಬರುವುದಿಲ್ಲ. ಬದಲಿಗೆ ತಮ್ಮೆಲ್ಲಾ ಜಾತಿ ಆಚರಣೆಗಳಿಗೆ ಸಮರ್ಥನೆ ಕೊಡಬೇಕಾದಾಗ ಅವರು ಬೆರಳನ್ನು ತೋರಿಸುವುದು ತಮ್ಮ ಹಿಂದಿನವರ ಸಂಪ್ರದಾಯಗಳನ್ನೇ ಹೊರತು ಯಾವುದೇ ಧಾರ್ಮಿಕ ಗ್ರಂಥಗಳನ್ನಲ್ಲ. ಈ ಸಂಪ್ರದಾಯಗಳಿಗೂ ಈ ಹಿಂದೂ ಧಾರ್ಮಿಕ ಗ್ರಂಥಗಳಿಗೂ ಸಂಬಂಧವನ್ನು ಕಲ್ಪಿಸಲು ನಮಗೆ ಸಾಧ್ಯವಾಗುವುದು ಸಂಶೋಧನೆಗೆ ತೊಡಗುವ ಮುನ್ನವೆ ಹಿಂದೂಯಿಸಂ ಎನ್ನುವ ರಿಲಿಜನ್ ಇದೆ ಎನ್ನುವ ಪೂರ್ವ ಕಲ್ಪನೆ ಇದ್ದಾಗ ಮಾತ್ರ. ಅಂದರೆ, ಅವರ ಜಾತಿ ಆಚರಣೆಗಳಿಗೆ ವರ್ಣಧರ್ಮ, ಜಾತಿ ವ್ಯವಸ್ಥೆ ಮತ್ತು ಹಿಂದೂ ರಿಲಿಜಿಯನ್ ಕಾರಣವಾಗಿವೆ ಎಂಬುದನ್ನು ತೋರಿಸಲು ನಮಗೆ ಯಾವುದೇ ಪ್ರಾಯೋಗಿಕ ಪುರಾವೆಯೇ ದೊರೆಯುವುದಿಲ್ಲ.

ನಾವು ಕರ್ನಾಟಕದಲ್ಲಿ ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ಕಂಡುಬರುವಂತೆ ಈ ಸಮಾಜದಲ್ಲಿ ಮೇಲ್ಜಾತಿ ಕೆಳ ಜಾತಿಗಳ ವರ್ಗೀಕರಣಗಳಿವೆ, ನಿಜ. ಆದರೆ ಅವು ಇದುವರೆಗಿನ ಸಿದ್ಧಾಂತಗಳು ಹೇಳುವಂತೆ ಒಂದು ನಿರ್ದಿಷ್ಟ ಶ್ರೇಣೀಕರಣಕ್ಕೆ ಒಳಪಡುವುದಿಲ್ಲ (ಇದನ್ನು ಕಂಡುಕೊಳ್ಳುವಲ್ಲಿ ನಾವೇ ಮೊದಲಿಗರೇನಲ್ಲ ಬಹಳಷ್ಟು ಇತರ ಸಮಾಜಶಾಸ್ತ್ರದ ಚಿಂತಕರು ಈಗಾಗಲೆ ಈ ವಿಷಯವನ್ನು ತಿಳಿಸಿದ್ದಾರೆ). ಅಷ್ಟೇ ಅಲ್ಲ ಜಾತಿಗೆ ಸಂಬಂಧಿಸಿದ ಯಾವುದೇ ಸಂಪ್ರದಾಯವಾಗಲಿ, ಆಚರಣೆಯಾಗಲಿ ಹಿಂದೂ ರಿಲಿಜನ್‌ನ ನಿರ್ಬಂಧ ಅಥವಾ ನಿರ್ದೇಶನಕ್ಕೊಳಪಡುತ್ತವೆ ಎನ್ನುವ ಜನಜನಿತ ನಂಬಿಕೆಗೆ ಯಾವುದೇ ಪುರಾವೆಗಳು ನಮಗೆ ದೊರಕುವುದಿಲ್ಲ. ವಾಸ್ತವವಾಗಿ ತಮ್ಮ ಜಾತಿ ಸಂಪ್ರದಾಯಗಳನ್ನು ಅನುಸರಿಸುವೆವೆಂದು ಹೇಳುವ ಜನರಾರೂ ಈ ಧಾರ್ಮಿಕ ಪವಿತ್ರ ಗ್ರಂಥಗಳ ಬಗ್ಗೆ ಕೇಳಿಯೂ ಇಲ್ಲ ಹಾಗೂ ಹಿಂದೂ ರಿಲಿಜಿಯನ್ನಿನಿಂದ ಹುಟ್ಟು ಹಾಕಲ್ಪಟ್ಟ ನಿರ್ದಿಷ್ಟ ನಂಬಿಕೆಯನ್ನು ಹೊಂದಿರುವಂತೆಯೂ ಕಂಡು ಬರುವುದಿಲ್ಲ.

ಹಾಗೆಯೇ, ಅಸ್ಪೃಶ್ಯ ಜಾತಿಗಳವರು ತಾವೇ ತಮ್ಮ ಹಳ್ಳಿಯಲ್ಲಿ ಅತ್ಯಂತ ಕೆಳಜಾತಿಗಳೆಂದು ಒಪ್ಪುತ್ತಾರೆ. ಹಾಗೆಯೆ ಮೇಲ್ಜಾತಿಯವರು ಅವುಗಳನ್ನೇ ಕೆಳಜಾತಿಗಳೆಂದೂ ಗುರುತಿಸುತ್ತಾರೆ. ಆದರೆ, ಈ ರೀತಿಯ ವಿಂಗಡಣೆಗೆ ವೇದಗಳು, ಪುರುಷಸೂಕ್ತ, ಮನುಧರ್ಮಶಾಸ್ತ್ರ ಮುಂತಾದ ಹಿಂದೂ ಪವಿತ್ರ ಗ್ರಂಥಗಳೇ ಕಾರಣ ಮತ್ತು ಅವುಗಳ ನಿರ್ದೇಶನದಂತೆಯೇ ಈ ವಿಂಗಡಣೆಯನ್ನು ನಾವು ಚಾಚೂ ತಪ್ಪದೆ ಪಾಲಿಸುತ್ತಿದ್ದೇವೆ ಎಂಬುದು ಮೇಲ್ಜಾತಿಗಳ ಅನುಭವವೂ ಅಲ್ಲ ಕೆಳಜಾತಿಗಳ ಅನುಭವವೂ ಅಲ್ಲ. ಅಂದರೆ, ಈ ಗ್ರಂಥಗಳು ಇರುವುದು ಅಥವಾ ಇಲ್ಲದಿರುವುದು ಅವರವರ ಜಾತಿಗಳ ಆಚರಣೆಗೆ ಯಾವ ರೀತಿಯಲ್ಲೂ ಸಂಬಂಧಿಸಿಲ್ಲ. ಅವುಗಳ ಅಸ್ತಿತ್ವದ ಬಗ್ಗೆಯೇ ಶೇ. ೯೦ ರಿಂದ ೯೫ ರಷ್ಟು ಜನರಿಗೆ ಅರಿವಿಲ್ಲ. ಅರಿವಿರುವವರೂ (ಮುಖ್ಯವಾಗಿ ಆಧುನಿಕ ಶಿಕ್ಷಣ ಪಡೆದವರು) ಅವುಗಳೇ ನಮ್ಮ ಸಾಮಾಜಿಕ ಜೀವನವನ್ನು ನಿರ್ದೇಶಿಸುವ ಪವಿತ್ರಗ್ರಂಥಗಳೆಂದು ಭಾವಿಸಿಯೂ ಇಲ್ಲ. ಅಂದಮೇಲೆ ಈ ಶಾಸ್ತ್ರ ಗ್ರಂಥಗಳ (ಐಡಿಯಾಲಜಿಗಳ) ನಿರ್ದೇಶನಗಳ ಆಧಾರದ ಮೇಲೆ ಇಡೀ ಭಾರತೀಯ ಸಮಾಜಕ್ಕೆ ಒಂದು ವ್ಯವಸ್ಥಿತ ಸಾಮಾಜಿಕ ರಚನೆಯಾಗಿ ಜಾತಿ ವ್ಯವಸ್ಥೆ ಇದೆ ಎಂಬ ವಾದಕ್ಕೆ ಯಾವುದೇ ವಾಸ್ತವಿಕ ಪುರಾವೆಯೇ ದೊರೆಯುವುದಿಲ್ಲ. ಅಸ್ಪೃಶ್ಯರು ಮತ್ತು ಮೇಲ್ಜಾತಿಯವರೂ ಒಳಗೊಂಡಂತೆ ಅತೀ ಹೆಚ್ಚಿನ ಜನರು ತಮ್ಮ ಎಲ್ಲ ರೀತಿಯ ಜಾತಿ ಆಚರಣೆಗಳಿಗೆ ತಮ್ಮ ಹಿಂದಿನ ಪೀಳಿಗೆಯಿಂದ ಬಂದ ರೂಢಿಪದ್ಧತಿ, ಆಚರಣೆಗಳು ಮತ್ತು ಸಂಪ್ರದಾಯಗಳು ಮೂಲವೆನ್ನುತ್ತಾರೆ. ಈ ಯಾವ ರೂಢಿ, ಆಚರಣೆ, ಸಂಪ್ರದಾಯಗಳೂ ಹಿಂದೂ ಅಥವಾ ಇನ್ಯಾವುದೇ ಶಾಸ್ತ್ರ ಗ್ರಂಥಗಳಿಂದ ಹುಟ್ಟಿದವುಗಳಲ್ಲ ಎಂಬುದೂ ಅಷ್ಟೇ ನಿಚ್ಚಳವಾಗಿ ಗೋಚರವಾಗುತ್ತದೆ.

ಹೀಗೆ ಈ ರೀತಿಯ ಶಾಸ್ತ್ರಗ್ರಂಥಗಳ 'ಐಡಿಯಾ

ಲಜಿ'ಯಿಂದ ನಿರ್ದೇಶಿತವಾಗಿರುವ ಒಂದು ವ್ಯವಸ್ಥಿತ ರಚನೆ ಇದೆಯೇ ಎಂಬ ಬಗ್ಗೆಯಾಗಲೀ, ಹಿಂದೂ ಧರ್ಮ ಆಧಾರದ ಜಾತಿ ವ್ಯವಸ್ಥೆ ಮತ್ತು ವರ್ಣಧರ್ಮವನ್ನು ಪೋಷಿಸುವ ಶಾಸ್ತ್ರಗ್ರಂಥಗಳು ಇಲ್ಲಿಯ ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯಗಳಿಗೆ ಕಾರಣವೇ ಎಂಬುದಕ್ಕಾಗಲೀ ಯಾವುದೇ ಕ್ಷೇತ್ರಾಧಾರಗಳಿಲ್ಲವಾದರೂ ಈ ಸಮಸ್ಯೆಗಳಿಗೆ ಅಸ್ತಿತ್ವದಲ್ಲಿಯೇ ಇಲ್ಲದ ಜಾತಿಪದ್ಧತಿ ಮತ್ತು ಹಿಂದೂ ರಿಲಿಜಿಯನ್ ಕಾರಣ ಎಂಬ ವಿವರಣೆಗಳನ್ನೇ ಬಹುತೇಕ ಎಲ್ಲ ಚಿಂತಕರೂ ನೀಡುತ್ತಾರಾದರೂ ಏಕೆ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಈ ಹಿನ್ನೆಲೆಯಲ್ಲಿ ಬಾಲಗಂಗಾಧರರ ಹೈಪೊಥಿಸಿಸ್ ಮತ್ತು ಸಂಶೋಧನೆ ಮಹತ್ತರವಾದ ಬೆಳಕನ್ನೇ ಚೆಲ್ಲುತ್ತದೆ.

ಬಾಲಗಂಗಾಧರರು ವಿವರಿಸುವಂತೆ ಯೂರೋಪಿಯನ್ನರು ಅನ್ಯ ಸಂಸ್ಕೃತಿಯ ಜನರನ್ನು ವಿವರಿಸುವಾಗ ತಮ್ಮದೇ ಆದ ಸಾಂಸ್ಕೃತಿಕ ಹಿನ್ನಲೆಯ ಪರಿಕಲ್ಪನೆಗಳ ಮೂಲಕ ವಿವರಿಸುತ್ತಾ ಹೋದರಾದ್ದರಿಂದ, ಅವರ ಭಾರತೀಯ ಸಾಂಸ್ಕೃತಿಕ ಮತ್ತು ಸಾಮಾಜಿಕ ರಚನೆಯ ವಿವರಣೆಗಳು ವಾಸ್ತವಿಕ ಚಿತ್ರಣವಾಗಿರದೇ ಅವರ ಸಾಂಸ್ಕೃತಿಕ ಅನುಭವಗಳ ವಿವರಣೆಗಳು ಮಾತ್ರವೇ ಆಗಿದೆ. ಅಂದರೆ ಅವರ ವಿವರಣೆಗಳು ಅವರದೇ ಸಂಸ್ಕೃತಿಯಲ್ಲಿ ಚಲಾವಣೆಯಲ್ಲಿರುವ ಪರಿಕಲ್ಪನೆಗಳ ಪರಿಮಿತಿಗೆ ಒಳಪಟ್ಟಿದೆಯೇ ಹೊರತು ಅದರಿಂದ ಹೊರತಾದ ಇತರ ಸಂಸ್ಕೃತಿಯ ಜನರನ್ನು ನೈಜವಾಗಿ ವಿವರಿಸುವಂತಹ ವೈಜ್ಞಾನಿಕ ವಿವರಣೆಗಳಲ್ಲ. ದುರದೃಷ್ಟವಶಾತ್ ಭಾರತೀಯ ಚಿಂತಕರೂ ಸೇರಿದಂತೆ ಬಹಳಷ್ಟು ಚಿಂತಕರು ಈ ಮಿತಿಯನ್ನು ಗುರುತಿಸಲು ವಿಫಲವಾಗಿ, ಇಂದಿಗೂ ವಸಾಹತ್ತೋತ್ತರ ಚಿಂತಕರನ್ನೂ ಒಳಗೊಂಡಂತೆ ಅದೇ, ಯೂರೋಪಿನ ಸಾಂಸ್ಕೃತಿಕ ಹಿನ್ನಲೆಗೆ ಸೀಮಿತವಾದ, ಪರಿಕಲ್ಪನೆಗಳನ್ನೇ ಬಳಸುತ್ತಿದ್ದಾರೆ. ಹಾಗೂ ಅದೇ ಸೈದ್ಧಾಂತಿಕ ಚೌಕಟ್ಟಿನೊಳಗೆಯೇ ವಸಾಹತುಶಾಹಿ ಆಳ್ವಿಕೆ ಮತ್ತು ನಂತರ ಇಂದಿನ ಸ್ವತಂತ್ರ ರಾಜಕೀಯ ವ್ಯವಸ್ಥೆಯೊಂದಿಗೂ ಪ್ರತಿಕ್ರಿಯಿಸುತ್ತಾ ಸಮಾಜಿಕ ಸಮಸ್ಯೆಗಳ ಬಗ್ಗೆ ವಾದ ಸಿದ್ದಾಂತಗಳನ್ನು ಮಂಡಿಸುತ್ತಾ ಪರಿಹಾರಗಳನ್ನು ಅರಸುತ್ತಿದ್ದಾರೆ.

ಹಾಗಾಗಿ ಭಾರತದಲ್ಲಿ ಬಹತೇಕ ಚಿಂತಕರು ಬಳಸುವ ಈ 'ಜಾತಿ ವ್ಯವಸ್ಥೆ'ಯ ಪರಿಕಲ್ಪನೆಯು ಭಾರತಕ್ಕೆ ಬಂದ ಯೂರೋಪಿಯನ್ನರ ಸಾಂಸ್ಕೃತಿಕ ವಿವರಣೆಯೇ ಹೊರತು ಅದು ಭಾರತೀಯ ಸಮಾಜದ ವಾಸ್ತವವಲ್ಲ. (ಅಂದರೆ ಎಲ್ಲಾ ಸಾಮಾಜಿಕವಾಗಿ ಸಂಸ್ಥೆಗಳು ವ್ಯವಸ್ಥಿತವಾಗಿ ರೂಪಿತವಾಗಿರುತ್ತದೆ. ಅಂತೆಯೇ ಭಾರತದಲ್ಲಿರುವ ಜಾತಿಗಳು ಯಾವುದೋ ಒಂದು ರೀತಿಯ ವ್ಯವಸ್ಥೆಯನ್ನು ಹೊಂದಿರಲೇಬೇಕು, ಹಾಗೂ ಆ ವ್ಯವಸ್ಥೆಯು ಕೆಲವೊಂದು ನಂಬಿಕೆಗಳ ಮೇಲೆ ರಚನೆಯಾಗಿದ್ದು, ಆ ನಂಬಿಕೆಗಳು ಮೇಲ್ಕಾಣಿಸಿದ ಪವಿತ್ರ ಗ್ರಂಥಗಳಿಂದಲೇ ಬಂದಿರಬೇಕೆಂಬುದು ಅವರ ಕಲ್ಪನೆ) ಯೂರೋಪಿಯನ್ನರು ನೀಡಿದ ಈ ಪರಿಕಲ್ಪನೆ ಮತ್ತು ವಿವರಣೆಗಳೇ ನಿಜವೆಂದು ಆನಂತರ ಬಂದ ಯೂರೋಪಿಯನ್ನರೂ ಸೇರಿದಂತೆ ವಿಶ್ವದ ಇತರೆಡೆಯ ಚಿಂತಕರು (ಭಾರತೀಯ ಚಿಂತಕರು ಸೇರಿದಂತೆ) ಅದೇ ಪರಿಕಲ್ಪನೆ ಮತ್ತು ವಿವರಣೆಗಳನ್ನು ಪುನರುತ್ಪತ್ತಿ ಮಾಡುತ್ತಾ ಹೋಗುತ್ತಿದ್ದಾರೆ. ಇವರೆಲ್ಲರೂ ಭಾರತದಲ್ಲಿ ಜಾತಿಗಳು ಎಂಬ ಗುಂಪುಗಳು ಇರುವುದು, ಅಸ್ಪೃಶ್ಯತೆಯ ಆಚರಣೆ, ದಲಿತರ ಮೇಲಿನ ಶೋಷಣೆಯ ಘಟನೆಗಳನ್ನೇ 'ಜಾತಿ ವ್ಯವಸ್ಥೆ'ಯ ಆಧಾರವೆಂದು ನಂಬುತ್ತಾ ಹೋದರು. ಆದರೆ ಇವರಾರೂ ಇದು ಹೇಗೆ ಒಂದು ಭಾರತೀಯ ಸಮಾಜಕ್ಕೆ ಇಡಿಯಾಗಿ ಅನ್ವಯವಾಗುವ ಒಂದು ವ್ಯವಸ್ಥೆ? ಜಾತಿ ಆಚರಣೆಗಳಿಗೂ ಹಿಂದೂ ರಿಲಿಜಿಯನ್‌ಗೂ ಏನು ಸಂಬಂಧ? ಹಿಂದೂ ರಿಲಿಜಿಯನ್ನಿನ ಶಾಸ್ತ್ರಗಳು ಜಾತಿ ವ್ಯವಸ್ಥೆಯನ್ನು ಹೇಗೆ ನಿಯಂತ್ರಿಸುತ್ತದೆ? ಆಯಾ ಜಾತಿಯ ಜನರು ಏಕೆ ಮತ್ತು ಹೇಗೆ ಈ ಹಿಂದೂ ರಿಲಿಜಿಯನ್ನಿನ ಶಾಸ್ತ್ರಗ್ರಂಥಗಳನ್ನು ಅನುಸರಿಸುತ್ತಾ ಹೋದರು? ಈ ಶಾಸ್ತ್ರಗಳ ವಿವರಣೆ ಮತ್ತು ನಿರ್ದೇಶನಗಳಿಂದಲೇ ಹೇಗೆ ಅಸ್ಪೃಶ್ಯತೆಯ ಆಚರಣೆ ಮತ್ತು ಜಾತಿ ಅಸಮಾನತೆಗಳಿಗೆ ಕಾರಣವಾಗಿದೆ? ಎಂಬುದರ ಕುರಿತು ಯಾವುದೇ ವೈಜ್ಞಾನಿಕ ವಿವರಣೆ ಇದುವರೆಗೂ ಯಾರೂ ನೀಡಿಲ್ಲ ಬದಲಾಗಿ ಯೂರೋಪಿಯನ್ನರು ಅದರಲ್ಲೂ ಮುಖ್ಯವಾಗಿ ಯೂರೋಪಿನ ಮೊದಲ ಪ್ರವಾಸಿಗರು, ಕ್ರಿಶ್ಚಿಯನ್ ಮಿಷನರಿಗಳು ಹಾಗೂ ಬ್ರಿಟೀಷರು ನೀಡಿದ ವಿವರಣೆಗಳನ್ನೇ ನಿಜವೆಂದು ಒಪ್ಪಿಕೊಂಡು ಭಾರತದಲ್ಲಿರುವ ಎಲ್ಲಾ ರೀತಿಯ ಸಾಮಾಜಿಕ ಹಾಗೂ ಆರ್ಥಿಕ ಕೆಡುಕುಗಳಿಗೂ ಈ ಜಾತಿ ವ್ಯವಸ್ಥೆಯೇ ಕಾರಣ ಎಂಬಂತೆ ಚಿತ್ರಿಸುತ್ತಾ ಬಂದರು.

'ಐಡಿಯಾಲಜಿ'ಯಿಂದ ನಿರ್ದೇಶಿತವಾಗಿರುವ ಒಂದು ವ್ಯವಸ್ಥಿತ ರಚನೆ ಇದೆಯೇ ಎಂಬ ಬಗ್ಗೆಯಾಗಲೀ, ಹಿಂದೂ ಧರ್ಮ ಆಧಾರದ ಜಾತಿ ವ್ಯವಸ್ಥೆ ಮತ್ತು ವರ್ಣಧರ್ಮವನ್ನು ಪೋಷಿಸುವ ಶಾಸ್ತ್ರಗ್ರಂಥಗಳು ಇಲ್ಲಿಯ ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯಗಳಿಗೆ ಕಾರಣವೇ ಎಂಬುದಕ್ಕಾಗಲೀ ಯಾವುದೇ ಕ್ಷೇತ್ರಾಧಾರಗಳಿಲ್ಲವಾದರೂ ಈ ಸಮಸ್ಯೆಗಳಿಗೆ ಅಸ್ತಿತ್ವದಲ್ಲಿಯೇ ಇಲ್ಲದ ಜಾತಿಪದ್ಧತಿ ಮತ್ತು ಹಿಂದೂ ರಿಲಿಜಿಯನ್ ಕಾರಣ ಎಂಬ ವಿವರಣೆಗಳನ್ನೇ ಬಹುತೇಕ ಎಲ್ಲ ಚಿಂತಕರೂ ನೀಡುತ್ತಾರಾದರೂ ಏಕೆ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಈ ಹಿನ್ನೆಲೆಯಲ್ಲಿ ಬಾಲಗಂಗಾಧರರ ಹೈಪೊಥಿಸಿಸ್ ಮತ್ತು ಸಂಶೋಧನೆ ಮಹತ್ತರವಾದ ಬೆಳಕನ್ನೇ ಚೆಲ್ಲುತ್ತದೆ. ಬಾಲಗಂಗಾಧರರು ವಿವರಿಸುವಂತೆ ಯೂರೋಪಿಯನ್ನರು ಅನ್ಯ ಸಂಸ್ಕೃತಿಯ ಜನರನ್ನು ವಿವರಿಸುವಾಗ ತಮ್ಮದೇ ಆದ ಸಾಂಸ್ಕೃತಿಕ ಹಿನ್ನಲೆಯ ಪರಿಕಲ್ಪನೆಗಳ ಮೂಲಕ ವಿವರಿಸುತ್ತಾ ಹೋದರಾದ್ದರಿಂದ, ಅವರ ಭಾರತೀಯ ಸಾಂಸ್ಕೃತಿಕ ಮತ್ತು ಸಾಮಾಜಿಕ ರಚನೆಯ ವಿವರಣೆಗಳು ವಾಸ್ತವಿಕ ಚಿತ್ರಣವಾಗಿರದೇ ಅವರ ಸಾಂಸ್ಕೃತಿಕ ಅನುಭವಗಳ ವಿವರಣೆಗಳು ಮಾತ್ರವೇ ಆಗಿದೆ.

ಅದರಲ್ಲೂ, ಈ ರೀತಿಯ ವಿವರಣೆಗೆ ಕಾರಣರಾದ ಯೂರೋಪಿಯನ್ನರು ರಿಲಿಜಿಯಸ್ ಸಾಂಸ್ಕೃತಿಕ ರಚನೆಯನ್ನು ಹೊಂದಿದ್ದ ಸಾಮಾಜಿಕ ಹಿನ್ನೆಲೆಯಿಂದ ಬಂದವರಾದ್ದರಿಂದ ಪ್ರತಿಯೊಂದು ಸಾಮಾಜಿಕ ವ್ಯವಸ್ಥೆಯೂ ಕೂಡ ಈ ರಿಲಿಜಿಯನ್‌ನ್ನು ಹೊಂದಿರಲೇಬೇಕು ಎಂದು ಬಲವಾಗಿ ನಂಬಿದ್ದರು. ಅವರ ಈ ನಂಬಿಕೆಯೆ ಅವರಿಗೆ ಭಾರತದಲ್ಲಿಯೂ ಹಿಂದೂ ರಿಲಿಜಿಯನ್ನನ್ನು ಹಾಗೂ ಅದರಿಂದ ನಿಯಂತ್ರಿತವಾಗಿರುವಂತಹ ಜಾತಿ ವ್ಯವಸ್ಥೆಯನ್ನು ಕಾಣುವಂತೆ ಮಾಡಲು ಪ್ರೇರೇಪಿಸಿತು. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಯುರೋಪಿಯನ್ನರು ಇದನ್ನು ಬೇಕೆಂದೆ ಪ್ರಜ್ಞಾಪೂರ್ವಕವಾಗಿ ಮಾಡಿದ್ದಲ್ಲ. ಅವರು ಬೆಳೆದು ಬಂದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಭಾರತೀಯ ಸಮಾಜವನ್ನು ಹಾಗೆ ಅರ್ಥ ಮಾಡಿಕೊಳ್ಳದೆ ಬೇರೆ ಮಾರ್ಗವೇ ಇರಲಿಲ್ಲ. ಒಂದು ವೇಳೆ ಭಾರತೀಯರೇ ಯುರೋಪಿಗೆ ಹೋಗಿದ್ದರೂ ಅವರೂ ಸಹ ತಮ್ಮ ಸಾಂಸ್ಕೃತಿಕ ಹಿನ್ನೆಲೆಯಲ್ಲೇ ಯುರೋಪಿಯನ್ ಸಮಾಜವನ್ನು ಅರ್ಥೈಸುತ್ತಿದ್ದರು. ಹಾಗಾಗಿ ಜಾತಿ ವ್ಯವಸ್ಥೆ ಮತ್ತು ಹಿಂದೂ ರಿಲಿಜಿಯನ್ ಎನ್ನುವುದು ಯೂರೋಪಿಯನ್ನರ ಭಾರತೀಯ ಸಮಾಜದ ಅನುಭವದ ವಿವರಣೆಗಳೇ ಹೊರತು ಅವೇ ನೈಜ ಸ್ಥಿತಿ ಅಲ್ಲ.

ಒಂದು ವೇಳೆ ಈ ಹೈಪೊಥಿಸಿಸ್ ನಿಜವಾದಲ್ಲಿ (ನಿಜವೇ ಅಲ್ಲವೇ ಎಂಬುದು ಸಂಶೋಧನೆಯ ಫಲಿತಾಂಶದ ಮೇಲೆ ನಿರ್ಧಾರವಾಗಬೇಕು) ಭಾರತದ ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯ ಮತ್ತು ಅಸ್ಪೃಶ್ಯರ ಸಮಸ್ಯೆಯನ್ನು ನಾವು ನೋಡುವ ಮತ್ತು ಅಧ್ಯಯನ ಮಾಡುವ ಸ್ವರೂಪವೇ ಬೇರೊಂದು ಮಾರ್ಗವನ್ನು ಹಿಡಿಯಬೇಕಾಗುತ್ತದೆ. ಏಕೆಂದರೆ ಈಗಿನ ಅಧ್ಯಯನದ ರೀತಿಗಳು ಮತ್ತು ಅವು ನೀಡಿರುವ ಸೈದ್ಧಾಂತಿಕ ಚೌಕಟ್ಟಿನಡಿಯಲ್ಲಿ ಭಾರತೀಯ ಸಮಾಜವನ್ನು ಅದರ ರಚನೆಯನ್ನು ವೈಜ್ಞಾನಿಕವಾಗಿ ನಿರೂಪಿಸಲಾಗಲೀ, ಅರ್ಥಮಾಡಿಕೊಳ್ಳಲಾಗಲೀ ಸಹಾಯಕವಾಗುವುದಿಲ್ಲ. ಇದರ ಪರಿಣಾಮವಾಗಿ ವಾಸ್ತವದಲ್ಲಿ ವ್ಯವಸ್ಥೆಯಾಗಿ ಅಸ್ಥಿತ್ವದಲ್ಲಿಲ್ಲದ ಜಾತಿಗೆ ಭಾರತೀಯ ಸಮಾಜದಲ್ಲಿರುವ ಎಲ್ಲಾ ಕೆಡುಕುಗಳನ್ನು ಆರೋಪಿಸಿಕೊಂಡು ಅದರ ನಿವಾರಣೆಗೆ ಹಲವಾರು ಪರಿಹಾರ ಕ್ರಮಗಳನ್ನು ಕೈಗೊಳ್ಳತೊಡಗಲಾಗಿದೆ. ಇದರ ಪರಿಣಾಮವಾಗಿ ಕೆಲಮಟ್ಟಿಗೆ ಪಂಚಾಯಿತಿ ಸಂಸ್ಥೆಗಳಲ್ಲಿ ರಾಜಕೀಯ ಪ್ರಾತಿನಿಧ್ಯ ದೊರೆತಿರುವುದನ್ನು ಹೊರತುಪಡಿಸಿದರೆ, ಇಂದಿಗೂ ಅಸ್ಪೃಶ್ಯತೆಯಾಗಲಿ, ಜಾತಿ ಅಸಮಾನತೆಯಲ್ಲಾಗಲೀ ಹೇಳಿಕೊಳ್ಳುವಂತಹ ಸುಧಾರಣೆಗಳು ಆಗಿಲ್ಲ. ಇಂದಿನ ಅನೇಕ ಅಧ್ಯಯನಗಳು ಮತ್ತು ವಾಸ್ತವ ಚಿತ್ರಣವೂ ಇದನ್ನೆ ಸೂಚಿಸುತ್ತದೆ. ಹೀಗಾಗಿ, ಇಂದಿಗೂ ಅಸ್ಪೃಶ್ಯತೆ ತೊಲಗದೇ ಇರಲು ಹಾಗೂ ಸಾಮಾಜಿಕ ಅಸಮಾನತೆ ಹಾಗೂ ಅನ್ಯಾಯಗಳು ಇನ್ನೂ ಮುಂದುವರೆದಿರಲು ಕಾರಣ 'ಕಾಲ್ಪನಿಕ' ಜಾತಿ ವ್ಯವಸ್ಥೆಯಲ್ಲ, ಬದಲಾಗಿ ಭಾರತೀಯ ಸಮಾಜವನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಳ್ಳದೇ ಇರುವುದೇ ಆಗಿದೆ. ಅಂದರೆ, ಈ ಸಮಸ್ಯೆಗಳಿಗೆ ಕಾರಣವಾಗಿರುವ ಈ ಭಾರತೀಯ ಸಾಮಾಜಿಕ ರಚನೆಯನ್ನು ಇಲ್ಲಿರುವ ರೂಢಿ-ಪದ್ಧತಿ, ಆಚರಣೆಗಳನ್ನು ಒಳಗೊಂಡ ಸಂಸ್ಕೃತಿಯ ಸ್ವರೂಪಗಳನ್ನು ಮೊದಲು ಅರ್ಥ

ಮಾಡಿ ಕೊಳ್ಳಬೇಕು. ಆ ನಂತರ ಈ ಸಮಸ್ಯೆಗೆ ಪರಿಹಾರ ಹುಡುಕುವುದು ಸುಲಭವಾಗುತ್ತದು.

ಈ ಹಿನ್ನೆಲೆಯಲ್ಲಿ, ಭಾರತದ ಸಾಮಾಜಿಕ ಸಮಸ್ಯೆಗಳನ್ನು ಯುರೋಪ್ ಪ್ರಣೀತ (ವಸಾಹತು ಪ್ರಜ್ಞೆ) ಚೌಕಟ್ಟನ್ನು ಹೊರತುಪಡಿಸಿ ಬೇರೆಯದೇ ಆದ ಚೌಕಟ್ಟಿನ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರೆ ಇಲ್ಲಿಯ ಸಮಸ್ಯೆಗಳಿಗೆ ಹೆಚ್ಚು ನಿರ್ದಿಷ್ಟವಾದ ಮತ್ತು ಶೀಘ್ರ ಇತ್ಯರ್ಥಕ್ಕೆ ಅನುಕೂಲವಾಗುವ ಹೊಸ ಪರಿಹಾರ ಮಾರ್ಗಗಳನ್ನು ಹುಡುಕಲು ಸಾಧ್ಯವಾಗಬಹುದೇನೋ. ಒಂದು ವೇಳೆ ಭಾರತದ ಸಾಮಾಜಿಕ ಸಮಸ್ಯೆಗಳಿಗೆ ಮೂಲ ಎಂದು ಚಿಂತಕರು ಗುರುತಿಸಿರುವ 'ಜಾತಿ ವ್ಯವಸ್ಥೆ' ಅಥವಾ 'ಹಿಂದೂಯಿಸಂ' ಪರಿಕಲ್ಪನೆಗಳಿಗೂ ಯಾವುದೇ ನೇರವಾದ ಸಂಬಂಧವಿಲ್ಲದಿದ್ದಲ್ಲಿ ಈ ಸಮಸ್ಯೆಗಳ ಅಧ್ಯಯನ ಮತ್ತು ಅದರ ಇತ್ಯರ್ಥಕ್ಕಾಗಿನ ಕ್ರಮಗಳು ಸಂಪೂರ್ಣ ಬೇರೆಯದೇ ಆದ ಮಾರ್ಗವನ್ನು ಹಿಡಿಯಬೇಕಾಗುತ್ತದೆ.

ಆದ್ದರಿಂದ ಇಲ್ಲಿಯ ಜನರ ವಾಸ್ತವ ಅನುಭವಕ್ಕೇ ನಿಲುಕದ ವೇದ, ಶಾಸ್ತ್ರಪ್ರಣೀತ ಹಿಂದೂ ರಿಲಿಜನ್ನಿನ ಸಾಮಾಜಿಕ ವ್ಯವಸ್ಥೆಯಾಗಿ ಜಾತಿಯಲ್ಲಿ ನಮ್ಮೆಲ್ಲಾ ಸಮಸ್ಯೆಗಳನ್ನು ಗುರ್ತಿಸಿಕೊಂಡು ಪರಿಹಾರಗಳನ್ನು ಹುಡುಕುವುದರಿಂದ ಯಾವ ಪ್ರಯೋಜನವೂ ದೊರೆಯಲಾರದು. ಈ ಸಮಸ್ಯೆಗಳನ್ನು ಅಧ್ಯಯನ ಮಾಡುವ ನಮ್ಮ ದೃಷ್ಟಿಕೋನವು ಜನರ ವಾಸ್ತವಿಕ ಅನುಭವಗಳಾಗಿರುವ, ಶಾಸ್ತ್ರಗಳಿಗೆ ಸಂಬಂಧವೇ ಇರದ, ರೂಢಿ, ಸಂಪ್ರದಾಯ, ಆಚರಣೆಗಳನ್ನು ಒಳಗೊಂಡ ಸಂಸ್ಕೃತಿಗಳನ್ನು ಅರ್ಥಮಾಡಿಕೊಳ್ಳುವ ಕಡೆಗೆ ಹೊರಳಬೇಕು. ಆದರೆ, ಇದು ಅತ್ಯಂತ ವ್ಯಾಪಕ ಮತ್ತು ದೀರ್ಘಕಾಲೀನ ಬೌದ್ಧಿಕ ಪ್ರಕ್ರಿಯೆಯಾಗಿದ್ದು ಸಾಕಷ್ಟು ವಿಸ್ತೃತವಾದ ಅಧ್ಯಯನ ಮತ್ತು ಸಂಶೋಧನೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಸಂಶೋಧನಾ ಕೇಂದ್ರದ ಹೈಪೊಥಿಸಿಸ್ ಹಾಗೂ ನಮ್ಮ ಆರಂಭಿಕ ಸಂಶೋಧನೆಗಳು ಈ ಸಮಸ್ಯೆಗಳನ್ನು ಬೇರೆಯದೇ ಆದ ಚೌಕಟ್ಟಿನಲ್ಲಿ ಅಧ್ಯಯನ ಮಾಡಬೇಕಿರುವ ಅಗತ್ಯತೆಯನ್ನು ಕಂಡುಕೊಂಡಿದೆ. ಆಗಲಾದರೂ ಇಲ್ಲಿಯ ಸಾಮಾಜಿಕ ಅಸಮಾನತೆ, ಅನ್ಯಾಯ ಹಾಗೂ ಅಸ್ಪೃಶ್ಯರ ಜ್ವಲಂತ ಸಮಸ್ಯೆಗಳನ್ನು ಶೀಘ್ರವಾಗಿ ನಿವಾರಿಸುವ ಸೂಕ್ತ ಪರಿಹಾರಗಳು ಸಾಧ್ಯವಾಗಬಹುದು ಎಂಬ ಆಶಯ ನಮ್ಮದಾಗಿದೆ.

ಹೀಗೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿನ ನಮ್ಮ ಸಂಶೋಧನೆಗೆ ಪ್ರೇರಣೆ ನೀಡಿದ್ದು ಶತಮಾನಗಳಿಂದಲೂ ನಮ್ಮ ಸಮಾಜದಲ್ಲಿ ಬೇರೂರಿರುವ ಜ್ವಲಂತ ಸಮಸ್ಯೆಗಳ ಸ್ವರೂಪವನ್ನು ಸರಿಯಾಗಿ ಅರ್ಥಮಾಡಿಕೊಂಡು ಅವುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸುವ ನಿಸ್ಪೃಹವಾದ ಕಾಳಜಿಯೇ ಹೊರತು ವಿದೇಶ ಪ್ರವಾಸದ ಆಮಿಷವೂ ಅಲ್ಲ; ಹಾಗೆಯೇ, ಶಂಕರ ಮೂರ್ತಿಯವರೊಂದಿಗಿನ (ಡಾ.ಡೊಮಿನಿಕ್‌ರ ಕಪೋಲ ಕಲ್ಪಿತ) ಒಳ ಒಪ್ಪಂದದಿಂದ ಬಂದ ೪೮ ಕೋಟಿಯ ಅನುದಾನವೂ ಅಲ್ಲ (ಈ ರೀತಿಯ ಯಾವುದೇ ಹಣವೂ ಬಂದಿಲ್ಲ). ನಮ್ಮ ಕುರಿತು ಗುಮಾನಿಯಿರುವವರು ಸುಮ್ಮನೆ ಅಲ್ಲಸಲ್ಲದ ಆರೋಪಗಳನ್ನು ಮಾಡುವುದರಲ್ಲಿ ಕಾಲಹರಣವನ್ನು ಮಾಡದೇ, ವಿಷಯವನ್ನು ಸರಿಯಾಗಿ ತಿಳಿದುಕೊಂಡು ಅದಕ್ಕೆ ಪ್ರಸ್ತುತವಾದ ಪ್ರಶ್ನೆಗಳನ್ನು ಎತ್ತಿದಲ್ಲಿ ನಮಗೂ ಹಾಗೂ ನಮ್ಮ ಸಮಾಜಕ್ಕೂ ಉಪಯೋಗವಾಗುತ್ತದೆ ಎಂಬುದು ನಮ್ಮ ಭಾವನೆ. □

ದೇವರು.



ದೇವರ ಕಂಡರೆ
ನನಗೇನೂ ಇಷ್ಟವಿಲ್ಲ
ನಂಬಿದರೂ ಬಿಟ್ಟರೂ
ನನಗೇನೂ ನಷ್ಟವಿಲ್ಲ

ನಂಬಿದವರಿಗೆ ಕಷ್ಟವಿಲ್ಲ
ನಂಬದವರ ಕಷ್ಟಕೆ ಕೊನೆಯಿಲ್ಲ
ಜಗದ ಮಾತಿನಲ್ಲೆನಗೆ
ನಂಬಿಕೆಯಿಲ್ಲ ಇಲ್ಲ.

ಇದ್ದರೂ ಅವನಿಗೆರಡು ಕಣ್ಣು
ಕಾಣದವಗೆ ಬಡವರ ನೋವಿನ ಹುಣ್ಣು
ಇದ್ದರೂ ಅವನಿಗೆರಡೆರಡು ಕೈಗಳು
ಉಪಯೋಗಿಸನು ನೊಂದಿತರ ಕಣ್ಣೀರನೊರೆಸಲು.

ಇದ್ದರೆ ದೇವರು
ಇರಲಿ ಬಿಡಿ ಅವನ ಪಾಡಿಗೆ
ಬಂದು ನಿಂತು ಬೀದಿಗೆ
ಭಂಗ ತಾರದಿರಲಿ ಜಗದ ಶಾಂತಿಗೆ!

○ ಕು.ಸ. ಮಧುಸೂದನ

ಬಿಜೆಪಿ ಬಂದ ಮೇಲೆ...

ಜಿ.ಕೆ. ಗೋವಿಂದರಾವ್

'Whatever you do will be insignificant it is important that you du it' mahatma gandhi-

ಸ್ವಾತಂತ್ರ್ಯ ಸಮಾನತೆ ಮತ್ತು ಕೋಮುಸೌಹಾರ್ದ ಇಂಥ ಮೌಲ್ಯಗಳಲ್ಲಿ ನಂಬಿಕೆಯುಳ್ಳವರು ಈಗ ಏನು ಮಾಡಬಹುದು? ಏನು ಮಾಡಲೇಬೇಕು? ೨೦೦೮ರ ಚುನಾವಣೆ ಜನತೆಗೆ ಒಂದು ಅಂತಿಮ ಎಚ್ಚರಿಕೆಯ ರೀತಿಯದ್ದಾಗಿದೆ. ಕರ್ನಾಟಕದಲ್ಲಿ ಆಗಲು ಸಾಧ್ಯವೇ ಇಲ್ಲವೆಂದು ನಂಬಿದ್ದ ನಮಗೆಲ್ಲ ದೊಡ್ಡ ಆಘಾತವಾಗಿಯೇ ಈ ಚುನಾವಣೆಯ ಫಲಿತಾಂಶ ಬಂದಿದೆ.

ಐದು ವರ್ಷಗಳ ಕಾಲ ಇದೇ ಪಕ್ಷ ಅಧಿಕಾರದಲ್ಲಿದ್ದು ಬಿಡಬಹುದೆಂಬ ಸಾಧ್ಯತೆಗಳನ್ನು ಭ್ರಮೆಗಳಿಲ್ಲದೇ ಒಪ್ಪಿಕೊಂಡು ನಾವು ನಮ್ಮ ಮುಂದಿನ ಹೆಜ್ಜೆಗಳನ್ನು ಕುರಿತು ಯೋಚಿಸಬೇಕು. ಇನ್ನೈದು ವರ್ಷಗಳೆಂದರೆ ಬಹು ದೀರ್ಘಕಾಲವಾಯಿತು. ಹಾಗಾಗಿ ನಮ್ಮ ಮನಸ್ಸು, ಚಿಂತನೆಗಳು ಕೂಡ ಒಂದು ರೀತಿ ಈ ಕಟು ಸತ್ಯವನ್ನು ಅರಗಿಸಿಕೊಂಡುಬಿಟ್ಟು ಅಪ್ರಜ್ಞಾಪೂರ್ವಕವಾಗಿ ಅತ್ಯಂತ ಸೂಕ್ಷ್ಮ ರೀತಿಯಲ್ಲಿ ಕ್ರಮೇಣ ಈ ಸ್ಥಿತಿಗೆ ಹೊಂದಿಕೊಳ್ಳುತ್ತ ಹೋಗುವುದರ ಜೊತೆಗೇ ನಮ್ಮ ಅಸಹಾಯಕತೆ ಹಾಗೂ ಹತಾಶೆಗಳನ್ನೂ ಮೈಗೂಡಿಸಿಕೊಳ್ಳುತ್ತ ಹೋಗಿಬಿಡುತ್ತೇವೆಯೋ ಎಂಬ ಆತಂಕವೂ ಬೆಳೆಯುತ್ತ ಹೋಗುತ್ತದೆ.

ಬಿ.ಜೆ.ಪಿ ವಿಕ್ರಮಕ್ಕಿಂತ ಈ ಮೇಲಿನ ಮಾನಸಿಕ ಪ್ರಕ್ರಿಯೆ ದೊಡ್ಡ ಸವಾಲಿನದು. ನಾಲ್ಕು ವರ್ಷಗಳ ಅತಂತ್ರ ರಾಜಕೀಯ ಸ್ಥಿತಿ ಮತ್ತು ಸ್ವಾರ್ಥ ರಾಜಕಾರಣದ ನಂತರ ಈಗ ಒಂದೇ ಪಕ್ಷದ ಸ್ಥಿರ ಸರಕಾರ ಅಸ್ತಿತ್ವಕ್ಕೆ ಬಂದಿರುವುದು ಜನಸಾಮಾನ್ಯರಿಗಂತೂ ಸಹಜವಾಗಿ ಸಮಾಧಾನ ತಂದಿರುವುದು ಸತ್ಯ. ಹಾಗಾಗಿಯೇ ಸ್ಥಿರ ದೃಢ ಸರಕಾರದ ವಿರುದ್ಧ ಮೌಲ್ಯಾಧಾರಿತವಾದ ಟೀಕೆಗಳು ಅಥವಾ ಚಳವಳಿಗಳು ಖಂಡಿತ ತತ್‌ಕ್ಷಣದಲ್ಲಿಯಂತೂ ಜನಪ್ರಿಯವಾಗುತ್ತದೆಂದು ನಂಬುವುದು ಮೂರ್ಖತನವಾಗುವುದರಲ್ಲಿ ಅನುಮಾನವಿಲ್ಲ. ಎಲ್ಲ ಅರ್ಥಗಳಲ್ಲಿಯೂ ಸ್ಥಿತಿ ಕಠಿಣವಾಗಿದೆ. ಮುಂದಿನ ದಾರಿ ಕಾಣದಂತೆ ಕಪ್ಪಿಡುತ್ತ ಹೋಗುವುದಂತೂ ನಿಶ್ಚಯ. ಇಂಥ ಸಂದರ್ಭಗಳಲ್ಲಿಯೇ ಸಕಾರಾತ್ಮಕ, ಸಾರ್ಥಕ, ಕ್ರಿಯಾಶೀಲ ಚಿಂತನೆ ಹಾಗೂ ಚಟುವಟಿಕೆ ಅತ್ಯಂತ ಅವಶ್ಯವಾಗುತ್ತದೆ; ಅತ್ಯಂತ ಜರೂರಿನದಾಗುತ್ತದೆ.

ನಮ್ಮ ಮುಂದೆ ಆಯ್ಕೆಗೆ ಎರಡೇ ಮಾರ್ಗಗಳಿರುವುದು. ಮೊದಲನೆಯದು ಈ ಎಲ್ಲ ಮಾರ್ಗಗಳೂ, ಮುಂದಿನ ಹೆಜ್ಜೆ ಸಾಧ್ಯವಾಗದಂತೆ ಮುಚ್ಚಿ ಹೋಗಿವೆ ಎಂಬ ಹತಾಶೆಭಾವದಿಂದ ವಸ್ತುಸ್ಥಿತಿಗೆ ಸಂಪೂರ್ಣ ವಿಮುಖರಾಗಿ ನಮ್ಮ ನಮ್ಮ ವೈಯಕ್ತಿಕ ಆಸಕ್ತಿ, ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತ ಅವಿರತ ಸ್ವಂತ ಬದುಕಿನಲ್ಲಿ ಮಗ್ನರಾಗಿದ್ದು ಬಿಡುವುದು. ಆಗಾಗ್ಗೆ ನಮ್ಮ ವಿಚಿತ್ರ ಮನಸ್ಸಮಾಧಾನಕ್ಕಾಗಿ ನಮ್ಮ ವಿಚಾರ ಸಂಕಿರಣಗಳು, ಸಂವಾದಗಳು, ಚರ್ಚೆಗಳು, ಲೇಖನಗಳು ಇವುಗಳ ಮೂಲಕ ನಮ್ಮ ರಾಜಕೀಯ, ಸಾಮಾಜಿಕ ತುಡಿತಗಳು ಜೀವಂತವಿದೆ ಎಂಬುದನ್ನು ಪ್ರದರ್ಶಿಸುವುದು ಮಾತ್ರ ಬಿಡದ ಹಾಗೆ ಕಾಯ್ದುಕೊಂಡು ಬರುವುದು; ಮತ್ತೊಂದು ಆಸೆ, ನಂಬಿಕೆ ಹಾಗೂ ಬದ್ಧತೆಗಳಿಂದ ಈ ಹೊಸದಾಗಿ ನಿರ್ಮಾಣವಾಗಿರುವ ಸವಾಲನ್ನು ಎದುರಿಸುವುದು. ಎರಡನೆಯ ಆಯ್ಕೆ ಮಾಡಿಕೊಂಡರೆ ಮಾರ್ಗ ಕಠಿಣವೂ, ದುರ್ಭರವೂ ಆಗುತ್ತದೆ, ನಿಜ. ಆದರೆ ನಾವು ಹೊತ್ತುಕೊಳ್ಳುವ ಜವಾಬ್ದಾರಿ ನಮ್ಮನ್ನು ಒಬ್ಬ ವ್ಯಕ್ತಿಯಾಗಿ, ಪ್ರಜೆಯಾಗಿ ಸಾಮಾಜಿಕ ಹಾಗೂ ರಾಜಕೀಯವಾಗಿ ಅತ್ಯಂತ ಜೀವಂತವೂ ಕ್ರಿಯಾಶೀಲವೂ ಆಗಿ ಇಟ್ಟಿರುತ್ತದೆ.

* * *

ಯಾಕೆ ನಾವು ಬಿ.ಜೆ.ಪಿಯನ್ನು ವಿರೋಧಿಸುತ್ತೇವೆ? ಯಾಕೆ ಬಿ.ಜೆ.ಪಿ. ಅಪಾಯಕಾರಿ ಎಂಬುದನ್ನು ಸ್ಪಷ್ಟಪಡಿಸುತ್ತ ಹೋಗಬೇಕಾಗುತ್ತದೆ. ಈ ಪಕ್ಷದ ಸಿದ್ಧಾಂತ ಕಾರ್ಯಕ್ರಮಗಳು ಒಟ್ಟು ಭಾರತೀಯ ಸಮಾಜ ಕುರಿತಾದ ಈ ಪಕ್ಷದ ಕಲ್ಪನೆ ಇವುಗಳು ಹೇಗೆ ಪ್ರಜಾಪ್ರಭುತ್ವ ಜಾತ್ಯತೀತತೆ ಮತ್ತು ಸಮಾನತೆ ಈ ಮೌಲ್ಯಗಳಿಗೆ ಹೊರತಾಗಿರುತ್ತದೆ ಎಂಬುದನ್ನು ನಾವು ಹೇಳುತ್ತಿರಬೇಕಾಗುತ್ತದೆ. ಜೊತೆ ಜೊತೆಗೆ ನಮ್ಮ ವೈಯಕ್ತಿಕ ಸ್ಪಷ್ಟೀಕರಣಕ್ಕಾಗಿಯಾದರೂ ಮತ್ತೊಂದು ಪ್ರಶ್ನೆಯನ್ನು ನಮಗೆ ನಾವು ಹಾಕಿಕೊಳ್ಳುವುದಷ್ಟೇ ಅಲ್ಲ ಪ್ರಾಮಾಣಿಕ ಉತ್ತರಗಳನ್ನು ಕಂಡುಕೊಳ್ಳಬೇಕಾದ ಅವಶ್ಯಕತೆಯಿದೆ.

ನಾಲ್ಕು ವರ್ಷಗಳ ಅತಂತ್ರ ರಾಜಕೀಯ ಸ್ಥಿತಿ ಮತ್ತು ಸ್ವಾರ್ಥ ರಾಜಕಾರಣದ ನಂತರ ಈಗ ಒಂದೇ ಪಕ್ಷದ ಸ್ಥಿರ ಸರಕಾರ ಅಸ್ತಿತ್ವಕ್ಕೆ ಬಂದಿರುವುದು ಜನಸಾಮಾನ್ಯರಿಗಂತೂ ಸಹಜವಾಗಿ ಸಮಾಧಾನ ತಂದಿರುವುದು ಸತ್ಯ. ಹಾಗಾಗಿಯೇ ಸ್ಥಿರ ದೃಢ ಸರಕಾರದ ವಿರುದ್ಧ ಮೌಲ್ಯಾಧಾರಿತವಾದ ಟೀಕೆಗಳು ಅಥವಾ ಚಳವಳಿಗಳು ಖಂಡಿತ ತತ್‌ಕ್ಷಣದಲ್ಲಿಯಂತೂ ಜನಪ್ರಿಯವಾಗುತ್ತದೆಂದು ನಂಬುವುದು ಮೂರ್ಖತನವಾಗುವುದರಲ್ಲಿ ಅನುಮಾನವಿಲ್ಲ. ಎಲ್ಲ ಅರ್ಥಗಳಲ್ಲಿಯೂ ಸ್ಥಿತಿ ಕಠಿಣವಾಗಿದೆ. ಮುಂದಿನ ದಾರಿ ಕಾಣದಂತೆ ಕಪ್ಪಿಡುತ್ತ ಹೋಗುವುದಂತೂ ನಿಶ್ಚಯ. ಇಂಥ ಸಂದರ್ಭಗಳಲ್ಲಿಯೇ ಸಕಾರಾತ್ಮಕ, ಸಾರ್ಥಕ, ಕ್ರಿಯಾಶೀಲ ಚಿಂತನೆ ಹಾಗೂ ಚಟುವಟಿಕೆ ಅತ್ಯಂತ ಅವಶ್ಯವಾಗುತ್ತದೆ; ಅತ್ಯಂತ ಜರೂರಿನದಾಗುತ್ತದೆ.



ಆ ಪ್ರಶ್ನೆಯೆಂದರೆ ಹಸಿವು ಆರೋಗ್ಯ ಉದ್ಯೋಗ, ವಸತಿ, ಶಿಕ್ಷಣ ಇಂಥ ಮೌಲ್ಯಗಳನ್ನು ಪ್ರತಿಪಾದಿಸುವ ಸಮಾಜವಾದೀ ಪಕ್ಷಗಳೂ ಮತ್ತು ಅವುಗಳ ಸಿದ್ಧಾಂತಕ್ಕಿಂತ, ಯಾವ ಮೂಲಭೂತ ಅವಶ್ಯಕತೆಗಳ ಬಗ್ಗೆ ಮಾತನಾಡದೆ 'ಹಿಂದೂ' 'ಹಿಂದೂರಾಷ್ಟ್ರ' 'ಹಿಂದೂ ಸಂಸ್ಕೃತಿ' 'ಹಿಂದುತ್ವ' ಎಂಬ ಅತ್ಯಂತ ಅಮೂರ್ತ ಮಾತುಗಳು ಜನಗಳನ್ನು ಹೆಚ್ಚು ಆಕರ್ಷಿಸುತ್ತವೆ ಹೇಗೆ? ಅಷ್ಟೆ ಅಲ್ಲ ತೀವ್ರ ರೀತಿಯ ಭಾವೋದ್ರೇಕಗಳನ್ನು, ಸಂಶಯ, ಭೀತಿ ದ್ವೇಷಗಳನ್ನು ಹುಟ್ಟಿಸುವುದರಲ್ಲಿ ಯಶಸ್ವಿಯಾಗುತ್ತದೆ. ಯಾಕೆ ಎಂಬುದು ಮನುಷ್ಯ ನಿಗೆ ಹಸಿವಿನ ಮತ್ತು ಇತರ ಜೀವನಾವಶ್ಯಕತೆಗಳ ಕುರಿತಾದ ಅರಿವಿಲ್ಲವೆ? ಅಥವಾ ಭಾವೋದ್ರೇಕದ ಬೀಜಗಳು ಬಿತ್ತುವ ಜಾತಿ, ಕೋಮು ಭಾವನೆಗಳು ಹಸಿವು, ಉದ್ಯೋಗ, ವಸತಿ ಇಂಥ ಮೂಲಭೂತ ಅವಶ್ಯಕತೆಗಳ ತುಡಿತವನ್ನೆಲ್ಲ ಬದಿಗೆ ಸರಿಸಿ, ತನ್ನ 'ಧರ್ಮ' 'ಸಂಸ್ಕೃತಿ' ಇವುಗಳು ಹೆಚ್ಚು ಪ್ರಧಾನವೂ, ಹೆಚ್ಚು ಪ್ರಮುಖವೂ ಆಗಿ ಕಾಣಿಸಲು ಪ್ರೇರಕವಾ ಗುತ್ತದೆಯೆ?

ನಿಜವಾದ ಅರ್ಥದಲ್ಲಿ ನಮಗೆ ಧರ್ಮ ಸಂಸ್ಕೃತಿಗಳ ಒಲವು ಇದ್ದಲ್ಲಿ ಅದು ನಮ್ಮ ಜೀವನಾವಶ್ಯಕತೆಗಳತ್ತಗಮನ ಸೆಳೆಯುತ್ತಿದ್ದವು. ಧರ್ಮದ ಮೂಲಭೂತ ಅರ್ಥವೇ ಮನುಷ್ಯ ಕುಲದ ಸೌಖ್ಯ, ನೆಮ್ಮದಿ; ಇವುಗಳು ಬಹು ಮೂರ್ತ ಮತ್ತು ಸ್ಪಷ್ಟ ರೀತಿಯಲ್ಲಿ ನಮ್ಮನ್ನು ಕಾರ್ಯತತ್ಪರರನ್ನಾಗಿ ಮಾಡುತ್ತವೆ. ಇದೇ ಮನುಷ್ಯ ಸಂಸ್ಕೃತಿಯ ಮೂಲ ಮೌಲ್ಯ. ಆಗ ಮನುಷ್ಯರು ಮನುಷ್ಯರಾಗಿ ಮಾತ್ರ ಕಾಣುತ್ತಾರೆಯೇ ವಿನಾ ವರ್ಗಗಳಾಗಿ, ಜಾತಿಗಳಾಗಿ, ಕೋಮುಗಳಾಗಿ, ಬಣ್ಣಗಳಾಗಿ ಕಾಣುವುದಿಲ್ಲ. ಈ ರೀತಿ ಯೋಚಿಸುವುದರ ಹಿಂದೆ ಮನುಷ್ಯನ ಮನಸ್ಸು ಕೆಲಸ ಮಾಡುತ್ತಿರುತ್ತದೆ. ಸುತ್ತಲ ಪ್ರಕೃತಿಯ ನೈಜತೆ, ಸೌಂದರ್ಯ, ಮುಗ್ಧತೆ ಹಾಗೂ ವೈವಿಧ್ಯತೆ ಇವುಗಳಿಂದ ಮೈಗೂಡಿದ ವ್ಯಕ್ತಿತ್ವಗಳು ಕೆಲಸ ಮಾಡಿರುತ್ತದೆ. ಅಂದರೆ ನಿರ್ಗತಿಕ, ಏಕಾಕಿ, ಅಸಹಾಯಕ ಸಾಮಾನ್ಯ ಮನುಷ್ಯನ ವಿಕಾಸಕ್ಕೆ, ಏಳಿಗೆಗೆ ಈ ಬಗೆಯ ಅದ್ಭುತ ಮಾನವೀಯತೆ ಕೆಲಸ ಮಾಡಿರುತ್ತದೆ. ಇಂಥ ಮಾನವೀಯತೆಗೆ ಹಸಿವು, ಶಿಕ್ಷಣ ಎಂಬುದು ಕೇವಲ ತರ್ಕ ಮೂಲದ, ಮಿದುಳಿನ ಲೋಕಕ್ಕೆ ಸೀಮಿತಗೊಂಡು, ಒಂದು ಶಬ್ದಕ್ಕೆ ಒಂದು ಅರ್ಥವ ಚೌಕಟ್ಟಿನೊಳಗೆ ಅಸ್ತಿತ್ವ ಪಡೆವ ಇಂದ್ರಿಯ ಜಗತ್ತಿನ ವಸ್ತುಗಳು ಮಾತ್ರವಲ್ಲ. ಹಾಗಾಗಾಗ ಮನುಷ್ಯ ಕೇವಲ ಹಸಿವು, ಬಟ್ಟೆಗಳ ಪೂರೈಕೆಗಳ ಅಪೇಕ್ಷಕತೆಯಿರುವ ಯಂತ್ರವಾಗಿಬಿಡುವುದಿಲ್ಲ.

ಅಂಕಿ ಅಂಶಗಳ ವಿವರಣೆಯಲ್ಲಿ ಒಂದು ಅಡಿಟಿಪ್ಪಣಿಯಷ್ಟೆ ಆಗಿ ಮಹತ್ವ ಪಡೆಯುವುದಿಲ್ಲ. ಇದರ ವಿರುದ್ಧದ ರೀತಿಯ ಚಿಂತನೆಯ, ದೃಷ್ಟಿಕೋನದ ತುತ್ತ ತುದಿಯ ಸ್ಥಿತಿಯೇ 'ಹೋರಾಟ'ವನ್ನು ಕೂಡ ನಾವು ಸೈದ್ಧಾಂತಿಕ ರೀತಿಯಲ್ಲಿ ಮರೆಸುವುದು ವಿಕೃತ ಮನೋಭಾವದ ರೀತಿ. ತುಂಬಬೇಕಾದ ಹೊಟ್ಟೆ, ಮುಚ್ಚಬೇಕಾದ ಮೈ ಇವುಗಳಷ್ಟೇ ಆಗಿ ಕಾಣುವ ಮನುಷ್ಯ, ಇಂಥ ಸಾಮಾಜಿಕ ಆರ್ಥಿಕ ನ್ಯಾಯಿಕ ಕಲ್ಪನೆಯವರಿಗೆ ಸ್ವಂತ ಉದ್ದೇಶ ಸಾಧನೆಗಳಿಗೆ ಬಲಿಕೊಟ್ಟು ಬಿಡಬಹುದಾದ ವಸ್ತುವಾಗಿ ಮಾತ್ರ ಕಾಣಿಸುವುದು. ಸಂಘ ಪರಿವಾರದ ಧರ್ಮದ ಕಲ್ಪನೆ ದ್ವೇಷದ ಅಡಿಪಾಯದ ಮೇಲೆ, ಹಿಂಸೆಯನ್ನು ಪ್ರಚೋದಿಸುವ ಸಿದ್ಧಾಂತದ ಮೇಲೆ ಸೃಷ್ಟಿಯಾದದ್ದು ಹೇಗೋ ಹಾಗೆಯೇ ಹಿಂಸೆಯ ಮಂತ್ರದ ಮೇಲೆ ಸ್ಥಾಪನೆಗೊಂಡ ಸಮಾಜವಾದದ ಕಲ್ಪನೆ ಕೂಡ. ಅದಕ್ಕಾ



ಗಿಯೇ ಧರ್ಮದ ಕಲ್ಪನೆಯಲ್ಲಿ ಕೋಮುವಾದ ಬಿತ್ತುವ ಸಂಘಪರಿವಾರವೂ ಹಿಂಸೆಯ ಬೇರುಗಳುಳ್ಳ ನಕ್ಸಲವಾದವೂ ಎರಡೂ ಒಂದೇ ಬಗೆಯ ಅಪಾಯಗಳೇ ಕಾರ್ಯವಿಧಾನ, ಮುಟ್ಟಬೇಕಾದ ಗುರಿಯ ಕಲ್ಪನೆಗಳು ಬೇರೆಬೇರೆಯಾದರೂ.

ಆದರೆ ಹಿಂಸೆಯ ಸಶಸ್ತ್ರ ಹೋರಾಟದ ನಿಲುವುಗಳನ್ನು ಒಪ್ಪದ, ತಿರಸ್ಕರಿಸುವ ಸಮಾಜವಾದದ ಬೇರೆ ಬೇರೆ ಚಳವಳಿಗಳು ಕೂಡ, ಒಟ್ಟು ಸಮುದಾಯವನ್ನು ಯಾಕೆ ತೀವ್ರ ರೀತಿಯಲ್ಲಿ ಆಕರ್ಷಿಸುತ್ತಿಲ್ಲ? ನ್ಯಾಯ, ಸಮಾನತೆ, ಸ್ವಾತಂತ್ರ್ಯ ಇಂಥ ಮೌಲ್ಯಗಳನ್ನು ಹೊಂದಿದ ಶಿಸ್ತು ಮತ್ತು ನಿಸ್ವಾರ್ಥ ಮನೋಭಾವಗಳಿಂದ ದುಡಿವ ಕಾರ್ಯಕರ್ತರಿರುವ ಈ ಮನುಷ್ಯ ಸೌಖ್ಯದ ಕಳಕಳಿಯ ಸಂಘಟನೆಗಳ ಯಾಕೆ ನಮ್ಮ ಸಮಾಜದಲ್ಲಿ ಇನ್ನೂ ಆಳವಾಗಿ ಬೇರು ಬಿಡಲಿಲ್ಲ? ನನಗನ್ನಿಸುವ ಮಟ್ಟಿಗೆ ಇದಕ್ಕೆ ಕಾರಣವೂ ಅತ್ಯಂತ ಮೂಲಭೂತ ರೀತಿಯಲ್ಲಿ ಈ ಸಿದ್ಧಾಂತಗಳು ಮನುಷ್ಯನ ಕಲ್ಪನೆಯನ್ನು ಮಾಡಿಕೊಂಡ ರೀತಿಯಲ್ಲಿದೆ. (Religion is the opium of the working class ಎಂಬ ಮಾತಿನ ಹಿಂದೆ ಮನುಷ್ಯನ ದೇವರು, ಧರ್ಮ ಕಲ್ಪನೆಗಳಲ್ಲ ಮೌಢ್ಯದ ಮೂಲದವು ಎಂದು ನಿರಾಕರಿಸುವ ತಿರಸ್ಕರಿಸಿಬಿಡುವುದರ ದೃಷ್ಟಿಕೋನದಲ್ಲಿದೆ. ಧರ್ಮವೆಂಬುದು ಗುಡಿ, ಮಠ, ಪೂಜಾರಿ, ಪುರೋಹಿತ-ಇವರುಗಳು ಶೋಷಿಸುವುದಕ್ಕಾಗಿ ಮಾತ್ರ ಇರುವ ಸಾಧನೆಗಳಾಗಿ ಕಾಣುತ್ತವೆ. ಜನಸಾಮಾನ್ಯರು ಈ ವ್ಯವಸ್ಥಿತ ಶಕ್ತಿಗಳೆದುರು ನಿಸ್ಸಹಾಯಕರಾಗಿ ನಲುಗುವುದು ಮಾತ್ರ ಕಾಣಿಸುತ್ತದೆ.

ದುರದೃಷ್ಟವಶಾತ್ ಜನಸಾಮಾನ್ಯರಿಗೆ ಧರ್ಮವೆಂದರೆ ಮಠಮೂಲದ, ಗುಡಿ, ಚರ್ಚು ಮಸೀದಿಗಳ ಕೇಂದ್ರಿತವಾದುದಷ್ಟೇ ಆಗಿರುತ್ತದೆ, ನಿಜ, ಹೀಗಾಗಿ ಧರ್ಮದ ಕುರಿತಾದ ಅನುಮಾನ, ಸಂಶಯಗಳು ಸಮರ್ಥನೀಯವೇ ಹೌದು. ಆದರೆ ಧರ್ಮವೆಂದರೆ ಇಷ್ಟು ಮಾತ್ರವಲ್ಲ; ಧರ್ಮವೆಂಬುದು ಇವುಗಳು ಯಾವುವೂ ಅಲ್ಲ. ಧರ್ಮವೆಂಬುದು ಮನುಷ್ಯ-ಪ್ರಕೃತಿಗಳ ಬಹು ಆಪ್ತ ಖಾಸಗಿ ಸಂಬಂಧ ಅನಂತದೊಡನೆ ನಿರಂತರದೊಡನೆ ಮೂರ್ತ ಕ್ಷಣಗಳಿಂದ ಕಲ್ಪನೆಗೆ ಮಾತ್ರ ಹೊಳೆಯುವ ದಿಗಂತಗಳಾಚೆ ಮೈಚಾಚುವ ಕಾಲದ ಕುರಿತಾದ ಅಚ್ಚರಿ, ಮುಗ್ಧ ಕುತೂಹಲ. ಮನುಷ್ಯ-ಪ್ರಕೃತಿಗಳಂತೆಯೆ ಮತ್ತು ಈ ಸಂಬಂಧಕ್ಕೆ ವಾಹಕವಾಗಿರುವ ಮನುಷ್ಯ-ಮನುಷ್ಯ ಸಂಬಂಧ, ಮನುಷ್ಯ-ಸಮಾಜ ಸಂಬಂಧಗಳು ಅಷ್ಟೇ ಪ್ರಮುಖವೂ, ಮುಖ್ಯವೂ ಆಗುತ್ತದೆ. ಈ ಎಲ್ಲ ಸಂಬಂಧಗಳು ನಿಗೂಢ ರೀತಿಯವು-ಪ್ರೀತಿಯಂತೆ ಸಾವಿನಂತೆ ಗರಿಗೆದರಿಕೊಳ್ಳುತ್ತಲೇ ಹೋಗುವ ಈ ಸಂಬಂಧಗಳ ಈ ಸೆಳೆತಗಳ, ಈ ಗುಂಗುಗಳ ಶೋಧನೆ ರೀತಿಯೇ ಧರ್ಮ ಮತ್ತು ಕಲೆ, ಈ ಎರಡೂ ಮಾಧ್ಯಮಗಳು ಇಂದ್ರಿಯಗಳ ಮೂಲಕ ಇಂದ್ರಿಯಾತೀತವಾಗಿ ಗ್ರಹಿಸುವುದು. ಇದನ್ನೇ ದೈನಾನುಸಂಧಾನವೆಂಬುದು ಕೂಡ. ಅನುಭವ-ಸಂವೇದನೆಗಳು, ಸಂಭ್ರಮ-ಧ್ಯಾನಗಳು ಏಕಕಾಲದಲ್ಲಿ ಸಾಧ್ಯವಾಗಿಸುವ ರೀತಿ ಧಾರ್ಮಿಕ ರೀತಿ. ಬದುಕೊಂದು ಧಾರ್ಮಿಕ ಕ್ರಿಯೆ; ಪ್ರಕ್ರಿಯೆ ಹೇಗೋ ಹಾಗೆಯೇ ಕಲೆ ಕೂಡ.

ನಾವು ನಮ್ಮ ಆಧುನಿಕ ತರ್ಕನಿಷ್ಠ ರೀತಿಯ ವಿಶ್ಲೇಷಣೆಯಲ್ಲಿ ಧರ್ಮ, ಕಲೆಗಳನ್ನೂ ತರ್ಕದ ಮಟ್ಟಕ್ಕೆ ಇಳಿಸಿಬಿಟ್ಟಿದ್ದೇವೆ ಎಂಬ ಅನುಮಾನ ನನ್ನದು. ತರ್ಕ ಬೇರೆ, ವಿಚಾರ ಬೇರೆ. ತರ್ಕ ಇಂದ್ರಿಯಗಳಿಗೆ, ಮೆದುಳಿಗೆ ಮಾತ್ರ ಸಂಬಂಧಪಟ್ಟುದು. ನಮ್ಮ ಎಲ್ಲ ಅನುಭವ, ವಿಚಾರ, ಹೊಳೆಯುವ ಸತ್ಯಗಳೆಲ್ಲ ನಮ್ಮ ಇಂದ್ರಿಯಗಳಿಗೆ ತಾರ್ಕಿಕ ವಿವರಣೆಗಳಾಗಿ, ಪ್ರಮಾಣ ಸಹಿತ ರುಜುವಾತುಗಳಾಗಿ ಸ್ಪಷ್ಟಗೊಳ್ಳುತ್ತ ಹೋಗಬೇಕು ಎಂಬ ಹಟ ನಮ್ಮದು. ಮನಸ್ಸು, ಪ್ರಜ್ಞೆ, ವ್ಯಕ್ತಿ ಅಥವಾ ಒಟ್ಟು ಬ್ರಹ್ಮಾಂಡದ ವ್ಯಕ್ತಿತ್ವದ ಕುರಿತಾಗಿ ಒಳನೋಟಗಳನ್ನು ಹೊಳೆಸಿದರೆ ಅವು ಗಾಳಿಯಲ್ಲಿ ತೇಲುವ ಹತ್ತಿಯ ಎಳೆಗಳಷ್ಟೆ ತುಂಬಿದ ಹೊಟ್ಟೆ ಸೃಷ್ಟಿಸುವ ಇಹ-ಪರಗಳೆರಡಕ್ಕೂ ಇಲ್ಲದ ನೀರುಗುಳ್ಳೆ ಮಾತುಗಳು. ಎಂದೇ ನಾನು ಕಂಡಿರುವ ಅನೇಕ ಉಗ್ರ ಸಮಾಜವಾದಿಗಳಿಗೆ ಧೋರಣೆಗಳಿಲ್ಲದ, ಘೋಷಣೆಗಳಿಲ್ಲದ ಶೇಕ್ಸ್‌ಪಿಯರ್ ಆಕರ್ಷಕನಲ್ಲ- ಬಹುಶಃ ನಮ್ಮ ಬೇಂದ್ರೆ ಕೂಡ.

ಮನಸ್ಸು, ಪ್ರಜ್ಞೆಗಳನ್ನು-ಅಪ್ರಜ್ಞಾಪೂರ್ವಕವಾಗಿಯಾದರೂ-ಅಪ್ರಸ್ತುತವೆಂದು ನಿರ್ಣಯಿಸಿ ಬಿಟ್ಟಿರುವ ಸಮಾಜವಾದೀ ಚಿಂತನೆ ಸಮಾಜದಲ್ಲಿ ಬೇರುಬಿಡುವುದು, ಅರಳುವುದು ಕಷ್ಟ, ಸ್ಟಾಲಿನ್, ಮಾವೋ ಇವರುಗಳು-ಮಾವೋ ಕವಿ ಎಂಬ ಪ್ರತೀತಿ ಇರುವುದು ನನಗೆ ಗೊತ್ತಿದ್ದೂ ಇದು ಹೇಳುತ್ತಿದ್ದೇನೆ- ಈ ಬಗೆಯ ಸಮಾಜವಾದೀ ಚಿಂತನೆಯ ಗುರುಗಳು. ಲೆನಿನ್ ಬಗ್ಗೆ ಒಂದು ಮಾತು ಇಲ್ಲಿ ಹೇಳಲೇಬೇಕು ಬಹು ಹಿಂದೆ ಯು.ಆರ್. ಅನಂತಮೂರ್ತಿಯವರು ನಮಗೆ ಹೇಳಿದ್ದು, ಮತ್ತೆ ಬಹು ಸಲ ಅವರು ಭಾಷಣಗಳಲ್ಲಿ ಹೇಳಿರುವ ಲೆನಿನ್ ಬಗೆಗಿನ ಒಂದು ಪ್ರಸಂಗ ಇದು. ಭಾರತೀಯ ಕಮ್ಯೂನಿಸ್ಟರ ಅಗ್ರಗಣ್ಯರಲ್ಲೊಬ್ಬರಾಗಿ ಎಂ.ಎನ್. ರಾಯ್ ಅವರು ಲೆನಿನ್ ಅವರನ್ನು ಭೇಟಿಯಾಗಿದ್ದಾಗ ಗಾಂಧಿ ಸ್ವಾತಂತ್ರ್ಯ ಸಂಗ್ರಮದ ಬಗ್ಗೆ ಲೆನಿನ್ ಕೇಳಿದರಂತೆ. ಆಗ ರಾಯ್, ಅವರು 'ಎಲ್ಲ ಸರಿ, ಆದರೆ ಗಾಂಧೀಜಿ ತುಂಬ ದೇವರು, ಧರ್ಮ ಸೇರಿಸಿ ಜನಗಳನ್ನು ಆಕರ್ಷಿಸುತ್ತಾರೆ' ಎಂದರಂತೆ, ಅದಕ್ಕೆ ಲೆನಿನ್ ಅವರು ದೇವರು, ಧರ್ಮದ ವಿಷಯ ಮಾತನಾಡಿ ಜನರನ್ನು ಆಕರ್ಷಿಸಿ, ಚಳವಳಿಯಲ್ಲಿ ಧುಮುಕುವ ಸ್ಫೂರ್ತಿ ನೀಡುತ್ತಿದ್ದಾರಲ್ಲ ಒಳ್ಳೆಯದೆ ಆಯಿತು ಅಂದರಂತೆ ಅಂದರೆ ಧರ್ಮ, ದೇವರನ್ನು Strategy ಆಗಿ ಗಾಂಧೀಜಿ ಬಳಸುತ್ತಿದ್ದಾರೆ ಎಂದು ಲೆನಿನ್ ಖಂಡಿತ ಹೇಳುತ್ತಿರಲಿಲ್ಲ ಎಂದು ನನಗನ್ನಿಸುತ್ತದೆ. ಗಾಂಧೀಜಿ ಇಡೀ ಬದುಕಿನಲ್ಲಿ ಗಳೇ ಇರಲಿಲ್ಲ- ಹಾಗೆ ಮೇಲ್ನೋಟಕ್ಕೆ ಕೆಲವು ಸಲ ಅನ್ನಿಸಿಬಿಟ್ಟಿದ್ದರೂ ಕೂಡ.

[illegible] ಕೆಲಸ ಮಾಡುವ [illegible] ಹಾಗೂ ಚಮತ್ಕಾರಿಕತೆಯ ಸಂದರ್ಭದಲ್ಲಿ [illegible] ಕಾಣುವ ಹಂಬಲದ ಅರಿ[illegible] ಈ ಜಗತ್ತಿನ ಮಹಾನ್ ನಾಯಕರೆಲ್ಲ ಈ ಜಗೆಯ [illegible] ಬಳಸಿಕೊಳ್ಳುತ್ತಾರೆ. ದೇವರು ಧರ್ಮಗಳ ಕುರಿತಾದ ಜನಸಾಮಾನ್ಯರ ನಂಬಿಕೆ, ಸಂಭ್ರಮ, ಭಯ ಆತಂಕ ಇವುಗಳ ಕುರಿತು ಮಾತನಾಡುತ್ತಲೇ ಅವರಿರುವ ಸದ್ಯದ ಸ್ಥಿತಿಗಿಂತ ಒಂದು ಮೆಟ್ಟಲ ಮೇಲೆ ಕೊಂಡುಯ್ಯುತ್ತಾರೆ. ಕಲೆ ಕೂಡ ಇದನ್ನೇ ಮಾಡುವುದು. ಹಾಗಾಗಿ ನಿಜವಾದ ಕ್ರಾಂತಿಯಲ್ಲ ಧರ್ಮವಾಗಲೀ, ಕಲೆಯಾಗಲಿ Strategyಗಳಾಗಿ ಬಳಕೆಯಾಗುವುದಿಲ್ಲ. ಅಂದರೆ ಸಮಾಜವಾದಿಗಳಿಗೆ ಕಲೆ, ಸಂಗೀತ, ಜಾನಪದ ಲೋಕ ಇವುಗಳ ಕುರಿತಾದ ಆಸ್ಥೆ ಇಲ್ಲವೆಂದಲ್ಲ. ಅಥವಾ ದೇವರು ಧರ್ಮ ಕುರಿತಾಗಿ ಸಂಪೂರ್ಣ ನಿರ್ಲಕ್ಷವೂ ಅಲ್ಲ. ಕಲೆ ಹಾಗೂ ದೇವರುಗಳು ಇವರಿಗೆ ಬೇಕು-ಒಂದು Strategy ಆಗಿ, ತಮ್ಮ ಸಿದ್ಧಾಂತಗಳ ಪ್ರಚಾರಕ್ಕೆ. ಇವರುಗಳ ಚಳವಳಿಗಳಲ್ಲಿ ಕಾವಿತೊಟ್ಟ ಸನ್ಯಾಸಿಗಳಿರುತ್ತಾರೆ; ಅತ್ಯಂತ ವ್ಯಂಗ್ಯದ ಸತ್ಯವೆಂದರೆ ನಾಸ್ತಿಕಾಗಣ್ಯರಾದ ನಕ್ಸಲರಪರ ಸಹಾನುಭೂತಿ ಸಭೆ, ಪ್ರತಿಭಟನೆ, ಧರಣಿ ಕಾರ್ಯಕ್ರಮಗಳಲ್ಲಿ ಈ ಮಠ ಮಾನ್ಯಗಳು ಕಾವಿಬಟ್ಟೆಯಲ್ಲಿ ರಾರಾಜಿಸುವುದು; ಅಥವಾ ನಾಟಕ, ಜಾನಪದ ಕಲೆಯ ಪ್ರೋತ್ಸಾಹ ಪ್ರದರ್ಶಿಸುವುದು. ಧರ್ಮ ಕಲೆಗಳು Strategyಗಳಷ್ಟೆ, ನಂಬಿಕೆಗಳಲ್ಲ, ಅನುಭವಗಳಲ್ಲ, ಸಂಘಪರಿವಾರವಾಗಲೀ ಅದರ ಪ್ರಮುಖ ನಾಯಕ-ಸದ್ಯದ ಮುಖ್ಯಮಂತ್ರಿಗಳಾಗಲೀ ಕಾವಿ ಕಂಡಲ್ಲಿ ಕಾಲಿಗೆ ಬೀಳುವುದೂ ಈ ರಕ್ತಪಿಪಾಸು ಕ್ರಾಂತಿಕಾರಿಗಳ ಢಾಂಬಿಕತನದ ರೀತಿಗಿಂತ ಏನೂ ಕೀಳಲ್ಲ.

* * *

ಸದ್ಯದ ಚುನಾವಣೆ ಮತ್ತದರ ಫಲಶ್ರುತಿಯ ಕುರಿತು ಮಾತನಾಡದಕ್ಕೆ ಹೊರಟು ವಿಷಯಕ್ಕೆ ಸಂಬಂಧಪಡದಂತೆ ಕಾಣುವ ಈ ವಿಷಯಗಳ ಕುರಿತಾಗಿ ಮಾತನಾಡುತ್ತಿದ್ದೇನೆ- ಯಾಕೆ?

ನಮ್ಮ ಪ್ರಗತಿಪರ ಚಿಂತನೆಗಳು ಜನಸಾಮಾನ್ಯರ ಮನಸ್ಸು ಪ್ರಜ್ಞೆಗಳ ಮೇಲು ಪದರಗಳನ್ನೂ ತಾಗುವುದಿಲ್ಲ. ಅವರುಗಳ ಕಲ್ಪನೆಯ ಪರಿಧಿಯೊಳಗೆ ಪ್ರವೇಶವೇ ಪಡೆಯುವುದಿಲ್ಲ. ಸಂಸ್ಕೃತ, ಇಂಗ್ಲಿಷ್‌ಗಳ ಧಾಳಿಯಲ್ಲಿ ತನಗೆ ಸಂಬಂಧಪಟ್ಟ ವಿಷಯಗಳೂ ಸೇರಿದ ಹಾಗೆ ಸಾಮಾಜಿಕ ಧಾರ್ಮಿಕ ಕ್ರಿಯೆಗಳಿಂದ ದೂರವೇ ಉಳಿದುಬಿಟ್ಟ ಸಾಮಾನ್ಯ ಮನುಷ್ಯ ಈಗಲೂ ಕೂಡ ನಮ್ಮ ಪ್ರಖರ ಬೌದ್ಧಿಕ ಕಸರತ್ತಿನ, ಚಮತ್ಕಾರದ ಮಾತುಗಳಿಗೆ 'ಮಂತ್ರ ಮುಗ್ಧ'ನಾಗಿ ಉಳಿದುಬಿಟ್ಟಿದ್ದಾನೆ. ಹಾಗಾಗಿ ಪರಸ್ಪರ ಮಧ್ಯೆ ಕಂದರ ಮಾತ್ರ ವಿಸ್ತಾರಗೊಳ್ಳುತ್ತಲೇ ಹೋಗುತ್ತದೆ. ಆಹಾರ, ವಸತಿಗಳ ಬಗ್ಗೆ ಮಾತನಾಡಿದರೂ ನಾವು ಹೊರಗೇ ಉಳಿದುಬಿಡುತ್ತೇವೆ, ಯಾಕೆ. ಬದಲಿಗೆ ಧರ್ಮ, ಸಂಸ್ಕೃತಿ ಎಂದೆಲ್ಲ ಸಂಶಯ, ದ್ವೇಷಗಳ ಅಡಿಪಾಯದ ಮೇಲೆ ಕಟ್ಟಿದ ನೆತ್ತರು ಕುದಿಸುವ ಮಾತುಗಳು ಆಡುವವರು ಜನರನ್ನು ಆಕರ್ಷಿಸುತ್ತಾರೆ. ಹೇಗೆ? ಧರ್ಮ, ಸಂಸ್ಕೃತಿಗಳ ಬಗ್ಗೆ ಮಾತನಾಡುವವರು ಹೊರಗಿನ ಅಪಾಯ, ಹೊರಗಿನ ಶತ್ರು ಇವುಗಳನ್ನು ಸೃಷ್ಟಿಮಾಡಿಯೇ ತಮ್ಮ ವಾದ. ವಿಚಾರಗಳನ್ನು ಮಂಡಿಸಬೇಕು. ಹೀಗೆ ಮೂರ್ತವಾಗಿ ಕಣ್ಣುಗಳಿಗೆ ಕಾಣುವುದನ್ನು ಭೂತವಾಗಿ, ಗುಮ್ಮನಾಗಿ ಸೃಷ್ಟಿಸಿ, ಇದನ್ನು ಸಹಿಸಿದರೆ ಆಗಬಹುದಾದ ಅನಾಹುತವನ್ನು ಭಯಂಕರವಾಗಿ ಚಿತ್ರಿಸುತ್ತ, ತಾವು ಈ

ನಮ್ಮ ಪ್ರಗತಿಪರ ಚಿಂತನೆಗಳು ಜನಸಾಮಾನ್ಯರ ಮನಸ್ಸು ಪ್ರಜ್ಞೆಗಳ ಮೇಲು ಪದರಗಳನ್ನೂ ತಾಗುವುದಿಲ್ಲ. ಅವರುಗಳ ಕಲ್ಪನೆಯ ಪರಿಧಿಯೊಳಗೆ ಪ್ರವೇಶವೇ ಪಡೆಯುವುದಿಲ್ಲ. ಸಂಸ್ಕೃತ, ಇಂಗ್ಲಿಷ್‌ಗಳ ಧಾಳಿಯಲ್ಲಿ ತನಗೆ ಸಂಬಂಧಪಟ್ಟ ವಿಷಯಗಳೂ ಸೇರಿದ ಹಾಗೆ ಸಾಮಾಜಿಕ ಧಾರ್ಮಿಕ ಕ್ರಿಯೆಗಳಿಂದ ದೂರವೇ ಉಳಿದುಬಿಟ್ಟ ಸಾಮಾನ್ಯ ಮನುಷ್ಯ ಈಗಲೂ ಕೂಡ ನಮ್ಮ ಪ್ರಖರ ಬೌದ್ಧಿಕ ಕಸರತ್ತಿನ, ಚಮತ್ಕಾರದ ಮಾತುಗಳಿಗೆ 'ಮಂತ್ರ ಮುಗ್ಧ'ನಾಗಿ ಉಳಿದುಬಿಟ್ಟಿದ್ದಾನೆ. ಹಾಗಾಗಿ ಪರಸ್ಪರ ಮಧ್ಯೆ ಕಂದರ ಮಾತ್ರ ವಿಸ್ತಾರಗೊಳ್ಳುತ್ತಲೇ ಹೋಗುತ್ತದೆ. ಆಹಾರ, ವಸತಿಗಳ ಬಗ್ಗೆ ಮಾತನಾಡಿದರೂ ನಾವು ಹೊರಗೇ ಉಳಿದುಬಿಡುತ್ತೇವೆ, ಯಾಕೆ. ಬದಲಿಗೆ ಧರ್ಮ, ಸಂಸ್ಕೃತಿ ಎಂದೆಲ್ಲ ಸಂಶಯ, ದ್ವೇಷಗಳ ಅಡಿಪಾಯದ ಮೇಲೆ ಕಟ್ಟಿದ ನೆತ್ತರು ಕುದಿಸುವ ಮಾತುಗಳು ಆಡುವವರು ಜನರನ್ನು ಆಕರ್ಷಿಸುತ್ತಾರೆ ಹೇಗೆ?

ಕೆರೆಗಳ ಹೂಳೂ ತೆಗೆಯಲು ೨೦೦ ಕೋಟಿ
ಸ್ವಲ್ಪವೂ ಆಗುವುದಿಲ್ಲ ಇದರೊಳಗೆ ಲೂಟಿ
ಮಂತ್ರಿ ಮಾನ್ಯರ ಮಕ್ಕಳು ಏಳೇಳು ಜನ್ಮ
ದುಡಿಯದಲೆ ಪಡೆಯಬಹುದು ಸನ್ಮಾನ

○ ಅಲ್ಲಮಪ್ರಭು ಬೆಟ್ಟದೂರು

ಪೀಡಾ ನಿವಾರಕರು, ಸನಾತನಧರ್ಮದ ಪುನರ್ ನಿರ್ಮಾಣಕಾರರು ಎಂದು ಬಿಂಬಿಸಿಕೊಳ್ಳುತ್ತ ಭೂತಕಾಲದಲ್ಲಿ, ನೆನ್ನೆಗಳಲ್ಲಿ ಸಂಭ್ರಮಿಸುವ ಜನಗಳ ಕಣ್ಣಿನಲ್ಲಿ ಬೆಳಕಾಗಿ, ಸಂರಕ್ಷಕರಾಗಿ ಕಂಡುಬಿಡುತ್ತಾರೆ. ಭೂತದಲ್ಲಿ ಕುಸಿದ್ದು ಹೋಗಿ, ತುರುಬು ನೆನೆಸಿಕೊಳ್ಳುವುದರಲ್ಲಿಯೇ ತೃಪ್ತಿ ಸುಭದ್ರತೆ ಕಾಣುವ ನೂರಕ್ಕೆ ತೊಂಭತ್ತು ಜನರ ಈ ಮನೋಭಾವನೇ ಕೋಮುವಾದಿಗಳ ಬಂಡವಾಳ.

ಈ ಎಲ್ಲ ಪ್ರಶ್ನೆಗಳನ್ನು ನಾವು ಎದುರಿಗಿಟ್ಟುಕೊಂಡು ನಮ್ಮ ಚಿಂತನೆ ಮತ್ತು ಕ್ರಿಯೆಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಎಷ್ಟು ಸುದೀರ್ಘವೇ ಆಗಿಬಿಟ್ಟ ಪ್ರಸ್ತಾವನೆಯನ್ನು ಬರೆಯಬೇಕಾಯಿತು. ಧಾರ್ಮಿಕ ಮನಸ್ಸು ಹಾಗೂ ರಾಜಕೀಯ ಸಾಮಾಜಿಕ ಕಳಕಳಿಗಳು, ಎರಡನ್ನೂ ಅತ್ಯಂತ ಸಮರ್ಪಕವಾಗಿ, ಸಶಕ್ತವಾಗಿ ಕ್ರಿಯಾಶೀಲವಾಗಿ ಬೆರೆಸಿ ತಮ್ಮ ವೈಯಕ್ತಿಕ ಬದುಕನ್ನೂ, ಸಮಾಜದಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಅದ್ಭುತವಾಗಿ ನಿರ್ವಹಿಸಿದ ೨೦ನೇ ಶತಮಾನದ ಭಾರತೀಯ ನಾಯಕರುಗಳೆಂದರೆ ಟಾಗೋರ್, ಗಾಂಧೀಜಿ ಮತ್ತು ಅಂಬೇಡ್ಕರ್. ಸಮರ್ಪಕವಾಗಿ ಎಂದು ನಾನು ಸೇರಿಸಿಬಿಟ್ಟೆ-ಆದರೆ ಅವರುಗಳಿಗೆ ಧರ್ಮ-ಸಮಾಜ, ಧರ್ಮ-ರಾಜಕೀಯ ಎಂಬುವು ವಿಕಾಸಗೊಳ್ಳುತ್ತಲೇ ಇರುವ, ಅರಳುತ್ತಲೇ ಇರುವ ಪ್ರಕ್ರಿಯೆಗಳು ಮಾತ್ರ, ಮತ್ತು ಅವಕ್ಕೆ ಸಂಬಂಧಿಸಿದ ಚಳವಳಿಗಳೂ ಪ್ರಕ್ರಿಯಗಳೇ ಆದ್ದರಿಂದ ಧಮರಕ್ಷಕ ಎಂಬ ಶಬ್ದಕ್ಕೆ ಅರ್ಥವೇ ಇರುವುದಿಲ್ಲ. ಧರ್ಮ ಮತ್ತು ಅವರುಗಳು ಕನಸಿದ ಸ್ವತಂತ್ರ್ಯ ಭಾರತದಲ್ಲಿ ಪ್ರಜಾಪ್ರಭುತ್ವ ಎಂಬುದೆರಡೂ ನಿರಂತರ ವಿಕಾಸಗೊಳ್ಳುತ್ತಲೇ ಇರುವ ಪ್ರಧಾನ ಮಾನವ ತತ್ವಗಳು.

ನಿಜವಾದ ಅರ್ಥದಲ್ಲಿ ಕ್ರಾಂತಿಕಾರರೆಂದರೆ ಈ ಮೂವರೆ. ಕಲೆಯ ಜಗತ್ತಿನಲ್ಲಿ ಟಾಗೋರ್ ಸಾಧಿಸಿದ್ದನ್ನು, ತಮ್ಮ ವಿಶ್ವಮಾನವ ಚಿಂತನೆಯ ಮೂಲಕ ಸ್ಫೂರ್ತಿನೀಡಿದ್ದನ್ನು ಗಾಂಧೀಜಿ, ಅಂಬೇಡ್ಕರ್ ಅವರು ಮತ್ತೂ ಅಷ್ಟು ಆಯಾಮಗಳನ್ನು ನೀಡಿ ಜನಗಳ ಮಧ್ಯೆ ಈ ಕಳಕಳಿ ಕಾಳಜಿಗಳು ವಿಕಸನ ಹೊಂದುವುದಕ್ಕೆ ಶ್ರಮಪಟ್ಟರು. ವರ್ತಮಾನದಲ್ಲಿ ನೆಲೆಕಂಡುಕೊಳ್ಳುತ್ತ, ಭವಿಷ್ಯದ ಕಲ್ಪನೆಯೂ ಕಣ್ಣು ತಪ್ಪದ ಹಾಗೆ ಜಾಗ್ರತರಾಗಿದ್ದು ನಿರಂತರ ಚಳವಳಿಯ ಮನೋಭಾವದಲ್ಲಿ ಬದುಕು ಸಾಗಿಸಿದವರು ಇವರುಗಳು. ಹಾಗಾಗಿಯೇ ಅವರಿಬ್ಬರ ಮಧ್ಯದ ಭಿನ್ನಾಭಿಪ್ರಾಯಗಳೂ, ಜಗಳಗಳೂ ಕೂಡ ಕಾವ್ಯ ಶಕ್ತಿ ಪಡೆದಕೊಳ್ಳುವುದು. ಸದಕಾಲಕ್ಕೂ ಆಸಕ್ತಿಯನ್ನು, ಕುತೂಹಲವನ್ನು ಉತ್ತೇಜಿಸುವುದು ಹಾಗೂ ಸತ್ಯ, ಅಹಿಂಸೆಗಳನ್ನು ಅಕ್ಷರಶಃ ಪಾಲಿಸುವುದು ಹೇಗೆ ಎಂಬ ಗುಂಗಿನಲ್ಲಿ ಬರುವುದು ಈ ಮೂವರ ಪ್ರಧಾನ ಲಕ್ಷಣವಾಗಿದ್ದಿತು. ಸತ್ಯ, ಅಹಿಂಸೆಗಳು ಕೇವಲ ಘೋಷಣೆಗಳಾಗಿರದೆ ಬದುಕಿನ ರೀತಿಯಾಗಿದ್ದು, ಆದ್ದರಿಂದಲೇ ಧರ್ಮದ ನಿಜಸ್ವರೂಪವನ್ನು ಹಠತ್ ಆಗೊಮ್ಮೆ, ಈಗೊಮ್ಮೆ ಹೊಳೆದು ಹೋಗುವಂತೆ ಮಾಡಿದ ಈ ಮೂವರೇ ಇಂದಿಗೂ ಕೂಡ ನಮ್ಮ ಪ್ರೇರಕ ಶಕ್ತಿಗಳು. ಈ ಆದರ್ಶಗಳಲ್ಲಿ ಸಮಾನತೆ, ಸಮಾಜವಾದ, ಜಾತ್ಯತೀತತೆ ಎಲ್ಲ ಮೌಲ್ಯಗಳೂ ಅಡಕವಾಗಿವೆ. ಈ ಸಂದರ್ಭದಲ್ಲಿ ಇಂಥವರುಗಳ ಸ್ಫೂರ್ತಿಯಿಂದ' ಸ್ವಾತಂತ್ರ್ಯ, ಸಮಾಜವಾದ ಇವುಗಳ ಅರ್ಥವ್ಯಾಪ್ತಿಯನ್ನು ಮತ್ತೂ ಅಷ್ಟು ಹಿಗ್ಗಿಸಿದ ಲೋಹಿಯಾ ಅವರನ್ನು ನಾವು ಮರೆಯಬಾರದು.

ಇಷ್ಟೆಲ್ಲ ಇದ್ದೂ ಕೂಡ ಇವರುಗಳು ಆರಂಭಿಸಿದ

ಚಳವಳಿಗೆ ಮತ್ತೂ ಅಷ್ಟು ಆಯಾಮಗಳು ಕೊಡಬೇಕಾಗಿದೆ. ನಮ್ಮ ಯುಗವು ಜಾಗತೀಕರಣವೆಂಬ ಪೆಡಂಭೂತದ ಎದುರು ಸೆಣಿಸಬೇಕಾಗಿದೆ. ಹಾಗಾಗಿ ನಮ್ಮ ಚಿಂತನೆ, ಕ್ರಿಯೆಗಳು ಹೊಸ ಹೊಸ ಆಳ ಎತ್ತರಗಳನ್ನು ಕಂಡುಕೊಳ್ಳಬೇಕಾದ ಅವಶ್ಯಕತೆಯಿದೆ. ಕೋಮುವಾದದ ಪೈಶಾಚಿಕ ನೃತ್ಯ ಹಾಗೂ ನಕ್ಸಲ್‌ವಾದವೆಂಬ ಮತ್ತೊಂದು ವಿಷದ ಘಟಸರ್ಪ ಇವುಗಳ ಎದುರು ನಾವು ಹೋರಾಟಕ್ಕೆ ಸಿದ್ಧವಾಗಬೇಕಾಗಿದೆ.

* * *

ನಮ್ಮ ರಾಜ್ಯದ ಸಂದರ್ಭದಲ್ಲಿ ನಾವು ಕೇಳುತ್ತಿರುವ 'ಅಭಿವೃದ್ಧಿ' ಶಬ್ದದ ಅರ್ಥ ನಾವು ಮಾಡಿಕೊಳ್ಳಬೇಕಾಗುತ್ತದೆ. ಕುಮಾರಸ್ವಾಮಿ ಅವರು ಪದೇ ಪದೇ ಹೇಳುತ್ತಿದ್ದ ಒಂದು ಮಾತಿದೆ: 'ನಾನು ಅಭಿವೃದ್ಧಿ ಪರ; ಮಿಕ್ಕೆಲ್ಲ ಮೌಲ್ಯಗಳ ಕುರಿತಾಗಿ ನಾನು ಚಿಂತಿಸುವುದಿಲ್ಲ' ಎಂಬ ಮಾತನ್ನು ನಾವು ಮರೆತಿಲ್ಲ. 'ಜಾತ್ಯತೀತತೆ ಅಂದರೇನೋ' ಎಂದು ಘಂಟ ಘೋಷವಾಗಿ ತಮ್ಮ ಅಹಂಕಾರ ಮೂಲದ ಅಜ್ಞಾನವನ್ನು ಪ್ರದರ್ಶಿಸಿದವರು ಈ ಜಾತ್ಯತೀತ ಜನತಾದಳದ ನಾಯಕ. ಈಗ ಯಡಿಯೂರಪ್ಪನವರೂ ಈ ಅಭಿವೃದ್ಧಿಯ ಮಾತನಾಡುತ್ತಿದ್ದಾರೆ. ಅಭಿವೃದ್ಧಿ ಎಂಬುದು ಶೂನ್ಯದಲ್ಲಿ ಸಾಧ್ಯ ಎಂದು ಕಲ್ಪನಾಶಕ್ತಿಯಾಗಲೀ, ಒಂದು ಸರಳ ವಿಷನ್ ಆಗಲಿ ಇಲ್ಲದ ನಾಯಕರುಗಳು ಇವರು. ಮನುಷ್ಯನೆಂದರೆ ಕೇವಲ ಹೊಟ್ಟೆ ಎಂಬ ಬಾಲಿಶ ಕಲ್ಪನೆಯ ನಕ್ಸಲರ ಚಿಂತನೆಗಿಂತ ಹೊರತಾದುದಲ್ಲ. ಈ ನಾಯಕರುಗಳ 'ಅಭಿವೃದ್ಧಿ' ಶಬ್ದದ ತಿಳುವಳಿಕೆ. ರಸ್ತೆ, ಕಟ್ಟಡಗಳು, ಮೆಟ್ರೋ, ರೈಲು, ಸಂಪರ್ಕಸಾಧನಗಳು ಇವುಗಳನ್ನು ಸಾಧಿಸಿಬಿಟ್ಟರೆ, ಬೆಂಗಳೂರನ್ನು ಸಿಂಗಾಪೂರ್ ಮಾಡಿ ಮಹಾನ್ ನಗರವಾಗಿಸಿ ಬಿಟ್ಟರೆ ಅಭಿವೃದ್ಧಿ ಸಾಧಿಸಿದಂತೆ ಎಂದು ಇವರುಗಳು ನಂಬಿದಂತೆ ಇದೆ. ಇವು ಅಮುಖ್ಯಗಳೆಂದು ನಾನು ಹೇಳುತ್ತಿಲ್ಲ. ಆದರೆ ಇದೆಲ್ಲವನ್ನೂ ನಾವು ನೀಡುತ್ತಿರುವ ಜನರ ಮಾನಸಿಕ ಸ್ವಾಸ್ಥ್ಯ ಎಷ್ಟಿದೆ, ಒಟ್ಟು ಸಮಾಜದಲ್ಲಿ ಸಾಮರಸ್ಯ ಎಷ್ಟಿದೆ, ಸಮಾಧಾನ ತೃಪ್ತಿಗಳೆಷ್ಟು ಎಂಬುದನ್ನು ಕಡೆಗಣಿಸಿ ಅಭಿವೃದ್ಧಿಯ ಮಾತನಾಡುವುದು ನಾಯಕನಾಗಿ ಪ್ರಜೆಗಳಿಗೆ ಬಗೆದ ದ್ರೋಹ; ಮಾಡಿದ ವಂಚನೆ ಅಷ್ಟೆ. ರಾಜಕಾರಣಿಗಳು ನಾಯಕರಾಗಲು ಸಾಧ್ಯವಿಲ್ಲ. ಮುತ್ಸದ್ದಿಗಳಾಗಲು ಸಾಧ್ಯವಿಲ್ಲ. ಜನಗಳನ್ನು ಯಂತ್ರಗಳಂತೆ ಕಾಣುವ, ಯಂತ್ರಗಳಂತೆ ಸಮರ್ಥವಾಗಿ ಕಾರ್ಯ ನಿರ್ವಹಿಸುವ ಮಾತ್ರ ಯತ್ನಿಸುವ ತಾಂತ್ರಿಕ ಮನಸ್ಸು ಬುದ್ಧಿಗಳ ಕುಬ್ಜರು. ನಿಜವಾದ ಅಭಿವೃದ್ಧಿ ಎಂಬುದು ಯಾವುದು?

ರಸ್ತೆ, ಸಂಪರ್ಕ, ಕಟ್ಟಡಗಳು ಎಲ್ಲವೂ ಸರಕಾರದ ಕರ್ತವ್ಯಗಳು ನಿರಂತರವೂ ನಡೆಯುತ್ತಲೇ ಇರಬೇಕಾದುದು. ಇವಕ್ಕೆ ಪ್ರಚಾರದ ಅಬ್ಬರ ಬೇಕಾಗುವುದಿಲ್ಲ. ಇವು ಸರಕಾರದ ಸಾಧನೆ ಅಲ್ಲ ಎಂದೇ ಇಂಥ ಪ್ರಚಾರ ಮಾಡಲೆತ್ನಿಸುವವರನ್ನು ಜನತೆಯೇ ತಮ್ಮ ನಿರಾಸಕ್ತಿ, ನಿರುತ್ಸಾಹಗಳಿಂದ ತಣ್ಣೀರೆರಚಬೇಕು. ನಾವು ಆರಿಸಿ ಕಳಿಸಿದ್ದು ರಸ್ತೆ ಮಾಡುವ ಮೇಸ್ತ್ರಿಗಳನ್ನಲ್ಲ. ರಾಜ್ಯವಾಳಬೇಕಾದ ನಾಯಕರುಗಳನ್ನು ಎಂದು ಸ್ಪಷ್ಟಪಡಿಸಬೇಕು. ಪ್ರಜಾಪ್ರಭುತ್ವದಲ್ಲಿ ಅಭಿವೃದ್ಧಿ ಎಂದರೆ ಪ್ರಜೆಗಳ ವಿಕಾಸ; ಮನಸ್ಸು ಬುದ್ಧಿಗಳು ಪ್ರಜಾಪ್ರಭುತ್ವದ ಸಂದರ್ಭಕ್ಕೆ ಸಮರ್ಪಕವಾಗಿ ವಿಕಾಸವಾಗುತ್ತಿದೆಯೆ ಎಂಬುದರತ್ತ ಗಮನಹರಿಸುವುದು ನಾಯಕರ ಆದ್ಯ ಕರ್ತವ್ಯ. ಮಕ್ಕಳಿಗೆ ನಾವು ಕೊಡುವ ಶಿಕ್ಷಣ, ನಾವು ರೂಪಿಸುವ ಕಾರ್ಯಕ್ರಮಗಳು ಜನಗಳೊಡನೆ ನಾವು

ಉಳಿಸಿಕೊಳ್ಳುವ ಸಂಪರ್ಕ, ಯಾವ ವರ್ಗದ ಜನ ಏನು ಯೋಚಿಸುತ್ತಿದ್ದಾರೆ. ನಮ್ಮಿಂದ ಏನು ಬಯಸುತ್ತಾರೆ ಇವುಗಳ ಕುರಿತಾದ ಕುತೂಹಲದಲ್ಲಿ, ಶ್ರದ್ಧೆಯಲ್ಲಿ ಇರಬೇಕಾದುದು ಸರಕಾರದ ಕೆಲಸ. ನಾವು ಪ್ರಜೆಗಳು ನಮ್ಮಿಂದ ಆಯ್ಕೆಗೊಂಡ ನಾಯಕರುಗಳಿಗೆ ಸದಾ ಎಚ್ಚರಿಕೆ ನೀಡುತ್ತಿರಬೇಕಾದ ಜವಾಬ್ದಾರಿ ನಮ್ಮ ಮೇಲಿದೆ.

ಈಗಲೂ ನನಗೆ ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು ಮತ್ತು ಮಹಿಳೆಯರು ಈ ವರ್ಗಗಳ ಸೌಖ್ಯವೇ, ಏಳಿಗೆಯೇ ನಿಜವಾದ ಪ್ರಗತಿಯ ಸೂಚಕ ಎಂದು ಸ್ಪಷ್ಟವಾಗುತ್ತಿದೆ. ಈ ನಾಲ್ಕುವರ್ಗಗಳಲ್ಲಿ ಯಾವ ವರ್ಗವೂ ಸುರಕ್ಷಿತವಾಗಿಲ್ಲ. ಕ್ಷೇಮವಾಗಿಲ್ಲ. ಈಗ ಬಿ.ಜೆ.ಪಿ ಸರಕಾರದಲ್ಲಿ ಮತ್ತೇನನ್ನೂ ಹೆಚ್ಚಿಗೆ ನಿರೀಕ್ಷಿಸುವುದಕ್ಕೆ ಆಗುವುದಿಲ್ಲ. ಈ ನಾಲ್ಕರೊಡನೆ ರೈತರನ್ನೂ ಸೇರಿಸಲೇಬೇಕು. ನಗರ ಪ್ರದೇಶಗಳಲ್ಲಿ ವಾಸಿಸುವ ನಮಗೆ ಈ ಐದೂ ವರ್ಗಗಳ ಪ್ರದೇಶಗಳಿಂದ ಆರಿಸಿ ಬಂದ ನಮ್ಮ ಶಾಸಕರಿಗೂ–ನೂರಕ್ಕೆ ತೊಂಭತ್ತು ಜನಕ್ಕೆ–ತಮ್ಮ ಜನಗಳ ಸಮಸ್ಯೆಗಳು, ಅವರ ಸಂಕಟ, ಅಸಹಾಯಕತೆಗಳು ಅರ್ಥವಾಗುವುದಿಲ್ಲ ಎಂದೇ ನಮ್ಮ ರೈತ ಸಂಘ, ದಲಿತ ಸಂಘಟನೆಗಳು, ಮಹಿಳಾ ಸಂಘಗಳೂ ಈ ಕೆಲಸವನ್ನು ಕೈಗೆತ್ತಿಕೊಂಡು ವ್ಯವಸ್ಥೆಗೆ ಸವಾಲುಗಳಾಗಬೇಕು. ಇತ್ತೀಚೆಗೆ ಪ್ರಜಾವಾಣಿ ಲೇಖನವೊಂದರಲ್ಲಿ ಉಲ್ಲೇಖಿತವಾದಂತೆ (ಪ್ರ.ವಾ.೨೮.೦೫, 'ದಲಿತರ ಮೇಲೆ ದೌರ್ಜನ್ಯಕ್ಕೆ ಕೊನೆಯಿಲ್ಲವೆ?) ಇಂದಿಗೂ ಕೂಡ ಅರವತ್ತೇಳು ದೇವಸ್ಥಾನಗಳಲ್ಲಿ ದಲಿತರಿಗೆ ಪ್ರವೇಶ ನಿರಾಕ್ಷರಿಸಲಾಗಿದೆ. ದಲಿತ ಚಳವಳಿಗಳು ಈ ವಿಷಯದಲ್ಲಿ ಏನು ಮಾಡುತ್ತಿವೆ? ಆಲಯ ಪ್ರವೇಶ ಮುಖ್ಯವಲ್ಲ. ಆದರೆ ಪ್ರವೇಶ ನಿಷಿದ್ಧಗೊಳಿಸಿದ ಶಕ್ತಿಗಳ ವಿರುದ್ಧದ ಪ್ರತಿಭಟನೆ, ಅವರ ಅಹಂಕಾರಕ್ಕೆ ಕೊಡುವ ಪೆಟ್ಟು ಮುಖ್ಯ.

'ದಲಿತರ ಮೇಲೆ ದೌರ್ಜನ್ಯಕ್ಕೆ ಕೊನೆಯಿಲ್ಲವೆ? ಇಂದಿಗೂ ಕೂಡ ಅರವತ್ತೇಳು ದೇವಸ್ಥಾನಗಳಲ್ಲಿ ದಲಿತರಿಗೆ ಪ್ರವೇಶ ನಿರಾಕರಿಸಲಾಗಿದೆ. ದಲಿತ ಚಳವಳಿಗಳು ಈ ವಿಷಯದಲ್ಲಿ ಏನು ಮಾಡುತ್ತಿವೆ? ಆಲಯ ಪ್ರವೇಶ ಮುಖ್ಯವಲ್ಲ. ಆದರೆ ಪ್ರವೇಶ ನಿಷಿದ್ಧಗೊಳಿಸಿದ ಶಕ್ತಿಗಳ ವಿರುದ್ಧದ ಪ್ರತಿಭಟನೆ, ಅವರ ಅಹಂಕಾರಕ್ಕೆ ಕೊಡುವ ಪೆಟ್ಟು ಮುಖ್ಯ.

ದಲಿತ ಚಳವಳಿಗಳು ಹಮ್ಮಿಕೊಳ್ಳಬಹುದಾಗಿದ್ದಷ್ಟು ಕ್ರಿಯಾಶೀಲ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ ಎಂಬ ಅನುಮಾನ ನನ್ನದು. ನಮ್ಮಲ್ಲಿ ಸ್ವಾರ್ಥ, ಅಧಿಕಾರದಾಹ, ಸ್ಥಾನಮಾನದ ಆಸೆ ಅಥವಾ ಕೇವಲ ಹಣ ಮಾಡುವ ಗೀಳು ಬೆಳೆಯುತ್ತ ಹೋದರೆ ಅಷ್ಟು ಮಟ್ಟಿಗೆ ವ್ಯವಸ್ಥೆಗೆ, ಶೋಷಕರಿಗೆ, ನಮ್ಮನ್ನೂ ಕೆಳಗೆ ಇಟ್ಟಿರಲು ಬಯಸುವವರಿಗೆ ಮಾರ್ಗ ಸಲೀಸು, ಸುಗಮ, ನಮ್ಮ ನಮ್ಮಲ್ಲಿ ಒಳಜಗಳಗಳನ್ನು ಸೃಷ್ಟಿಸಿ ನಿರ್ಭಯವಾಗಿ ನಮ್ಮನ್ನು ಸಂಪೂರ್ಣ ಮರೆಯಬಹುದು. ಎಂದೇ ನಾವು ಈ ಬಗ್ಗೆಯೂ ತೀವ್ರವಾಗಿ ಚಿಂತಿಸುವ ಅವಶ್ಯಕತೆಯಿದೆ.

* * *

ಸದ್ಯದ ಸರಕಾರ ಬಳ್ಳಾರಿ ಗಣೀ ಜನಗಳ ಪಕ್ಷ; ಕದ್ದು ಮುಚ್ಚಿ ಎಂಬ ಮಾತೇ ಇಲ್ಲದಂತೆ ಜಗಜ್ಜಾಹೀರಾಗಿ ಕೋಟಿಗಳು ಚೆಲ್ಲಿ ಯಾರನ್ನೇ ಕೊಳ್ಳಲು, ಯಾರನ್ನೇ ಬಾಯಿಮುಚ್ಚಿಸಲು ಸಾಧ್ಯ ಮಾಡಿಕೊಂಡಿರುವ ದುಷ್ಟಕೂಟ ಕಬ್ಬಿಣದ ಅದಿರು ತುಂಬಿದ ಗೋಣಿಚೀಲ ಖಾಲಿಯಾದ ಮೇಲೆ ಚೀಲ ಝಾಡಿಸಿದಾಗ ಎದ್ದ ಅದಿರಿನ ಧೂಳಿಗೆ ಇರುವ ಕಿಮ್ಮತ್ತಿನಲ್ಲಿ ಈ ಇಡೀ ಕರ್ನಾಟಕ ಸರಕಾರವನ್ನು ಕೊಂಡುಬಿಡುವ ಠೇಂಕಾರದಲ್ಲಿ ಗಣಿ ಮಾಲೀಕರಿದ್ದಾರೆ. ಅವರ ಕೈತಪ್ಪಿ ಜಾರಿದ್ದ ಪೈಸೆಗಳು ನೆಲಕ್ಕೆ ಬಿದ್ದ ಶಬ್ದವೂ ಸಂಗೀತದ ಹಾಗೆ ಕೇಳಿ ಅದರ ತಾಳಕ್ಕೆ ಹೃತ್ಪೂರ್ವಕವಾಗಿ ಕುಣಿಯುತ್ತ, ಮುಖದ ತುಂಬ 'ಧನ್ಯೋಸ್ಮಿ' ತೃಪ್ತ ನಗು ಹೊತ್ತ ನಮ್ಮ ನಾಯಕರುಗಳು–ಪಕ್ಷಭೇದವಿಲ್ಲದೆ–ಅದಿರಿನ ಧೂಳಿನಲ್ಲಿ, ಉಸಿರುಕಟ್ಟಿದರೂ ಪರವಾಗಿಲ್ಲ. ಮುಚ್ಚಿ ಹೋಗುವ ಉತ್ಸಾಹದಲ್ಲಿದ್ದಾರೆ.

ಈ ಗಣಿ ಮಾಫಿಯಾ–ಅದರ ಜೊತೆಗೆ ಭೂಮಾಫಿಯಾ ಎರಡೂ ಮಹಾ ಪಿಡುಗುಗಳು ಇಡೀ ರಾಜ್ಯ ಕ್ರಯಕ್ಕೆ ಬಿದ್ದ ಗುಜರಿ ವಸ್ತುವಾಗಿ ಕಾಣುವಂತಾಗುವುದನ್ನು ನಾವು ಪ್ರತಿಭಟಿಸಬೇಕು, ತೀವ್ರವಾಗಿ. ಗಣಿ ಕೈಗಾರಿಕೆಯನ್ನು ರಾಷ್ಟ್ರೀಕರಣಗೊಳಿಸಲು ನಾವು ಒತ್ತಾಯಿಸಬೇಕು.

ಕೋಮುವಾದದ ಪ್ರಶ್ನೆ, ಮುಸ್ಲಿಂ ಸಮುದಾಯದೊಡನೆ ನಮ್ಮ ಸಂವಾದ, ಪರಸ್ಪರ ಮತ್ತು ವಿಶೇಷವಾಗಿ ಮುಸ್ಲಿಮರ ಸಮಸ್ಯೆಗಳೇನೆಂದು ನಾವು ತಿಳಿಯಬೇಕಾಗಿದೆ. ಬಿ.ಜೆ.ಪಿ. ಸರಕಾರ ಅಸ್ತಿತ್ವಕ್ಕೆ ಬಂದು ಮತ್ತೂ ಅಭದ್ರತೆಯಲ್ಲಿ ನರಳುತ್ತಿರುವ ಅವರೊಡನೆ ನಮ್ಮ ಸಂಬಂಧಗಳು ಮತ್ತೂ ಗಟ್ಟಿಗೊಳ್ಳಬೇಕಾಗಿದೆ. ಸ್ಪಷ್ಟತೆ, ವಸ್ತುನಿಷ್ಠತೆ, ಮತ್ತು ಕಳಕಳಿಗಳು ಕೂಡಿದ ಮನೋಭಾವ ನಮಗೆ ಅತ್ಯಾವಶ್ಯಕವಾಗಿದೆ.

* * *

ಪ್ರಜಾಪ್ರಭುತ್ವವೆಂದರೆ ಪ್ರಜೆಗಳು ನಿರಂತರ ವಿರೋಧಿ ನಾಯಕರು ಎಂದರ್ಥ–ನಮಗೆ ಸಹಾನುಭೂತಿ ಬರುವ ಪಕ್ಷ ಅಧಿಕಾರಕ್ಕೆ ಬಂದಾಗಲೂ ಅಷ್ಟೆ. ಅರುಂಧತಿ ರಾಯ್ ಹೇಳುವ Globalization of Dissent ನಮ್ಮ ಮನೋಧರ್ಮವಾಗಿರಬೇಕು. ಮತ್ತು ಬಹುಶಃ ಅದಕ್ಕೂ ಹೆಚ್ಚಿಗೆ ಸರಿ ಎನ್ನಿಸಿದ್ದನ್ನು ಮಾಡುತ್ತ ಹೋಗಬೇಕು–ಅದು ಯಶಸ್ವಿಯೇ, ಅಯಶಸ್ವಿಯೇ ಎಂದು ಚಿಂತಿಸದೆ. ಇದನ್ನೇ ನಾವು ಗಾಂಧೀಜೀ, ಅಂಬೇಡ್ಕರ್ ಅವರುಗಳ ಜೀವನ ವಿಧಾನದಿಂದ ಕಲಿಯಬೇಕಾದುದು. □

ಜಾಗತೀಕರಣ ಮತ್ತು ಸಾಂಸ್ಕೃತಿಕ ತಲ್ಲಣಗಳು

ವಸಾಹತು ಕಾಲದಲ್ಲಿ ಅರಳಿದ ಸಮಾಜ ಸುಧಾರಕ ಜ್ಯೋತಿಬಾ ಫುಲೆಯವರ ಪ್ರಯತ್ನದಿಂದಾಗಿ ಮಹಿಳೆಯರು, ಅಸ್ಪೃಶ್ಯರು, ಜಡ ಸಂಸ್ಕೃತಿಯ ಮೌಲ್ಯಗಳನ್ನು ವಿರೋಧಿಸ ಹತ್ತಿದರು. ಅದನ್ನು ಧಿಕ್ಕರಿಸುವುದರ ಮೂಲಕ ಹೊಸದೊಂದು ಸಮತಾವಾದದ ಬದುಕಿನೆಡೆಗೆ ನಡೆದರು. ಪೇಶ್ವೆಯ ಕಾಲ ಹೇಗಿತ್ತೆಂದರೆ, ದಲಿತ ಮಹಿಳೆಯರು ಹಣೆಯ ಮೇಲೆ ಕುಂಕುಮ ಹಚ್ಚಿಕೊಳ್ಳುವ ಹಾಗಿರಲಿಲ್ಲ. ಬಂಗಾರದ ಒಡವೆಗಳನ್ನು ಧರಿಸುವುದು ಅಪರಾಧವೆಂಬ ನಿಯಮವಿತ್ತು. ತಾಮ್ರದ ಕೊಡದಲ್ಲಿ ನೀರು ತರುವಂತಿರಲಿಲ್ಲ, ಉತ್ತಮ ಕುಪ್ಪಸಗಳನ್ನು ದಲಿತ ಮಹಿಳೆಯರು ತೊಡುವ ಹಾಗಿರಲಿಲ್ಲ, ಈ ರೀತಿಯ ಕಟ್ಟುಪಾಡು, ಅಂಧ್ರ ಶ್ರದ್ಧೆಗಳೆಂಬ ಮಡಿವಂತರ ಸರಪಳಿಯ ಬಿಗಿ ಕೊಂಡಿಗಳು ಸಡಿಲಗೊಂಡದ್ದು ವಸಾಹತು ಕಾಲದಲ್ಲಿ. ದಲಿತ ಮಹಿಳೆಯರು ಕುಂಕುಮ ಹಚ್ಚುವುದು, ಬಂಗಾರದ ಒಡವೆಗಳನ್ನು ಧರಿಸುವುದು, ಮಹಿಳೆಯರು ಶಾಲೆಗೆ ಹೋಗುವುದು, ಅದನ್ನು ನಾವು ಪಾಶ್ಚ್ಯಾತೀಕರಣ, ಆಧುನಿಕರಣವೆಂದು ಕರೆಯುತ್ತೇವೆ. ಅದರ ವಿಕಸಿತ ಹಂತವೇ ಇವತ್ತಿನ ಜಾಗತೀಕರಣ.

ಡಾ|| ಎಚ್.ಟಿ. ಪೋತೆ

ಆಧುನಿಕ ಯುಗದ ಈ ಸಂದರ್ಭದಲ್ಲಿ ಪ್ರಭಾವಶಾಲಿಯಾಗಿರುವ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣಗಳ ನಡುವೆ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಬದುಕು ಹೇಗೆ ಸ್ಥಿತ್ಯಂತರಗೊಳ್ಳುತ್ತ ನಡೆದಿದೆ ಎನ್ನುವುದು ವಿವೇಚನೆಗೊಳಪಡಿಸುವುದು, ಅನಿವಾರ್ಯವಾಗಿದೆ. ಜಡವಾದದ ವಿರುದ್ಧ ಚಲನಶೀಲ ಸಂಸ್ಕೃತಿಯವಾದ ಹೇಗೆ ಉಳಿದುಕೊಂಡು ಬಂದಿದೆ ಮತ್ತು ಈ ಎರಡು ವಾದಗಳ ಪರ ವಿರೋಧದ ವಿಚಾರಗಳನ್ನು ಪರಂಪರೆಯ ಸಂಗತಿಗಳನ್ನು ಆಧಾರವಾಗಿಟ್ಟುಕೊಂಡು ಚಿಂತನೆಗೊಳ ಪಡಿಸುವ ಪ್ರಯತ್ನವೆ, 'ಜಾಗತೀಕರಣ ಮತ್ತು ಸಾಂಸ್ಕೃತಿಕ ತಲ್ಲಣಗಳು' ಲೇಖನದ ಉದ್ದೇಶವಾಗಿದೆ.

ವರ್ಣವ್ಯವಸ್ಥೆಯಾಧಾರಿತ ಭಯಂಕರ ರೂಪದ ಜಾತಿ ಪದ್ಧತಿಯ ವಿರುದ್ಧ ಸೆಣಿಸಿದ ಬುದ್ಧನ ಕರುಣೆ, ಶೀಲ, ಮೈತ್ರಿಗೆ ಕನ್ನಡ ನಾಡು ಮೈದೆರೆದು ಕೊಂಡಿರುವಂತಹದ್ದು, ಅಹಿಂಸೆಯೇ ಪರಮೋ ಧರ್ಮವೆಂದು ಹೇಳಿದ ಜೈನಮುನಿಗಳ ತವರು ನೆಲ ಇದಾಗಿದೆ. ಮಾನವ ಕುಲ ತಾನೊಂದೇವಲಂ' ಎಂದು ಹೇಳಿದ ಪಂಪನ ಕರ್ಮಭೂಮಿಯೂ ಹೌದು. ಬಸವಾದಿ ಶರಣರ ತಾಯ್ತನದ ಸಂಸ್ಕೃತಿಯ ಪ್ರತಿರೂಪವೇ ಇಲ್ಲಿಯ ಸಂಸ್ಕೃತಿಯಾಗಿದ್ದರೂ, ನಾವೆಲ್ಲರು ಯಾವುದೊ ಒಂದು ಕಾರಣಕ್ಕಾಗಿ ಗೊಂದಲದ ಗೂಡುಗಳಾಗಿದ್ದೇವೆ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಆರಂಭಿಸಿದ ದಲಿತ ಚಳವಳಿ ಕನ್ನಡ ನಾಡಿನಾದ್ಯಂತ ಹಬ್ಬಲಿಲ್ಲ, ಆ ಕ್ರಾಂತಿ ಜ್ಯೋತಿ ಅಲ್ಲಿಗೆ ತಣ್ಣಗಾಯಿತು. ಅತ್ಯಂತ ತೀವ್ರ ಚಳವಳಿಯಾಗಿ ಚಲನೆ ಸ್ವರೂಪದಲ್ಲಿದ್ದ ಚಳವಳಿ ಸ್ಥಾವರ ರೂಪಿಯಾಯಿತು. ಚಳವಳಿ ಮೂಲ ಉದ್ದೇಶವೆನಿಸಿದ, ಜಾತ್ಯತೀತ ಭಾವನೆಯನ್ನು ಮೂಲೆಗುಂಪು ಮಾಡಲಾಯಿತು. ಹದಿನೈದನೇ ಶತಮಾನದ ಹೊತ್ತಿಗೆ ಸ್ಥಾವರಗೊಂಡು ಜಾತಿ ಸ್ವರೂಪ ಪಡೆದ ವೀರಶೈವ ಧರ್ಮವನ್ನು ವಿರೋಧಿಸುತ್ತಲೇ ತಮ್ಮದೊಂದು ಆಂದೋಲನವನ್ನು ಬಸವಣ್ಣನವರ ನೆನಪಿನಿಂದಲೇ ಮಲೆಯ ಮಹದೇಶ್ವರ, ಮಂಟೇಸ್ವಾಮಿ, ಮುಂತಾದವರು ಪ್ರಾರಂಭ ಮಾಡಿದರು. ಇವರು ಕರ್ನಾಟಕದಾದ್ಯಂತ ನಿರಂತರ ಚಲಿಸಿದ ಸಂತರು, ಜಮಗಮರು. ಹೀಗಾಗಿ 'ಸಂಸ್ಕೃತಿ ಸಂಕ್ರಮಣ' ಕ್ರಿಯೆಯ ಬೀಜಗಳು ಕಳೆದ ಎಂಟು ಶತಮಾನಗಳಿಂದಲು ಕನ್ನಡದ ನೆಲದಲ್ಲಿ ಮೊಳಕೆಯೊಡೆದಿದೆ. ನಮ್ಮ ಸಮ ಸಂಸ್ಕೃತಿಯಲ್ಲಿ ತಳಮಳ ಸುರುವಾದದ್ದು, ಸಾಮಾಜಿಕ ಅಸಮಾನತೆಯ ಕಾರಣಕ್ಕಾಗಿ ಎನ್ನುವುದು ಮರೆಯಬಾರದು. ವಚನಕಾರರ ಪ್ರಯತ್ನವನ್ನು ನಾವೆಲ್ಲ ನೆನೆಯಲೇ ಬೇಕು. ಸಾಮಾಜಿಕ ನೆಲೆಯಲ್ಲಿ ಅನನ್ಯವಾದ ಬದುಕನ್ನು ರೂಪಿಸಲು ಅವರು ಯತ್ನಿಸಿದ್ದರು.

ಸಮಾಜದ ಕೊನೆ ಸೆರಗಿನ ಸಮುದಾಯಗಳಿಗೆ ಆಧ್ಯಾತ್ಮಿಕ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನಲ್ಲದೆ, ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ಅವಕಾಶಗಳು ರೂಪಿಸಿಕೊಳ್ಳಲಾಯಿತು. ಈ ನಡುವೆ ಅನೇಕ ಹೊಸ ಚಿಂತನಧಾರೆಗಳು ಹರಿದು ಬಂದರೂ, ಅವುಗಳ ನೆನಪು ಶಾಶ್ವತವಾಗಿ ಉಳಿದಿಲ್ಲ. ಹಾಗಂತ ಅವುಗಳಿಗೆ ಮಹತ್ವವಿಲ್ಲವೆಂದೇನಲ್ಲ, ಪೇಶ್ವೆಯಂತಹ ಸ್ವಾರ್ಥಿ ರಾಜನೊಬ್ಬ ನಿರ್ಮಾಣ ಮಾಡಿದ ರಾಜ್ಯ ಶಾಸನದ ಪೊಳ್ಳುತನವನ್ನು ಇಸ್ಟ್ ಇಂಡಿಯಾ ಕಂಪನಿಯ ಉಂಡಾಡಿ ನೌಕರರು ತುಂಬಿ ತೇಗಿದ್ದಲ್ಲದೆ, ಅವರಿಂದಾಗಿ ಸಾಮಾಜಿಕ ವ್ಯವಸ್ಥೆ ತಲ್ಲಣಗೊಂಡಿತು. ಆ ಕಾಲದ ಜೀವವಿರೋಧಿ ಆಡಳಿತವನ್ನು ಕಂಡು ಬೇಸತ್ತ ಜನ ಆಗತಾನೆ ಪಸರಿಸುತ್ತಿರುವ ವಸಹಾತುವಾದದಲ್ಲಿ ಸಮುದಾಯದ ಅಶಾಂತಿಗೆ ಕಾರಣರಾದ ಪೇಶ್ವೆಯ ಕಾಲದಲ್ಲಿ ಒಂದಷ್ಟು ಸಮಾನತೆ, ಅಕ್ಷರ ಕಲಿಕೆ ಶೋಷಿತರ, ದಲಿತರ ಹಾಗೂ ಮಹಿಳೆಯರ ಬದುಕಿನಲ್ಲಿ ಹೊಸ ಆಸೆಯನ್ನು ಹುಟ್ಟಿಸಿತು.

ವಸಾಹತು ಕಾಲದಲ್ಲಿ ಅರಳಿದ ಸಮಾಜ ಸುಧಾರಕ ಮಹಾತ್ಮ ಜ್ಯೋತಿಬಾ ಫುಲೆಯವರ ಪ್ರಯತ್ನದಿಂದಾಗಿ ಮಹಿಳೆಯರು, ಅಸ್ಪೃಶ್ಯರು, ಜಡ ಸಂಸ್ಕೃತಿಯ ಮೌಲ್ಯಗಳನ್ನು ವಿರೋಧಿಸ ಹತ್ತಿದರು. ಅದನ್ನು ಧಿಕ್ಕರಿಸುವುದರ ಮೂಲಕ ಹೊಸದೊಂದು ಸಮತಾವಾದದ ಬದುಕಿನೆಡೆಗೆ ನಡೆದರು. ಪೇಶ್ವೆಯ ಕಾಲ ಹೇಗಿತ್ತೆಂದರೆ, ದಲಿತ

ಮಹಿಳೆಯರು ಹಣೆಯ ಮೇಲೆ ಕುಂಕುಮ ಹಚ್ಚಿಕೊಳ್ಳುವ ಹಾಗಿರಲಿಲ್ಲ. ಬಂಗಾರದ ಒಡವೆಗಳನ್ನು ಧರಿಸುವುದು ಅಪರಾಧವೆಂಬ ನಿಯಮವಿತ್ತು. ತಾಮ್ರದ ಕೊಡದಲ್ಲಿ ನೀರು ತರುವಂತಿರಲಿಲ್ಲ, ಉತ್ತಮ ಕುಪ್ಪಸಗಳನ್ನು ದಲಿತ ಮಹಿಳೆಯರು ತೊಡುವಹಾಗಿರಲಿಲ್ಲ, ಈ ರೀತಿಯ ಕಟ್ಟುಪಾಡು, ಅಂಧ್ರಶ್ರದ್ಧೆಗಳೆಂಬ ಮಡಿವಂತರ ಸರಪಳಿಯ ಬಿಗಿಕೊಂಡಿಗಳು ಸಡಿಲಗೊಂಡದ್ದು ವಸಾಹತು ಕಾಲದಲ್ಲಿ. ದಲಿತ ಮಹಿಳೆಯರು ಕುಂಕುಮ ಹಚ್ಚುವುದು ಬಂಗಾರದ ಒಡವೆಗಳನ್ನು ಧರಿಸುವುದು, ಮಹಿಳೆಯರು ಶಾಲೆಗೆ ಹೋಗುವುದು, ಅದನ್ನು ನಾವು ಪಾಶ್ಚಾತ್ಯೀಕರಣ, ಆಧುನಿಕರಣವೆಂದು ಕರೆಯುತ್ತೇವೆ. ಅದರ ವಿಕಸಿತ ಹಂತವೇ ಇವತ್ತಿನ ಜಾಗತೀಕರಣ.

ಸ್ವಾತಂತ್ರ್ಯ ಪೂರ್ವದ ಇಂಗ್ಲಿಷರ ಕಾಲದಲ್ಲಿ ಘುಲೆ, ಪೆರಿಯಾರ ಅಂಬೇಡ್ಕರ್ ಮುಂತಾದವರ ಪ್ರಯತ್ನ ಏನಾಗಿತ್ತು ಎಂದರೆ, ಯಾರಿಗೆ ದೇವಾಲಯ ಪ್ರವೇಶ ಮಾಡುವ ಮುಕ್ತ ಅವಕಾಶವಿರಲಿಲ್ಲವೋ, ಕೆರೆ, ಬಾವಿಗಳನ್ನು ಮುಟ್ಟಿ ನೀರು ಕುಡಿಯುವ ಹಕ್ಕಿರಲಿಲ್ಲವೋ ಅವುಗಳನ್ನು ಪಡೆಯುವುದರತ್ತ ಹೋರಾಟ ಮಾಡಿದರು. ಇದು ವಸಾಹತು ಕಾಲದ ಬದಲಾವಣೆಯಿಂದಾಗಿ ತತ್ಕಾಲದ ಸಾಮಾಜಿಕ ಸಮಾನತೆ ಅವರಿಗೆ ಅಂದಂದಿನ ಹೋರಾಟದ ಪ್ರತಿ ಫಲವೆಂದೇ ಹೇಳಬಹುದು. ವಸಾಹತುಕರಣದ ಆಧುನಿಕ ಕೈಗಾರಿಕೆಕರಣಗಳ ಕಾರಣದಿಂದ ದಲಿತ, ಶೋಷಿತರು ಮಹಿಳೆಯರು ಉಸಿರು ಬಿಡುವಂತಾಯಿತು. ಅಸ್ಪೃಶ್ಯರು ಮುಟ್ಟಿಸಿ ತಟ್ಟಿಸಿಕೊಳ್ಳುವುದು ನಡೆಯಿತು. ಆದರೆ ಮಾನಸಿಕವಾದ ಅಸ್ಪೃಶ್ಯತೆ, ಅವಮಾನ, ಇಂದಿಗೂ ಉಳಿದುಕೊಂಡಿರುವುದು ವಿಪರ್ಯಾಸವೇ ಸರಿ.

ಇಷ್ಟೆಲ್ಲ ಅಪಮಾನ, ಅವಮಾನ, ಯಾತನೆಗಳು ತುಂಬಿ ಕೊಂಡಿರುವುದರ ಮಧ್ಯೆ ಜಾಗತೀಕರಣ ದೊಡ್ಡ ಅಪಾಯವೆಂದು ಹೇಳುತ್ತಿದ್ದೇವೆ. ಆಧುನಿಕ ಜ್ಞಾನದ ಈ ಜಗತ್ತಿನಲ್ಲಿ ಮುಟ್ಟಿಸಿಕೊಳ್ಳದ ಮನುಷ್ಯ ಅಕ್ಷರವಂತನಾಗಿ, ಸ್ವತಂತ್ರವಾಗಿ ಅಸಮಾನತೆಯಿಂದ ಸಮಾನತೆಯೆಡೆಗೆ ನಡೆದಿದ್ದಾನೆ. ಈ ನೆಲದಲ್ಲಿ ಶೋಷಣೆಗೊಳಗಾದ ಯಾವುದೇ ಒಬ್ಬ ವ್ಯಕ್ತಿ ಸಮಾಜದಲ್ಲಿ ಅಸಮಾನತೆ ಇರಬಾರದು ಎನ್ನುವನು ಬದಲಾವಣೆಯನ್ನು ಖಂಡಿತವಾಗಿ ಸ್ವಾಗತಿಸುತ್ತಾನೆ. ಒಮ್ಮೆ ಚಂಪಾ ಅವರು ತಮಾಷೆಗಾಗಿ ಮಾತಾಡಿದರೊ ಹೇಗೊ ಗೊತ್ತಿಲ್ಲ. ಆದರೆ ಅವರು ಹೇಳಿದ್ದು ಹೀಗೆ, "ಸಾಮಾಜಿಕ ಅಸಮಾನತೆಗೆ ಕಾರಣವಾದ ಕುಲವೃತ್ತಿ ಜಾತಿ ಪದ್ಧತಿಗಳು ಜಾಗತೀಕರಣದಿಂದ ನಾಶವಾಗುವುದಾದರೆ ಅಂಥ ಜಾಗತೀಕರಣವನ್ನು ನಾವೇಕೆ ಸ್ವಾಗತಿಸಬಾರದು?" ಎಂದು ಅಂದಿದ್ದರು. ಇದರಲ್ಲಿ ಗಂಭೀರವಾದ ಚಿಂತನೆ ಇದೆ, ಎನ್ನುವುದನ್ನು ನಾವು ಅರಿಯಬೇಕಾಗಿದೆ.

ಧರ್ಮದ ಹೆಸರಿನಲ್ಲಿ ಭಯೋತ್ಪಾದಕತೆ ಒಂದು ಕಡೆಯಾದರೆ, ಜಾಗತೀಕರಣದ ಯುದ್ಧೋತ್ಪಾದಕತೆ, ಆರ್ಥಿಕ ಭಯೋತ್ಪಾದಕತೆಗಳು ಇನ್ನೊಂದೆಡೆಯಿಂದ ನಮ್ಮ ಸಂಸ್ಕೃತಿಯ ಟೊಂಗೆಗಳನ್ನು ಕತ್ತರಿಸುತ್ತಲಿವೆ, ಅದರಂತೆ ನಮ್ಮಲ್ಲಿಯ ಎರಡು ಗುಂಪುಗಳ ಮಂದಿರ ಮಸೀದಿಗಾಗಿ ಜಗಳವಾಡುತ್ತಾ ಬಹು ಸಂಖ್ಯಾತರ ನೆಮ್ಮದಿ ಹಾಳು ಮಾಡಿರುವುದು ನಮಗೆಲ್ಲ ಗೊತ್ತಿರುವ ವಿಷಯವಾಗಿದೆ. ಜೊತೆಗೆ ನಮ್ಮ ನಡುವಿನ ಜಾತಿವಾದಗಳು ದಲಿತರಿಗೆ ಮಲತಿನ್ನಿಸಿರುವುದು ಅಮಾನವೀಯ ಸಂಗತಿಯಾಗಿದೆ. ಕಂಬಾಲಪಲ್ಲಿಯಲ್ಲಿ ಸವರ್ಣೀಯರಿಂದ ದಹಿಸಲ್ಪಟ್ಟವರೂ ದಲಿತರೇ, ದಲಿತರಿಗೆ ಬಹಿಷ್ಕಾರ ಹಾಕುವುದು ನಿರಂತರವಾಗಿ ಮುಂದುವರೆದಿದೆ. ಗುಜರಾತನ ಘಟನೆ ಇನ್ನೂ ಹಸಿಹಸಿಯಾಗಿಯೇ ಉಳಿದಿದೆ. ಮಹಿಳೆಯನ್ನು ಭೂಮಿಗೆ ಹೋಲಿಸಿ ಹೊಗುಳುತ್ತಲೆ ಅವಳನ್ನು ಬೆತ್ತಲೆಗೊಳಿಸಿದ ಅಮಾನವೀಯ ಘಟನೆಗೆ ನಾವು ಕಾರಣರಾಗಿದ್ದೇವೆ. ನಮ್ಮ ನಿಮ್ಮೆಲ್ಲರನ್ನು ನಿದ್ದೆ ಬರದಂತೆ ಕಂಗೆಡಿಸಿರುವ ದತ್ತಪೀಠ ಮತ್ತೆ ಮತ್ತೆ ಜೀವ ಹಿಂಡುತ್ತಿದೆ.

ಈದ್ಗಾ ಮೈದಾನದ ಸಮಸ್ಯೆ ಈಗತಾನೆ ಬಗೆಹರಿದಂತಾಗಿದೆ. ಇವೆಲ್ಲವುಗಳ ನಡುವೆ ಕೆಲವೇ ಕೆಲವು ಸಮುದಾಯಗಳು ತಮ್ಮ ಸ್ವಧರ್ಮದ, ಸ್ವಜಾತಿಯ ಸಂಸ್ಕೃತಿಯನ್ನು ಸಣ್ಣ ಪುಟ್ಟ ಸಮುದಾಯಗಳು ಬೆತ್ತಲಾಗುತ್ತಲಿವೆ. ಒಬ್ಬ ಸಾಮಾನ್ಯ ದಲಿತನಿಗೆ ಆಧುನಿಕತೆ, ಜಾಗತೀಕರಣ ಮುಖ್ಯವಾಗಿ ಧಾರ್ಮಿಕ ವಿಷಯಗಳಿಗಿಂತ ಸಾಮಾಜಿಕವಾಗಿ ಸಮಾನತೆಯಿಂದ ಬದುಕುವುದು ಬಹಳ ಮುಖ್ಯವಾಗುತ್ತದೆ. ಸಮಾನತೆಯೆನ್ನುವುದು ಯಾವುದೇ ನೆಲ'ಯಿಂದ ಬರಲಿ ಅದನ್ನು ಸ್ವೀಕರಿಸಲೇಬೇಕಾಗುತ್ತದೆ. ಭಾರ'ತದ ಸಾಮಾಜಿಕ ಅಸಮಾನತೆಗೆ ಸಿಕ್ಕ ವ್ಯಕ್ತಿ ವ್ಯವಸ್ಥೆಯನ್ನು ವಿರೋಧಿಸುವುದರ ಜೊತೆಗೆ ಸಮಾನತೆಯನ್ನು, ಹೊಸತನವನ್ನು ಅಪೇಕ್ಷಿಸುತ್ತಾನೆ ಎನ್ನುವುದು ಒಂದು ಚಿಕ್ಕ ದೃಷ್ಟಾಂತದ ಮೂಲಕ ಖಚಿತ ಪಡಿಸಿಕೊಳ್ಳಬಹುದು.

'ಎಪ್ಪತ್ತೆರಡರ ಬರಗಾಲ ನಿಜಕ್ಕೂ ಭಯಂಕರವಾಗಿತ್ತು. ನಮ್ಮದು ಆವಾಗ ಕೂಡು ಕುಟುಂಬ ಕುಟುಂಬದ ಯಜಮಾನ ನಮ್ಮ ತಂದೆ ನಾಡಿನಲ್ಲೆಲ್ಲ ಬರಗಾಲ ಬಿದ್ದಿತ್ತು. ಕೆರೆ ಬಾವಿ ಹಳ್ಳಕೊಳ್ಳಗಳು, ಮೈದೆರೆದುಕೊಂಡು ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರು ಇಲ್ಲದಂತಾಗಿತ್ತು. ದನಕರುಗಳನ್ನು ರೈತರು ಕೊರಳಲ್ಲಿ ಚೀಟಿ ಕಟ್ಟಿ ಅಟ್ಟಿ ಬಿಡುತ್ತಿದ್ದರು. ಯಾರಾದರು ಶ್ರೀಮಂತರು, ಅನುಕೂಲಸ್ಥರು ಅವುಗಳನ್ನು ಸಾಕಿಕೊಳ್ಳಬಹುದಾಗಿತ್ತು. ನಮ್ಮೂರಿನ ಎಲ್ಲ ರೈತರ ಬಾವಿ ಬತ್ತಿ ಹೋಗಿದ್ದರೂ ನಮ್ಮ ಬಾವಿಯ ಸೆಲೆ ಹರಿಯುತ್ತಿತ್ತು. ಹೀಗಾಗಿ ಹೊಲದಲ್ಲಿ ಮೆಣಸಿನ ಕಾಯಿ ಬೆಳೆ ಬೆಳೆಯಲಾಗಿತ್ತು. ಮೆಣಸಿನಗಿಡಗಳನ್ನು ಹಚ್ಚಿದ ಹೊಲದಲ್ಲಿ ಕಳೆ ಕೀಳುವುದಕ್ಕಾಗಿ ಪುರುಷರನ್ನೇ ಕೂಲಿಗಾಗಿ ಕರೆಯುತ್ತಿದ್ದರು. ಅಂತಹ ಕೂಲಿ ಆಳುಗಳಲ್ಲಿ ಎಲ್ಲ ಜಾತಿಯವರು ಕೆಲಸಕ್ಕೆ ಬರುತ್ತಿದ್ದರು. ಅವರಲ್ಲಿ ಊರಿನ ಗೌಡನು ಅಸ್ಪೃಶ್ಯರ ಹೊಲದಲ್ಲಿ ಕೂಲಿ ಕೆಲಸಕ್ಕೆ ಬರುತ್ತಿದ್ದನು.

ಗೌಡ ಕೂಲಿ ಕೆಲಸ ಮಾಡುವುದೆಂದರೆ ನಮಗೆಲ್ಲ ಆಶ್ಚರ್ಯ ಅದರಲ್ಲೂ ಅಸ್ಪೃಶ್ಯರಾದ ನಮ್ಮ ಹೊಲದಲ್ಲಿ ಗೌಡ ಕೂಲಿ ಮಾಡುತ್ತಿದ್ದಾನೆ ಎನ್ನುವುದು ಪರಮಾಶ್ಚರ್ಯವಾಗಿತ್ತು. ಗೌಡ ಹಾಗೂ ಇತರರು ಕೆಲಸಕ್ಕೆ ಬಂದ ಮೇಲೆ ಬುತ್ತಿ (ಊಟ)ಯನ್ನು ಗಿಡಕ್ಕೆ ಕಟ್ಟುತ್ತಿದ್ದ. ಮುಸ್ಲಿಮರು ಗಿಡದ ಬುಡದಲ್ಲಿ ಇಡುತ್ತಿದ್ದರು. ಅಸ್ಪೃಶ್ಯರು ತಂದ ಊಟದ ಬುತ್ತಿಯನ್ನು ನಮ್ಮ ಮನೆಯಲ್ಲಿ ಇಡುತ್ತಿದ್ದರು.

ಊಟ ಮಾಡುವ ಹೊತ್ತಿಗೆ ಎಲ್ಲರೂ ಬೇರೆ ಬೇರೆಯಾಗಿಯೇ ಕುಳಿತು ಊಟ ಮಾಡುತ್ತಿದ್ದರು. ಆದರೆ ನಮ್ಮ ಬಾವಿಯ ನೀರನ್ನು ಮೇಲ್ವರ್ಗದವರು ಕುಡಿಯುತ್ತಿರಲಿಲ್ಲ, ಉಳಿದ ಅಸ್ಪೃಶ್ಯರು ನಮ್ಮಲ್ಲಿಯ ನೀರನ್ನೇ ಕುಡಿಯುತ್ತಿದ್ದರು. ಮುಸ್ಲಿಮರು ಮತ್ತು ಕೂಲಿ ಆಳು ಗೌಡ ನಮ್ಮ ನೀರಿನಿಂದ ಕಾಲು ಕೈ ಮುಖ ತೊಳೆದುಕೊಳ್ಳಲು ಮಾತ್ರ ಬಳಸುತ್ತಿದ್ದರು. ಐದು ಎಚ್.ಪಿ ಕಿರ್ಲೋಸ್ಕರ್ ಇಂಜಿನ ನೀರು ಎಳೆದು ಹಾಕುತ್ತಿತ್ತು. ಅಂತಹ ಒಳ್ಳೆಯ ನೀರು ಗೌಡನಿಗೆ ಹಾಗೂ ಉಳಿದ ಮುಸ್ಲಿಮರಿಗೆ ಅಸ್ಪೃಶ್ಯವಾಗಿ ಬಿಟ್ಟಿತ್ತು (ಕುಡಿಯುತ್ತಿರಲಿಲ್ಲ) ಪಕ್ಕದ ತೋಟದ ಮುಸ್ಲಿಮರ ಬಾವಿ ಪೂರ ತಳಕಂಡಿತ್ತು. ಗೊಜ್ಜು ನೀರು ತಂದು ಬಟ್ಟೆಯಿಂದ ಸೋಸಿ ಕುಡಿಯುತ್ತಿದ್ದರು. ಕೂಲಿ ಕೆಲಸ ಮುಗಿದ ಮೇಲೆ ಮಾಲಿಕನಿಂದ ಹಣ ಪಡೆಯುವ ಸಮಯ ಬಂದಾಗ ಗೌಡ ಬಹಳ ಠೀವಿಯಿಂದ ಕಾಲ ಮೇಲೆ ಕಾಲು ಹಾಕಿಕೊಂಡು ಕುಳಿತು ನಮ್ಮ ತಂದೆಯ ಹೆಸರು ಹಿಡಿದು ಏಕವಚನದಲ್ಲಿ ಏ ಕಲ್ಯಾ (ಹೆಸರು ಬದಲಿಸಿದ್ದಾನೆ) ಪಗಾರ ಕೊಡು ಎಂದು ಜೋರು ಮಾಡುತ್ತಿದ್ದ. ಆಗ ನಮ್ಮ ತಂದೆ ವಿನಯದಿಂದ ದುಡ್ಡನ್ನು ನೆಲದ ಮೇಲೆ ಇಟ್ಟು ದೂರ ಸಿಳಿದು ನಿಲ್ಲಬೇಕು, ಆದಾದ ಮೇಲೆ ಆ ಗೌಡ ಹಣಕ್ಕೆ ನೀರು ಸಿಂಪಡಿಸಿ ತೆಗೆದುಕೊಳ್ಳುತ್ತಿದ್ದ. ಅದೇ ಗೌಡನ ಹೊಲದಲ್ಲಿ ಹೊಲೆಯ ಅಥವಾ ಮಾದಿಗ ಕೂಲಿಗೆ ಹೋದರೆ ಅವನ ಸ್ಥಿತಿ ಹೇಗಿರುತ್ತದೆ ಎನ್ನುವುದು ಊಹೆ ಮಾಡಲು ಅಸಾಧ್ಯ. ಅದು ಇಲ್ಲಿ ಪ್ರಸ್ತಾಪಿಸುವ ಅಗತ್ಯವಿಲ್ಲವೆಂದು ನಾನು ಭಾವಿಸಿದ್ದೇನೆ.

ಹೀಗೆ ಕೆಲವು ದಿನಗಳು ಕಳೆದ ಮೇಲೆ ನನ್ನ ತಂದೆ ಬೆಳದಿಂಗಳ ರಾತ್ರಿ ಊಟ ಮಾಡುತ್ತಾ ಕುಳಿತಾಗ ಹೀಗೆ ಹೇಳಿದರು. ಈ ದೇಶಕ್ಕೆ ಭಯಂಕರವಾದ ಬರಗಾಲ ಮೇಲಿಂದ ಮೇಲೆ ಬೀಳಬೇಕು. ಎಲ್ಲರ ನೀರು ಬತ್ತಿ ಹೋಗಬೇಕು. ಬೆಳೆ ಬೆಳೆಯದಾಂಗ ಆಗಬೇಕು ಎಂದು ಹೇಳುತ್ತ ತನಗಾದ ಅವಮಾನವನ್ನು ನೆನಪಿಸಿಕೊಳ್ಳುತ್ತಿದ್ದರು. ನಾನು ನನ್ನ ತಂದೆಯನ್ನು ಪ್ರಶ್ನಿಸಿದೆ? ಯಾಕ ಬರಗಾಲ ಬೀಳಬೇಕು? ಆಗ ನನ್ನ ತಂದೆ ಬರಗಾಲ ಬೀಳುವುದರಿಂದ ಶ್ರೀಮಂತರ, ಗೌಡರ ದರ್ಪ ದಬ್ಬಾಳಿಕೆ ಅಡಗಿ ಹೋಗುತ್ತದೆ, ಅಷ್ಟೇ ಅಲ್ಲ ಅವರ ಸೊಕ್ಕು ಕರಗುತ್ತದೆ,

ಸ್ವಾತಂತ್ರ್ಯ ಪೂರ್ವದ ಇಂಗ್ಲಿಷರ ಕಾಲದಲ್ಲಿ ಘುಲೆ, ಪೆರಿಯಾರ ಅಂಬೇಡ್ಕರ್ ಮುಂತಾದವರ ಪ್ರಯತ್ನ ಏನಾಗಿತ್ತು ಎಂದರೆ, ಯಾರಿಗೆ ದೇವಾಲಯ ಪ್ರವೇಶ ಮಾಡುವ ಮುಕ್ತ ಅವಕಾಶವಿರಲಿಲ್ಲವೋ, ಕೆರೆ, ಬಾವಿಗಳನ್ನು ಮುಟ್ಟಿ ನೀರು ಕುಡಿಯುವ ಹಕ್ಕಿರಲಿಲ್ಲವೋ ಅವುಗಳನ್ನು ಪಡೆಯುವುದರತ್ತ ಹೋರಾಟ ಮಾಡಿದರು. ಇದು ವಸಾಹತು ಕಾಲದ ಬದಲಾವಣೆಯಿಂದಾಗಿ ತತ್ಕಾಲದ ಸಾಮಾಜಿಕ ಸಮಾನತೆ ಅವರಿಗೆ ಅಂದಂದಿನ ಹೋರಾಟದ ಪ್ರತಿ ಫಲವೆಂದೇ ಹೇಳಬಹುದು. ವಸಾಹತುಕರಣದ ಆಧುನಿಕ ಕೈಗಾರಿಕೆಕರಣಗಳ ಕಾರಣದಿಂದ ದಲಿತ, ಶೋಷಿತರು ಮಹಿಳೆಯರು ಉಸಿರು ಬಿಡುವಂತಾಯಿತು. ಅಸ್ಪೃಶ್ಯರು ಮುಟ್ಟಿಸಿ ತಟ್ಟಿಸಿಕೊಳ್ಳುವುದು ನಡೆಯಿತು. ಆದರೆ ಮಾನಸಿಕವಾದ ಅಸ್ಪೃಶ್ಯತೆ, ಅವಮಾನ, ಇಂದಿಗೂ ಉಳಿದುಕೊಂಡಿರುವುದು ವಿಪರ್ಯಾಸವೇ ಸರಿ.

[illegible] ಎಂದು [illegible] ಅವಮಾನ ಎಂತಹವರನ್ನು ರೊಚ್ಚಿಗೇಳಿಸುತ್ತದೆ ಎನ್ನಲಿಕ್ಕೆ ಇದೊಂದು ಉದಾಹರಣೆ [illegible] ಬರಗಾಲ ಬೀಳಬೇಕು ಎನ್ನುವುದು ಜೀವ ವಿರೋಧಿ ವಿಚಾರವಾದರೂ ಆ ಅಪಮಾನ ತಾಳಲಾರದೆ ಹೊರ ಬಂದ ಆಕ್ರೋಶವೇ ಹೊರತು ಬೇರೇನು ಅಲ್ಲ. ಇಲ್ಲಿಯ ಗೌಡ ಜಾತಿವಾದಿಯಾಗಿ, ಕೋಮುವಾದಿಯಾಗಿ ತನ್ನ ಸಮುದಾಯದ ಒಂದು ಗುಂಪನ್ನು ಅವಮಾನ ಕ್ಕೀಡು ಮಾಡುತ್ತಾನೆ. ಆದರೆ ಜಾಗತೀಕರಣವೆಂಬ ಯುದ್ದೋತ್ಪಾದಕನ ಎದುರಿಗೆ ಕೇವಲ ದಲಿತ ಮಾತ್ರ ಕಾಣುವುದಿಲ್ಲ.

ಭಾರತದಲ್ಲಿ ಏಕರೂಪದ ಸಾಂಸ್ಕೃತಿಕ ಪಠ್ಯವಿಲ್ಲ. ಅನೇಕ ಸಂಸ್ಕೃತಿಗಳಿವೆ ಬೌದ್ಧ ಸಂಸ್ಕೃತಿ ಇದೆ, ಜೈನ, ಇಸ್ಲಾಂ, ಸಂಸ್ಕೃತಿ, ವೀರಶೈವ ಸಂಸ್ಕೃತಿ, ಕ್ರೈಸ್ತ ಸಂಸ್ಕೃತಿ, ಇರುವ ಹಾಗೆ ಅನೇಕ ಬುಡಕಟ್ಟು ಸಂಸ್ಕೃತಿಗಳಿರುವಂತೆ ದಲಿತ ಸಂಸ್ಕೃತಿಯೂ ಇದೆ. ಈ ಎಲ್ಲ ಸಂಸ್ಕೃತಿಗಳ ಹೆಸರಿನಲ್ಲಿ ಮೌಢ್ಯತೆಯನ್ನು ಬೆಳೆಸುವಲ್ಲಿ, ಉಳಿಸುವಲ್ಲಿ ದೇವಾಲಯಗಳು ಮಹತ್ವದ ಪಾತ್ರವಹಿಸುತ್ತವೆ. ಹಾಗೆಯೇ ಸಂಸ್ಕೃತಿಯನ್ನು ಮಾನವನ ಮೌಲ್ಯಗಳನ್ನು ಹಾಳು ಮಾಡುವಲ್ಲಿಯೂ ಕೆಲಸ ಮಾಡಿವೆ. ಜಾಗತೀಕರಣದಿಂದಾಗಿ ಇಲ್ಲಿಯ ಸಂಸ್ಕೃತಿ ಸಂಪ್ರದಾಯಗಳು ಹಾಳಾಗುತ್ತವೆ. ಹೀಗಾಗಿ ಅವುಗಳನ್ನು ಉಳಿಸಬೇಕೆಂದರೆ ಅಸ್ಪೃಶ್ಯತೆಯನ್ನು ಒಪ್ಪಿಕೊಳ್ಳುವುದೆಂದೇ ಅರ್ಥವಾಗುತ್ತದೆ. ಜಾಗತೀಕರಣವಾಗಲಿ, ಸುನಾಮಿಯಾಗಲಿ ಬಂದು ಎಲ್ಲವನ್ನು ಕೊಚ್ಚಿಕೊಂಡು ಹೋದರೆ ನನಗಾಗುವುದೇನು? ಎಂದು ಬೇಸರದ ನಿಟ್ಟುಸಿರನ್ನು ಅನೇಕ ದಲಿತರು ಬಿಡುತ್ತಿದ್ದಾರೆ. ಈ ವಿಷಯಕ್ಕೆ ಪೂರಕವಾಗಿ ಇನ್ನೊಂದು ಮಹತ್ವದ ಘಟನೆಯನ್ನು ಉಲ್ಲೇಖಿಸುವುದು ಉಚಿತವೆಂದು ತೋರುತ್ತದೆ.

ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಪೂರ್ವದಲ್ಲಿ ಬಳ್ಳಾರಿಯ ನಂದಿಹಳ್ಳಿಗೆ ಬಂದಿದ್ದರು ಸರಿಸುಮಾರು ೧೯೩೩ ರ ಸಂದರ್ಭ ಅಂತಕಾಣುತ್ತೆ. ನಂದಿಹಳ್ಳಿಗೆ ಬಂದ ಗಾಂಧೀಜಿಯವರು ಬ್ರಾಹ್ಮಣ ಸಮಾಜ ಸುಧಾರಕರೊಬ್ಬರ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು. ಬೆಳಗಿನ ಜಾವ ಎದ್ದು ಆತಿಥ್ಯವಹಿಸಿದ್ದ ವ್ಯಕ್ತಿಯನ್ನು ಕರೆದುಕೊಂಡು ಅಲ್ಲಿಯ ಅಸ್ಪೃಶ್ಯರಿಗೆ ಬಾವಿ ಪ್ರವೇಶ, ಗುಡಿ ಪ್ರವೇಶ ಮಾಡಿಸಲು ಮುಂದಾದರು. ಮೇಲ್ವರ್ಗದವರ ಬಾವಿಯನ್ನು ಪ್ರವೇಶ ಮಾಡಿದರು ಜೊತೆಗೆ ದೇವಾಲಯ ಪ್ರವೇಶವೂ ಆಯಿತು. ಗಾಂಧೀಜಿಯವರು ಅಲ್ಲಿಂದ ಬೇರೆ ಊರಿಗೆ ಹೋದರು. ಮಾರನೇ ದಿನದಿಂದಲೇ ಗುಡಿ ಪ್ರವೇಶ ಯಥಾವತ್ತಾಗಿ ನಿಂತುಹೋಯಿತು. ಅದನ್ನು ಮತ್ತೆ ಶುಚಿಗೊಳಿಸಿದರು, ಮಡಿಮೈಲಿಗೆ ತೆಗೆದರು. ಬಾವಿ ಪ್ರವೇಶ ಮಾಡಿದ್ದರಲ್ಲ ಅಲ್ಲಿ ದಲಿತರು ಇಳಿದು ನೀರು ಮುಟ್ಟಿದ್ದಾರೆ ಎಂದು ಅಲ್ಲಿಯ ಎಲ್ಲರೂ ಆ ಬಾವಿಯನ್ನು ಮುಟ್ಟದೆ ಅದನ್ನು ಹಾಳು ಗೆಡವಿದರು. ಈ ಘಟನೆಯನ್ನು ಮೂರು ಕಾರಣಗಳ ಮೇಲೆ ವಿಶ್ಲೇಷಣೆಗೊಳಪಡಿಸಬಹುದಾಗಿದೆ. ಒಂದು ಬಾವಿ ಪ್ರವೇಶ ಇದು ಸಾಮಾಜಿಕ ಕಾರಣ, ಎರಡು ದೇವಾಲಯ ಪ್ರವೇಶ ಇದು ಧಾರ್ಮಿಕ ಕಾರಣ, ಈ ಎರಡೂ ಕೆಲಸಗಳು ಪರಿಪೂರ್ಣವಾಗಲಿಲ್ಲವಲ್ಲ.

ದಲಿತರಿಗೆ ಇದರಿಂದ ಲಾಭವೂ ಆಗಲಿಲ್ಲ. ಈ ಕೆಲಸದಿಂದ ಪ್ರತಿಫಲ ದೊರೆತದ್ದು ಯಾರಿಗೆ ಅನ್ನುವ ಪ್ರಶ್ನೆ ಎದುರಾಗುತ್ತದೆ. ಈ ಎರಡೂ ವಿಷಯಗಳ ಹಿಂದೆ ರಾಜಕೀಯ ವಿಷಯ ಸಫಲವಾಗಿದೆ. ಗಾಂಧೀಜಿಯವರು ಯಾರ ಮನೆಯಲ್ಲಿ ಉಳಿದುಕೊಂಡಿದ್ದರು ಅನ್ನುವುದನ್ನು ಗಮನಿಸಿದ ನಂದಿಹಳ್ಳಿಯ ಘೋರ್ಪಡೆ ಸಂಸ್ಥಾನದವರು, ರಾಜಕೀಯ ಲಾಭಕ್ಕಾಗಿ ಈ ಸಂದರ್ಭವನ್ನು ಬಳಸಿಕೊಂಡು ಗಾಂಧೀಜಿಯ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಿದ ಬ್ರಾಹ್ಮಣ ವ್ಯಕ್ತಿಗೆ ಸಂಸ್ಥಾನದಲ್ಲಿ ಉನ್ನತ ಹುದ್ದೆಗೆ ನೇಮಿಸಿಕೊಂಡು. ಇಲ್ಲಿ ರಾಜಕೀಯ ಲಾಭ ಪಡೆಯುವವರು ಯಾರು? ಎನ್ನುವುದು ನೀವೇ ಹೇಳಿ? ಈ ದೇಶದಲ್ಲಿ ಎಂತಹದೇ ಬದಲಾವಣೆಯ ಗಾಳಿ ಬೀಸಿದರು ಅದರ ಲಾಭ ಬಂಡವಾಳ ಶಾಹಿಗಳಿಗೆ, ಜಾತಿವಾದಿಗಳಿಗೆ ಬಂದು ತಾಗುತ್ತದೆ. ವಿನಹ ದಲಿತರಿಗಲ್ಲ. ಈ ವಿಷಯಕ್ಕೆ ಪೂರಕವಾಗುವಂತಹ ಮಾಹಿತಿಯೊಂದನ್ನು ನೀಡಬಹುದಾಗಿದೆ.

ಕೃಷ್ಣಮಠ ತೀರ ಸಾಂಪ್ರದಾಯಿಕವಾದುದು, ಇಲ್ಲಿ ದಲಿತರಿಗೆ ಶೋಷಿತರಿಗೆ ದೇವಾಲಯದ ವರಾಂಡದಲ್ಲಿ ಪ್ರವೇಶ ಸಿಗಬಹುದು ಆದರೆ ಇತರರಂತೆ ಸಮಾನ ಅವಕಾಶಗಳು ಖಂಡಿತ ಇಲ್ಲವೆಂದು ಬೇರೆ ಬೇರೆ ಹೇಳಬೇಕಾಗಿಲ್ಲ, ಆವರಣದಲ್ಲಿ ದಲಿತ ಶೋಷಿತರ ಕಲಾ ಪ್ರದರ್ಶನಕ್ಕೆ ಅವಕಾಶವಿಲ್ಲ, ಅವರ ಕಲೆ ಸಂಸ್ಕೃತಿಯನ್ನು ಈ ದೇವಾಲಯ ಸಂಸ್ಕೃತಿ ವಿರೋಧಿಸುತ್ತದೆ. ಅಸ್ಪೃಶ್ಯರಂತೆ ದೂರವಿಡುತ್ತದೆ ಇದೊಂದು ರೀತಿಯ ಮೂಲಭೂತವಾದದ ಪ್ರದರ್ಶನವೆಂದೇ ಹೇಳಬಹುದು. ಆಧುನಿಕತೆ, ಜಾಗತೀಕರಣ, ಉದಾರೀಕರಣ ನೀತಿಗಳು ಬಂದರೂ ಇಲ್ಲಿಯ ಮಡಿವಂತರ ಸಂಪ್ರದಾಯ ಬದಲಾಗಿಲ್ಲ, ಇನ್ನು ಆಧುನಿಕ ಯುಗದಲ್ಲಿ ನಿರ್ಮಾಣಗೊಂಡ ಇಸ್ಕಾನ್ ದೇಗುಲದಲ್ಲಿಯೂ ದಲಿತರು ಉಪೇಕ್ಷಿತರೆ. ಇಲ್ಲಿ ಬಂಡವಾಳ ಶಾಹಿಗಳಿಗೆ ಹಣವಿದ್ದವರಿಗೆ ಮಾತ್ರ ಸಮಾನ ಪ್ರವೇಶ ಅವಕಾಶ ಇರುವುದನ್ನು ಕಾಣುತ್ತೇವೆ. ನಾಡಿನ ಯಾವುದೇ ದೇವಾಲಯದಲ್ಲಿ ದಲಿತ ಅರ್ಚಕರಿರುವುದನ್ನು ನೋಡಿಲ್ಲ, ನೋಡುವುದು ನಮ್ಮಿಂದ ಸಾಧ್ಯವಿಲ್ಲವೇನೊ, ಈ ಎರಡು

ಕಾಲ ಘಟ್ಟದಲ್ಲಿ ನಿರ್ಮಾಣವಾದ ವೈದಿಕ ಸಂಸ್ಕೃತಿಯನ್ನು ಪ್ರತಿಪಾದಿಸುವ ದೇವಾಲಯಗಳಿಂದ ಅಪಾಯ ಮಾತ್ರ ತಪ್ಪಿದ್ದಲ್ಲ.

ಆರ್ಥಿಕವಲಯದಲ್ಲಿ ಜಾಗತೀಕರಣದಿಂದ ದಲಿತ ಶೋಷಿತರಿಗಲ್ಲದೆ. ಇಲ್ಲಿಯ ಬಹುಸಂಖ್ಯಾತ ದುಡಿಯುವ ವರ್ಗಕ್ಕೂ ಅಪಾಯವಿರುವುದನ್ನು ಕಾಣುತ್ತೇವೆ. ಗುಡಿ ಕೈಗಾರಿಕೆಗಳು, ನಾಶವಾಗುತ್ತಲಿವೆ. ಉದ್ಯೋಗಗಳು ಸಾಮಾನ್ಯರಿಗೆ ಸಿಗುತ್ತಿಲ್ಲ. ಹಣವಿದ್ದವರು ಹಣವನ್ನು ತೊಡಗಿಸಿ ಬದುಕುವ ಕಾಲ, ಭೂಮಾಲೀಕರು ಭೂಮಾಲೀಕರಾಗಿಯೇ ಮುಂದುವರೆದಿದ್ದಾರೆ. ಜಾಗತೀಕರಣದ ಆರ್ಥಿಕ ಭಯೋತ್ಪಾದನೆಯಿಂದಾಗಿ ಬಡವರು ದಲಿತರು ಆರ್ಥಿಕ ವಲಯದ ತೆಕ್ಕೆಗೆ ಬರಲೇ ಇಲ್ಲವೆನ್ನುವುದು ವಿಷಾದದ ಸಂಗತಿ.

ಖಾಸಗೀಕರಣದಿಂದಾಗಿ ದಲಿತರು ಬಡವರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ ಎನ್ನುವುದು ಒಂದೆಡೆಯಾದರೆ, ಅವರು ಮೂಲದಿಂದ ಮಾಡಿಕೊಂಡು ಬಂದ ಚರ್ಮದ ಕೆಲಸಗಳು ಅವಮಾನಕ್ಕೊಳಗಾಗಿ ರಾಷ್ಟ್ರೀಯ ಅಂತಾರಾಷ್ಟ್ರೀಯ ನೆಲೆಯಲ್ಲಿ ಖ್ಯಾತಿಯನ್ನು ಪಡೆಯಲಾಗಿಲ್ಲ, ಮೇಲಾಗಿ ಅವರು ವೃತ್ತಿಯನ್ನು ಒಂದು ಉದ್ಯಮವೆಂದು ಪರಿಗಣಿಸಲಿಲ್ಲ. ಚಪ್ಪಲಿ ಹೊಲಿಯುವವ ಇನ್ನೂ ಚಪ್ಪಲಿಯನ್ನೇ ಹೊಲೆಯುತ್ತಿದ್ದಾನೆ. ವೃತ್ತಿಯ ಕಾರಣಕ್ಕಾಗಿ ಕೀಳು ಕುಲದವನಾಗಿ ಹಾಗೆಯೇ ಉಳಿದಿದ್ದಾನೆ. ಅದನ್ನು ಒಂದು ಉದ್ಯಮವೆಂದು ಕೆಲಸ ಮಾಡುತ್ತಿರುವ ಕೆರೋನಾ, ಖೋಜ, ಬಾಟಾ ಕಂಪನಿಯವರು ಅವರನ್ನು ದುಡಿಸಿಕೊಂಡು ಉದ್ಯಮಿಗಳಾಗಿದ್ದಾರೆ. ಜಾಗತೀಕರಣದಲ್ಲಿ ದಲಿತರು ಪಾಲುದಾರರಾಗಬೇಕು ಎನ್ನುವುದಾದರೆ, ಭಾರತ ಹೂಡುವ ಬಂಡವಾಳದಲ್ಲಿ ಸಮಪಾಲು ದಲಿತರಿಗೆ ನೀಡಬೇಕು. ಹಾಗೆ ಅವರಿಗೆ ಉತ್ತೇಜನ ನೀಡಿ ಪ್ರತಿಯೊಂದು ಕ್ಷೇತ್ರದಲ್ಲಿ ಸಮನಾಗಿ ನಿಲ್ಲುವಂತೆ ನೋಡಿಕೊಳ್ಳಬೇಕು. ಭೂಮಿ ರಾಷ್ಟ್ರೀಕರಣವಾದರೆ ದಲಿತರು ಜಾಗತೀಕರಣದಲ್ಲಿ ಇತರರಂತೆ ಸಮಾನವಾಗಿ ನಿಲ್ಲಬೇಕಾದರೆ ಸಮಾನ ಅವಕಾಶಗಳನ್ನು ನೀಡಬೇಕಾದದ್ದೂ ಅನಿವಾರ್ಯವಾಗಬೇಕು. ಅದನ್ನೆ ನಾವು Equal Opportunity ಎಂದು ಕರೆಯುತ್ತೇವೆ.

ಜಾನಪದವನ್ನು ಕುರಿತು ಮಾತನಾಡುವಾಗ ಜಾಗತೀಕರಣದಿಂದ ಜನಪದ ಸಂಸ್ಕೃತಿ ಹಾಳಾಗುತ್ತದೆ. ಎಂದು ನಾವೆಲ್ಲ ಕನವರಿಸುತ್ತಿದ್ದೇವೆ. ಜನಪದ ಕಲೆ ಜಾಗತೀಕರಣದಲ್ಲಿ ಒಂದು ಸರಕಾಗಿಯಾದರೂ ಬಳಕೆಯಾಗುತ್ತದೆ. ಇಲ್ಲಿಯೇ ಹುಟ್ಟಿದ ಇದೇ ನೆಲದ ಕಲೆ ಜಾತಿಯ ಅಸಮಾನತೆಯನ್ನು ಎದುರಿಸಿ ಗೌರವವಿಲ್ಲದೆ ಅಸ್ಪೃಶ್ಯರಷ್ಟೇ ಸಮಾನವಾಗಿ ಅವಮಾನಕ್ಕೊಳಗಾಗಿ ನಸಿಸಿ ಹೋಗುತ್ತಿರುವುದು ಇಂದು ನಿನ್ನೆಯದಲ್ಲ. ಜನಪದ ಸಂಸ್ಕೃತಿ ಕುರಿತು ಸಿಂಪಿ ಲಿಂಗಣ್ಣ ಅವರು ಮಾತನಾಡುತ್ತ "ಜನಪದ ಸಂಸ್ಕೃತಿ ಹಾಳರ್ದ ಹೊಲೆಯರ ಬೀಳರ್ದ ಹೆಂಗಳೆಯರದಾಗಿದೆ", ಎಂದು ಅಭಿಪ್ರಾಯ ಪಟ್ಟಿದ್ದಾರೆ. ಕೆಳವರ್ಗವೇ ಈ ಸಂಸ್ಕೃತಿಯ ಮೂಲ ಸೆಲೆಯಾಗಿದೆ ಎನ್ನುವುದನ್ನು ಬೇರೆ ಹೇಳಬೇಕಾಗಿಲ್ಲ.

ಜನಪದ ಜಗತ್ತಿನ ಕುರಿತು ನಾಟಕೀಯವಾಗಿ ಮಾತನಾಡುವ ಯಾರೊಬ್ಬರೂ ಹಲಿಗೆ ಬಾರಿಸುವುದು, ಶಹನಾಯಿ ಊದುವುದು, ಮಾಡಲಿಲ್ಲ. ಡೊಳ್ಳು ಬಡಿಯುವುದು ಮಾಡಲಿಲ್ಲ. ಅದನ್ನು ಕಲೆಯಾಗಿ ಯಾರೂ ಗೌರವಿಸಲಿಲ್ಲ. ಸವರ್ಣೀಯರು ಅದನ್ನು ಸ್ಪರ್ಶಕೂಡ ಮಾಡ

ಲಿಲ್ಲ. ಬೆಳೆಸಬೇಕು ಉಳಿಸಬೇಕು ಎನ್ನುವವರು ಕೇವಲ ಬೂಟಾಟಿಕೆಯ ಮಾತುಗಳನ್ನಾಡುತ್ತಾರೆ. ಭರತನಾಟ್ಯವೆಂದರೆ ಅದು ಮಾರ್ಗಶೈಲಿಯದು ಅದು ವೈದಿಕರದು ಮೇಲಾಗಿ ಶ್ರೇಷ್ಠವಾದುದು, ಹಲಗೆ, ಶಹನಾಯಿ ಬಾರಿಸುವುದೆಂದರೆ ದೇಶೀಯವಾದುದು ಅದು ದಲಿತರದು ಕನಿಷ್ಠವೆಂದು ಹೇಳುವ ಸಂಸ್ಕೃತಿ ನಿಜಕ್ಕೂ ಜಾಗತೀಕರಣಕ್ಕಿಂತ ದೊಡ್ಡ ಅಪಾಯವಾಗಿ ಪರಿಣಮಿಸಿ ಜನಪದ ಕಲೆ ಸಂಸ್ಕೃತಿ ಇನ್ನಿಲ್ಲದಂತಾಗುತ್ತಲಿದೆ.

ಭಾಷೆಯ ವಿಷಯ ಬಂದಾಗಲೂ ಇದೇತೆರನಾದ ಸಂದೇಹಗಳು ಎದುರಾಗುತ್ತವೆ. ಕನ್ನಡ ಭಾಷೆ ಅದು ಕೇವಲ ಭಾಷೆಯೆಲ್ಲ ಅದೊಂದು ಸಂಸ್ಕೃತಿ ಸಂಸ್ಕೃತಿಯೆಷ್ಟೇ ಅಲ್ಲ ಅದು ಬದುಕು ಎಂದು ನಾವೆಲ್ಲ ಅರ್ಥೈಸುತ್ತೇವೆ. ಆ ಸಂಸ್ಕೃತಿ ಭಾಷೆಯನ್ನು ಉಳಿಸಬೇಕು, ಬೆಳೆಸಬೇಕು ಎಂದು ಹೇಳುವವರು ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಯಲ್ಲಿ ಓದಿಸಿ ವಿದೇಶಕ್ಕೆ ಕಳುಹಿಸಿ ಕನ್ನಡ ಕಲಿಸಿರಿ, ಬೆಳೆಸಿರಿ ಉಳಿಸಿರಿ ಎಂದು ಬೇರೆಯವರಿಗೆ ಹೇಳುತ್ತಾರೆ. ಗ್ರಾಮೀಣ ಪ್ರದೇಶದ ದಲಿತರು ಬಡವರು ಮಾತ್ರ ಕನ್ನಡ ಉಳಿಸಿ ಬೆಳೆಸಬೇಕೆ? ಅವರೇಕೆ ಇಂಗ್ಲಿಷ್ ಕಲಿಯಬಾರದು, ದಲಿತರು ಗ್ರಾಮೀಣರು ಮಾತ್ರ ಭಾಷೆ ಸಂಸ್ಕೃತಿಯನ್ನು ಉಳಿಸುವರಾಗಬೇಕೇ? ಉಳಿದವರು ಜಾಗತೀಕರಣದ ಎಲ್ಲ ಸುಖ ಭೋಗಗಳನ್ನು ಪಡೆದು ಸುಖವಾಗಿರಬೇಕೆ? ಇದು ಸ್ವಾರ್ಥವಲ್ಲವೇ? ಸಮಾಜದ ಅಂಚಿನಲ್ಲಿರುವ ಜನರು ಮಾತ್ರ ಸಂಸ್ಕೃತಿ ಭಾಷೆಯ ವಾರಸುದಾರರಾಗಿ ಅದನ್ನು ಕಾಪಾಡುವ ಕೆಲಸ ಮಾಡಬೇಕು ಎನ್ನುವುದು ಬೆಳೆಸುವುದು ಯಾವುದೋ ಒಂದು ಗುಂಪಿನ ಜವಾಬ್ದಾರಿಯಲ್ಲ, ಅದು ಎಲ್ಲರ ಕರ್ತವ್ಯವಾಗಬೇಕು.

ಇಷ್ಟೆಲ್ಲ ಸಮಸ್ಯೆಗಳನ್ನು ನಾವೇಕೆ ಎದುರಿಸುತ್ತಿದ್ದೇವೆ, ಎನ್ನುವುದು ಬಹಳ ಮುಖ್ಯ ಹಲವು ಸಂಸ್ಕೃತಿಗಳ ಮಧ್ಯ ಇರುವ ನಾವು ಏಕರೂಪದ ಸಾಂಸ್ಕೃತಿಕ ಪಥ್ಯ ಹೊಂದಿಲ್ಲದಿರುವುದು ಒಂದು ಕಾರಣ, ನಮ್ಮಲ್ಲಿರುವ ರಾಮಾಯಣ, ಮಹಾಭಾರತಗಳು ಸಹ ನಮ್ಮ ಸಮಾಜದ ಒಂದೊಂದು ಗುಂಪಿನ ಸಂಸ್ಕೃತಿಗಳಾಗಿವೆ. ಇಂತಹ ಗುಂಪುಗಳು ಇರುವುದರಿಂದಲೇ ಹೊರಗಿನ ಯಾವುದೇ ರೀತಿಯ ಆಕ್ರಮಣಗಳನ್ನು ಸಮಾನವಾಗಿ ಎದುರಿಸಲು ನಮ್ಮಿಂದ ಸಾಧ್ಯವಾಗಿಲ್ಲ.

ಹೀಗಾಗಿ ಆಧುನಿಕ ಜಾಗತೀಕರಣದಿಂದ ದೂರದಲ್ಲಿರುವವರು ಹತ್ತಿರವಾಗುತ್ತಿದ್ದಾರೆ ನಮ್ಮ ಹತ್ತಿರದಲ್ಲಿರುವವರು ದೂರವಾಗುತ್ತಿದ್ದಾರೆ ಎನ್ನುವುದು ನಮ್ಮ ಗಮನಕ್ಕೆ ಬರುತ್ತಿಲ್ಲ. ವಿದೇಶದ ಅಥವಾ ದೂರದಲ್ಲಿರುವ ಹಿಂದುಗಳಿಗೆ ಏನಾದರು ಆದರೆ ಇಲ್ಲಿಯ ಹಿಂದುಗಳು ಪ್ರತಿಭಟನೆ ಮಾಡುತ್ತಾರೆ, ಆದರೆ ನಮ್ಮ ನಡುವೆ ಇರುವ ದಲಿತರನ್ನು ಕಂಬಾಲಪಲ್ಲಿಯಲ್ಲಿ ದಹಿಸಿದಾಗ ಆ ಕುರಿತು ನಾವು ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ. ಈ ಕುರಿತು ಯಾವ ಹಿಂದುಗಳು ಮರುಕಪಡುವುದಿಲ್ಲ. ಜಗತ್ತಿನ ಯಾವುದೇ ಮುಸ್ಲಿಮರಿಗೆ ಏನಾದರೂ ಆದಾಗ ಉಗ್ರವಾಗಿ ಪ್ರತಿಭಟಿಸುತ್ತಾರೆ. ತಮ್ಮ ಪಕ್ಕದ ದಲಿತರು ದಹಿಸಲ್ಪಟ್ಟಾಗ, ಅವಮಾನಕ್ಕೀಡಾದಾಗ ಚಕಾರವೆತ್ತದೆ ಸುಮ್ಮನಿರುತ್ತಾರೆ. ಹೀಗಿರುವಾಗ ಯಾರು ಯಾರ ಸಂಸ್ಕೃತಿ ಉಳಿಸಬೇಕು ಬೆಳೆಸಿಕೊಂಡು ಹೋಗಬೇಕು ಎನ್ನುವುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಆ ಪ್ರಶ್ನೆಯನ್ನು ಪರಿಹರಿಸಿಕೊಳ್ಳುವಲ್ಲಿ ಪೂರಕವಾಗುವ ದೃಷ್ಟಾಂತವೊಂದನ್ನು ನೋಡಬಹುದು.

ಕಾಡಿನಲ್ಲಿದ್ದ ಹುಲಿಯೊಂದು ಎಲ್ಲ ಪ್ರಾಣಿಗಳನ್ನು ಸೋಲಿಸಿ ಪರಾಕ್ರಮವನ್ನು ಮೆರೆಯುತ್ತ ನನ್ನನ್ನು ಸೋಲಿಸುವವರು ಯಾರೂ ಇಲ್ಲವೆಂದು ಹೇಳಿಕೊಳ್ಳುತ್ತಿತ್ತು. ಏಕಾಏಕಿ ಊರ ಹಂದಿಯೊಂದು ಕಾಡಿಗೆ ಹೋಗಿತ್ತು, ಹುಲಿಯನ್ನು ಎದುರುಗೊಂಡಾಗ ಸಂಭಾಷಣೆ ನಡೆದು ಹಂದಿಗೂ ಹುಲಿಗೂ ಕಾದಾಟ ನಿಗಧಿಯಾಯಿತು. ಕಾಡಿನಿಂದ ಊರಿಗೆ ಮರಳಿ ಬಂದ ಹಂದಿ ತನ್ನ ಸಹಪಾಠಿಗಳಲ್ಲಿ ನಡೆದ ವಿಷಯವನ್ನು ಹೇಳಿ ಅವರಿಂದ ಸಲಹೆಯನ್ನು ಕೇಳಿತು. ಆಗ ಊರಿನ ಎಲ್ಲ ಹಂದಿಗಳು ಪಂದ್ಯೆ ಕಟ್ಟಿದ ಹಂದಿಗೆ ನೀನು ಹುಲಿಯ ಜೊತೆ ಪಂದ್ಯ ಕಟ್ಟಿದ್ದು ಸರಿಯಾದ ಕ್ರಮವಲ್ಲ. ಹುಲಿ ನಿನ್ನನ್ನು ತಿಂದುಹಾಕುತ್ತದೆ. ನೀನು ತಪ್ಪು ಮಾಡಿದೆ ಎಂದು ಹೇಳಿದವು. ರಾತ್ರಿಯೆಲ್ಲ ವಿಚಾರ ಮಾಡಿದ ಹಂದಿ ನಿಗದಿಯಾದ ಸಮಯಕ್ಕೆ ಪಂದ್ಯದ ಸ್ಥಳಕ್ಕೆ ಬಂದಿತು. ಕಾಡಿನ ಹಾಗೂ ಊರಿನ ಎಲ್ಲ ಪ್ರಾಣಿಗಳು ಸೇರಿದ್ದವು. ಇನ್ನೇನು ಆಖಾಡಕ್ಕೆ ಇಳಿದಾಗ ಹಂದಿ ಸತ್ತೇ ಹೋಯಿತು. ಎಂದು ಎಲ್ಲ ಪ್ರಾಣಿಗಳು ಮಾತಾಡಿಕೊಳ್ಳುತ್ತಿದ್ದವು, ಹುಲಿಯು ಹಂದಿಯನ್ನು ಎದರುರುಗೊಂಡಾಗ ಹಂದಿಯು ಮೈಯಲ್ಲಿ ಹೇಸಿಗೆ ಲೇಪನವಾಗಿತ್ತು ಅದನ್ನು ನೋಡಿದ ಹುಲಿ ನೀನು ಹೀಗಿರುವುದಾದರೆ ನಾನು ನಿನ್ನೊಂದಿಗೆ ಯುದ್ಧ ಮಾಡಲಾರೆ ನನ್ನಿಂದ ಈ ಯುದ್ಧ ಸಾಧ್ಯವಿಲ್ಲ ಸೋತೆನೆಂದು ಹೇಳಿ ಅಖಾಡದಿಂದ ವಾಪಸ್ಸಾಯಿತು.

ಸಾಂಪ್ರದಾಯಿಕವಾದ ನೆಲೆಯಲ್ಲಿ ವಿಚಾರ ಮಾಡುವಾಗ ಹಂದಿಯೆಂದರೆ ಕನಿಷ್ಟವೆಂದು ಭಾವಿಸುತ್ತೇವೆ, ಲೌಕಿಕವಾಗಿ ಮಾತನಾಡುವಾಗ ನಿಂದಕರಿರಬೇಕು ಹಂದಿಯಾಂಗ ಎಂದು ದಾಸರು ಹೇಳಿದ್ದಾರೆ. ಅಲೌಕಿಕವಾಗಿ ಮಾತನಾಡುವಾಗ ಅದನ್ನು ವರಾಹವತಾರವೆಂದು ಹೇಳುತ್ತೇವೆ. ಇಲ್ಲಿ ಹಂದಿಯನ್ನು ಕೀಳೆಂದಾಗಲಿ, ಕನಿಷ್ಟವೆಂದಾಗಲಿ ಭಾವಿಸುವುದು ಹಿತವಲ್ಲ. ಹುಲಿರೂಪದ ಜಾಗತೀಕರಣವನ್ನು ಎದುರಿಸಬೇಕಾದರೆ ನಮ್ಮಲ್ಲಿಯ ಅಸಮಾನ ವ್ಯವಸ್ಥೆಯನ್ನು ದೂರ ಮಾಡಿ ನಮ್ಮ ಸಂಸ್ಕೃತಿಯನ್ನು, ಭಾಷೆಯನ್ನು ಗೌರವಿಸುವ ಮೂಲಕ ಜಾಗತೀಕರಣವನ್ನು ಎದುರಿಸಬೇಕಾಗಿದೆ. ನಮ್ಮ ಭಾಷೆ, ಕಲೆ, ಸಂಸ್ಕೃತಿಗೆ ಅಂಟಿಕೊಂಡಿರುವ ಕೀಳರಿಮೆಯನ್ನು ಹಾಗೂ ಆಂತರಿಕ ಶ್ರೇಷ್ಠ-ಕನಿಷ್ಠ ಭಾವವನ್ನು ತೊರೆದಾಗ ಮಾತ್ರ ನಮ್ಮದನ್ನು ಉಳಿಸಿಕೊಳ್ಳಲು ಸಾಧ್ಯವಾದೀತು.

ಇಷ್ಟು ವಿಷಯವನ್ನು ಮಾತಾಡಿ ವೇದಿಕೆಯ ನನ್ನ ಆಸನದ ಮೇಲೆ ಕುಳಿತುಕೊಳ್ಳುವಷ್ಟರಲ್ಲಿ ಬಿಜೆಪಿಯ ಮಾಜಿ ಮಂತ್ರಿ ವಿ.ಎಸ್. ಆಚಾರರ್ಯ ಸಿಡಿಮಿಡಿಗೊಂಡು ಉಡುಪಿ ಕೃಷ್ಣ ಮಠದ ಬಗ್ಗೆ ಮಾಹಿತಿ ಇಲ್ಲದೆ ನೀವು ಮಾತಾಡುತ್ತಿದ್ದೀರಿ ಎಂದು ನನ್ನೊಂದಿಗೆ ವಾದಕ್ಕೆ ಇಳಿದರು. ಇದು ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯ ನೀವು ಪ್ರಶ್ನೆ ಮಾಡುವಹಾಗಿಲ್ಲ ಎಂದು ಹೇಳಿದೆ ಹಾಗಂತ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎಂದು ನಾನು ತಪ್ಪೇನು ಹೇಳಿರಲಿಲ್ಲ. ಗುಡಿಯಲ್ಲಿ ಸಮಾನ ಅವಕಾಶವಿಲ್ಲವೆಂದು ಪ್ರತಿಪಾದಿಸಿದ್ದೆ. ಅಷ್ಟರಲ್ಲಿ ಅಲ್ಲಿಯೇ ಇದ್ದ ಚಂಪಾ ಅವರು ನೋಡಿ ಆಚಾರ್ಯರೆ ಇದು ಒಂದು ಸಂಘದ ವೇದಿಕೆಯಲ್ಲ ಸಾರ್ವಜನಿಕರ ವೇದಿಕೆ, ನೀವು ಅವರಿಗೆ ಪ್ರಶ್ನೆ ಮಾಡುವಂತಿಲ್ಲವೆಂದು ಹೇಳಿದರು. ಆಚಾರ್ಯರ ಮೂಲಭೂತವಾದ ನನಗೆ ಬೇಸರ ತಂದಿತು. ಅಷ್ಟರಲ್ಲಿ ವೇದಿಕೆಯ ಮೇಲಿದ್ದ ಜವಾಬ್ದಾರಿಯುತ ವ್ಯಕ್ತಿಯೊಬ್ಬರು ನನಗೊಂದು ಚೀಟಿ ರವಾನಿಸಿದರು. ಅದರಲ್ಲಿ ಹೀಗೆ ಬರೆದಿತ್ತು. ಡಾ॥ ಪೋತೆ ಸರ್. ಅವರೆ ನಿಮ್ಮವಾದ, ವಿಚಾರ, ಮಂಡನೆ ಅತ್ಯಂತ ನಿಖರ ಹಾಗೂ ನಿರ್ಧಿಷ್ಟವಾಗಿತ್ತು, ಶ್ರೀಕೃಷ್ಣ ದೇವಾಲಯದ ಬಗ್ಗೆ ಹೇಳಿದಾಗ ಜನಿವಾರ ನೋಡುವ ಸಲುವಾಗಿ "ಬಟ್ಟೆ ಬಿಚ್ಚಿ ದರ್ಶನಕ್ಕೆ ಬನ್ನಿ" ಅನ್ನುವ ಹೀನ ಪದ್ಧತಿಯನ್ನು ಉದ್ಧರಿಸಬೇಕಾಗಿತ್ತು. ತುಂಬಾ, ತಂಬಾ ಧನ್ಯವಾದಗಳು (ಮಾನಸ: ಅಧ್ಯಕ್ಷರು ಮೈಸೂರು ಜಿಲ್ಲಾ ಕಸಾಪ) ಮಂತ್ರಾಲಯವನ್ನೊಳಗೊಂಡಂತೆ ನಾಡಿನ ವೈದಿಕ ಸಂಸ್ಕೃತಿಯ ಅನೇಕ ದೇವಾಲಯಗಳಲ್ಲಿ ಈ ಪದ್ಧತಿ ಚಾಲ್ತಿಯಲ್ಲಿದೆ, ಇದಕ್ಕೆ ವಿ.ಎಸ್. ಆಚಾರ್ಯರು ಏನು ಹೇಳುತ್ತಾರೆ. ಈ ತರಹದ ಮೂಲಭೂತವಾದಿಗಳು ಇರುವುದರಿಂದಲೇ ಸಾಂಸ್ಕೃತಿಕವಲಯ ತಲ್ಲಣಗೊಳ್ಳುತ್ತಿರುವುದನ್ನು ಕಾಣುತ್ತೇವೆ.

* ಉಡುಪಿಯಲ್ಲಿ (ಡಿಸೆಂಬರ್, ೧೨, ೧೩, ೧೪, ೧೫,) ನಡೆದ ೭೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಜಾಗತೀಕರಣ ಮತ್ತು ಕರ್ನಾಟಕ ಗೋಷ್ಠಿಯಲ್ಲಿ ಮಂಡಿಸಿದ ಸಾಂಸ್ಕೃತಿಕವಲಯ ಪ್ರಬಂಧದ ವಿಸ್ತೃತ ರೂಪವೆ ಜಾಗತೀಕರಣ ಮತ್ತು ಸಾಂಸ್ಕೃತಿಕ ತಲ್ಲಣಗಳು.

* ಜಾಗತೀಕರಣ ಮತ್ತು ಸಾಂಸ್ಕೃತಿಕ ತಲ್ಲಣಗಳು ಲೇಖನ ಸಿದ್ಧ ಪಡಿಸುವಾಗ (ಪ್ರೊ॥ ಬರಗೂರ, ಡಾ॥ ಕೇಶವ ಶರ್ಮಾ, ಡಾ॥ ರಹಮತ್ ತರೀಕೆರೆ, ಡಾ॥ ರಂಗಾರೆಡ್ಡಿ ಕೋಡಿ ರಾಂಪೂರ, ಡಾ॥ ರಂಗರಾಜ ವನದುರ್ಗ, ಡಾ॥ ಅಮರೇಶ ನುಗಡೋಣಿ) ಡಾ॥ ದಸ್ತಗೀರ ಸಾಬ್ ದಿನ್ನಿ ಸಂಪಾದಿಸಿದ ಜಾಗತೀಕರಣದ ಮತ್ತು ಸಂಸ್ಕೃತಿ ಪುಸ್ತಕದ ನೆರವು ಪಡೆದಿದ್ದೇನೆ. □

> **ಕೃಷ್ಣಮಠ ತೀರ ಸಾಂಪ್ರದಾಯಿಕವಾದುದು, ಇಲ್ಲಿ ದಲಿತರಿಗೆ ಶೋಷಿತರಿಗೆ ದೇವಾಲಯದ ವರಾಂಡದಲ್ಲಿ ಪ್ರವೇಶವಿರಬಹುದು ಆದರೆ ಇತರರಂತೆ ಸಮಾನ ಅವಕಾಶಗಳು ಖಂಡಿತ ಇಲ್ಲವೆಂದು ಬೇರೆ ಬೇರೆ ಹೇಳಬೇಕಾಗಿಲ್ಲ, ಆವರಣದಲ್ಲಿ ದಲಿತ ಶೋಷಿತರ ಕಲಾ ಪ್ರದರ್ಶನಕ್ಕೆ ಅವಕಾಶವಿಲ್ಲ, ಅವರ ಕಲೆ ಸಂಸ್ಕೃತಿಯನ್ನು ಈ ದೇವಾಲಯ ಸಂಸ್ಕೃತಿ ವಿರೋಧಿಸುತ್ತದೆ. ಅಸ್ಪೃಶ್ಯರಂತೆ ದೂರವಿಡುತ್ತದೆ ಇದೊಂದು ರೀತಿಯ ಮೂಲಭೂತವಾದದ ಪ್ರದರ್ಶನವೆಂದೇ ಹೇಳಬಹುದು. ಆಧುನಿಕತೆ, ಜಾಗತೀಕರಣ, ಉದಾರೀಕರಣ ನೀತಿಗಳು ಬಂದರೂ ಇಲ್ಲಿಯ ಮಡಿವಂತರ ಸಂಪ್ರದಾಯ ಬದಲಾಗಿಲ್ಲ, ಇನ್ನು ಆಧುನಿಕ ಯುಗದಲ್ಲಿ ನಿರ್ಮಾಣಗೊಂಡ ಇಸ್ಕಾನ್ ದೇಗುಲದಲ್ಲಿಯೂ ದಲಿತರು ಉಪೇಕ್ಷಿತರೆ. ಇಲ್ಲಿ ಬಂಡವಾಳ ಶಾಹಿಗಳಿಗೆ ಹಣವಿದ್ದವರಿಗೆ ಮಾತ್ರ ಸಮಾನ ಪ್ರವೇಶ ಅವಕಾಶ ಇರುವುದನ್ನು ಕಾಣುತ್ತೇವೆ.**

ಗೊಂದಲಗಳ ಸುಳಿಯಲ್ಲಿ ಟಿಬೆಟ್

ನಾ ದಿವಾಕರ

ಟಿಬೆಟ್‌ನಲ್ಲಿ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಗಲಭೆಗಳು ಚೀನಾದ ಕಮ್ಯುನಿಸ್ಟ್ ಸರ್ಕಾರಕ್ಕೆ ಮಾತ್ರವಲ್ಲದೆ ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿಗಳಿಗೂ ಸಾಕಷ್ಟು ಆತಂಕ ಹುಟ್ಟಿಸಿದೆ. ಚೀನಾದಲ್ಲಿ ಒಲಂಪಿಕ್ ಕ್ರೀಡೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಬಂಡವಾಳಶಾಹಿ ರಾಷ್ಟ್ರಗಳಿಗೆ ಟಿಬೆಟ್ ಜನತೆಯ ಹೋರಾಟಗಳು ಅನಗತ್ಯ ತೊಡಕು ಎನಿಸಿದರೆ, ಚೀನಾದ ಕಮ್ಯುನಿಸ್ಟ್ ಸರ್ಕಾರವನ್ನು ಟೀಕಿಸಲು ಪ್ರಸ್ತುತ ಸನ್ನಿವೇಶ ಒಂದು ಸುಸಂದರ್ಭವನ್ನು ಒದಗಿಸಿವೆ. ಮಾನವ ಹಕ್ಕುಗಳ ಉಲ್ಲಂಘನೆಯಲ್ಲಿ ಚೀನಾಗೆ ಅಗ್ರಸ್ಥಾನ ನೀಡಿದ್ದ ಅಮೆರಿಕಾ ಆ ಪಟ್ಟಿಯಿಂದ ಚೀನಾವನ್ನು ಹೊರತುಪಡಿಸಿದ ಕೆಲವೇ ದಿನಗಳಲ್ಲಿ ಟಿಬೆಟ್‌ನ ಅಮಾಯಕ ಜನತೆಯ ವಿರುದ್ಧ ಬೀಜಿಂಗ್ ಸರ್ಕಾರ ತನ್ನ ರೌದ್ರಾವತಾರ ಪ್ರದರ್ಶಿಸಿರುವುದು ಒಂದು ರೀತಿಯ ವಿಡಂಬನೆ ಎಂದೇ ಹೇಳಬಹುದು. ಚೀನಾ ಟಿಬೆಟ್ ದೇಶವನ್ನು ಆಕ್ರಮಿಸಿ ಹಲವಾರು ದಶಕಗಳೇ ಕಳೆದರೂ, ಅಲ್ಲಿನ ಜನಗಳ ಪ್ರಜಾತಾಂತ್ರಿಕ ಆಶಯಗಳನ್ನು ತನ್ನ ಸೈನ್ಯಬಲದಿಂದಲೇ ಹತ್ತಿಕ್ಕುವ ಚೀನಾ ಸರ್ಕಾರದ ಕ್ರಮ ಖಂಡನೀಯ. ಆದರೆ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಟಿಬೆಟ್‌ನ ಜನತೆಗಿಂತಲೂ ಬೀಜಿಂಗ್‌ನಲ್ಲಿ ನಡೆಯಲಿರುವ ಒಲಂಪಿಕ್ಸ್ ಕ್ರೀಡೆಗಳ ಬಗ್ಗೆ ಹೆಚ್ಚು ಚಿಂತಿತರಾಗಿದ್ದಾರೆ. ಏಕೆಂದರೆ ಒಲಂಪಿಕ್ಸ್ ಎಂದರೆ ಕೋಟ್ಯಾಂತರ ರೂಗಳ ವ್ಯವಹಾರವಾಗಿದ್ದು, ಜಾಗತಿಕ ಮಟ್ಟದ ಕಾರ್ಪೋರೇಟ್ ಉದ್ಯಮಿಗಳಿಗೆ ಬಂಗಾರದ ಗಣಿಯಂತಾಗಿರುತ್ತಧೆ. ಹಾಗಾಗಿಯೇ ಚೀನಾದ ಆಕ್ರಮಣಕಾರಿ ನೀತಿಯ ಹೊರತಾಗಿಯೂ ಯಾವುದೇ ದೇಶಗಳು ಒಲಂಪಿಕ್ಸ್ ಕ್ರೀಡೆಗಳನ್ನು ಬಹಿಷ್ಕರಿಸುವ ಬಗ್ಗೆ ಚಕಾರ ಎತ್ತುತ್ತಿಲ್ಲ.

ಚೀನಾ ಸರ್ಕಾರವು ಒಲಂಪಿಕ್ಸ್ ಕ್ರೀಡೆಗಳ ಹಿನ್ನೆಲೆಯಲ್ಲೇ ಟಿಬೆಟ್‌ನ ಹೋರಾಟಗಳನ್ನು ಉಗ್ರವಾಗಿ ಹತ್ತಿಕ್ಕುತ್ತಿರುವುದು ಸ್ಪಷ್ಟವಾಗಿದೆ. ೧೯೫೧ರಲ್ಲಿ ಟಿಬೆಟ್ ಪ್ರಾಂತವನ್ನು ಆಕ್ರಮಿಸಿಕೊಂಡ ದಿನದಿಂದಲೂ ಚೀನಾದ ಆಳುವ ವರ್ಗಗಳು ಅಲ್ಲಿನ ಜನರ ವಿಮೋಚನಾ ಚಳವಳಿಗಳನ್ನು ದಮನಿಸುತ್ತಲೇ ಬಂದಿರುವುದನ್ನು ಗಮನಿಸಬಹುದು. ಟಿಬೆಟ್‌ನಲ್ಲಿ ಪ್ರತಿಬಾರಿ ಗಲಭೆಗಳು ನಡೆದಾಗಲೂ ದಲಾಯಿಲಾಮಾರವರನ್ನು ದೂಷಿಸುವುದು ಚೀನಾದ ಪರಿಪಾಠವಾಗಿದೆ. ಆದರೆ ಟಿಬೆಟ್‌ನಲ್ಲಿ, ಸ್ವಾಯತ್ತ ಟಿಬೆಟ್ ಪ್ರಾಂತದಲ್ಲಿ ಈ ಬಾರಿ ನಡೆಯುತ್ತಿರುವ ಹೋರಾಟಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅಲ್ಲಿನ ಜನತೆ ಚೀನಾದ ದಮನಕಾರಿ ಪ್ರವೃತ್ತಿಯ ಬಗ್ಗೆ ಆಕ್ರೋಶಭರಿತರಾಗಿರುವುದು ಸ್ಪಷ್ಟವಾಗುತ್ತದೆ. ೧೯೮೭-೮೯ರಲ್ಲಿ ನಡೆದ ಜನಾಂದೋಲನವು ಲಾಸಾ ಮತ್ತಿತರ ಬೌದ್ಧ ವಿಹಾರಗಳಿಗೆ ಸೀಮಿತವಾಗಿತ್ತು. ಆದರೆ ಪ್ರಸ್ತುತ ಪ್ರತಿಭಟನೆಗಳು ಟಿಬೆಟ್‌ನ ಎಲ್ಲ ಪ್ರಾಂತಗಳಿಗೂ ವ್ಯಾಪಿಸಿವೆ. ಬೀಜಿಂಗ್‌ನಲ್ಲೂ ಸಹ ಟಿಬೆಟ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದಾರೆ. ಇತ್ತ ಭಾರತದಲ್ಲಿ ನಿರಾಶ್ರಿತರಂತೆ ಇರುವ ಟಿಬೆಟ್ ಜನತೆಯೂ ತಮ್ಮದೇ ಆದ ರೀತಿಯಲ್ಲಿ ಪ್ರತಿಭಟಿಸುತ್ತಿದ್ದಾರೆ.

ಚೀನಾದ ಸಮರ್ಥನೆ

ಟಿಬೆಟ್‌ನಲ್ಲಿ ತನ್ನ ಆಳ್ವಿಕೆಯನ್ನು ಸಮರ್ಥಿಸಿಕೊಳ್ಳಲು ಚೀನಾ ಸರ್ಕಾರವು ಶತಪ್ರಯತ್ನ ಮಾಡುತ್ತಿರುವಂತೆಯೇ ವಿಶ್ವದ ನಾನಾ ದೇಶಗಳಿಗೆ ವ್ಯಾಪಿಸಿರುವ ಟಿಬೆಟ್ ಜನತೆಯ ಹೋರಾಟಗಳು ಚೀನಾದ ಆಕ್ರಮಣಕಾರಿ ನೀತಿಗಳನ್ನು ಬಹಿರಂಗಗೊಳಿಸುತ್ತಿವೆ. ತನ್ನ ಆಳ್ವಿಕೆಯನ್ನು ಸಮರ್ಥಿಸಿಕೊಳ್ಳಲು ಚೀನಾ ಸರ್ಕಾರವು ಆರ್ಥಿಕ ಅಭಿವೃದ್ಧಿಯ ಅನೇಕ ಅಂಶಗಳನ್ನು ಪ್ರಸ್ತಾಪಿಸುತ್ತದೆ. ೨೦೦೭ರಲ್ಲಿ ಚೀನಾದ ಆರ್ಥಿಕ ಅಭಿವೃದ್ಧಿಯ ಪ್ರಮಾಣ ಶೇ ೧೧.೪ರಷ್ಟಿದ್ದರೆ ಟಿಬೆಟ್ ೧೩.೪ರಷ್ಟು ಪ್ರಗತಿ ಹೊಂದಿದೆ, ಟಿಬೆಟ್‌ನ ಜನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಹೆಚ್ಚು ಸುಧಾರಣೆಗಳನ್ನು ಕಂಡಿದೆ, ಜನಸಂಖ್ಯಾ ಬೆಳವಣಿಗೆಯಲ್ಲಿ ಟಿಬೆಟ್ ಉತ್ತಮ ನಿಯಂತ್ರಣ ಸಾಧಿಸಿದೆ, ಸ್ವಾಯತ್ತ ಟಿಬೆಟ್ ಪ್ರಾಂತದಲ್ಲಿ ಮುಕ್ತ ರಾಜಕೀಯ ವಾತಾವರಣವಿದೆ, ೧೯೫೬ ಕಿಲೋಮೀಟರ್ ದೂರದ ಕ್ವಿಂಗೈ-ಟಿಬೆಟ್ ರೈಲು ಮಾರ್ಗವು ಟಿಬೆಟ್‌ನ ಸಂಪರ್ಕ ಮಾರ್ಗವನ್ನು ಅಭಿವೃದ್ಧಿಗೊಳಿಸಿದೆ

ತನ್ನ ಆಳ್ವಿಕೆಯನ್ನು ಸಮರ್ಥಿಸಿಕೊಳ್ಳಲು ಚೀನಾ ಸರ್ಕಾರವು ಆರ್ಥಿಕ ಅಭಿವೃದ್ಧಿಯ ಅನೇಕ ಅಂಶಗಳನ್ನು ಪ್ರಸ್ತಾಪಿಸುತ್ತದೆ. ೨೦೦೭ ರಲ್ಲಿ ಚೀನಾದ ಆರ್ಥಿಕ ಅಭಿವೃದ್ಧಿಯ ಪ್ರಮಾಣ ಶೇ ೧೧.೪ರಷ್ಟಿದ್ದರೆ, ಟಿಬೆಟ್ ೧೩.೪ರಷ್ಟು ಪ್ರಗತಿ ಹೊಂದಿದೆ. ಟಿಬೆಟ್‌ನ ಜನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಹೆಚ್ಚು ಸುಧಾರಣೆಗಳನ್ನು ಕಂಡಿದೆ. ಜನಸಂಖ್ಯಾ ಬೆಳವಣಿಗೆಯಲ್ಲಿ ಟಿಬೆಟ್ ಉತ್ತಮ ನಿಯಂತ್ರಣ ಸಾಧಿಸಿದೆ. ಸ್ವಾಯತ್ತ ಟಿಬೆಟ್ ಪ್ರಾಂತದಲ್ಲಿ ಮುಕ್ತ ರಾಜಕೀಯ ವಾತಾವರಣವಿದೆ. ೧೯೫೬ ಕಿಲೋಮೀಟರ್ ದೂರದ ಕ್ವಿಂಗೈ-ಟಿಬೆಟ್ ರೈಲುಮಾರ್ಗವು ಟಿಬೆಟ್‌ನ ಸಂಪರ್ಕ ಮಾರ್ಗವನ್ನು ಅಭಿವೃದ್ಧಿಗೊಳಿಸಿದೆ- ಇವೇ ಮುಂತಾದ ಪ್ರತಿಪಾದನೆಗಳನ್ನು ಚೀನಾ ಮಂಡಿಸುತ್ತದೆ. ಈ ವಾದದಲ್ಲಿ ಸತ್ಯಾಂಶವಿಲ್ಲವೆಂದು ಹೇಳಲಾಗುವುದಿಲ್ಲ. ಕಳೆದ ಏಳು ವರ್ಷಗಳಿಂದ ಟಿಬೆಟ್‌ನ ಆರ್ಥಿಕತೆ ಸರಾಸರಿ ಶೇ ೧೨ರಷ್ಟು ಪ್ರಗತಿ ಸಾಧಿಸುತ್ತಿದೆ.

ಇವೇ ಮುಂತಾದ ಪ್ರತಿಪಾದನೆಗಳನ್ನು ಚೀನಾ ಮಂಡಿಸುತ್ತದೆ. ಈ ವಾದದಲ್ಲಿ ಸತ್ಯಾಂಶವಿಲ್ಲವೆಂದು ಹೇಳಲಾಗುವುದಿಲ್ಲ. ಕಳೆದ ಏಳು ವರ್ಷಗಳಿಂದ ಟಿಬೆಟ್‌ನ ಆರ್ಥಿಕತೆ ಸರಾಸರಿ ಶೇ ೧೨ರಷ್ಟು ಪ್ರಗತಿ ಸಾಧಿಸುತ್ತಿದೆ. ಅಲ್ಲಿನ ಜನತೆಯ ಶಿಕ್ಷಣದ ಗುಣಮಟ್ಟ, ಕುಶಲತೆ, ಜೀವನ ಮಟ್ಟ ಎಲ್ಲವೂ ಪ್ರಗತಿಪಥದಲ್ಲಿದೆ. ೨೮ ಲಕ್ಷ ಟಿಬೆಟ್‌ನ ಜನಸಂಖ್ಯೆಯ ಶೇ ೮೦ರಷ್ಟು ಜನತೆ ನೆಲೆಸಿರುವ ಗ್ರಾಮೀಣ ಪ್ರದೇಶಗಳಲ್ಲೂ ಚೀನಾ ಸರ್ಕಾರ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ರೈತಾಪಿ ಸಮುದಾಯದ ಪ್ರಗತಿಗೆ ಕಾರಣವಾಗಿದೆ.

ಟಿಬೆಟ್‌ನಲ್ಲಿ ಅಲ್ಪಸಂಖ್ಯಾತರಾಗಿರುವ ಅಲ್ಲಿನ ಮೂಲನಿವಾಸಿಗಳು ಈ ಅಭಿವೃದ್ಧಿಯ ಫಲವನ್ನು ಭೋಗಿಸುತ್ತಿಲ್ಲವೆಂಬ ಅಂಶವನ್ನು ಚೀನಾ ಸರ್ಕಾರ ಮರೆಮಾಚುತ್ತದೆ. ೧೯೫೦ರಿಂದಲೇ ಚೀನಾದ ಪ್ರಮುಖ ಜನಾಂಗವಾದ ಹಾನ್ ಸಮುದಾಯದವರು ಟಿಬೆಟ್ ಪ್ರಾಂತದಲ್ಲಿ ನೆಲೆಸಲಾರಂಭಿಸಿದ್ದು ಇಂದಿಗೂ ಈ ವಲಸೆ ಪ್ರಕ್ರಿಯೆ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಚೀನಾದಿಂದ ವಲಸೆ ಬರುತ್ತಿರುವ ಜನರು ತಮ್ಮ ಮೂಲ ಬೇರುಗಳನ್ನೇ ಅಲುಗಾಡಿಸುತ್ತಿದ್ದಾರೆ ಎಂಬ ಭಾವನೆ ಟಿಬೆಟ್‌ನ ಜನರಲ್ಲಿ ಗಾಢವಾಗಿ ಬೇರೂರಿದ್ದು, ಚೀನಾ ಸರ್ಕಾರದ ದಮನಕಾರಿ ನೀತಿಗಳು ತೀವ್ರವಾಗುತ್ತಿರುವಂತೆಲ್ಲಾ ಟಿಬೆಟ್ ರಾಷ್ಟ್ರೀಯತೆ ಹೆಚ್ಚು ವ್ಯಾಪಕತೆ ಗಳಿಸುತ್ತಿದೆ. ಟಿಬೆಟ್‌ನ ಜನತೆಯ ಈ ಆಶೋತ್ತರಗಳನ್ನು ಪ್ರಜಾತಾಂತ್ರಿಕ ನೆಲೆಗಟ್ಟಿನಲ್ಲಿ ಬಗೆಹರಿಸದೆ, ಇತರ ಪಾಶ್ಚಿಮಾತ್ಯ ದೇಶಗಳ ಕೈವಾಡವಿದೆ ಎಂದು ಹುಯಿಲೆಬ್ಬಿಸುವ ಚೀನಾದ ತಂತ್ರ ಕ್ರಮೇಣ ಹಿನ್ನಡೆ ಕಾಣುತ್ತಿದೆ. ಮಾರ್ಚ ೧೦ರಂದು ನಡೆದ ಗಲಭೆಗಳಲ್ಲಿ ಈ ಅಂಶವನ್ನು ಸ್ಪಷ್ಟವಾಗಿ ಗಮನಿಸಬಹುದಿತ್ತು. ರಾಷ್ಟ್ರೀಯ ಎಲ್ಲೆಗಳನ್ನು ಮೀರಿದ ಈ ಟಿಬೆಟ್ ರಾಷ್ಟ್ರೀಯತೆಯ ಸತ್ವವನ್ನು ಗ್ರಹಿಸುವುದರಲ್ಲಿ ಚೀನಾ ವಿಫಲವಾಗಿರುವುದು ಸ್ಪಷ್ಟವಾಗಿದೆ.

ಟಿಬೆಟ್ ರಾಷ್ಟ್ರೀಯತೆಯ ಇತಿಹಾಸ

ಚೀನಾದ ಅಧಿಕೃತ ಇತಿಹಾಸದಲ್ಲಿ ಟಿಬೆಟ್ ಪ್ರಾಂತವನ್ನು ಚೀನಾ ದೇಶದ ಒಂದು ಭಾಗವೆಂದೇ ಚಿತ್ರಿಸಲಾಗಿದೆ. ೧೯೦೪ರಲ್ಲಿ ಬ್ರಿಟಿಷ್ ಸರ್ಕಾರವು ಲಾಸಾ ಪ್ರದೇಶವನ್ನು ಆಕ್ರಮಿಸಿಕೊಂಡಾಗ ಏರ್ಪಟ್ಟ ಒಪ್ಪಂದದ ಅನ್ವಯ ಚೀನಾದ ಅಂದಿನ ಪ್ರಭುತ್ವವು ಏಳೂವರೆ ಲಕ್ಷ ಪೌಂಡ್‌ಗಳನ್ನು ಪಾವತಿ ಮಾಡಿ ಈ ಪ್ರದೇಶವನ್ನು ಕೊಂಡುಕೊಂಡಿತ್ತು ಎಂದು ಚೀನಾ ಪ್ರತಿಪಾದಿಸುತ್ತದೆ. ಏಳುನೂರು ವರ್ಷಗಳ ಇತಿಹಾಸದುದ್ದಕ್ಕೂ ಟಿಬೆಟ್ ಚೀನಾದ ಒಂದು ಭಾಗವೇ ಆಗಿದ್ದು, ಯಾವುದೇ ಕಾಲಘಟ್ಟದಲ್ಲೂ ಚೀನಾದ ಅಧಿಪತ್ಯವನ್ನು ಪ್ರಶ್ನಿಸಲಾಗಿಲ್ಲವೆಂದೂ ಪ್ರತಿಪಾದಿಸಲಾಗುತ್ತದೆ.

ಆದರೆ ಟಿಬೆಟ್‌ನ ಇತಿಹಾಸವನ್ನು ಶೋಧಿಸಿದಾಗ ವಸ್ತುಸ್ಥಿತಿ ಭಿನ್ನವಾಗಿರುವುದು ಕಂಡುಬರುತ್ತದೆ. ಕ್ರಿ. ಶ ೧೨೭ರಲ್ಲಿ ಸ್ವತಂತ್ರ ಟಿಬೆಟ್‌ನ ಪ್ರಥಮ ದೊರೆ ಇದ್ದುದನ್ನು ಇತಿಹಾಸ ದಾಖಲಿಸಿದೆ. ಕ್ರಿ.ಶ ಏಳನೇ ಶತಮಾನದಲ್ಲಿ ಸಾಂಗ್ಸಟನ್ ಗಾಂಪೋ ಎಂಬ ದೊರೆ ಟಿಬೆಟ್‌ನಲ್ಲಿ ಕೇಂದ್ರೀಕೃತ ಅಧಿಕಾರವನ್ನು ಸ್ಥಾಪಿಸಿದ್ದನೆಂದೂ ಹೇಳಲಾಗುತ್ತದೆ. ಇದೇ ಕಾಲಾವಧಿಯಲ್ಲಿ ಬೌದ್ಧ ಧರ್ಮದ ಪ್ರವೇಶದಿಂದ ಟಿಬೆಟ್‌ನಲ್ಲಿ ಧಾರ್ಮಿಕ-ಸೈದ್ಧಾಂತಿಕ ಪಲ್ಲಟಗಳೂ ಉಂಟಾಗಿದ್ದವು. ಗಡಿಯಲ್ಲಿದ್ದ ಹಾನ್ ಸಾಮ್ರಾಜ್ಯದ ಆಕ್ರಮಣಗಳಿಂದ ತಪ್ಪಿಸಿಕೊಳ್ಳಲು ಟಿಬೆಟ್‌ನ ಜನತೆ ಬೌದ್ಧ ಧರ್ಮವನ್ನು ಒಪ್ಪಿಕೊಂಡಿದ್ದರು. ಗಾಂಪೋರವರ ಆಕ್ರಮಣಶೀಲತೆ ಮತ್ತು ಉತ್ತಮ ಆಳ್ವಿಕೆಯ ಪರಿಣಾಮವಾಗಿ ಟಿಬೆಟ್‌ನ ವ್ಯಾಪ್ತಿಯೂ ಹಲವು ಶತಮಾನಗಳ ಕಾಲ ವಿಸ್ತರಿಸುತ್ತಾ ಹೋಗಿತ್ತು. ಇದೇ ಅವಧಿಯಲ್ಲೇ ಟಿಬೆಟ್‌ನ ಸೈನ್ಯ ಚೀನಾದ ರಾಜಧಾನಿ ಕ್ಷಿಯಾನ್ನು ಆಕ್ರಮಿಸಿಕೊಂಡಿತ್ತು. ಟಿಬೆಟ್‌ನ ಈ ಬೆಳವಣಿಗೆಯನ್ನು ತಡೆಗಟ್ಟಲು ಅರಬ್ ದೊರೆ ಹರೂನ್ ರಶೀದ್ ಚೀನಾದೊಡನೆ ಸೇರಿಕೊಂಡು ಟಿಬೆಟ್ ಸಾಮ್ರಾಜ್ಯದ ವಿಸ್ತಾರವನ್ನು ತಡೆಗಟ್ಟಲು ಪ್ರಾರಂಭಿಸಿದ ಎಂದು ಹೇಳಲಾಗುತ್ತದೆ.

ಕ್ರಿಸ್ತಶಕ ೧೦ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೆ ಗಾಂಪೋನ ವಂಶಜರೇ ಟಿಬೆಟ್ ದೇಶವನ್ನು ಆಳಿದ್ದಲ್ಲದೆ ಬೌದ್ಧ ಧರ್ಮದ ಫಲವಾಗಿ ಲಾಮಾ ಸಂಸ್ಕೃತಿ ಜನ್ಮ ತಾಳುವುದಕ್ಕೂ ಕಾರಣವಾಗಿದ್ದರು. ಈ ಅವಧಿಯಲ್ಲಿ ಬೌದ್ಧ ಭಿಕ್ಕುಗಳು ಪ್ರತಿಷ್ಠಿತ ಸ್ಥಾನಮಾನಗಳನ್ನು ಪಡೆದಿದ್ದರು. ಕ್ರಿ.ಶ ೧೨೪೭ರಿಂದ ೧೩೫೦ರವೆಗೆ ಟಿಬೆಟ್ ದೇಶವನ್ನು ಸಾಕ್ಯ ಲಾಮಾ ವಂಶಜರು ಆಳುತ್ತಿದ್ದರು. ಇದಕ್ಕೂ ಮುನ್ನ ಕ್ರಿ.ಶ ೧೨೦೭ರಲ್ಲಿ ಮಂಗೋಲದ ದೊರೆ ಛಂಗೀಸ್‌ಖಾನ್ ಟಿಬೆಟ್ಟನ್ನು ಆಕ್ರಮಿಸಿಕೊಂಡ ನಂತರ ಅವನ ಉತ್ತರಾಧಿಕಾರಿ ಕುಬ್ಲೇ ಖಾನ್ ಬೌದ್ಧ ಧರ್ಮವನ್ನು ಸ್ವೀಕರಿಸಿ , ಟಿಬೆಟ್‌ನ ಅತ್ಯುನ್ನತ ಸ್ಥಾನಕ್ಕೆ ಲಾಮಾಗಳನ್ನು ನೇಮಿಸುವ ಪರಂಪರೆಯನ್ನು ಪ್ರಾರಂಭಿಸಿದ್ದ. ಕ್ರಿ.ಶ. ೧೨೮೦ರ ವೇಳೆಗೆ ಮಂಗೋಲಿಯನ್ನರು ಟಿಬೆಟ್ಟನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿದ್ದೇ ಅಲ್ಲದೆ ಚೀನಾವನ್ನು ಆಕ್ರಮಿಸಿಕೊಂಡಿದ್ದರು. ೧೩೫೮ರಲ್ಲಿ ಟಿಬೆಟ್ ಮಂಗೋಲ್ ಸಾಮ್ರಾಜ್ಯದಿಂದ ಸ್ವಾತಂತ್ರ್ಯವನ್ನು ಗಳಿಸಿತ್ತು. ಈ ಬೆಳವಣಿಗೆಗಳ ಹಿನ್ನೆಲೆಯಲ್ಲೇ ೧೫೭೮ರಲ್ಲಿ ದಲಾಯಿಲಾಮಾ ಪರಂಪರೆಯನ್ನು ಮಂಗೋಲರ ದೊರೆ ಸೋನಂಗ್ಯಸ್ಟೋ ಪ್ರಾರಂಭಿಸಿದ. ೧೬೪೦ರಲ್ಲಿ ಮಂಗೋಲರು ಪುನಃ ಟಿಬೆಟ್ಟನ್ನು ಆಕ್ರಮಿಸಿಕೊಂಡರು. ಈ ಅವಧಿಯಲ್ಲಿ ದಲಾಯಿಲಾಮಾ ಪರಂಪರೆಗೆ ಒಂದು ಆಧ್ಯಾತ್ಮಿಕ ಉನ್ನತ ಸ್ಥಾನವನ್ನು ನೀಡಲಾಗಿತ್ತು.

ಚೀನಾದ ಅಧಿಕೃತ ಇತಿಹಾಸದಲ್ಲಿ ಟಿಬೆಟ್ ಪ್ರಾಂತವನ್ನು ಚೀನಾ ದೇಶದ ಒಂದು ಭಾಗವೆಂದೇ ಚಿತ್ರಿಸಲಾಗಿದೆ. ೧೯೦೪ರಲ್ಲಿ ಬ್ರಿಟಿಷ್ ಸರ್ಕಾರವು ಲಾಸಾ ಪ್ರದೇಶವನ್ನು ಆಕ್ರಮಿಸಿಕೊಂಡಾಗ ಏರ್ಪಟ್ಟ ಒಪ್ಪಂದದ ಅನ್ವಯ ಚೀನಾದ ಅಂದಿನ ಪ್ರಭುತ್ವವು ಏಳೂವರೆ ಲಕ್ಷ ಪೌಂಡ್‌ಗಳನ್ನು ಪಾವತಿ ಮಾಡಿ ಈ ಪ್ರದೇಶವನ್ನು ಕೊಂಡುಕೊಂಡಿತ್ತು ಎಂದು ಚೀನಾ ಪ್ರತಿಪಾದಿಸುತ್ತದೆ. ಏಳುನೂರು ವರ್ಷಗಳ ಇತಿಹಾಸದುದ್ದಕ್ಕೂ ಟಿಬೆಟ್ ಚೀನಾದ ಒಂದು ಭಾಗವೇ ಆಗಿದ್ದು, ಯಾವುದೇ ಕಾಲಘಟ್ಟದಲ್ಲೂ ಚೀನಾದ ಅಧಿಪತ್ಯವನ್ನು ಪ್ರಶ್ನಿಸಲಾಗಿಲ್ಲವೆಂದೂ ಪ್ರತಿಪಾದಿಸಲಾಗುತ್ತದೆ. ಆದರೆ ಟಿಬೆಟ್‌ನ ಇತಿಹಾಸವನ್ನು ಶೋಧಿಸಿದಾಗ ವಸ್ತುಸ್ಥಿತಿ ಭಿನ್ನವಾಗಿರುವುದು ಕಂಡುಬರುತ್ತದೆ. ಕ್ರಿ. ಶ ೧೨೭ರಲ್ಲಿ ಸ್ವತಂತ್ರ ಟಿಬೆಟ್‌ನ ಪ್ರಥಮ ದೊರೆ ಇದ್ದುದನ್ನು ಇತಿಹಾಸ ದಾಖಲಿಸಿದೆ. ಕ್ರಿಶ ಏಳನೇ ಶತಮಾನದಲ್ಲಿ ಸಾಂಗ್ಸಟನ್ ಗಾಂಪೋ ಎಂಬ ದೊರೆ ಟಿಬೆಟ್‌ನಲ್ಲಿ ಕೇಂದ್ರೀಕೃತ ಅಧಿಕಾರವನ್ನು ಸ್ಥಾಪಿಸಿದ್ದನೆಂದೂ ಹೇಳಲಾಗುತ್ತದೆ.

೧೯ನೆಯ ಶತಮಾನದ ಅಂಚಿನಲ್ಲಿ ೧೩ನೇ ದಲಾಯಿಲಾಮ ನೇತೃತ್ವದಲ್ಲಿ ಟಿಬೆಟ್ ಒಂದು ಸ್ವತಂತ್ರ ರಾಷ್ಟ್ರವಾಗಿ ಹೊರಹೊಮ್ಮುತ್ತಿದ್ದಾಗ ಚೀನಾವನ್ನು ಆಳುತ್ತಿದ್ದ ಮಂಚು ದೊರೆಗಳು ಬ್ರಿಟಿಷರಿಗೆ ಶರಣಾದರು. ಇದೇ ಅವಕಾಶವನ್ನು ಉಪಯೋಗಿಸಿಕೊಂಡ ಬ್ರಿಟಿಷ್ ಸಾಮ್ರಾಜ್ಯವು ೧೯೦೩-೦೪ರಲ್ಲಿ ಟಿಬೆಟ್ ಮೇಲೆ ಆಕ್ರಮಣ ನಡೆಸಿ, ಟಿಬೆಟ್ಟಿಯನ್ನರ ವೀರೋಚಿತ ಹೋರಾಟಗಳ ಹೊರತಾಗಿಯೂ, ಲಾಸಾ ಮುಂತಾದ ಪ್ರದೇಶಗಳನ್ನು ಆಕ್ರಮಿಸಿಕೊಂಡಿತ್ತು. ಈ ಸಂದರ್ಭದಲ್ಲೇ ೧೯೦೪ರ ಒಪ್ಪಂದಕ್ಕೂ ಸಹಿಹಾಕಲಾಗಿತ್ತು. ತದನಂತರದಲ್ಲಿ ರಷ್ಯಾದಲ್ಲಿ ಉಂಟಾದ ೧೯೦೫ರ ಕ್ರಾಂತಿ ಮತ್ತು ಬದಲಾದ ಸನ್ನಿವೇಶದಲ್ಲಿ ೧೯೦೭ರಲ್ಲಿ ರಷ್ಯಾ ಮತ್ತು ಬ್ರಿಟನ್ ದೇಶಗಳು ಒಂದು ಒಡಂಬಡಿಕೆಯ ಮೂಲಕ ಟಿಬೆಟ್‌ನ ಮೇಲೆ ಚೀನೀಯರಿಗೆ ಇರುವ ಹಕ್ಕುಗಳನ್ನು ಅಧಿಕೃತವಾಗಿ ಮಾನ್ಯಮಾಡಿತ್ತು. ಈ ಒಡಂಬಡಿಕೆಯನ್ನೇ ಆಧಾರವಾಗಿಟ್ಟುಕೊಂಡು ಚೀನಾ ಇಂದಿಗೂ ಟಿಬೆಟ್ ಚೀನಾದ ಅವಿಭಾಜ್ಯ ಅಂಗ ಎಂದು ಪ್ರತಿಪಾದಿಸುತ್ತಿದೆ.

ಟಿಬೆಟ್‌ನ ವಿಮೋಚನಾ ಹೋರಾಟ

ಈ ಐತಿಹಾಸಿಕ ಹಿನ್ನೆಲೆಯಲ್ಲೇ ೧೯೫೧ರಿಂದಲೂ ಚೀನಾದ ಸರ್ಕಾರವು ಟಿಬೆಟ್‌ನ ಜನತೆಗೆ ಸ್ವಾತಂತ್ರ್ಯ ನೀಡಲು ನಿರಾಕರಿಸುತ್ತಿದೆ. ಕಳೆದ ೬೦ ವರ್ಷಗಳ ಹೋರಾಟದಲ್ಲಿ ಟಿಬೆಟ್‌ನ ಜನತೆ ವಿಶ್ವದಾದ್ಯಂತ ಹರಿದು ಹಂಚಿಹೋಗಿದ್ದಾರೆ. ಭಾರತದಲ್ಲೇ ಸಿಕ್ಕಿಂ, ಹಿಮಾಚಲ ಪ್ರದೇಶ, ಪಶ್ಚಿಮ ಬಂಗಾಳ, ಕರ್ನಾಟಕ ಮುಂತಾದೆಡೆ ಲಕ್ಷಾಂತರ ಟಿಬೆಟಿಯನ್ನರು ನಿರಾಶ್ರಿತರ ತಾಣಗಳಲ್ಲಿ ವಾಸಿಸುತ್ತಿದ್ದಾರೆ. ಟಿಬೆಟ್‌ನ ಆಧ್ಯಾತ್ಮಿಕ ಗುರು ದಲಾಯಿಲಾಮಾರವರನ್ನು ಅಮೆರಿಕಾದ ಏಜೆಂಟರೆಂದು ಬಿಂಬಿಸುವ ಮೂಲಕ ಅಲ್ಲಿನ ಜನತೆಯ ವಿಮೋಚನಾ ಚಳುವಳಿಗೆ ವಿಭಿನ್ನ ಸ್ವರೂಪ ನೀಡುವ ಚೀನಾದ ನೀತಿ ಬಹುತೇಕ ಫಲಪ್ರದವಾಗಿದೆ. ಆದರೆ ಕಳೆದ ೨೦ ವರ್ಷಗಳಲ್ಲಿ ಟಿಬೆಟ್‌ನ ಹೋರಾಟಗಳು ಜಾಗತಿಕ ಸ್ವರೂಪ ಪಡೆದಿರುವುದು ಪ್ರಸ್ತುತ ಸಂಘರ್ಷಗಳಲ್ಲಿ ವ್ಯಕ್ತವಾಗಿದೆ. ಇಲ್ಲಿನ ಜನತೆಗೆ ತಮ್ಮ ರಾಷ್ಟ್ರೀಯತೆಯನ್ನು ಕಾಪಾಡಿಕೊಳ್ಳುವುದು ಆದ್ಯತೆಯಾಗಿರುವುದೂ ಈ ಹೋರಾಟಗಳಲ್ಲಿ ವ್ಯಕ್ತವಾಗುತ್ತದೆ. ಆದರೆ ಟಿಬೆಟ್ ರಾಷ್ಟ್ರೀಯತೆಯನ್ನು ಪ್ರತಿನಿಧಿಸುವ ವರ್ಗಗಳು ಯಾವುವು ಎಂಬ ಅಂಶವೂ ಇಲ್ಲಿ ಮುಖ್ಯವಾಗುತ್ತದೆ.

ಇಲ್ಲಿ ಟಿಬೆಟ್ ಪ್ರಾಂತವನ್ನು ಆಕ್ರಮಿಸಿಕೊಂಡು ಅಲ್ಲಿನ ಸ್ಥಳೀಯರನ್ನು ಉಚ್ಚಾಟಿಸುವುದರ ಮೂಲಕ ತಮ್ಮ

[illegible]

ದಲಾಯಿಲಾಮ ಪರಂಪರೆಯಲ್ಲಿ ವರ್ಗ ಸಂಘರ್ಷಗಳು ತೀವ್ರವಾಗಿದ್ದುದನ್ನೂ ಗಮನಿಸಬೇಕಾಗುತ್ತದೆ. ದಲಾಯಿಲಾಮಾರವರ ಧಾರ್ಮಿಕ ರಾಷ್ಟ್ರದಲ್ಲಿ ಭೂಮಿಯನ್ನೂ ಒಳಗೊಂಡಂತೆ ಎಲ್ಲಾ ಉತ್ಪಾದನಾ ಸಾಧನಗಳೂ, ಶೇ [illegible]ಷ್ಟು ಜನಸಂಖ್ಯೆಯುಳ್ಳ ಮೇಲ್ವರ್ಗದವರ ಪಾಲಾಗಿತ್ತು. ಬಹುಸಂಖ್ಯಾತ ಜನತೆ ಗುಲಾಮಗಿರಿಯನ್ನು ಎದುರಿಸಬೇಕಿತ್ತು. ಭಾರಿ ಎಸ್ಟೇಟ್‌ಗಳ ಮಾಲೀಕರೇ ಟಿಬೆಟ್‌ನ ಸಂಪತ್ತನ್ನು ಆಕ್ರಮಿಸಿಕೊಂಡಿದ್ದರು. ೧೯೫೧ರಲ್ಲಿ ಚೀನಾದ ಪ್ರವೇಶಕ್ಕೆ ಮುನ್ನ ಟಿಬೆಟ್‌ನಲ್ಲಿ ಆಧುನಿಕ ಕೃಷಿಯಾಗಲೀ, ಕೈಗಾರಿಕೆಗಳಾಗಲೀ, ಸಾರಿಗೆ ವ್ಯವಸ್ಥೆಯಾಗಲೀ ಇರಲಿಲ್ಲ. ಆದರೆ ಚೀನಾದ ಆಳ್ವಿಕೆಯಲ್ಲಿ ಬಂದ ನಂತರದಲ್ಲಿ ಟಿಬೆಟ್ ಸಾಕಷ್ಟು ಅಭಿವೃದ್ಧಿ ಹೊಂದಿದೆ. ಚೀನಾದಲ್ಲಿ ಕಮ್ಯುನಿಸ್ಟ್ ಸರ್ಕಾರವಿದ್ದರೂ ಸ್ವಾಯತ್ತ ಟಿಬೆಟ್ ಪ್ರಾಂತದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿದೆ. ಟಿಬೆಟ್‌ನ ಬಹುತೇಕ ಜನತೆ ೧೯೬೧-೬೫ರ ಅವಧಿಯನ್ನು ಸುವರ್ಣಯುಗವೆಂದೇ ಪರಿಗಣಿಸುತ್ತಾರೆ.

ಈ ಅಭಿವೃದ್ಧಿ ಪಥವೇ ಪ್ರಸ್ತುತ ಸಂಘರ್ಷಗಳಿಗೆ ಕಾರಣವಾಗಿರುವುದು ಸ್ಪಷ್ಟವಾಗಿದೆ. ಚೀನಾ ತನ್ನ ಪ್ರಗತಿ ಪಥದಲ್ಲಿ ಟಿಬೆಟ್ ಪ್ರಾಂತವನ್ನು ಅತ್ಯಾಧುನಿಕ ಕೈಗಾರಿಕೆಗಳಿಗೆ ಪ್ರಮುಖ ತಾಣವನ್ನಾಗಿ ಪರಿಗಣಿಸಿದೆ. ಈ ಅಭಿವೃದ್ಧಿಯ ಫಲವನ್ನು ಟಿಬೆಟ್‌ನ ಸ್ಥಳೀಯ ಜನಸಮುದಾಯಗಳಿಗಿಂತಲೂ, ಅನ್ಯರೆಂದೇ ಪರಿಗಣಿಸಲ್ಪಡುವ ಚೀನಾದ ಹಾನ್ ಸಮುದಾಯದವರು ಭೋಗಿಸುತ್ತಿರುವುದು ಸ್ಥಳೀಯರಲ್ಲಿ ಅಸಮಧಾನ ಮೂಡಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಕರು ಚೀನಾದ ಆರ್ಥಿಕ ನೀತಿಗಳ ಫಲಾನುಭವಿಗಳಾಗಿದ್ದರೂ, ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಅವಕಾಶವಂಚಿತ ಸ್ಥಳೀಯರ ಸಂಖ್ಯೆ ಹೆಚ್ಚುತ್ತಲೇ ಇರುವುದು ಪ್ರಸ್ತುತ ಸಂಘರ್ಷಗಳಿಗೆ ಕಾರಣವಾಗಿದೆ. ಹೊರದೇಶಗಳಲ್ಲಿ ನಿರಾಶ್ರಿತರಾಗಿರುವ ಟಿಬೆಟ್‌ನ ಜನಸಮುದಾಯಗಳಿಗೂ ಸ್ವದೇಶಕ್ಕೆ ತೆರಳುವ ಆಕಾಂಕ್ಷೆ ಹೆಚ್ಚಾಗುತ್ತಿರುವುದು ಟಿಬೆಟ್ ರಾಷ್ಟ್ರೀಯ ಹೋರಾಟಕ್ಕೆ ಹೊಸ ಆಯಾಮ ನೀಡಿದೆ. ಆದರೆ ಈ ರಾಷ್ಟ್ರೀಯತಾ ಚಳುವಳಿಯ ಮುಂಚೂಣಿಯಲ್ಲಿರುವ ದಲಾಯಿಲಾಮಾ ಆಗಲೀ, ಪಾಶ್ಚಿಮಾತ್ಯ ರಾಷ್ಟ್ರಗಳಾಗಲೀ, ಟಿಬೆಟ್‌ನ ಶ್ರಮಿಕ ವರ್ಗಗಳ ಹಿತಾಸಕ್ತಿಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಯಾವುದೇ ನೀತಿಗಳನ್ನು ಪ್ರತಿಪಾದಿಸುತ್ತಿಲ್ಲ. ಚೀನಾ ಸರ್ಕಾರದ ಸಮಾಜವಾದಿ ನೀತಿಗಳಿಂದ ಇಲ್ಲಿನ ಜನತೆ ಗಳಿಸಿರುವ ಆರ್ಥಿಕ ಸ್ವಾವಲಂಬನೆ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಗಳ ಬಂಡವಾಳಶಾಹಿ ದಾಹಕ್ಕೆ ತುತ್ತಾಗುವ ಸನ್ನಿವೇಶವನ್ನು ಅಲ್ಲಗಳೆಯಲಾಗುವುದಿಲ್ಲ.

ಟಿಬೆಟ್ ವಿವಾದ ಚೀನಾದ ಆಂತರಿಕ ವಿಷಯವಾದರೂ, ಅಲ್ಲಿನ ಜನತೆಯ ಪ್ರಜಾತಾಂತ್ರಿಕ ಹಿತಾಸಕ್ತಿಗಳನ್ನು ರಕ್ಷಿಸಿ, ಅವರ ಆಶೋತ್ತರಗಳನ್ನು ಈಡೇರಿಸುವುದು ಚೀನಾ ಸರ್ಕಾರದ ಕರ್ತವ್ಯವಾಗಿದೆ. ಆದರೆ ಚೀನಾ ಒಂದು ಕಮ್ಯುನಿಸ್ಟ್ ದೇಶವೆಂಬ ಏಕೈಕ ಕಾರಣಕ್ಕೆ ಟಿಬೆಟ್ ಹೋರಾಟಗಳನ್ನು ಬೆಂಬಲಿಸುವ ಭಾರತೀಯ ಜನತಾ ಪಕ್ಷ ಮತ್ತು ಅದರ ಅಂಗ ಸಂಸ್ಥೆಗಳು ತಮ್ಮ ಸಾಂಸ್ಕೃತಿಕ ರಾಷ್ಟ್ರೀಯತೆಯ ಆಲೋಚನೆಗಳನ್ನೇ ಟಿಬೆಟ್‌ಗೂ ಅನ್ವಯಿಸುತ್ತಿವೆ. ಈ ದೃಷ್ಟಿಯಿಂದಲೇ ಟಿಬೆಟ್‌ಗೆ ಸ್ವಾತಂತ್ರ್ಯ ನೀಡಬೇಕೆಂದು ಆಗ್ರಹಿಸುತ್ತಿವೆ. ಆದರೆ ಭಾರತದಲ್ಲೇ ಸ್ವಾತಂತ್ರ್ಯಕ್ಕಾಗಿ-ಸ್ವಾಯತ್ತತೆಗಾಗಿ ಹೋರಾಡುತ್ತಿರುವ ನಾಗಾಲ್ಯಾಂಡ್, ಮಣಿಪುರ, ಮಿಝೋರಾಂ ಮುಂತಾದ ಈಶಾನ್ಯ ರಾಜ್ಯಗಳ ಜನತೆಗೆ ಭಾಜಪ ಯಾವ ರೀತಿ ಸ್ಪಂದಿಸುತ್ತದೆ ಎಂಬುದು ಮೂರ್ತ ಪ್ರಶ್ನೆಯಾಗುತ್ತದೆ. ಯಾವುದೇ ರಾಷ್ಟ್ರೀಯತಾ ಹೋರಾಟಗಳು ಶ್ರಮಿಕ ವರ್ಗಗಳ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶ ಹೊಂದಿದ್ದಲ್ಲಿ ಸ್ವಾಗತಿಸಬಹುದೇ ವಿನಃ ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಿನಲ್ಲಿ, ಧಾರ್ಮಿಕ ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಯುವ ಹೋರಾಟಗಳನ್ನು ಯಾವುದೇ ಪ್ರಜಾತಾಂತ್ರಿಕ ವ್ಯವಸ್ಥೆ ಬೆಂಬಲಿಸಲಾಗುವುದಿಲ್ಲ. ಟಿಬೆಟ್‌ನ ವಿಷಯದಲ್ಲೂ ಇದೇ ಅಂಶವನ್ನು ಸ್ಪಷ್ಟವಾಗಿ ಗುರುತಿಸಬಹುದು. ಅಮೆರಿಕಾ ಮತ್ತಿತರ ಜಾಗತಿಕ ಕಾರ್ಪೋರೇಟ್ ಉದ್ಯಮಿಗಳಿಗೆ, ಉತ್ತಮ ಆರ್ಥಿಕ ಅಭಿವೃದ್ಧಿ ಹೊಂದಿರುವುದೇ ಅಲ್ಲದೆ ಬಂಡವಾಳ ಹೂಡಿಕೆ ಪ್ರಶಸ್ತ ಸ್ಥಳವಾಗಿರುವ ಟಿಬೆಟ್ ಒಂದು ಬಂಗಾರದ ಗಣಿಯಂತೆ ಕಾಣುತ್ತಿದೆ. ಈ ಗಣಿಯನ್ನು ತಮ್ಮ ಕೈವಶ ಮಾಡಿಕೊಳ್ಳಲು ಸಾಮ್ರಾಜ್ಯಶಾಹಿಗಳಿಗೆ ದಲಾಯಿಲಾಮ ಮತ್ತು ಅವರ ಧಾರ್ಮಿಕ ಪರಂಪರೆ ಒಂದು ಉತ್ತಮ ಸಾಧನವಾಗಿದೆ. ಟಿಬೆಟ್‌ನ ದುಡಿಯುವ ವರ್ಗಗಳು ಈ ಸತ್ಯವನ್ನು ಮನಗಾಣದಿದ್ದಲ್ಲಿ, ಬಾಣಲೆಯಿಂದ ಒಲೆಗೆ ಬಿದ್ದಂತೆ ಚೀನಾದ ಹಿಡಿತದಿಂದ ಸಾಮ್ರಾಜ್ಯಶಾಹಿಗಳ ಹಿಡಿತಕ್ಕೆ ಸಿಲುಕುವ ಸಾಧ್ಯತೆಗಳೇ ಹೆಚ್ಚಾಗಿರುತ್ತವೆ. □

೧೯ನೆಯ ಶತಮಾನದ ಅಂಚಿನಲ್ಲಿ ೧೩ನೇ ದಲಾಯಿಲಾಮ ನೇತೃತ್ವದಲ್ಲಿ ಟಿಬೆಟ್ ಒಂದು ಸ್ವತಂತ್ರ ರಾಷ್ಟ್ರವಾಗಿ ಹೊರಹೊಮ್ಮುತ್ತಿದ್ದಾಗ ಚೀನಾವನ್ನು ಆಳುತ್ತಿದ್ದ ಮಂಚು ದೊರೆಗಳು ಬ್ರಿಟಿಷರಿಗೆ ಶರಣಾದರು. ಇದೇ ಅವಕಾಶವನ್ನು ಉಪಯೋಗಿಸಿಕೊಂಡ ಬ್ರಿಟಿಷ್ ಸಾಮ್ರಾಜ್ಯವು ೧೯೦೩-೦೪ರಲ್ಲಿ ಟಿಬೆಟ್ ಮೇಲೆ ಆಕ್ರಮಣ ನಡೆಸಿ, ಟಿಬೆಟ್ಟಿಯನ್ನರ ವೀರೋಚಿತ ಹೋರಾಟಗಳ ಹೊರತಾಗಿಯೂ, ಲಾಸಾ ಮುಂತಾದ ಪ್ರದೇಶಗಳನ್ನು ಆಕ್ರಮಿಸಿಕೊಂಡಿತ್ತು. ಈ ಸಂದರ್ಭದಲ್ಲೇ ೧೯೦೪ರ ಒಪ್ಪಂದಕ್ಕೂ ಸಹಿಹಾಕಲಾಗಿತ್ತು. ತದನಂತರದಲ್ಲಿ ರಷ್ಯಾದಲ್ಲಿ ಉಂಟಾದ ೧೯೦೫ರ ಕ್ರಾಂತಿ ಮತ್ತು ಬದಲಾದ ಸನ್ನಿವೇಶದಲ್ಲಿ ೧೯೦೭ರಲ್ಲಿ ರಷ್ಯಾ ಮತ್ತು ಬ್ರಿಟನ್ ದೇಶಗಳು ಒಂದು ಒಡಂಬಡಿಕೆಯ ಮೂಲಕ ಟಿಬೆಟ್‌ನ ಮೇಲೆ ಚೀನೀಯರಿಗೆ ಇರುವ ಹಕ್ಕುಗಳನ್ನು ಅಧಿಕೃತವಾಗಿ ಮಾನ್ಯಮಾಡಿತ್ತು.



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಹಾಯ್ಕುಗಳು

ಅನು: ಬಿ. ಮಹೇಶ್ ಹರವೆ

೧

ಅರಿವುಗೊಳ್ಳುವುದೆಂದರೆ ಚಂದ್ರ ನೀರಿನಲ್ಲಿ ಪ್ರತಿಫಲಿಸಿದಂತೆ.
ಅವನು ನೀರಿನಲ್ಲಿ ಒದ್ದೆಯಾಗನು ಅಂತೆಯೇ ಅದ ಒಡೆದು ನುಸುಳನು.
ಆದಾಗ್ಯೂ ಅದರ ಬೆಳಕು ಉದಾತ್ತವಾದುದು ಮತ್ತು ವಿಸ್ತಾರವಾದುದು.
ಚಂದಿರನು ಕೆಸರಿನ ಅಂಗುಲದ ಅಗಲದಲ್ಲಿಯೂ ಪ್ರತಿಫಲಿಸುವನು.
ಪೂರ್ಣಚಂದ್ರ ಮತ್ತು ಅನಂತ ಆಕಾಶ
ಹುಲ್ಲಿನ ಮೇಲಿನ ಇಬ್ಬನಿಯಲ್ಲೂ ಪ್ರತಿಫಲಿಸುತ್ತವೆ.

–ಡೋಜನ್



೨.

'ನರಕ' ಶಿಕ್ಷೆಯಲ್ಲ
ಅದೊಂದು ತುಯಾರಿ

–ಸುನ್ಯೂಸುಝುಕಿ



೩.

ಯಾವುದು ಅತಿಮುಖ್ಯವಸ್ತು.
ಅತಿಮುಖ್ಯವಸ್ತು ಯಾವುದೆಂದು
ಪತ್ತೆ ಹಚ್ಚುವುದು.

–ಸುನ್ಯೂಸುಝುಕಿ



೪.

ಈ ವಿಶ್ವವೊಂದು ಇಬ್ಬನಿಯ ಹನಿ
ಪ್ರತಿ ಹನಿ ಇಬ್ಬನಿಯಲ್ಲೂ
ವಿಶ್ವದ ಹೋರಾಟ.

–ಕೊಬಯಾಶಿ ಇಸ್ಸಾ

೫.

ಎಚ್ಚರ, ಬುದ್ಧನನ್ನು ನಿನ್ನಿಂದ
ಹೊರಗೆ ಹುಡುಕುತ್ತೀಯ.
ನಿನ್ನ ಹೊರಗಿರುವ ಬುದ್ಧ ದೆವ್ವಾ.

–ಡೊಜನ್



೬.

ಹಳೆಯ ಕೊಳ
ಕಪ್ಪೆ, ಉಗುಗುವ ನೀರಲ್ಲಿ
ಕುಪ್ಪಳಿಸುತ್ತದೆ.

–ಬಾಹೋ

೭.

ಬುದ್ಧ ಮಾರ್ಗದ ನಿಜವಾದ
ತಿಳಿವೆಂದರೆ
ನನ್ನ ಸಾಮಾನ್ಯ ಕ್ಷುದ್ರತೆಗಳ
ಸ್ವೇಚ್ಛತೆಗಳ
ಹೊರತು ಪಡಿಸಿ
ಮಾರ್ಗವಲ್ಲದ ಮಾರ್ಗದಲ್ಲಿ
ನಡೆವುದು.
ನಿಯಮಾಧೀನವಾದ
ನಾಮ ರೂಪಗಳೆಲ್ಲಾ
ಆಗಸದಲ್ಲಿನ ಹೂವುಗಳು.
ನಾಮರೂಪುಗಳಿಲ್ಲದೆ
ಹುಟ್ಟು ಸಆವುಗಳಿಲ್ಲದೆ
ನಾ ಬಾಳಬೇಕು.

–ತೀ ಮ್ಯಾನ್ ಪಾಂಗ್

೮

ಕೊಕ್ಕರೆಗಳು ಕೂಗುವುದನು
ಮೆಲುದನಿಯಾಗಿಸು.
ಕತ್ತಲನ್ನ ಯು ಇರಿಯುತ್ತಿವೆ.

–ಬಾಷ್ಟೋ

ಖಾಸಗೀಕರಣದ ಪ್ರಭಾವದಿಂದಾಗಿ ಶಿಕ್ಷಣದ ಮೇಲಾದ ದುಷ್ಪರಿಣಾಮ

ಗೋಪುರದ ರಮೇಶ್

ಈ ದೇಶದ ಬಂಡವಾಳ ಶಾಹಿಗಳು ಖಾಸಗೀಕರಣದ ಹೆಸರಿನಲ್ಲಿ ನಮ್ಮ ಬದುಕನ್ನು ಕಸಿಯುವ ಹುನ್ನಾರವಿದೆಯಲ್ಲ ಅದು ಬ್ರಿಟೀಷರು ಕೊಟ್ಟ ಆಡಳಿತಕ್ಕಿಂತಲೂ ಭೀಕರವಾದುದು. ಅಧಿಕಾರದ ಹಸ್ತಾಂತರದಿಂದ ಆಗಿದ್ದೇನು? ಮತ್ತೆ ಮತ್ತೆ ನಮ್ಮನ್ನು ಕಾಡುವ ಸಮಸ್ಯೆಗೆ ಪರಿಹಾರ ತಿಳಿಯುವ ಮೊದಲು ಯೋಚಿಸಬೇಕಿದೆ, ಅದೇನೆಂದು ಅರಿಯಬೇಕಿದೆ. ಬ್ರಿಟೀಷರ ನಂತರ ದೇಶದಲ್ಲಿ ಬಂಡವಾಳ ಶಾಹಿ ಆಳ್ವಿಕೆ ವ್ಯವಸ್ಥೆಯು ಪ್ರಜಾ ಪ್ರಭುತ್ವ ಎಂಬ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂತು. ಬ್ರಿಟೀಷ್ ಸಾಮ್ರಾಜ್ಯ ಶಾಹಿಗಳ ಜಾಗದಲ್ಲಿ ನಮ್ಮ ದೇಶಿಯ ಬಂಡವಾಳಗಾರರ ಪ್ರತಿನಿಧಿಗಳು ಅಧಿಕಾರಕ್ಕೆ ಏರಿದರು. ಭಾರತದ ಬಂಡವಾಳ ಶಾಹಿ ವರ್ಗವು ಅಧಿಕಾರ ಗ್ರಹಣ ಮಾಡುವ ವೇಳೆಗೆ ವಿಶ್ವದಾದ್ಯಂತ ಬಂಡವಾಳ ವಾದವು ಸಾವಿನಂಚಿನಲ್ಲಿದ್ದು ಸಾಮಾಜಿಕ ಪ್ರಗತಿಗೆ ಮಾರಕವಾಗಿ ನಿಂತಿತ್ತು. ಇದರಿಂದಾಗಿ ಆರಂಭವಾದ ದೇಶದ ಬಿಕ್ಕಟ್ಟು ಜೀವನದ ಎಲ್ಲಾ ಸ್ಥರದಲ್ಲೂ ಎರಡು ಭಾಗಗಳಾಗಿ ಒಡೆಯಿತು. ಒಂದು ಶ್ರೀಮಂತರದು ಇನ್ನೊಂದು ಬಡಜನತೆಯ ಬೃಹತ್ ಸಮೂಹ.

ನಮ್ಮ ಸ್ವಾತಂತ್ರ್ಯ ಸಂಗ್ರಾಮದ ನಾಯಕತ್ವವನ್ನು ಕಬಳಿಸಿದ ಪ್ರಗತಿ ವಿರೋಧಿಯಾಗಿದ್ದ ಭಾರತದ ಬಂಡವಾಳಶಾಹಿ ವರ್ಗವು ವಿಶ್ವ ಸಾಮ್ರಾಜ್ಯವಾದ ಹಾಗೂ ದೇಶಿಯ ಉಳಿಗಮಾನ್ಯ ಮೌಲ್ಯಗಳ ವಿರುದ್ಧದ ಹೋರಾಟಗಳಲ್ಲಿ ರಾಜಿಮಾಡಿಕೊಂಡಿತು. ಹಳೆಯ ವಿಚಾರಗಳಲ್ಲಿ ತೀವ್ರತೆಯ ಸಂದಾನಕ್ಕೆ ಇಳಿದು ಸಮಾಜದ ಸಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಯ ಕಾರ್ಯವನ್ನು ಬದಿಗೊತ್ತಿತು. ಇದರ ಫಲವಾಗಿ ನಮ್ಮ ಸಮಾಜದ ಜನ ತಾಂತ್ರೀಕರಣದ ಪ್ರಕ್ರಿಯೆಗೆ ಧಕ್ಕೆಯುಂಟಾಯಿತು. ಆದ್ದರಿಂದಲೇ ಉಳಿಗಮಾನ್ಯ ಅನ್ಯೆಕ್ಯತೆ, ಧಾರ್ಮಿಕ ಕಟ್ಟುಪಾಡುಗಳು, ಕಂದಾಚಾರಗಳು ಭದ್ರಗೊಂಡು ಭಾರತೀಯರು ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಧರ್ಮ, ಜಾತಿ, ಭಾಷೆ, ಕೋಮು ಇತ್ಯಾದಿ ಹೆಸರಲ್ಲಿ ಒಡೆದು ಹೋಳಾದರು.

* ಮೀಸಲಾತಿ:

ಗಣರಾಜ್ಯಗಳು ಸ್ಥಾಪನೆಯಾದ ನಂತರ ಸ್ಥಿರ ಸರಕಾರಗಳು ರಾಜ್ಯಗಳಲ್ಲಿ ಆಳ್ವಿಕೆ ನಡೆಸುವಾಗ ಸಂವಿಧಾನ ರಚನೆಯಲ್ಲಿ ತಲೆತಲಾಂತರದಿಂದ ನೊಂದವರಿಗೆ. ಶೋಷಿತರಿಗೆ, ದಲಿತರಿಗೆ, ಬಡವರಿಗೆ ಕೆಲವು ಅಂಶಗಳ ಮೇಲೆ ಮೀಸಲಾತಿ ನಿಗದಿಪಡಿಸಲಾಯಿತು. ಶಿಕ್ಷಣದ ಮೀಸಲಾತಿಯನ್ನು ಸ್ವಾತಂತ್ರ್ಯ ನಂತರ ಹತ್ತು ವರ್ಷಗಳಿಗೆ ಸೀಮಿತಗೊಳಿಸಲಾಯಿತು. ತದನಂತರ ಘೋಷಿತ ಗುರಿಯನ್ನು ತಲುಪಲು ಮೀಸಲಾತಿ ನೀತಿಗೆ ಸಾಧ್ಯವಾಗಿದೆಯೇ ಅಥವಾ ಇಲ್ಲವೇ ಎಂಬ ಪುನರಾವಲೋಕನ ಅಗತ್ಯವೆಂದು ಯೋಜಿಸಲಾಗಿತ್ತು.

ಆದರೆ ಮೀಸಲಾತಿ ನೀತಿಯ ಸಫಲವಾಯಿತೆ? ಉದ್ದೇಶಿತ ಸವಲತ್ತು ಹಾಗೂ ಅವಕಾಶಗಳು ನಿಜವಾಗಿಯೂ ದಲಿತರಿಗೆ, ಅಲ್ಪಸಂಖ್ಯಾತರಿಗೆ ಹಾಗೂ ಬುಡಕಟ್ಟು ವರ್ಗಕ್ಕೆ ದೊರಕಿದವೇ? ಈ ಪ್ರಶ್ನೆಗಳಿಗೆ ಒಕ್ಕೊರಲಿನ ಉತ್ತರ ಇಲ್ಲ ಶೇ. ೬೦% ಭಾಗದಷ್ಟು ದಲಿತರು ಇನ್ನೂ ಅನಕ್ಷರಸ್ಥರು. ಪರಿಶಿಷ್ಟ ಪಂಗಡದಲ್ಲಿ ಇದು ಶೇ. ೭೦% ರಷ್ಟು, ಕಡುಬಡತನದಿಂದ ಶಾಲಾ ಓದು ಮುಂದುವರಿಸಲಾಗದೆ ಶಾಲೆಗಳಿಂದ ಹೊರ ಬೀಳುವ ದಲಿತರ ಸಂಖ್ಯೆ ಶೇ. ೮೦% ರಷ್ಟು ಖಾಲಿ ಬೀಳುತ್ತವೆ. ಉದ್ಯೋಗದಲ್ಲಿಯೂ ಇದೇ ರೀತಿಯ ಅಂಕಿ ಅಂಶಗಳು ಕಾಣಸಿಗುತ್ತವೆ. ಅಂದರೆ ದೇಶಕ್ಕೆ ಸ್ವಾತಂತ್ರ್ಯ ಬಂದು ೬೧ ವರ್ಷ ನಂತರವೂ ದಲಿತ ಸಮುದಾಯವು ಕಡುಬಡತನದಿಂದ ನರಳುತ್ತಿದ್ದು ಅತ್ಯಂತ ಹಿಂದುಳಿದಿದೆ. ಕನಿಷ್ಠ ಪ್ರಾಥಮಿಕ ಶಿಕ್ಷಣವನ್ನು ದಲಿತ ಸಮುದಾಯಕ್ಕೆ ಖಾತ್ರಿಪಡಿಸಲು ವಿಫಲವಾಗಿರುವ ಸರ್ಕಾರವು ಐಟಿ, ಬಿಟಿ, ಐಐಎಂ, ವೈದ್ಯ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಸೀಟುಗಳನ್ನು ಕಾದಿರಿಸುತ್ತೇವೆ ಎಂದು ಕೊಚ್ಚಿಕೊಳ್ಳುವುದು ನಿಜವಾಗಿ ವಿಪರ್ಯಾಸವಲ್ಲವೇ? ಈ ಮೀಸಲಾತಿ ನೀತಿಯಿಂದಾಗಿ ದಲಿತರ ಶೇ. ೩% ರಷ್ಟು ಭಾಗವು. ಇರುವ ಎಲ್ಲಾ ಅವಕಾಶಗಳನ್ನು ಹಾಗೂ ಸವಲತ್ತುಗಳನ್ನು ಕಬಳಿಸಿ

ನಮ್ಮ ಸ್ವಾತಂತ್ರ್ಯ ಸಂಗ್ರಾಮದ ನಾಯಕತ್ವವನ್ನು ಕಬಳಿಸಿದ ಪ್ರಗತಿ ವಿರೋಧಿಯಾಗಿದ್ದ ಭಾರತದ ಬಂಡವಾಳ ಶಾಹಿ ವರ್ಗವು ವಿಶ್ವ ಸಾಮ್ರಾಜ್ಯವಾದ ಹಾಗೂ ದೇಶಿಯ ಉಳಿಗಮಾನ್ಯ ಮೌಲ್ಯಗಳ ವಿರುದ್ಧದ ಹೋರಾಟಗಳಲ್ಲಿ ರಾಜಿ ಮಾಡಿಕೊಂಡಿತು. ಹಳೆಯ ವಿಚಾರಗಳಲ್ಲಿ ತೀವ್ರತೆಯ ಸಂದಾನಕ್ಕೆ ಇಳಿದು ಸಮಾಜದ ಸಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಯ ಕಾರ್ಯವನ್ನು ಬದಿಗೊತ್ತಿತು. ಇದರ ಫಲವಾಗಿ ನಮ್ಮ ಸಮಾಜದ ಜನ ತಾಂತ್ರೀಕರಣದ ಪ್ರಕ್ರಿಯೆಗೆ ಧಕ್ಕೆಯುಂಟಾಯಿತು. ಆದ್ದರಿಂದಲೇ ಉಳಿಗಮಾನ್ಯ ಅನ್ಯೆಕ್ಯತೆ, ಧಾರ್ಮಿಕ ಕಟ್ಟು ಪಾಡುಗಳು, ಕಂದಾಚಾರಗಳು ಭದ್ರಗೊಂಡು ಭಾರತೀಯರು ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಧರ್ಮ, ಜಾತಿ, ಭಾಷೆ, ಕೋಮು ಇತ್ಯಾದಿ ಹೆಸರಲ್ಲಿ ಒಡೆದು ಹೋಳಾದರು.

ಕೊಂಡು ಸಮಾಜದ ಮೇಲ್‌ಸ್ಥರಕ್ಕೆ ಸೇರಿಕೊಂಡು, ನರಳುತ್ತಿರುವ ಬೃಹತ್ ದಲಿತ ಸಮುದಾಯದ ಬಗ್ಗೆ ನಿಷ್ಕಾಳಜಿ ಹೊಂದಿದೆ. ಅದು ಆಳುವ ಬಂಡವಾಳ ಶಾಹಿಯ ಬಾಲಂಗೋಚಿಯಾಗಿ ಹೋಗಿದೆ. ದಲಿತರಲ್ಲಿಯೇ ಉಳ್ಳವರ ಮತ್ತು ನಿರ್ಗತಿಕರ ಮಧ್ಯೆ ದೊಡ್ಡ ಕಂದರವು ಈಗ ಮತ್ತೂ ನಿಚ್ಚಳವಾಗಿದೆ. ತನ್ನ ಕುತಂತ್ರದಿಂದ ಆಳುವ ಬಂಡವಾಳಶಾಹಿ ವರ್ಗವು ವಿಶೇಷ ಸವಲತ್ತು ನೀಡುವ ಮೂಲಕ ದಲಿತ ಸಮುದಾಯದಿಂದಲೇ ಒಂದು ಪುಟ್ಟ ಗುಂಪನ್ನು ಉದ್ಧರಿಸಿದಂತೆ ಮಾಡಿ ಅದನ್ನು ಇಡೀ ಸಮುದಾಯದ ಅಭಿವೃದ್ಧಿಯ ಸಂಕೇತವೆಂದು ಬಿಂಬಿಸುತ್ತಿದೆ.

* ಖಾಸಗೀಕರಣ ಎಲ್ಲೆಲ್ಲಿ

ಸರ್ಕಾರ ಜನತೆಯ ಒತ್ತಡಕ್ಕೆ ಮಣಿದು ಸಾರ್ವಜನಿಕರ ಉದ್ದಿಮೆಗಳನ್ನು ಆರಂಭಿಸಿ, ಕೆಲವು ಉದ್ಯೋಗಾವಕಾಶಗಳ ಸೃಷ್ಟಿಗೆ ಕಾರಣವಾದರೂ ಕಾಲಕ್ರಮೇಣ ಖಾಸಗೀ ಬಂಡವಾಳಕ್ಕೆ ಹಾಗೂ ಅದರ ಬೆಳವಣಿಗೆಗೆ ಹೆಚ್ಚು ಒತ್ತು ನೀಡುತ್ತಾ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚಲು ಶುರು ಮಾಡಿತು. ತತ್ಪರಿಣಾಮ ಲಕ್ಷ ಲಕ್ಷ ಉದ್ಯೋಗ ನಾಶ ಅಂದಮೇಲೆ ಉದ್ಯೋಗವನ್ನು ಕಳೆದುಕೊಂಡ ಆ ಜನಾಂಗದ ಮಕ್ಕಳ ಶೈಕ್ಷಣಿಕ ಸ್ಥಿತಿ ಚಿಂತಾಜನಕವಲ್ಲವೇ?

ಈ ಬೆಳವಣಿಗೆ ಶಿಕ್ಷಣ ರಂಗದಲ್ಲಿ ಮುಂದುವರಿದು ಹೆಚ್ಚು ಮಂದಿ ಶಿಕ್ಷಿತರಾದರೆ ಹೆಚ್ಚು ಮಂದಿ ಶಿಕ್ಷಿತ ನಿರುದ್ಯೋಗಿಗಳಾಗುತ್ತಾರೆ. ಇದು ಸರ್ಕಾರದ ಆತಂತಕವಾದ್ದರಿಂದ ಶಿಕ್ಷಣವು ಸಮಾಜದ ಎಲ್ಲಾ ಸ್ಥರಗಳಿಗೂ ಪಸರಿಸುವುದನ್ನು ತಪ್ಪಿಸಲು ಸರ್ಕಾರವು ಯತ್ನಿಸುತ್ತದೆ. ಇದಕ್ಕಾಗಿ ಅತಿ ಹೆಚ್ಚು ಶುಲ್ಕವನ್ನು ವಿಧಿಸುವ ಕ್ರಮ. ಕ್ಯಾಪಿಟೇಷನ್ ಶುಲ್ಕ ನೀತಿ ಅನುಸರಣೆ, ಸರ್ಕಾರ ಶಿಕ್ಷಣ ಸಂಸ್ಥೆಗಳ ಕಡಿತ ಹಾಗು ಮುಚ್ಚುವಿಕೆ, ಹೆಚ್ಚು ಹೆಚ್ಚು ಖಾಸಗಿ ವಲಯಕ್ಕೆ ಶಿಕ್ಷಣದ ಹಸ್ತಾಂತರ, ತನ್ಮೂಲಕ ಶಿಕ್ಷಣದ ವ್ಯಾಪಾರೀಕರಣಕ್ಕೆ ಒತ್ತು ನೀಡುತ್ತಾ ಬಡಜನರಿಂದ ಶಿಕ್ಷಣವನ್ನು ದೂರವಾಗಿಸಿದರು.

ಪರಿಸ್ಥಿತಿ ಹೀಗಿರುವಾಗ ದಲಿತರೇ ಆಗಿರಲಿ ಅಥವಾ ದಲಿತರಲ್ಲದವರಾಗಿರಲಿ ಆಗುವ ವ್ಯತ್ಯಾಸವೇನು? ದುಬಾರಿ ಶುಲ್ಕ ತುಂಬಲು ವಿಫಲರಾಗುವ ಎಲ್ಲರಿಗೂ ಉನ್ನತ ಶಿಕ್ಷಣ ಖೋತಾ ಆಗುತ್ತದೆಯಲ್ಲವೇ? ಮೀಸಲಾತಿಯ ಪ್ರಯೋಜನವೇನು? ಅಂದರೆ ಮೀಸಲಾತಿ ಇರಲಿ ಅಥವಾ ಬಿಡಲಿ ಎಲ್ಲರಿಗೂ ಶಿಕ್ಷಣ ಹಾಗೂ ಉದ್ಯೋಗ ಮರೀಚಿಕೆಯಲ್ಲವೇ?

ಇಂದು ಸರಕಾರದ ಇಲಾಖೆಗಳಲ್ಲೂ ನೇಮಕಾತಿ ನಡೆಯುತ್ತಿಲ್ಲ. ಸಾರ್ವಜನಿಕರ ಕ್ಷೇತ್ರದ ಉದ್ದಿಮೆಗಳೆಲ್ಲ ಒಂದೊಂದಾಗಿ ಖಾಸಗಿ ಬಂಡವಾಳಿಗರ ಕೈ ಸೇರುತ್ತಿದೆ. ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ಇಲ್ಲದಿರುವುದರಿಂದ ಲಭ್ಯವಿರುವ ಸೀಮಿತ ಉದ್ಯೋಗಗಳು ಬಹುತೇಕ ಇಂಗ್ಲೀಷ್ ಬಲ್ಲ ನಗರದ ಶ್ರೀಮಂತ ಮಕ್ಕಳ ಪಾಲಾಗುತ್ತಿದೆ. ಹಾಗಾದರೆ ಕನ್ನಡದಲ್ಲಿ ಓದಿದ ಉದ್ಯೋಗಾಕಾಂಕ್ಷಿಗಳ ಗತಿ ಏನು? ಆರೋಗ್ಯ, ಶಿಕ್ಷಣ, ಕೃಷಿ, ಐಟಿ ಇತರೆ ಎಲ್ಲ ಖಾಸಗೀಕರಣವಾದರೆ ಸಾರ್ವಜನಿಕ ಉದ್ದಿಮೆಯನ್ನೇ ನಂಬಿರುವ ದಲಿತ, ಹಿಂದುಳಿದ ವರ್ಗದ, ಅಲ್ಪಸಂಖ್ಯಾತ ಮತ್ತು ಬುಡಕಟ್ಟುಗಳ ಗತಿಯೇನು? ಅವರ ಮಕ್ಕಳ ಶಿಕ್ಷಣದ ಮೇಲಾಗುವ ಪರಿಣಾಮವೇನು? ಎಂಬುದನ್ನು ಯೋಚಿಸಬೇಕಾಗಿದೆ.

* ಶಿಕ್ಷಣದಲ್ಲಿ ಖಾಸಗೀಕರಣ

ಇಂದು ಶಿಕ್ಷಣವು ದಲಿತರ, ಅಲ್ಪಸಂಖ್ಯಾತರ ಹಿಂದುಳಿದ ಮತ್ತು ಬುಡಕಟ್ಟು ವರ್ಗದ ಮಕ್ಕಳ ಜ್ಞಾನ ದಾಹ ತಣಿಸುವ ವಿಚಾರವಲ್ಲ. ಅದೊಂದು ತೀವ್ರತರವಾದ ಸಾಮಾಜಿಕ ಹಂಬಲ, ಕೇವಲ ಸಾಮಾಜಿಕ ಹಂಬಲ ಕೂಡಾ ಅಲ್ಲ ಮೇಲ್ವರ್ಗದವರು ಗಿಟ್ಟಿಸುತ್ತಿರುವ ಸವಲತ್ತು ಮತ್ತು ಅಧಿಕಾರದ ಸ್ಥರಗಳಿಗೆ ಏರಿಹೋಗಲು ಇರುವ ಸಾಧನ ಹಾಗೂ ಏಣಿಕೂಡಾ. ಖಾಸಗಿಯಲ್ಲಿನ ಇಂಗ್ಲೀಷ್ ಶಿಕ್ಷಣ ನಗರಗಳಲ್ಲಿ ಅವ್ಯಾಹತವಾಗಿ ನಡೆದು ಐ.ಎ.ಎಸ್, ಐ.ಪಿ.ಎಸ್, ಐಟಿ, ಬಿಟಿ ಮುಂತಾದ ಕ್ಷೇತ್ರಗಳಲ್ಲಿ ಕಬಳಿಸುತ್ತಿದೆ. ಪರಿಸ್ಥಿತಿ ಹೀಗಿರುವಾಗ ಸಮಾನ ಶಿಕ್ಷಣ, ಸಮಾನ ಉದ್ಯೋಗಾವಕಾಶ ಸಾಧ್ಯವೇ? ದಲಿತರ ಹಿಂದುಳಿದವರ ಅಭಿವೃದ್ಧಿ ಸಾಧ್ಯವೇ? ನಂತರ ಬರುವ ಪ್ರಶ್ನೆ ಇಂಗ್ಲೀಷ್ ಬೇಕೇ? ಬೇಡವೇಕೆ? ಎಂಬುದು ಇಂಗ್ಲೀಷ್‌ನ ಜ್ಞಾನ ಮಕ್ಕಳಿಗೆ ಬೇಕಾಗಿರುವುದು ಸಹಜವೇ. ಒಂದಕ್ಕಿಂತ ಹೆಚ್ಚು ಭಾಷೆಗಳ ಕಲಿಕೆ ಪರಸ್ಪರ ಪೂರಕವಾದ ಚಟುವಟಿಕೆಯಾಗಿರುತ್ತದೆ. ಬರಲಿರುವ ದಿನಗಳಲ್ಲಿ ಅವಕಾಶ ಗಳಿಕೆಯಲ್ಲಿ, ಬದುಕಿನ ನಿರ್ವಹಣೆಯಲ್ಲಿ, ಸಮಸ್ಯೆಗಳನ್ನು ಎದುರಿಸುವಲ್ಲಿ, ಪ್ರಗತಿಪರ ಹೋರಾಟಗಳಲ್ಲಿ, ಇಂಗ್ಲೀಷ್ ಜ್ಞಾನ ಲಾಭಕರವಾಗುತ್ತದೆ ಎಂದು ದಲಿತ, ಹಿಂದುಳಿದ ವರ್ಗದವರು ಭಾವಿಸಿದರೆ ಅವರ ಭಾವನೆಗಳನ್ನು ಗೌರವಿಸುವುದು ಪ್ರಜಾಪ್ರಭುತ್ವದ ಕರ್ತವ್ಯವಾಗಿರುತ್ತದೆ. ಹಾಗಾಗಿ ಖಾಸಗಿಯಲ್ಲಿ ದೊರೆಯುವುದನ್ನ ಸರ್ಕಾರ ನೀಡುವಂತಾದರೆ ದುಷ್ಪರಿಣಾಮ ತಪ್ಪಿಸುವ ಹೊಣೆ ಜನಪ್ರತಿನಿಧಿಗಳದ್ದು.

ಸವಲತ್ತು ಹಾಗೂ ಅವಕಾಶಗಳು ನಿಜವಾಗಿಯೂ ದಲಿತರಿಗೆ, ಅಲ್ಪಸಂಖ್ಯಾತರಿಗೆ ಹಾಗೂ ಬುಡಕಟ್ಟು ವರ್ಗಕ್ಕೆ ದೊರಕಿದವೇ? ಈ ಪ್ರಶ್ನೆಗಳಿಗೆ ಒಕ್ಕೊರಲಿನ ಉತ್ತರ ಇಲ್ಲ ಶೇ. ೬೦% ಭಾಗದಷ್ಟು ದಲಿತರು ಇನ್ನೂ ಅನಕ್ಷರಸ್ಥರು. ಪರಿಶಿಷ್ಟ ಪಂಗಡದಲ್ಲಿ ಇದು ಶೇ. ೭೦% ರಷ್ಟು, ಕಡುಬಡತನದಿಂದ ಶಾಲಾ ಓದು ಮುಂದುವರಿಸಲಾಗದೆ ಶಾಲೆಗಳಿಂದ ಹೊರ ಬೀಳುವ ದಲಿತರ ಸಂಖ್ಯೆ ಶೇ. ೮೦% ರಷ್ಟು ಖಾಲಿ ಬೀಳುತ್ತವೆ. ಉದ್ಯೋಗದಲ್ಲಿಯೂ ಇದೇ ರೀತಿಯ ಅಂಕಿ ಅಂಶಗಳು ಕಾಣಸಿಗುತ್ತವೆ. ಅಂದರೆ ದೇಶಕ್ಕೆ ಸ್ವಾತಂತ್ರ್ಯ ಬಂದು ೬೫ ವರ್ಷ ನಂತರವೂ ದಲಿತ ಸಮುದಾಯವು ಕಡು ಬಡತನದಿಂದ ನರಳುತ್ತಿದ್ದು ಅತ್ಯಂತ ಹಿಂದುಳಿದಿದೆ. ಕನಿಷ್ಠ ಪ್ರಾಥಮಿಕ ಶಿಕ್ಷಣವನ್ನು ದಲಿತ ಸಮುದಾಯಕ್ಕೆ ಖಾತ್ರಿ ಪಡಿಸಲು ವಿಫಲವಾಗಿರುವ ಸರ್ಕಾರವು ಐಟಿ, ಬಿಟಿ, ಐಐಎಂ, ವೈದ್ಯ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಸೀಟುಗಳನ್ನು ಕಾದಿರಿಸುತ್ತೇವೆ ಎಂದು ಕೊಚ್ಚಿಕೊಳ್ಳುವುದು ನಿಜವಾಗಿ ವಿಪರ್ಯಾಸವಲ್ಲವೇ?

ಖಾಸಗೀಕರಣದ ಕಪಿಮುಷ್ಟಿ ಬಹಳ ವ್ಯಾಪಕವಾದುದು. ಅದು ಮಾನವ ನಿರ್ಮಿತ ಸಮಾಜದ ಎಲ್ಲಾ ವಿಭಾಗಗಳನ್ನೊಳಗೊಂಡಿದೆ. ಒಂದೊಂದಾಗಿ ಎಲ್ಲಾ ಕ್ಷೇತ್ರಗಳನ್ನು ಆಕ್ರಮಿಸಿಕೊಂಡು ನೀರನ್ನು ಕೂಡಾ ಖಾಸಗೀಕರಣದ ಅಡಿಯಲ್ಲಿ ತಂದುಕೊಂಡಿದೆ. ಇನ್ನೂ ಮುಂದಿರುವುದು ಗಾಳಿ ಮಾತ್ರ ಅದೂ ಕೂಡಾ ಮುಂದೊಂದು ದಿನ ಆಗಬಹುದು. ಖಾಸಗೀಕರಣದಿಂದಾಗಿ ದಲಿತ ಹಿಂದುಳಿದವರಿಗೆ ಅಭದ್ರತೆ ಕಾಡುತ್ತಿದೆ. ಸ್ವಾಭಿಮಾನಕ್ಕೆ ಕೊಡಲಿ ಏಟು ಬೀಳುತ್ತಿದೆ. ಶ್ರಮದಿಂದಾಗುವ ಪ್ರಾಮಾಣಿಕ ದುಡಿತಕ್ಕೆ ನಾವು ಪ್ರಜಾಪ್ರಭುತ್ವದ ಪರಿಧಿಯೊಳಗೆ ನ್ಯಾಯವನ್ನು ಒದಗಿಸುವಲ್ಲಿ ಒದ್ದಾಡುತ್ತಿದ್ದೇವೆ. ಇನ್ನೂ ಶಿಕ್ಷಣ ಅದು ನಮ್ಮ ಕ್ಷಣ ಕ್ಷಣದ ಮಾತಾದರೂ ಅದೊಂದು ಬಿಸಿಲ್ಗುದುರೆಯಾಗುತ್ತಿದೆ ಎಂದೆನಿಸುತ್ತಿದೆ. ಬದುಕಲು ಇರುವ ಧೈರ್ಯ ಜಾಸ್ತಿ ಎನಿಸಿದರೂ ಅಭದ್ರತೆ ಕಾಣುತ್ತಿದೆ. ಸಾಮಾಜಿಕವಾಗಿ ಹಿಂದುಳಿದಿರುವ, ನೊಂದಿರುವ ದಲಿತ ಹಿಂದುಳಿದ ವರ್ಗಗಳ ಅಸ್ಪೃಶ್ಯತೆಯ ಆಚರಣೆಯನ್ನು ಜೀವಂತವಾಗಿಡುವ ಮೂಲಕ ಅವಕಾಶಗಳನ್ನು ಹೊಸಕಿ ಹಾಕುವ ಹುನ್ನಾರ ವಿದು. ದಲಿತ ಪದವೇ ದಲಿತರಿಗೆ ಬಂಡವಾಳವಾಗಬೇಕಿತ್ತು ಆದರೆ ಒಡೆದು ಹೋದ ಈ ದಲಿತ ಸಂಘಟನೆಗಳು ಬೌದ್ಧಿಕವಾಗಿ ನಶಿಸುವತ್ತ ಸಾಗುತ್ತಿವೆ. ಇದನ್ನು ಉಪಯೋಗಿಸಿಕೊಂಡ ಖಾಸಗೀ ಬಂಡವಾಳ ಶಾಹಿಗಳು ಸಾಮಾಜಿಕ ಬಹಿಷ್ಕಾರಗಳನ್ನು ಹಸಿಯಾಗಿಸುವುದರ ಮೂಲಕ ಸಂವಿಧಾನಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸಲು ಸಂಚು ನಡೆಸುತ್ತಿದೆ.

* ಶಿಕ್ಷಣ ಮತ್ತು ವ್ಯಾಪಾರೀಕರಣ:

ಜಾತಿಗೊಂದರಂತೆ ಬೆಳೆದ ಶಿಕ್ಷಣ ಸಂಸ್ಥೆಗಳು ಒಂದುಕಡೆಯಾದರೆ, ಧಾರ್ಮಿಕ ಕ್ಷೇತ್ರದಲ್ಲಿ ಕಾಯಕ ಮಾಡುತ್ತ ವಿಶೇಷ ಹೊರೆ ಹೊತ್ತು ಶಿಕ್ಷಣವನ್ನು ವ್ಯಾಪಾರೀಕರಣ ಮಾಡುವುದು ಧರ್ಮ ಪೀಠದ್ದಾದರೆ, ಖಾಸಗೀ ಬಂಡವಾಳವನ್ನು ಹೂಡಿ ವ್ಯಾಪಾರವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಗುಣಮಟ್ಟದ ಹೆಸರೇಳಿ ಪಾಲಕರನ್ನು ಶೋಷಿಸುತ್ತಿರುವ ಸಿಬಿಎಸ್‌ಇ ಮತ್ತು ರಾಜ್ಯ ಸರ್ಕಾರದ ಪಠ್ಯ ಬೋಧಿಸುತ್ತಿರುವ ಖಾಸಗೀ ಶಾಲೆಗಳು, ಕಾನ್ವೆಂಟ್ ಸಾಂಸ್ಕೃತಿಗೆ ಮೊರೆ ಹೋಗಿಸುವ ಮಿಷನರಿ ಶಾಲೆಗಳು, ಒಂದೇ ಎರಡೇ ಎಲ್ಲವೂ ದಲಿತ, ಅಲ್ಪಸಂಖ್ಯಾತರ, ಹಿಂದುಳಿದ ವರ್ಗದವರಿಗಾಗಿ ಏನೂ ಮಾಡಿವೆ ಎಂದರೆ, ಸರ್ಕಾರಿ ಸೌಲಭ್ಯಗಳಿಂದ ವಂಚಿತರನ್ನಾಗಿ ಮಾಡಿವೆ. ಸಿಗಬಹುದಾದ ಸೌಕರ್ಯಗಳಿಗೆ ಕಡಿವಾಣ ಹಾಕಿ ತಮ್ಮದೇ ಸಾಮ್ರಾಜ್ಯದಲ್ಲಿ ನರಳುವ ತ್ರಿಶಂಕು ಸ್ಥಿತಿಯನ್ನು ನಿರ್ಮಿಸಿವೆ.

ಲಾಭ ನಷ್ಟ ಆಧಾರಿತ ವ್ಯವಹಾರದೊಂದಿಗೆ ಶಿಕ್ಷಣವನ್ನು ವಸ್ತುವನ್ನಾಗಿ ಸರಕನ್ನಾಗಿ ನಿರ್ಮಿಸುವ ಹುನ್ನಾರ ಖಾಗೀಯವರದು. ಕೆ.ಎಸ್.ಆರ್.ಟಿ.ಸಿ ಮತ್ತು ಕೆ.ಪಿ.ಟಿ.ಸಿ.ಎಲ್‌ಗಳು ಅಧಿಕಾರದ ವಿಕೇಂದ್ರಿಕರಣದ ಸೋಗನ್ನು ಹಾಕಿಕೊಂಡು ಬಂಡವಾಳಿಗರು ಹಂಚಿಕೊಂಡು ತಿನ್ನಲು ಅಥವಾ ಕೊಳ್ಳೆ ಹೊಡೆಯಲು ಪ್ರದೇಶಗಳನ್ನು ಹಂಚಿಕೊಂಡತಾಗಿದೆ. ಗುಣಮಟ್ಟದ ನೆಪದಲ್ಲಿ ಬಂದು ಸೇರಿದ ಈ ಖಾಸಗೀ ಸಂಸ್ಥೆಗಳು ಸಾರ್ವಜನಿಕ ವಲಯವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಗಾಣದೆತ್ತಿನಂತೆ ದುಡಿಯುವ ವರ್ಗವನ್ನಾಗಿ ಕಾರ್ಮಿಕರನ್ನು ಕಾಣುತ್ತಿದೆ. ರಸ್ತೆ ಸಾರಿಗೆ, ನಂತರದಲ್ಲಿ ಕರೆಂಟ್, ಕುಡಿಯುವ ನೀರಿನ ವಿಲೇವಾರಿ ಕೂಡ ಈಗ ನಡೆಯುತ್ತಿದೆ. ಕಸದ ವಿಲೇವಾರಿಯಿಂದ

ಇದು ಖಾಸಗೀಕರಣ ಹುಟ್ಟು ಕಾರ್ಮಿಕರನ್ನು ಬೀದಿಗೆ ತಳ್ಳಿದೆ. ಇಲ್ಲಿ ಬೀದಿಗೆ ಬರುವವರು ಬಲಿಪಶುಗಳಾಗುವವರು ಬಡವರು, ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರು ಎಂಬುದನ್ನು ಮರೆಯುವಂತಿಲ್ಲ. ಇವರಿಗಾದ ಈ ಗತಿ ಅವರ ಆರ್ಥಿಕ ಬದುಕನ್ನೆ ಕಿತ್ತುಕೊಂಡು ಶಿಕ್ಷಣ ಮತ್ತಿತರ ಅವಕಾಶಗಳಿಂದ ವಂಚಿತರನ್ನಾಗಿಸಿದೆ.

ಒಂದು ಕಡೆ ಉನ್ನತ ಶಿಕ್ಷಣವನ್ನು ತಮ್ಮ ಕಪಿ ಮುಷ್ಠಿಯಲ್ಲಿಟ್ಟುಕೊಂಡು ಬಂಡವಾಳವನ್ನು ಶೇಖರಿಸುವ ರಾಜಕಾರಣಿಗಳ, ಶ್ರೀಮಂತರ, ಮಠಾಧೀಶರ ಸಾಮ್ರಾಜ್ಯಗಳೇ ಖಾಸಗೀ ಶಿಕ್ಷಣ ಸಂಸ್ಥೆಗಳು ಇವುಗಳಿರುವುದು ಯಾರಿಗಾಗಿ? ಹಣವಿರುವವರಿಗಾಗಿ. ಇಲ್ಲಿರುವ ಶಿಕ್ಷಣ ಒಬ್ಬ ಸಾಮಾನ್ಯನಿಗೆ ಸಿಗುವುದೇ? ಇಲ್ಲ. ಹಾಗಾದರೆ, ಅವನು ಸರ್ಕಾರಿ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುವುದಾದರೆ ಎಷ್ಟಿವೆ ಸಾರ್ವಜನಿಕ ಸಂಸ್ಥೆಗಳು?

*** ಖಾಸಗಿಯಲ್ಲಿ ಮೀಸಲು:**

ಮೀಸಲಾತಿಯನ್ನು ಪಾಲಿಸಿದ್ದೇವೆಂದು ಹೇಳುವ ಖಾಸಗಿ ಸಂಸ್ಥೆಗಳು ಕೊಟ್ಟಿರುವುದು ಯಾರಿಗೆ? ದುಡ್ಡು ಹೊಂದಿರುವ, ಈಗಾಗಲೇ ಮೀಸಲಾತಿ ಸೌಲಭ್ಯ ಪಡೆದು ಮುಂದೆ ಬಂದಿರುವ ಶ್ರೀಮಂತ ದಲಿತ ಅಂದರೆ, ಕೆನೆಪದರಿನ ಅಡಿಯಲ್ಲಿ ಬರುವ ವರ್ಗ ಮಾತ್ರ– ಮೀಸಲಾತಿ ಸೌಲಭ್ಯ ಪಡೆದಿದೆ. ಹಾಗಾದರೆ ಬಹುಸಂಖ್ಯಾತ ಬಡವರ ಗತಿ ಏನು? ಉನ್ನತ ಶಿಕ್ಷಣ ಪಡೆವ ಕನಸಿನಲ್ಲಿ ಕಸ ಬಳಿಯುವ ಹುದ್ದೆಗೆ ಸೀಮಿತನಾಗುವ ಬಡವರ ಪಾಲಿಗೆ ಕೋರ್ಸುಗಳು, ಸರ್ಟಿಫಿಕೇಟುಗಳು ಇದ್ದರೆಷ್ಟು ಬಿಟ್ಟರೆಷ್ಟು?

ಇದೆ ಏನು ಸಾಮಾಜಿಕ ನ್ಯಾಯ? ಮಹಾನ್ ಸಂವಿಧಾನದ ಅಂಶಗಳನ್ನು ಗಾಳಿಗೆ ತೂರುವ ಖಾಸಗಿ ಕ್ಷೇತ್ರವನ್ನು ಬದಲಿಸಲು ಸಾಧ್ಯವಿಲ್ಲವೇ? ಈ ದೇಶದ ರಾಜಕೀಯ, ಸರಕಾರಗಳು, ರಾಜಕಾರಣಿಗಳು, ಬುದ್ಧಿಜೀವಿಗಳು ಮತ್ತು ಕೆನೆಪದರಿನ ದಲಿತರು ಒಂದು ಯೋಚಿಸಬೇಕು "ನೀವು ಆ ಸ್ಥಾನವನ್ನು ಅಲಂಕರಿಸಿದ್ದು ರಿಜರ್ವೇಷನ್‌ದಿಂದಾಗಿ ಮಾತ್ರ ಬುದ್ಧಿವಂತರೆಂಬುದಾಗಿ ಅಲ್ಲ" ಎಂಬ ಅಂಶವನ್ನು ಒತ್ತಿ ಹೇಳುತ್ತಾ ಮೀಸಲಾತಿಯನ್ನು ಕಿತ್ತೊಗೆವ, ಶೈಕ್ಷಣಿಕ ಅವಕಾಶಗಳನ್ನು ಕಿತ್ತುಕೊಳ್ಳುವ ಹೊಸ ಹೊಸ ಹಾದಿಗಳನ್ನು ಹುಟ್ಟು ಹಾಕುತ್ತಿದೆ.

ದಲಿತರು, ಹೆಣ್ಣುಮಕ್ಕಳು, ಬಡವರು ಅಧಿಕಾರಕ್ಕೆ ಬಂದಕೂಡಲೆ ಸಾಮಾಜಿಕ ವ್ಯವಸ್ಥೆಯ ರೂಪ ಬದಲಿಸಿ ಅಭಿವೃದ್ಧಿಯಲ್ಲಿ ಸಾಗುವಾಗ ಅದನ್ನು ವಿರೋಧಿಸುವ ಪ್ರಕ್ರಿಯೆ ಎಸ್.ಡಿ.ಎಂ.ಸಿಯಲ್ಲಿ ಕಂಡಿದ್ದೇವೆ. ಇವರು ಅಸಮರ್ಥರೆಂದು ಸರ್ಟಿಫಿಕೇಟ್ ಕೊಟ್ಟು ಅಧಿಕಾರದಿಂದ ಮುಕ್ತರನ್ನಾಗಿಸಿ ಖಾಸಗೀಕರಿಸುವ ಹುನ್ನಾರವಲ್ಲವೇ?

ಶಿಕ್ಷಣ ಸೇವೆಯಾಗಬೇಕು, ಮಾರುಕಟ್ಟೆಯಲ್ಲಿನ ವಸ್ತುವಾಗಬಾರದು. ಇದನ್ನು ಎಲ್ಲಾ ಬಡವರು ಅರ್ಥ ಮಾಡಿಕೊಳ್ಳಬೇಕಿದೆ, ವಿರೋಧಿಸಬೇಕಿದೆ. ದಲಿತರಲ್ಲಿ ಒಂದು ಗೊಂದಲವಿದೆ. ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಾ "ಒಳಮೀಸಲಾತಿ" ಮತ್ತು "ಕೆನೆಪದರು" ಎಂಬ ಬೇಕು ಬೇಡಗಳ ಮಧ್ಯೆ ಸಿಕ್ಕು ವಿವೇಚನೆಯನ್ನು ಮರೆತಂತಿದೆ. ಇದುವರೆಗೂ ಬಹುಸಂಖ್ಯಾತ ದಲಿತರು, ಅಲ್ಪಸಂಖ್ಯಾತರು, ಬುಡಕಟ್ಟು ವರ್ಗದವರು ೬೦ ವರ್ಷಗಳಿಂದ ಅವಕಾಶ ವಂಚಿತರು: ಅಸಂಘಟಿತ ವಲಯದಿಂದ ಬದುಕನ್ನು ಉಳಿಸಿಕೊಳ್ಳಲು ಕಷ್ಟಪಡುವವರಿಗೆ ಇನ್ನೂ ಶಿಕ್ಷಣದ ಮಾತೆಲ್ಲಿ? ಅದರಲ್ಲಿಯೂ ಖಾಸಗೀಕರಣವೇನು ಕೊಡಬಲ್ಲದು?

*** ಶಿಕ್ಷಣದ ಖಾಸಗೀಕರಣದ ಮಹನೀಯರು:**

ಜೀವವನ್ನು ಹೊಸಕುವ, ಅಭದ್ರತೆ ಸೃಷ್ಟಿಸುವ ಹುನ್ನಾರವಾಗಿ ತಮ್ಮ ಹಿತಾಸಕ್ತಿಗಳನ್ನು ವಸ್ತುಗಳನ್ನಾಗಿ ಮಾರಾಟ ಮಾಡೋದು ಖಾಸಗೀಕರಣ. ಅಂದಮೇಲೆ ಸೇವೆಯ ಮಾತು ಬಹುದೂರ. ಪ್ರಾಥಮಿಕ ಶಿಕ್ಷಣ ಕ್ಷೇತ್ರಕ್ಕೆ ಲಗ್ಗೆ ಇಟ್ಟರುವ ಮಹನೀಯರಾದ ಅಜೀಂ ಪ್ರೇಮ್‌ಜಿ, ಅಕ್ಷರ ಪ್ರತಿಷ್ಠಾನ, ಎಜುಕೇಶನ್ ಡೆವಲಪ್‌ಮೆಂಟ್ ಸೆಂಟರ್, ನಿಯಾಸ್, ಸುಧಾಮೂರ್ತಿ ಫೌಂಡೇಷನ್, ಇನ್‌ಫೋಸಿಸ್ ನಾರಾಯಣಮೂರ್ತಿಯಂತವರ ಬಹು ಮುಖ್ಯ ಕಾಳಜಿ ಶಿಕ್ಷಣದ ಪ್ರಸಾರವಲ್ಲ. ಆರಂಭದಲ್ಲಿ ಬಂಡವಾಳ ಹಾಕಿ ನಂತರ ಬಂಡವಾಳ ತೆಗೆದು ಅನುದಾನದ ಕೊಳ್ಳೆ ಹೊಡೆವ ಹುನ್ನಾರ. ಅಕ್ಷರ ದಾಸೋಹವನ್ನೂ ಖಾಸಗೀಕರಣದತ್ತ ಕೊಂಡೊಯ್ಯುವ 'ಇಸ್ಕಾನ್'ನ ಮೂಲ ಗುರಿಯೇನು? ವಿಷ್ಣು ಪಾರಮ್ಯವನ್ನು ಸಾರಿ ಹಣ ಕೀಳುವುದೇ? ಅಥವಾ ಮಕ್ಕಳ ಹಕ್ಕುಗಳನ್ನು ಕೀಳುತ್ತಾ ಅವರನ್ನು ನಿರ್ವೀರ್ಯರನ್ನಾಗಿಸಿ ದಸ್ಯುಗಳನ್ನಾಗಿ ನಿರ್ಮಿಸುವುದೇ?

ಈ ಮೇಲೆ ಸೂಚಿಸಿದ ಮಹನೀಯರಿಂದ ದಲಿತ ಹಿಂದುಳಿದ ಹಾಗೂ ಬುಡಕಟ್ಟುಗಳ ನಿರೀಕ್ಷೆ ಏನಾಗಿರಬೇಕು? ಬೇಡವೇ ಬೇಡ. ಖಾಸಗೀ ವ್ಯಕ್ತಿಗಳು ನಮ್ಮ ವ್ಯಕ್ತಿತ್ವಕ್ಕೆ, ಮೂಲಭೂತ ಹಕ್ಕಿಗೆ ಕೈ ಹಾಕುತ್ತಿರುವುದರಿಂದಾಗಿ ಅವರಿಂದ ನಮ್ಮ ನಿರೀಕ್ಷೆಗಳೇನು ಇಲ್ಲ. ದಲಿತ ಮಹಿಳೆಯೊಬ್ಬಳು ಊಟ ಬಡಿಸುತ್ತಾಳೆ. ಅಡಿಗೆ ಮಾಡುತ್ತಾಳೆಂದರೆ ಊಟ ಬಿಡಲು ಪ್ರೇರೇಪಿಸಿದ ಪಾಲಕರು ಕೂಡ ಅವರಿಗೆ ಮಾಡಲು ಬರುತ್ತಿಲ್ಲವೆಂದು, ಅವರು ಅನರ್ಹರೆಂದು ಸೃಷ್ಟಿಸಿ ಯೋಜನೆಯ ವಿಫಲತೆಯನ್ನು ಕಾಣುವ ಸ್ಥಿತಿ ತಂದೊಡ್ಡಿ, ಅದನ್ನು ಖಾಸಗೀಗೊಳಿಸುವ, ನವ ಉದಾರೀಕರಣದ ಮಹಾನ್ ಸಂಸ್ಕೃತಿಯನ್ನು ಸೃಷ್ಟಿಸುವ ಹುನ್ನಾರ. ಆಧುನಿಕ ಬಂಡವಾಳ ಶಾಹಿಗಳದು. ಓಟು ಬ್ಯಾಂಕಿನ ಆಸೆಗಾಗಿ ಖಾಸಗಿಯವರನ್ನು ಓಲೈಸುವ ರಾಜಕೀಯ. ಜನರ 'ಹಣ'ವನ್ನು ಅನುದಾನವಾಗಿ ಖಾಸಗೀಯವರಿಗೆ ನೀಡುವ ರಾಜಕಾರಣಿಗಳು ಈ ದೇಶದ ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ಹಾಗೂ ಬುಡಕಟ್ಟುವರ್ಗದ ಮಕ್ಕಳ ಹಿತಾಸಕ್ತಿಗಳನ್ನು ಗಾಳಿಗೆ ತೂರಿದ್ದಾರೆ.

ಮೀಸಲಾತಿಯನ್ನು ಪಾಲಿಸಿದ್ದೇವೆಂದು ಹೇಳುವ ಖಾಸಗಿ ಸಂಸ್ಥೆಗಳು ಕೊಟ್ಟಿರುವುದು ಯಾರಿಗೆ? ದುಡ್ಡು ಹೊಂದಿರುವ, ಈಗಾಗಲೇ ಮೀಸಲಾತಿ ಸೌಲಭ್ಯ ಪಡೆದು ಮುಂದೆ ಬಂದಿರುವ ಶ್ರೀಮಂತ ದಲಿತ ಅಂದರೆ, ಕೆನೆಪದರಿನ ಅಡಿಯಲ್ಲಿ ಬರುವ ವರ್ಗ ಮಾತ್ರ– ಮೀಸಲಾತಿ ಸೌಲಭ್ಯ ಪಡೆದಿದೆ. ಹಾಗಾದರೆ ಬಹುಸಂಖ್ಯಾತ ಬಡವರ ಗತಿ ಏನು? ಉನ್ನತ ಶಿಕ್ಷಣ ಪಡೆವ ಕನಸಿನಲ್ಲಿ ಕಸ ಬಳಿಯುವ ಹುದ್ದೆಗೆ ಸೀಮಿತನಾಗುವ ಬಡವರ ಪಾಲಿಗೆ ಕೋರ್ಸುಗಳು, ಸರ್ಟಿಫಿಕೇಟುಗಳು ಇದ್ದರೆಷ್ಟು ಬಿಟ್ಟರೆಷ್ಟು? ಇದೆ ಏನು ಸಾಮಾಜಿಕ ನ್ಯಾಯ? ಮಹಾನ್ ಸಂವಿಧಾನದ ಅಂಶಗಳನ್ನು ಗಾಳಿಗೆ ತೂರುವ ಖಾಸಗಿ ಕ್ಷೇತ್ರವನ್ನು ಬದಲಿಸಲು ಸಾಧ್ಯವಿಲ್ಲವೇ?

ಬಡವರ ಬದುಕನ್ನು ಸ್ಲಮ್‌ಗಳನ್ನಾಗಿ ನಿರ್ಮಿಸಿದ್ದಾರೆ. ಹಾಡಿಗಳಲ್ಲಿನ ಬುಡಕಟ್ಟುಗಳ ಬದುಕನ್ನು ಕಸಿದಿದ್ದಾರೆ. ಊಳುವ, ಜೀವ ತೇಯುವ ಭೂಮಿಯನ್ನು ಕಸಿದು ವಿಶೇಷ ಆರ್ಥಿಕ ವಲಯಗಳನ್ನಾಗಿ, ವಿಶೇಷ ಕೃಷಿ ವಲಯಗಳನ್ನಾಗಿ ಸೃಜಿಸಿ ಎಲ್ಲಾ ರೀತಿಯ ಹಕ್ಕುಗಳನ್ನು ಕಸಿಯುತ್ತಿರುವ ಖಾಸಗೀಕರಣ ಈ ದೇಶಕ್ಕೆ ಬಹುಸಂಖ್ಯಾತ ಬಡಜನರ ಉದ್ಧಾರಕ್ಕೆ ಕಂಟಕಪ್ರಾಯ. ಅವರದೇ ನೀತಿ, ನಿಯಮಗಳನ್ನು ಗಾಳಿಗೆ ತೂರಿ ಇಲ್ಲಿ ಗುಣಮಟ್ಟವಿದೆ ಎಂದು ಕಣ್ಕಟ್ಟು ಮಾಡುವ ತಂತ್ರವಲ್ಲದೇ ಮತ್ತೇನು?

*** ಶಿಕ್ಷಣ & ಗುಣಮಟ್ಟ:**

ಸರ್ಕಾರ ಮಕ್ಕಳಿಗಾಗಿ ಉಚಿತವಾಗಿ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ಬಡ ಮಕ್ಕಳಿಗಾಗಿ ಮಾಡುತ್ತಿದೆ. ಇದೆಲ್ಲಾ ಮಾಡುವುದು ಮಗು ಶಾಲೆಯಲ್ಲಿ ಉಳಿಯಲೆಂದು. ಹಾಗೂ ಗುಣಮಟ್ಟ ಕಾಪಾಡಲು ಏನೆಲ್ಲಾ ತರಬೇತಿಗಳು. ಒಂದು ಕಡೆ ಸೌಲಭ್ಯಗಳನ್ನು ನೀಡಿ ಕಲಿಯಲಿ ಎಂದು ಹೇಳುತ್ತಾ, ಇನ್ನೊಂದು ಕಡೆ ಖಾಸಗೀ ಶಾಲೆಗಳಿಗೆ ಅನುಮತಿ ನೀಡುತ್ತಾ, ಗುಣಮಟ್ಟ ಅಲ್ಲಿದೆ ಹೋಗಿ ಎಂದು ಹೇಳುತ್ತಾ ಪಾಲಕರನ್ನು ದಾರಿ ತಪ್ಪಿಸುತ್ತಿದೆ. ಒಂದು ಹೊತ್ತಿನ ಊಟಕ್ಕೂ ಯೋಚಿಸುವ ಬಡ ಪಾಲಕರ ಮಕ್ಕಳಿಗೆ ಅನ್ನ ಕೊಡುವ ಹುನ್ನಾರದಲ್ಲಿ ಗುಣಮಟ್ಟ ಶಿಕ್ಷಣದ ಬಗ್ಗೆ ಗೊಂದಲವನ್ನು ಸೃಷ್ಟಿಸುತ್ತಿದೆ.

*** ಉನ್ನತ ಶಿಕ್ಷಣ:**

ಪ್ರಾಥಮಿಕ ಶಿಕ್ಷಣ ಈ ರೀತಿಯಾದರೆ ಇನ್ನು ಬಂಡವಾಳದ ಬಾಯಿಗೆ ಸಿಕ್ಕ ಉನ್ನತ ಶಿಕ್ಷಣ, ವಿದೇಶ ಬಂಡವಾಳವನ್ನು ನೇರವಾಗಿ ಆಹ್ವಾನಿಸುತ್ತಾ ನೂರಾರು ವಿದೇಶಿ ವಿಶ್ವ ವಿದ್ಯಾಲಯಗಳ ಬ್ರ್ಯಾಂಚ್‌ಗಳ ಆರಂಭಕ್ಕೆ ಅನುಮತಿ ನೀಡಿದೆ. ವರ್ಷಕ್ಕೆ ನಾಲ್ಕುನೂರ ಬಿಲಿಯನ್ ಡಾಲರ್ ಬೇಡಿಕೆಗೆ ತಕ್ಕಂತೆ ನಿಪುಣರನ್ನು ಹೆಚ್ಚಿಸುವ ಕೇಂದ್ರಗಳು ಇವಾದರೆ, ಸರ್ಕಾರಿ ವೃತ್ತಿ ಶಿಕ್ಷಣದಲ್ಲಿ ದಲಿತರು, ಹಿಂದುಳಿದವರು, ಬಡವರೇ ಇರುವ ಈ ಕೇಂದ್ರಗಳ ನಿಪುಣರ ಗತಿ ಏನಾಗಬೇಕು? ಗುಣಮಟ್ಟ ಶಿಕ್ಷಣ ಕಾಪಾಡುವ ವಿಶ್ವದ ಪ್ರಖ್ಯಾತ ಶಿಕ್ಷಣ ಸಂಸ್ಥೆಗಳು ಪಾದಾರ್ಪಣೆ ಮಾಡಲು ಅಗತ್ಯವಿರುವ ಶೈಕ್ಷಣಿಕ ವಾತಾವರಣ ಇಲ್ಲಿಲ್ಲ ಎಂಬುದು ಗೊತ್ತಿದ್ದರು ಈ ದೇಶದ ರಾಜಕಾರಣಿಗಳು ದೇಶಿಯ ಶಿಕ್ಷಣದ ದಂದೆಕೋರರೊಂದಿಗೆ ಶಾಮೀಲಾಗಿ ಹೊಸ ರೀತಿಯಲ್ಲಿ ಪೋಷಕರನ್ನೂ ಲೂಟಿ ಮಾಡುತ್ತಿವೆ. ಅದಕ್ಕಾಗಿ ಜ್ಞಾನ ಪರಿಷತ್ ಅಧ್ಯಕ್ಷರಾದ ಶ್ರೀ ಭಾರ್ಗವರವರು ವಿದೇಶಿ ಸಂಸ್ಥೆಗಳ ಆಗಮನಕ್ಕೆ ಕಡಿವಾಣ ಹಾಕುತ್ತಾ ಗ್ರಾಮಾಂತರ ಪ್ರದೇಶದ ವಿದ್ಯಾಕಾಂಕ್ಷಿಗಳಿಗೆ ಎಟಕುವಂತಹ ವೃತ್ತಿ ಶಿಕ್ಷಣ ಮತ್ತು ವೈಜ್ಞಾನಿಕ ಶಿಕ್ಷಣ ವಿಸ್ತರಿಸಬೇಕೆಂದು–ಆಗ್ರಹಿಸಿದ್ದಾರೆ. ಹಾಗೆಯೇ ಮತ್ತಷ್ಟು ಸರ್ಕಾರಿ ವೃತ್ತಿ ಶಿಕ್ಷಣ ಸಂಸ್ಥೆಗಳ ಅಗತ್ಯ ಪಟ್ಟಣಕ್ಕಿಂತ ಗ್ರಾಮಾಂತರದಲ್ಲಿ ಅಗತ್ಯವಿದೆ ಎಂಬ ಭಾವನೆ ವ್ಯಕ್ತಪಡಿಸಿದ್ದು ಸರಿಯೆನಿಸುತ್ತದೆ.

ಖಾಸಗೀ ಶಿಕ್ಷಣ ಸಂಸ್ಥೆಗಳಿಗೆ ಸರಕಾರ ಕಟ್ಟಡ, ಬಾಡಿಗೆ, ನಿರ್ವಹಣಾ ವೆಚ್ಚ ಹಾಗೂ ಸಿಬ್ಬಂದಿ ವೇತನಕ್ಕಾಗಿ ಅನುದಾನ ನೀಡುತ್ತಿದೆ. ಆದರೆ ೧೯೮೭ರ ನಂತರದವು ಶಾಶ್ವತ ಅನುದಾನ ರಹಿತವಾದವು. ಮತ್ತು ನಿರ್ವಹಣಾ ಅನುದಾನ ನೀಡುತ್ತಿಲ್ಲ. ಹೀಗಾಗಿ ಪಾಲಕರ ಕಿಸೆಗೆ ಕತ್ತರಿ ಹಾಕಬೇಕಾದ ಪ್ರಮೇಯ ಒದಗಿದೆ. ಹಾಗೆಯೇ ಅನುದಾನವೆಲ್ಲಿಂದ ಬಂತು? ಈ ನಾಡಿನ ಬಹುಸಂಖ್ಯಾತ ಬಡವರ ತೆರಿಗೆಯ ಹಣ. ಆದರೆ ಆ ಜನಗಳಿಗೆ ಅವರಿಂದ ಸೇವೆ ಇಲ್ಲ. ಮೇಲಿಂದ ಮೇಲೆ ಸುಮಾರು ಕಾಲೇಜುಗಳಿಗೆ ಆದೇಶ ಕೊಡುತ್ತಾ ಸಾಗಿರುವ ಸರಕಾರಕ್ಕೆ ಇಲ್ಲಿ ಯಾವುದನ್ನೂ "ಬೇಡ" ಎನ್ನಲಾಗುವುದೋ ಕೃತಿಯಲ್ಲಿ ಅದು "ಬೇಕು" ಎಂದು ಅನುಸರಿಸುವುದು ದಾರಿ ತಪ್ಪಿಸುವ ಕ್ರಮವಲ್ಲದೆ ಮತ್ತೇನು? ಶಿಕ್ಷಣದ ಈ ಬಗೆಯ ಖಾಸಗೀಕರಣ ಸಾಮಾಜಿಕ ನ್ಯಾಯವನ್ನು ಮೂಲೆಗುಂಪು ಮಾಡುತ್ತಾ ಈ ಮೂಲಕ ಉಳ್ಳವನಿಗೆ ಶಿಕ್ಷಣ ಎಂಬ ನೀತಿ ಎತ್ತಿ ಹಿಡಿಯುತ್ತದೆ. ಅಂದ ಮೇಲೆ ತಲೆತಲಾಂತರದಿಂದ ಶೋಷಣೆಗೊಳಪಟ್ಟ ದಲಿತ, ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ಬುಡಕಟ್ಟುವರ್ಗದವರ ಗತಿ ಏನು? ಮತ್ತಷ್ಟು ದುರ್ಧರ ಪ್ರಸಂಗಗಳನ್ನೆದುರಿಸಬೇಕಾಗುತ್ತದೆ. ಕೋಳಿಗಳ ಗುಡಿಗೆ ನರಿ ನುಗ್ಗಿದಂತಾಗುತ್ತದೆ.

ಸಾಮಾಜಿಕ ನ್ಯಾಯದ ಜವಾಬ್ದಾರಿಯನ್ನು ನೆನಪಿಸುವ ಸಂವಿಧಾನದ ೧೫ ಮತ್ತು ೪೬ನೇ ಪರಿಚ್ಛೇದಗಳು ದುರ್ಬಲ, ಅತೀ ದುರ್ಬಲ ವರ್ಗಗಳ ಅಭ್ಯುದಯವನ್ನೂ ಪರಿಗಣಿಸಿದ್ದರೂ ಆ ಮಟ್ಟದ ನ್ಯಾಯ ದೊರೆಯುತ್ತಿಲ್ಲ. ಹಾಗೆಯೇ ಸಂವಿಧಾನದ ೮೬ನೇ ತಿದ್ದುಪಡಿಯಾದ ಅನುಚ್ಛೇದ ೨೧-ಎ ಕೆಳಗೆ ಎಲ್ಲ ಮಕ್ಕಳಿಗೂ **ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು** ಎಂದಿದೆ. ಹಾಗಾದರೆ ಯಾರೀ ಮಕ್ಕಳು? ಈ ದೇಶದ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಮತ್ತು ಬುಡಕಟ್ಟು ಮಕ್ಕಳು ಕೂಡಾ ಹೌದಲ್ಲವೇ?

ಹಂತ ಹಂತವಾಗಿ ಹತ್ತಿರಕ್ಕೆ ಬರುತ್ತಿರುವ, ಬದುಕಿಗೆ ಬೇಕಾದ ಮೂಲಭೂತ ಹಕ್ಕನ್ನು ಕಿತ್ತುಕೊಳ್ಳುವ ಈ ಖಾಸಗೀಕರಣವನ್ನು ಪ್ರಗತಿಪರರೆಲ್ಲರೂ ವಿರೋಧಿಸಬೇಕಾಗಿದೆ. ಅದು ದಲಿತರ, ಅಲ್ಪಸಂಖ್ಯಾತರ ಮತ್ತು ಬುಡಕಟ್ಟು ವರ್ಗದ ಮೇಲೆ ಬೀರುವ ಪ್ರಭಾವ ವಿಷಾದನೀಯವಾದುದು. ಈ ನಾಡಿನ ಎಲ್ಲವೂ ಖಾಸಗೀಕರಣವಾಗುವುದರ ಮೂಲಕ ಸೃಷ್ಟಿಯಾಗುವ ಚಿತ್ರಣ ಭಯಾನಕವಾದದು. ಮುಂದೊಂದು ದಿನ ಆಗಬಹುದಾದ ದುರಂತವನ್ನು ತಿಳಿದು ನಾವಿಂದು ವಿರೋಧಿಸಬೇಕಿದೆ.

ಖಾಸಗೀಕರಣದ ದುಷ್ಪರಿಣಾಮಗಳು:

* ಶಿಕ್ಷಣದ ಸಾರ್ವತ್ರಿಕರಣದ ಕನಸು ಕನಸಾಗೆ ಉಳಿಯುತ್ತದೆ.
* ಮೀಸಲಾತಿಗೆ ಧಕ್ಕೆಯಿಂದಾಗಿ ಆರ್ಥಿಕ ಅಸಮಾನತೆ ಸಮಾಜದಲ್ಲಿ ಸೃಷ್ಟಿಯಾಗುತ್ತದೆ.
* ಜಾತಿ ವ್ಯವಸ್ಥೆಗಳು ಪ್ರಾಬಲ್ಯವಾಗಿ ಮತ್ತೆ ಅಸ್ಪೃಶ್ಯತೆ ತಾಂಡವವಾಡುವ ಸಾಧ್ಯತೆ ಇದೆ.
* ದುರ್ಬಲ ವರ್ಗದವರಿಗಾಗಿನ ಶೈಕ್ಷಣಿಕ ಯೋಜನೆಗಳ ಸೃಷ್ಟಿ ಕಾಣಲಾಗದು.
* ಓದಲು ಬೇಕಾದ ಶೈಕ್ಷಣಿಕ ಸೌಲಭ್ಯ ಮೊಟಕಾಗಿ ಓದು ಬಿಡುವ ಸಂಭ್ರಮ ಈ ವರ್ಗದ ಮಕ್ಕಳಲ್ಲಿ ಕಂಡು ಬರುವ ಸಾಧ್ಯತೆ ಇದೆ.

ಬಂಡವಾಳವನ್ನು ನೇರವಾಗಿ ಆಹ್ವಾನಿಸುತ್ತಾ ನೂರಾರು ವಿದೇಶಿ ವಿಶ್ವ ವಿದ್ಯಾಲಯಗಳ ಬ್ರ್ಯಾಂಚ್‌ಗಳ ಆರಂಭಕ್ಕೆ ಅನುಮತಿ ನೀಡಿದೆ. ವರ್ಷಕ್ಕೆ ನಾಲ್ಕುನೂರ ಬಿಲಿಯನ್ ಡಾಲರ್ ಬೇಡಿಕೆಗೆ ತಕ್ಕಂತೆ ನಿಪುಣರನ್ನು ಹೆಚ್ಚಿಸುವ ಕೇಂದ್ರಗಳು ಇವಾದರೆ, ಸರ್ಕಾರಿ ವೃತ್ತಿ ಶಿಕ್ಷಣದಲ್ಲಿ ದಲಿತರು, ಹಿಂದುಳಿದವರು, ಬಡವರೇ ಇರುವ ಈ ಕೇಂದ್ರಗಳ ನಿಪುಣರ ಗತಿ ಏನಾಗಬೇಕು? ಗುಣಮಟ್ಟ ಶಿಕ್ಷಣ ಕಾಪಾಡುವ ವಿಶ್ವದ ಪ್ರಖ್ಯಾತ ಶಿಕ್ಷಣ ಸಂಸ್ಥೆಗಳು ಪಾದಾರ್ಪಣೆ ಮಾಡಲು ಅಗತ್ಯವಿರುವ ಶೈಕ್ಷಣಿಕ ವಾತಾವರಣ ಇಲ್ಲಿಲ್ಲ ಎಂಬುದು ಗೊತ್ತಿದ್ದರು ಈ ದೇಶದ ರಾಜಕಾರಣಿಗಳು ದೇಶಿಯ ಶಿಕ್ಷಣದ ದಂದೆಕೋರರೊಂದಿಗೆ ಶಾಮೀಲಾಗಿ ಹೊಸ ರೀತಿಯಲ್ಲಿ ಪೋಷಕರನ್ನೂ ಲೂಟಿ ಮಾಡುತ್ತಿವೆ.

* ಈಗಾಗಲೇ ಮೀಸಲಾತಿಯನ್ನು ಸದುಪಯೋಗಪಡಿಸಿಕೊಂಡ ಕೆನೆಪದರಿನವರು ಮಾತ್ರ ಮುಖ್ಯವಾಹಿನಿಗೆ ಸೇರುವ ಸಾಧ್ಯತೆ ಇದೆ. ಆದರೆ ಉಳಿದವರಿಗೆ ಅವಕಾಶವಿಲ್ಲ.
* ಮೇಲು ಕೀಳು, ಬಡವ ಬಲ್ಲಿದ, ಸೌಕರ ಚಾಕರ, ವರ್ಗಬೇಧ ತಾರತಮ್ಯವು ಹಂತ ಹಂತವಾಗಿ ಸೃಷ್ಟಿಯಾಗುವ ಸಾಧ್ಯತೆ ಇದೆ.
* ಪ್ರೋತ್ಸಾಹಕ ಕಾರ್ಯಕ್ರಮಗಳ ಬಗ್ಗೆ ಖಾಸಗೀ ಕರಣ ವ್ಯವಸ್ಥೆಯಲ್ಲಿ ಮಾತಾಡುವಂತಿಲ್ಲ.
* ಸಮಾಜದಲ್ಲಿ ಈ ವರ್ಗದ ಸ್ತ್ರೀಯರ ಸ್ಥಾನ ಮತ್ತೆ ಅದೋಗತಿಗೆ ಹೋಗಬಹುದು.
* ಶಿಕ್ಷಣ ಸಿಗದಿರೆ ಮೌಢ್ಯ ಮತ್ತೆ ಆವರಿಸಿ ಅವರನ್ನ ದಾಸರನ್ನಾಗಿ ನಿರ್ಮಿಸುವ ದುರಂತ ಖಾಸಗೀಕರಣದಲ್ಲಿ ಕಾಣುವ ಸಾಧ್ಯತೆ ಇದೆ.
* ವಿಶೇಷ ಸೌಲತ್ತುಗಳಿಂದ ವಂಚಿತರಾಗುತ್ತಾರೆ.
* ಪಠ್ಯದಲ್ಲಿ ಧಾರ್ಮಿಕ ಸಾಮರಸ್ಯ ಕೊರತೆಯಾಗಿ ಕೋಮುವಾದ ಕೆರಳಬಹುದು.
* ಬಹುಸಂಖ್ಯಾತರ ದಬ್ಬಾಳಿಗೆ ಜಾಸ್ತಿಯಾಗ ಬಹುದು.
* ಮೌಢ್ಯ ನೆಲೆಸಿ ಜನರು ಅನಕ್ಷರಸ್ಥರಾಗಬಹುದು.
* ಬುಡಕಟ್ಟುಗಳ ಬುಡಕ್ಕೆ ಕೊಡಲಿ ಏಟು ಬೀಳಬಹುದು.
* ಬುಡಕಟ್ಟುಗಳನ್ನು ಒಕ್ಕಲೆಬ್ಬಿಸುವ ಸಾಧ್ಯತೆ ಜಾಸ್ತಿಯಾಗಬಹುದು.
* **ಅನಕ್ಷರತೆ ಮತ್ತೆ ಹೆಚ್ಚಾಗುವ ಸಂಭವವಿದೆ.**

ಸರಕಾರ ಅಲ್ಲಿನ ಜನಪ್ರತಿನಿಧಿಗಳು ಈ ದೇಶದ ಸಾಮಾನ್ಯನನ್ನು ಕಡೆಗಣಿಸುತ್ತಿದ್ದಾರೆ. ಒಮ್ಮೆ ಯೋಚಿಸಿ ಜನಪ್ರತಿನಿಧಿಗಳೆ, ನಿಮಗೆ ಶ್ರೀಮಂತಿಕೆ ಬಂದುದೆಲ್ಲಿಂದ? ದುಡಿಯುವ ವರ್ಗದ ಬೆವರಿನ ಫಲ... ಅದು ನೀವು ಅವರ ಶ್ರಮದಿಂದ ಕಸಿದು ಕೊಂಡದ್ದು... ಮತ್ತೆ ಮತ್ತೆ ಯೋಚಿಸಿ ಅವರ ಬಗ್ಗೆ, ನಿಮ್ಮನ್ನು ಈ ಸ್ಥಿತಿಗೆ ತಂದವರ ಬಗ್ಗೆ.

ಒಟ್ಟಾರೆಯಾಗಿ ಖಾಸಗೀಕರಣ ದಲಿತರಿಗೆ ಅಲ್ಪಸಂಖ್ಯಾತರಿಗೆ, ಬುಡಕಟ್ಟುಗಳಿಗೆ ಉರುಳಾಗಿ ಬರುತ್ತಲಿದೆ. ಹೀಗೆಯೇ ಮುಂದುವರೆದಿದ್ದರೆ ಖಾಸಗೀಕರಣದ ಕರಿನೆರಳು ಸಮಾಜವನ್ನು ಮತ್ತೆ ಹಿಂದಕ್ಕೆ ತಳ್ಳಿ ದೊಡ್ಡ ಕಂದರಗಳನ್ನೇರ್ಪಡಿಸುತ್ತದೆ. ಕಾರಣ ಸ್ನೇಹಿತರೇ ಖಾಸಗೀಕರಣವಾಗುವುದು ನಮಗೆ ಬೇಕಾಗಿಲ್ಲ. ಅದನ್ನು ಓಡಿಸುವುದೇ ನಮ್ಮ ಚಿಂತನೆಯಾಗಬೇಕಿದೆ. ಈ ನಾಡಿನ ಬುದ್ಧಿಜೀವಿಗಳು, ಚಿಂತಕರು, ಸಾಹಿತಿಗಳು, ಯುವಕರು ಯೋಚಿಸಿ ಸಂಘಟಿತರಾಗಿ ಖಾಸಗೀಕರಣದ ವಿರುದ್ಧ ಹೋರಾಡಬೇಕಿದೆ. □

ಹೈ.ಕ. 'ಬಂದ್' ಆಗಿ
ಎಷ್ಟೋ ವರ್ಷ ಆಗಿವೆ
ಅದು ಚಾಲೂ ಆಗಲೂ
ಎಷ್ಟೋ ವರ್ಷ ಬೇಕಾಗಿವೆ!

○ ಅಲ್ಲಮಪ್ರಭು ಬೆಟ್ಟದೂರು



ಕಥೆ ಮುಗಿಯಿತು, ಈಗ ಪೂರ್ಣ ವಿರಾಮ!

ಕೇಶವ ಮಳಗಿ

ನನ್ನ ಸಾವಿಗೆ ನಾನೇ ಕಾರಣ. ಜೀವನದಲ್ಲಿನ ಜಿಗುಪ್ಸೆಯಿಂದ ಹೀಗೆ ಮಾಡುತ್ತಿದೇನೆ. ಅದಕ್ಕಾಗಿ ಯಾರಿಗೂ ತೊಂದರೆ ಕೊಡಬೇಡಿ.

ದಿನ ಬೆಳಗಾದರೆ ಪತ್ರಿಕೆಗಳಲ್ಲಿ ಪ್ರಕಟವಾಗುವ ಆತ್ಮಹತ್ಯೆಯ ಸುದ್ದಿಗಳು ಮತ್ತು ಬರೆದಿಟ್ಟ ಚರಮ ವಾಕ್ಯಗಳು ಒಂದುಕ್ಷಣ ಜೀವ ಮರಗಟ್ಟಿಸಿ, ಒಂದಿಷ್ಟು ಹೊತ್ತು ಸ್ತಬ್ಧರನ್ನಾಗಿಸುತ್ತವೆ. ಅದರಲ್ಲೂ ಹದಿಹರೆಯದ ಎಳೆಯರು ಸಾವಿಗೆ ಬಾಗಿದ ಸುದ್ದಿ ಓದುವಾಗ ಜೀವ ಇನ್ನಷ್ಟು ತಣ್ಣಗಾಗುತ್ತದೆ. ಕೊನೆಗೊಳ್ಳುವ ಮೊದಲು ಪ್ರಕ್ಷುಬ್ಧಗೊಂಡ ಈ ಮನಸ್ಸುಗಳನ್ನು ಯಾವ ಚಿಂತೆಗಳು ಬೆಂಕಿಯಂತೆ ಸುಡಿಸಿರಬಹುದು? ತಮ್ಮ ಮೇಲೆ ತಾವೇ ಹೇರಿಕೊಳ್ಳುವ ಅಸಾಧ್ಯ ಹಿಂಸೆಯ ಮೂಲ ಪ್ರಚೋದನೆ ಎಲ್ಲಿಂದ ಬಂದಿರಬಹುದು?

ಜೀವನದ ನಿರರ್ಥಕತೆ, ಅಪೇಕ್ಷೆಗಳನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲದ್ದರಿಂದ ಹುಟ್ಟಿದ ತೀವ್ರ ನಿರಾಸೆ, ಕೈ ಹಾಕಿದ ಕೆಲಸದಲ್ಲೆಲ್ಲ ವೈಫಲ್ಯ, ವಿಫಲ ಪ್ರೇಮ, ಅಭ್ಯಾಸದ ಒತ್ತಡ ಸೃಷ್ಟಿಸಿದ ಅವಹೇಳನ, ತೀರ ಪರಿಚಿತರಿಂದ ಲೈಂಗಿಕ ಕಿರುಕುಳ, ಪೋಷಕರ ವಿರಸ ದಾಂಪತ್ಯ, ಕಣ್ಣಿಗೆ ಕಾಣದ ಯಾರೋ ತನ್ನನ್ನು ಮುಗಿಸಲು ಸಂಚು ರೂಪಿಸುತ್ತಿದ್ದು ಅವರ ಬೇಟೆಗೆ ಬಲಿಯಾಗುವ ಭಯ, ಸಾಲ, ಕಚೇರಿಯಲ್ಲಿ ಕಿರಿಕಿರಿ, ದೇಹ-ಪರಿಸರದಲ್ಲಾಗುತ್ತಿರುವ ಬದಲಾವಣೆಗಳನ್ನು ಹೇಳಹೊರಟರೆ ರಗಳೆ-ರಾಮಾಯಣ ಎಂದು ಎಲ್ಲರೂ ಬಯ್ಯುವುದರಿಂದ ಹುಟ್ಟುವ ಅನಾಥಪ್ರಜ್ಞೆ ಅಥವಾ ಈ ಬಗೆಯ ನೂರಾರು ಕಾರಣಗಳು. ಧಾವಂತಗಳಿಂದ ತುಂಬಿರುವ ಅಸೂಕ್ಷ್ಮ ಜಗತ್ತಿನಲ್ಲಿ ಇಂತಹ ಅತಿ ನವಿರು ಭಾವನೆಗಳಿಗೆ ಜಾಗವಿಲ್ಲವಾಗಿ ಆಯ್ಕೆಗೆ ಉಳಿಯುವುದು ಒಂದೇ ದಾರಿ-ಸಾವು. ನಂಬಿದ ನವಿರು ಭಾವನೆಗಳಿಗೆ ಜಾಗವಿಲ್ಲವಾಗಿ ಆಯ್ಕೆಗೆ ಉಳಿಯುವುದು ಒಂದೇ ದಾರಿ-ಸಾವು. ನಂಬಿದ ದಕ್ಷತೆ ('ಅದೃಷ್ಟ') ಬೆನ್ನು ತಿರುಗಿಸಿದಾಗ ಇಂತಹ ಮಾನವ ದುರಂತಗಳು ಘಟಿಸುವುದು ನಿಜವಾದರೂ ಮನುಷ್ಯನನ್ನು ನಾಶಮಾಡುವ ಈ ಅಪಸವ್ಯಗಳ ಎದುರು ಮನುಷ್ಯನ ಅಸ್ತಿತ್ವದ ಘನತೆ ಮತ್ತು ಉದಾತ್ತತೆಗಳೇ ಶ್ರೇಷ್ಠವಾದ ಮೌಲ್ಯವಾಗಿದೆ ಎಂದು ನಾವೆಲ್ಲ ನಂಬುತ್ತೇವೆ. ಆದರೂ, ಮಾಗದ ಯಾವ ಗಾಯಕ್ಕಾಗಿ ಜನ ಜೀವ ಕಳೆದುಕೊಳ್ಳುತ್ತಾರೆ ಎಂದು ಚಿಂತಿಸುವ ಗೊಡವೆ ಅದನ್ನು ಸುದ್ದಿಯಾಗಿಯಷ್ಟೇ ಓದುವ ನಮ್ಮಂಥವರಿಗೆ ಆಸಕ್ತಿ ಕುದುರಿಸುವುದಿಲ್ಲ. ಕತ್ತಲೆ ತುಂಬಿದ ಆ ಕೋಣೆಯ ಬಾಗಿಲನ್ನು ತೆರೆಯಲು ನಮಗೆ ಭಯ. ಕಣ್ಣು ನುಂಗಲು ಹಾಳು ಬಾವಿಯಿಂದ ಎದ್ದು ಬರುವ ಬಾವಲಿಗಳಂತೆ ಎದುರಾಗುವ ಬದುಕಿನ ಸತ್ಯಗಳನ್ನು ಕಣ್ಣೆತ್ತಿ ನೋಡಲು ಆತಂಕ.

ಸಮಾಜ ಆತ್ಮಹತ್ಯೆಯನ್ನು ಅಸಹಜ ಎಂದು ಪರಿಗಣಿಸಿರುವುದರಿಂದ ಅದು ವಿರಳವಾಗಿ ನಡೆಯುವ ಕ್ರಿಯೆ ಎಂಬ ಉಡಾಫೆಯ ಭಾವನೆ ನಮ್ಮಲ್ಲಿ ಬಹಳ ಜನಕ್ಕಿದೆ. ಆದರೆ ಆ ಗ್ರಹಿಕೆ ನಿಜವಲ್ಲ. ಅದು ಬೇರೆಯಲ್ಲ ಭಯಾನಕ ರೋಗಗಳಂತೆ ಈ ಸಮಾಜವನ್ನು ತಣ್ಣಗೆ ನುಂಗುತ್ತಿದೆ. ಮಾನಸಿಕ ಕಾಯಿಲೆಗೊಳಗಾದವರು ಮಾತ್ರ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಎಂಬುದು ಕೂಡ ಮೇಲ್ಪದರಿನ ಅಳ್ಳಕವಾದ ನಂಬಿಕೆ. ಈ ನಂಬಿಕೆ ಸುಳ್ಳು ಮಾಡುವಂತೆ ಅತ್ಯಂತ ಆರೋಗ್ಯ ಪೂರ್ಣವಾಗಿ ನಕ್ಕುಕಲೆಯುತ್ತ ಓಡಾಡುತ್ತಿದ್ದ ನಮ್ಮ ಪರಿಚಿತ ನೆರೆಯವರು, ಹಿತವನ್ನು ಬಯಸುತ್ತಿದ್ದ ಗೆಳೆಯರು, ಮುಗ್ಧ ಮಕ್ಕಳು, ನಾವು ಮೆಚ್ಚಿದ ಕವಿ, ಸೌಂದರ್ಯಕ್ಕೆ ಮೋಹಗೊಂಡ ಚಿತ್ರನಟಿ, ತನ್ನ ಬಣ್ಣಗಳಿಂದ ಬದುಕು ಬೆಳಗಿದ ಕಲಾವಿದ, ನಮ್ಮ ಮನೆಗಳನ್ನು ಕಟ್ಟಲು ಬೆವರು ಹನಿಸಿದ ಕೂಲಿಕಾರ್ಮಿಕರು, ನಮ್ಮ ತಟೆಯ ಅನ್ನವನು ತುಂಬುವ ರೈತರು ಈ ಪಟ್ಟಿಯಲ್ಲಿ ಅಡಗಿದ್ದಾರೆ. ಈ ಕತ್ತಲೆಯ ಹತಾಶ ವ್ಯೂಹದಲಿ ಸಿಕ್ಕವರು ಎಷ್ಟೋ ಪ್ರಶ್ನೆಗಳಿಗೆ ಉತ್ತರ ಹೇಳದೆ ಕಾಲನ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದಾರೆ.

ಇದೊಂದು ಅರ್ವಾಚೀನ ಸಮಸ್ಯೆ. ಈಜಿಪ್ಟ್‌ನ ಪಪ್ಪೈರಸ್, ಭಾರತದ ತಾಳೆಗರಿ, ಶಾಸನ, ಪುರಾಣಗಳಲ್ಲಿ ಇಂತಹ ಸಂಗತಿಗಳು ಕಿಕ್ಕಿರಿದಿವೆ, ಸತ್ಯವನಷ್ಟೇ ಪ್ರೀತಿಸುವೆ ಎಂದು ಸಮಾಜದ ಕೊಳಕುಗಳ ಮೇಲೆ ಬೆಳಕು ಚೆಲ್ಲುವ ದುರಂತ ನಾಟಕಗಳನ್ನು ಬರೆದ ಪ್ರಾಚೀನ ಯೂರಿಪಿಡಿಸ್‌ನಿಂದ ಹಿಡಿದು ಮಾಯಕೋವಸ್ಕಿ, ವರ್ಜೀನಿಯಾ ವೂಲ್ಫ್ ಯುಕಿಯೋ ಮಿಷಿಮಾ, ಹೆಮಿಂಗ್ವೇ, ಸಿಲ್ವಿಯ ಪ್ಲಾತ್‌ರವರೆಗೆ ಅನೇಕರು ಈ ಕರಾಳ ಅಂತರಾಳದ ಕತ್ತಲೆಯ ಸೆಳೆತಕ್ಕೆ ಸಿಲುಕಿ ಮಂಜಿನಂತೆ ಮರೆಯಾಗಿದ್ದಾರೆ. ಮತ್ತು ಈ ತಿರುಗಣಿ ಮಡು ಮನುಷ್ಯ ಪ್ರಾಣಿ-ಪಕ್ಷಿಯನ್ನದೆ ಸೆಳೆಯುತ್ತಲೇ ಇರುತ್ತದೆ.

ಕೋಪ, ಸೇಡಿನ ಮನೋಭಾವ, ಪಾಪಪ್ರಜ್ಞೆ ತನ್ನನ್ನು ತಾನೇ ಕೀಳಾಗಿ ಕಾಣುವುದು, ಜಯಾಪಜಯಗಳನ್ನು ಸಮಚಿತ್ತದಿಂದ ನಿಭಾಯಿಸಲಾಗದೆ ಹೋಗುವುದು, ಎಲ್ಲರಿಂದಲೂ ಅಪಾರವಾದ ನಿರೀಕ್ಷೆ ಇಟ್ಟುಕೊಳ್ಳುವುದು- ಹೀಗೆ ಆ ಕ್ರಿಯೆಯ ಹಿಂದೆ ಏನೆಲ್ಲ ಸಂಕೀರ್ಣತೆಗಳ ಹುತ್ತ ಬೆಳೆದು ನಿಂತಿರುತ್ತದೋ? ಒತ್ತಡ ಮತ್ತು ಯಶಸ್ಸನ್ನು ನಿಭಾಯಿಸಲಾಗದೆ ಪೂರ್ಣ ವಿರಾಮ ಹಾಕುವ ಮಾತು ಬಂದಾಗ ನಮ್ಮ ಕಣ್ಮುಂದೆ ಬರುವುದು ಫಳಫಳ ಚುಕ್ಕೆಗಳಂತೆ ಮಿಂಚಿ ಆತ್ಮಹತ್ಯೆಯ ಬೆಂಕಿಗೆ ಕರಕಾರುವ ಚಿತ್ರತಾರೆಯರದು. ಸಾವನ್ನು ತನ್ನ ಅಂತಿಮ ಆಯ್ಕೆ ಎಂದು ನಿರ್ಧರಿಸಿಕೊಳ್ಳುವವರಲ್ಲಿ ನಟಿಯರು ಅಗ್ರಸ್ಥಾನ ಪಡೆಯುವುದೇಕೋ? ಖುಷಿ, ಕನಸು, ಯುಗಳಗೀತೆ, ಸುಂದರ ದಾಂಪತ್ಯ ಅಗಾಧ ಅಮರ ಪ್ರೇಮಗಳನ್ನು ಕಣ್ಣು ಕುಕ್ಕುವ ಫ್ಲಡ್‌ಲೈಟ್‌ಗಳಲ್ಲಿ ಅಭಿನಯಿಸಿ ತೆರೆಯ ಮೇಲೆ ಜನರನ್ನು ರಂಜಿಸುವ ಇವರು ಮುಖಕ್ಕಂಟಿದ ಬಣ್ಣ ತೊಳೆದದ್ದೇ ಎದುರಾಗುವ ಬದುಕಿನ ಭಯಾನಕ ಶೂನ್ಯ ತುಂಬುವುದು ಸಾವು ಮಾತ್ರ ಎಂಬ ಚಿದಂಬರ ಸತ್ಯವನ್ನು ಚಚಕ್ಷುವಿನಿಂದ ಅರಿಯುವರೇ? ಸಾಲುಸಾಲಾಗಿ ಕಣ್ಣೆದುರು ಪ್ರತ್ಯಕ್ಷವಾಗುವ, ಮುಕ್ಕಾಗದ ಚೆಲುವನ್ನು ಹೊಂದಿದ್ದ ಈ ಹೆಂಗಳೆಯರು ಈಗ ನಮ್ಮೊಂದಿಗಿಲ್ಲ ಎಂಬ ಸತ್ಯವೇ ಅಸಹನೀಯ. ಮಹಾನ್ ಕಾದಂಬರಿಕಾರ ದೊಸ್ತೋಯೇವಸ್ಕಿಯ ಡೆವಿಲ್ಸ್ ಕಾದಂಬರಿಯ ಮುಖ್ಯ ಪಾತ್ರ ಕಿರಿಲೋವ್, ಕಥೆಯ ಶೃಂಗದಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸುವ ಕ್ಷಣ ಮತ್ತು ಪರಿಣಾಮ ರುದ್ರಭಯಾನಕ. ಕ್ಷಿಪ್ರಕ್ರಾಂತಿ, ರಾಜಕೀಯ ಹತ್ಯೆಗಳ ಸಂಚನ್ನು ರೂಪಿಸಿದ ತರುಣ ಕ್ರಾಂತಿಕಾರಗಳ ಗುಂಪಿನ ಮುಖ್ಯ ವಯಕ್ತಿಯಾದ ಆತ ಕಡು ನಾಸ್ತಿಕ. ದೇವರ ಮತ್ತು ಚರ್ಚಿನ ಅಸ್ತಿತ್ವವನ್ನು ನಿರಾಕರಿಸುವವನು. ದೇವರು ಅಸ್ತಿತ್ವದಲ್ಲಿ ಇಲ್ಲ. ಹೀಗಾಗಿ, ಆತ್ಮಹತ್ಯೆಯ ಆಯ್ಕೆ ಸಾಕ್ಷಾತ್ಕಾರಕ್ಕಾಗಿ ಇರುವ ಏಕೈಕ ಅತ್ಯುನ್ನತ ಮಾರ್ಗ. ಆತ್ಮಹತ್ಯೆ ಮಾಡಿಕೊಂಡವನು ದೇವರ ಹಂತಕ್ಕೆ ಏರಬಹುದಾಗಿದೆ. ಸಂತೋಷ ಮನುಷ್ಯನ ಮಾನಸಿಕ ಸ್ಥಿತಿ. ಒಳಗಿನಿಂದ ಬರಬೇಕಲ್ಲದೆ ಬಾಹ್ಯ ಪರಿಸರದಿಂದಲ್ಲ. ಹೀಗಿರುವಾಗ, ನನ್ನ ಉತ್ಕಟ ಸಂತೋಷವನ್ನು ಆತ್ಮಹತ್ಯೆಯ ಮೂಲಕ ಸಾಧಿಸುವುದರಲ್ಲಿ ತಪ್ಪೇನು? ಅದೂ ಅಲ್ಲದೆ, ನಾವು ಹೊರಗಿನಿಂದ ನೋವು ಮತ್ತು ದುಃಖವನ್ನಲ್ಲದೆ ಬೇರೇನೂ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಸಾವಿನ ಆಯ್ಕೆಯೆಂದರೆ ದೇವರನ್ನು ನಿರಾಕರಿಸುತ್ತ ದೇವರೇ ಆಗುವುದಾಗಿದೆ. ಆಗ ನಾನು ಕ್ರಿಸ್ತನ ಎತರಕ್ಕೆ ಸಹಜವಾಗಿ ಏರಬಹುದಾಗಿದೆ, ಎನ್ನುವುದು ಅವನ ದೃಢ ನಿಲುವು. ಸಮಾಜದಿಂದ ಗೆಳೆಯರ ಗುಂಪಿನ ಮೇಲೆ ಬರಬಹುದಾದ ಎಲ್ಲ ಆಪಾದನೆಗಳಿಂದ ಗುಂಪನ್ನು ಮುಕ್ತಗೊಳಿಸಲು ಕಿರಿಲೋವ್, ಪೂರ್ಣ ಎಚ್ಚರಿಕೆಯಿಂದ ಆತ್ಮಹತ್ಯೆಯ

ಪತ್ರವನ್ನು ಓದಿ, ಹಸ್ತಾಕ್ಷರ ಮಾಡುತ್ತಾನೆ. ಆ ಮೂಲಕ ಅನ್ಯರು ಮಾಡಿದ ಪಾಪಕ್ಕಾಗಿ ತಾನು ಪಶ್ಚಾತ್ತಾಪ ಪಡುವ ಕ್ರಿಸ್ತನಾಗುತ್ತಾನೆ! ಈ ಬಗೆಯ ಗಾಢ ಸನ್ನಿವೇಶ, ಪಾತ್ರಸೃಷ್ಟಿ ಮಾತುಕತೆ, ಪರಿಣಾಮವನ್ನು ದೊಸ್ತೋಯೇವಸ್ಕಿಯಂಥ ನಿಪುಣ ಕಲಾವಿದನೊಬ್ಬನೇ ಸೃಷ್ಟಿಸಬಲ್ಲ.

ಆತ್ಮಹತ್ಯೆ ಸಾಮಾಜಿಕ ಆಯಾಮ ಪಡೆಯುವುದು ಅದು ರಾಜಕೀಯ ಅಸ್ತ್ರ ಮತ್ತು ಸಿದ್ಧಾಂತವಾಗಿ ರೂಪುಗೊಂಡಾಗ. ರಾಜಕೀಯ ಒತ್ತಾಸೆ ಯಾವುದು; ಧಾರ್ಮಿಕ ನಂಬಿಕೆಯಿದ ಹುಟ್ಟಿಕೊಂಡ ಆಚರಣೆ ಯಾವುದು ಎಂದು ನಿಖರವಾಗಿ ಗೆರೆ ಕೊರೆದು ಹೇಳಲಾರದಷ್ಟು ಇವುಗಳ ಸಂಬಂಧ ಸಿಕ್ಕುಸಿಕ್ಕುಗಿರುವುದರಿಂದ ನಾಗರಿಕ ಸಮಾಜದ ವ್ಯಾಖ್ಯಾನ ಮತ್ತು ಸ್ವೀಕೃತ ಮೌಲ್ಯಗಳಲ್ಲಿ ಸ್ವಯಂಹತ್ಯೆಯಾಗುವುದು ಅಲ್ಲಿ ತ್ಯಾಗ, ಬಲಿದಾನ, ಮೋಕ್ಷ ಇತ್ಯಾದಿಗಳ ಮುಸುಕು ಹಾಕಿಕೊಳ್ಳುತ್ತದೆ. ಹಾಗೆಂದೇ, ಭವಾವಳಿ, ಕರ್ಮಗಳನ್ನು ಮೀರಲು ಕೈಗೊಳ್ಳುವ ಸಲ್ಲೇಖನ ಆತ್ಮ ಬಿಡುಗಡೆಯ ಧಾರ್ಮಿಕ ಆಚರಣೆಯಾಗಿ ವ್ಯಾಖ್ಯಾನಗೊಂಡಿದೆ!

ಈ ನಾಣ್ಯದ ಇನ್ನೊಂದು ಮುಖದಲ್ಲಿ ನಾಯಕನ ಅಣತಿಗಾಗಿ ಕಾದು ಸ್ಫೋಟಗೊಳ್ಳಲು ಸಿದ್ಧರಿರುವ ಅಸಂಖ್ಯಾತ ಮುಖರಹಿತ ತರುಣರು ನಮ್ಮ ಸಮಾಜದಲ್ಲಿ ಅಂತರ್ಧಾನರಾಗಿ ಜೀವಿಸುತ್ತಿದ್ದಾರೆ. ಹೊಸ ಸಮಾಜದ ಸ್ಥಾಪನೆ ಅಂಥವರ ಗುರಿಯಾಗಿದೆ. ಇವರೆಲ್ಲ ಕಾಣದ ಸೂತ್ರದ ಕೈಗಳು ರೂಪಿಸಿರುವ ತಂತ್ರಕ್ಕೆ ತಲೆದೂಗಿ, ತಾತ್ವಿಕವಾಗಿ ಒಪ್ಪಿ, ಕಿರಿಲೊವ್‌ನಂತೆ ಸಾವಿನ ಪತ್ರಕ್ಕೆ ಹಸ್ತಾಕ್ಷರ ಹಾಕಿರುವವರು. ಆ ಕ್ರಿಯೆ ಮುಗಿಸಿದ್ದೇ ನಾಸಿಕರು ಹೊಸ ಸಮಾಜದ ಅಡಿಗಲ್ಲುಗಳಾಗಿ ಪರಿವರ್ತನೆಗೊಂಡರೆ, ಆಸ್ತಿಕರು ಸರ್ವಶಕ್ತನ ಬಳಿ ಕನ್ಯೆಯ ಶುಚಿತ್ವದಲ್ಲಿ ಸ್ವರ್ಗಾರೋಹಣ ಮಾಡುತ್ತಾರೆ. ಧರ್ಮ, ರಾಜಕೀಯ, ಜನಾಂಗ, ಲಿಂಗದ ಅಫೀಮನ್ನು ಏರಿಸಿಕೊಂಡು ಹೆಣ್ಣುಗಂಡೆಂಬ ತರತಮವಿಲ್ಲದೆ ಸಾಮೂಹಿಕ ಸಾವನ್ನು ಆಯ್ದು ಅಪ್ಪಿಕೊಳ್ಳುವುದು ಆಧುನಿಕ ಸಮಾಜದ ಬಹುದೊಡ್ಡ ರಾಜಕೀಯ ಸವಾಲು.

ಸಾಮಾಜಿಕ ಅಸಮಾನತೆ ಸೃಷ್ಟಿಸುತ್ತಿರುವ ಕಂದಕ, ಜನಪ್ರಿಯ ಸಂಸ್ಕೃತಿಯ ಒತ್ತಡ, ಮಾಧ್ಯಮಗಳ ಪರ-ವಿರೋಧ ಪ್ರಚಾರ ಈ ಕಾಯಿಲೆಯ ಸಂಕೀರ್ಣತೆಯನ್ನು ಇನ್ನಷ್ಟು ಹೆಚ್ಚಿಸುತ್ತಿವೆ. ಜವಾಬ್ದಾರಿ ನಿಭಾಯಿಸುವ ಬದಲು ಸಮಸ್ಯೆಯ ವ್ರಣವನ್ನು ಏಕಪಕ್ಷೀಯವಾಗಿ ಕೆದರುವುದು ಇಂದಿನ ಮಾಧ್ಯಮಗಳಿಗೆ ಹೆಗ್ಗಳಿಕೆಯ ವಿಷಯವಾಗುತ್ತಿದೆ. ಆತ್ಮಹತ್ಯೆಯನ್ನು ಜಾಹೀರಾತಿನ ಸರಕಾಗಿಸಿ ಕಾಸು ಸಂಪಾದಿಸುವುದು ಅವುಗಳ ಹೇಯ ಪ್ರವೃತ್ತಿಯಾಗುತ್ತಿದೆ. ಚಿಂತನೆಗೆ ಹಚ್ಚಬೇಕಾದ ಭಯಾನಕ ಸಾವು ಬಂಡವಾಳವನ್ನು ಉತ್ಪನ್ನ ಮಾಡುವ ಕಚ್ಚಾ ಸರಕಾಗಿ ಬದಲಾಗಿರುವುದು ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯ ಕ್ರೂರ ಮುಖವಾಗಿದೆ.

ಆತ್ಮಹತ್ಯೆಗೆ ಒಂದು ರಾಜಕೀಯ ವಿನ್ಯಾಸ, ಆಧ್ಯಾತ್ಮಿಕ ಚೌಕಟ್ಟು ನೀಡುವ ಬಗೆ ಸಾಹಿತ್ಯದಲ್ಲಿ ನಿರಂತರವಾಗಿ ನಡೆಯುತ್ತಲೆ ಬಂದಿದೆ. ಆಧುನಿಕ ಕನ್ನಡದ ಶ್ರೇಷ್ಠ ಕೃತಿಗಳಲ್ಲಿ ಒಂದಾದ ಗಂಗವ್ವ-ಗಂಗಾಮಾಯಿ ಇದೇ ಬಗೆಯ ಸಂಘರ್ಷವೊಂದನ್ನು ಓದುಗನಿಗೆ ಮುಖಾಮುಖಿಯಾಗಿಸುತ್ತದೆ. ಅತ್ಯಂತ ನಿಪುಣ, ಚಾಣಾಕ್ಷ, ಮಹಾತಂತ್ರಗಾರನಾದ, ಕಾದಂಬರಿಗೆ ಸಂಕೀರ್ಣ ಸ್ವರೂಪ ಒದಗಿಸುವ ಮುಖ್ಯಸೂತ್ರಧಾರನಾದ ರಾಘಪ್ಪ, ಜೀವನ ವೈಫಲ್ಯದ ವಿರುದ್ಧ ಸೇಡು ತೀರಿಸಿಕೊಳ್ಳಲು ಮತ್ತು ಸೋಲನ್ನೇ ಸೋಲಿಸಲು ಆಯ್ದುಕೊಳ್ಳುವುದು ಆತ್ಮಹತ್ಯೆಯನ್ನು. ಆತನ ಸಾವಿನ ಟಿಪ್ಪಣಿ ಮನುಷ್ಯ ಪ್ರಪಂಚದ ಅನೇಕ ಮಹತ್ವದ ವಿಷಯಗಳ ಮೇಲೆ ಬೆಳಕು ಚೆಲ್ಲುವ ಅಪರೂಪದ ಸಾಹಿತ್ಯಕ ದಾಖಲೆ. ಜೀವನದ ಸಂಕೀರ್ಣತೆಗಳನ್ನು; ಅದನ್ನು ಎದುರಿಸಲಾರದೇ ಸಾವಿನಮಾರ್ಗವನ್ನು ಆಯ್ದುಕೊಂಡಾಗ ಹುಟ್ಟುವ ಸೂಕ್ಷ್ಮಗಳನ್ನು ದಾಖಲಿಸುವುದೇ ಕಲೆಯ ಕೆಲಸ.

ನನಗೊಂದು ಕರೆಯಿದೆ ಎಂದು ನೀನು ಕಲ್ಪಿಸಬಹುದು! ಎಂದು ತನ್ನ ಆತ್ಮಹತ್ಯೆಯ ಮುನ್ಸೂಚನೆ ನೀಡುವ ಕವಿತೆಯನ್ನು ಬರೆದ ಸಿಲ್ವಿಯಾ ಪ್ಲಾತ್, ಅದೇ ಬದುಕಿನ ಅಂತಿಮ ಆಯ್ಕೆ ಎಂದು ಉಸುರುತ್ತಿದ್ದಾಳೆಯೇ? ನನ್ನ ಎದೆಯ ಮೇಲೊಂದು ಬೃಹತ್ ಗೂಬೆ ಕುಳಿತಿದೆ. ತನ್ನ ಹರಿತ ಉಗುರುಗಳಿಂದ ನನ್ನ ಹೃದಯವನ್ನು ಕಿತ್ತು, ಕಿತ್ತು ಹಿಂಸಿಸುತ್ತಿದೆ, ಜಗತ್ತು ನನ್ನ ಪಂಜರದ ಎದುರೇ ಹೆಜ್ಜೆ ಹಾಕುತ್ತದೆ. ಆದರೆ, ಯಾರೂ ನನ್ನನ್ನು ಗಮನಿಸುವುದಿಲ್ಲ, ಎಂದು ಸಾವಿನ ವ್ಯಸನವನ್ನು ಬರಹಕ್ಕಿಳಿಸದೆ ಆಕೆ, ಮಲಗಿರುವ ತನ್ನ ಮಕ್ಕಳ ಕೋಣೆಯನ್ನು ಮುಚ್ಚಿ, ಅಡುಗೆಮನೆಯ ಬಾಗಿಲುಗಳನ್ನು ಜಡಿದು ತನ್ನನ್ನು ಬೆಂಕಿಗೆ ಒಡ್ಡಿಕೊಂಡಳು. ತನ್ನ ಪ್ರಖರ ಸ್ತ್ರೀವಾದಿ ಚಿಂತನೆ, ಬರಹಗಳಿಂದ ಜನಾನುರಾಗಿಯಾದ ವರ್ಜೀನಿಯಾ ವೂಲ್ಫ್ ತನ್ನನ್ನು ಹುಚ್ಚಿ ಎಂದೇ ಕರೆದುಕೊಂಡಿದ್ದಳು. ಮನಸ್ಸೇ ನಿಯಂತ್ರಣದಲ್ಲಿಲ್ಲ. ಅಸರಂತ ಹುಚ್ಚು ರಭಸದಲ್ಲಿ ಹರಿದು, ಹಾಡುತ್ತ ಹುದುಲಲ್ಲಿ ಸಿಲುಕಿದೆ. ಅದಕೆ ಏತರ ಸೆಳೆತವೋ? ಎಂದು ಪತ್ರವೊಂದರಲ್ಲಿ ಸಾವಿರ ವಿಲಕ್ಷಣ ಸೆಳೆತದ ಬಗ್ಗೆ ಪ್ರತಿಕ್ರಿಯಿಸಿದ ಆಕೆ, ತಾನು ತೊಟ್ಟ ಕೋಟಿನ ತುಂಬ

ಆತ್ಮಹತ್ಯೆ ಸಾಮಾಜಿಕ ಆಯಾಮ ಪಡೆಯುವುದು ಅದು ರಾಜಕೀಯ ಅಸ್ತ್ರ ಮತ್ತು ಸಿದ್ಧಾಂತವಾಗಿ ರೂಪುಗೊಂಡಾಗ. ರಾಜಕೀಯ ಒತ್ತಾಸೆ ಯಾವುದು; ಧಾರ್ಮಿಕ ನಂಬಿಕೆಯಿದ ಹುಟ್ಟಿಕೊಂಡ ಆಚರಣೆ ಯಾವುದು ಎಂದು ನಿಖರವಾಗಿ ಗೆರೆ ಕೊರೆದು ಹೇಳಲಾರದಷ್ಟು ಇವುಗಳ ಸಂಬಂಧ ಸಿಕ್ಕುಸಿಕ್ಕುಗಿರುವುದರಿಂದ ನಾಗರಿಕ ಸಮಾಜದ ವ್ಯಾಖ್ಯಾನ ಮತ್ತು ಸ್ವೀಕೃತ ಮೌಲ್ಯಗಳಲ್ಲಿ ಸ್ವಯಂಹತ್ಯೆಯಾಗುವುದು ಅಲ್ಲಿ ತ್ಯಾಗ, ಬಲಿದಾನ, ಮೋಕ್ಷ ಇತ್ಯಾದಿಗಳ ಮುಸುಕು ಹಾಕಿಕೊಳ್ಳುತ್ತದೆ.

ಕಲ್ಲುಗಳನ್ನು ತುಂಬಿಕೊಂಡು ತನ್ನ ಮನೆಯ ಬಳಿ ಹರಿಯುತ್ತಿದ್ದ ವೂಸ್‌ನದಿಯಲ್ಲಿ ಹಾರಿ ದೇಹತ್ಯಾಗ ಮಾಡಿದಳು. ತನ್ನ ಪ್ರಕಾಶಕ ಗೆಳೆಯನ ಹೆಂಡತಿ ಲಿಲಿಯಾ ಬ್ರಿಕ್‌ಳನ್ನು ಮೋಹಿಸಿ, ನಮ್ಮ ಪ್ರೀತಿ ದಿನಕರ್ಮಗಳ ಹೊಡೆತಕ್ಕೆ ಸಿಲುಕಿ ತಳ ಒಡೆದ ದೋಣಿಯಾಗಿದೆ. ನಾವಿಬ್ಬರೂ ಚೆಲ್ಲಾಪಿಲ್ಲಿಯಾಗಿದ್ದೇವೆ. ನೋವು, ದುಃಖ, ಯಾತನೆಗಳನ್ನು ಪರಸ್ಪರ ಪಟ್ಟಿ ಮಾಡುವುದರಲ್ಲಿ ಅರ್ಥವಿಲ್ಲ, ಇದಕ್ಕೆಲ್ಲ ಕೊನೆಯೆಂದರೆ... ಎಂದು ಹತಾಶೆಗೊಂಡು ತನ್ನನ್ನು ಗುಂಡಿಗೆ ಅರ್ಪಿಸಿಕೊಂಡ ಮಾಯಕೋವಸ್ಕಿ ಕ್ರಾಂತಿ ನಂತರದ ರಶಿಯಾದ ಯುಗದ ಯುವ ಕವಿ ಎಂದೇ ಚಿತ್ರಿತನಾದವನು. (ಮನದನ್ನೆಲಿಲಿಯಾಳನ್ನು ಬೆನ್ನೆಲುಬಿನ ಕೊಳಲು ಎಂದು ಕರೆದಿದ್ದ ಮಾಯಕೋವಸ್ಕಿ ಅದೇ ಹೆಸರಿನ ಕವಿತೆಯ ಮೂಲಕ ತಮ್ಮ ಪ್ರೀತಿಯನ್ನು ಚಿರಂತನವಾಗಿಸಿದ್ದಾನೆ). ವ್ಯವಸ್ಥೆಯ ವಿರುದ್ಧ ಕಿಡಿಕಾರುವ ಕ್ರಾಂತಿಕಾರಕ ಭಾಷಣ ಮಾಡಿ ತನ್ನ ಗುಂಡಿಗೆಯ ರಕ್ತವನು ಸಾರ್ವಜನಿಕವಾಗಿ ಹರಿತ ಆಯುಧಗಳಿಗೆ ಒಡ್ಡಿ ಹರಾಕಿರಿ ಮಾಡಿಕೊಂಡ ಯುಕಿಯೋ ಮಿಷಿಮಾ. ಲೋಕೋತ್ತರ ಕಥೆಗಳನ್ನು ರಚಿಸಿ ಕೊನೆಗೆ ಆತ್ಮಹತ್ಯೆಯ ಮೂಲಕ ತನ್ನ ಕಥಾ ಪಾತ್ರಗಳಂತೆ ತನಗೇ ಅರಿವಾಗದ ಕತ್ತಲೆಗೆ ಸೇರಿಕೊಂಡು ಎರ್ನೆಸ್ಟ್ ಹೆಮಿಂಗ್ವೆ.

-ಇಂತಹ ಮನಸ್ಸುಗಳ ಆಳಕ್ಕೆ ಹೋಗುವುದು ಬೆಳಕೇ ಕಾಣದ ದುರ್ಗಮ ಕಾಡನ್ನು ಹೊಕ್ಕಂತೆ. ಆ ಕ್ಷಣದ ಖಾಲಿತನದಿಂದ ಹುಟ್ಟುವ ಹತಾಶೆ ಮತ್ತು ಅದನ್ನು ಕೊನೆಗಾಣಿಸಲು ತಾನೇ ಇಲ್ಲವಾಗುವುದು! ಅಚ್ಚರಿಯೆಂದರೆ, ಇವರಾರೂ ಮಾನಸಿಕ ಕಾಯಿಲೆಯಿಂದ ನರಳುತ್ತಿದ್ದವರಲ್ಲ. ಬದಲಿಗೆ ತಮ್ಮ ಹೊಳೆಹೊಳೆವ ರೂಪಕಗಳಿಂದ ಉಳಿದವರ ಮಾನಸಿಕ ಜಗತ್ತಿಗೆ ಬೆಳಕು ನೀಡಿದವರು. ಆದರೆ ಆ ಬೆಳಕು ಹಂಚುವ ಪಯಣವನ್ನು ಇದ್ದಕ್ಕಿದಂತೆ ನಿಲ್ಲಿಸಿ, ಇಗೋ, ಇಲ್ಲಿಂದ ಬರಿ ಕತ್ತಲು; ಮುಂದಿನ್ನು ದಾರಿಯಿಲ್ಲ ಎಂದು ಬದುಕಿನ ದೀಪವನ್ನು ನಂದಿಸಿದವರು.

*

ತೀವ್ರ ಒತ್ತಡ, ಧಾವಂತ, ಅನಪೇಕ್ಷಿತ ಮಹತ್ವಾಕಾಂಕ್ಷೆ, ಎದುರಿಸಲಾರೆನೆಂಬ ಅಪನಂಬಿಕೆ; ಆತ್ಮವಿಶ್ವಾಸದ ಕೊರತೆ ಮತ್ತು ಇದೇ ಬಗೆಯ ಹೆಸರಿಸಲಾರದ ಭಾವದಿಂದ ನರಳುತ್ತಿರುವ ಗೆಳೆಯ-ಪರಿಚಿತ, ಸಹೋದ್ಯೋಗಿ, ಹಿತೈಷಿ ನಿಮ್ಮ ಅಕ್ಕಪಕ್ಕ ಇದ್ದಾರೆಯೆ? ದುಃಖಿತರಾಗಿ, ಖಿನ್ನತೆಯಲ್ಲಿ ಬಸವಳಿದವರಂತೆ, ಏನೋ ಅನಾಹುತ ಮಾಡಿಕೊಳ್ಳುವಂತೆ ಕಾಣುತ್ತಿದ್ದಾರೆಯೇ? ಕವಿಯೊಬ್ಬ ಹೇಳಿದ ಮಾತುಗಳನ್ನು ಅಂಥವರ ಕಿವಿಯಲ್ಲಿ ಗುನುಗಿ:

ಚಾಕುಗಳು ಬಹಳ ಹರಿತವಾಗಿವೆ. ನಿಮಗೆ ನೋವುಂಟು ಮಾಡುತ್ತವೆ
ನದಿಯ ನೀರು ಕೊರೆಯುತ್ತದೆ ಮತ್ತು ಅಲ್ಲಿ ಕಾಲು ಕಚ್ಚುವ ಏಡಿಗಳಿವೆ
ವಿಷ, ರಾಸಾಯನಿಕಗಳು ನಿಮ್ಮ ಕರಳು ಕತ್ತರಿಸುತ್ತವೆ
ಬಂದೂಕ ಬಳಸುವುದು ಶಿಕ್ಷಾರ್ಹ
ಅಡುಗೆ ಅನಿಲ, ಸೀಮೆಎಣ್ಣೆ ವಾಸನೆ ಹೊಲಸು
ಹಗ್ಗಗಳೇನಿದ್ದರೂ ಪ್ರಾಣಿಗಳನ್ನು ಕಟ್ಟಿಹಾಕಲು ಯೋಗ್ಯ
ರೈಲಿನ ಸದ್ದು ಹೃದಯ ಸೀಳುವಷ್ಟು ಭಯಾನಕ, ಅತ್ತ ಹೆಜ್ಜೆ ಹಾಕಲೇ ಬಿಡಿ
ಇವೆಲ್ಲ ಹಾಳಾಗಲಿ ಬಿಡಿ
ತಕ್ಷಣದ ದುಃಖ ಮರೆತು ಬದುಕಿಬಿಡಿ
ಮುಂಜಾನೆ ಎದ್ದಾಗ ಕಾಣುವ
ಬೆಳಗಿನ ಬೆಳಕು ಬಲು ಮೋಹಕ

□

ಇದು ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ ಅತ್ಯಂತ ಪ್ರಸಿದ್ಧಿ ಪಡೆದ ಭಾಷಣ. ಜಗತ್ತಿನ ನೂರು ಮಹಾನ್ ಭಾಷಣಗಳಲ್ಲಿ ಸರ್ವಶ್ರೇಷ್ಠವಾದ ಭಾಷಣ ಎಂಬ ಹೆಗ್ಗಳಿಕೆ ಇದಕ್ಕಿದೆ. ಅಮೆರಿಕಾದ ರಾಜಧಾನಿ ವಾಷಿಂಗ್ಟನ್ನಲ್ಲಿ ೨೮ ಆಗಸ್ಟ್ ೧೯೬೩ರಂದು ಮಾರ್ಟಿನ್ ಲೂಥರ್ ಕಿಂಗ್ ಜೂ. ಬೃಹತ್ ಸಮಾವೇಶವನ್ನು ಸಂಘಟಿಸಿದ್ದರು. ಅಂದಿಗೆ ಅಮೆರಿಕಾದಲ್ಲಿ ದಾಸ್ಯಪದ್ಧತಿ ಅಧಿಕೃತವಾಗಿರದ್ದಾಗಿ ಒಂದು ನೂರು ವರ್ಷವಾಗಿತ್ತು. ಕರಿಯರಿಗೆ ನಿರಾಕರಿಸಲಾದ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳ ಘನತೆ ಬಗ್ಗೆ ಅಮೆರಿಕದ ಜನತೆಯ ಮತ್ತು ಪ್ರಭುತ್ವದ ಕಣ್ಣು ತೆರೆಸುವುದು ಕಿಂಗ್ ಅವರ ಉದ್ದೇಶವಾಗಿತ್ತು. ವಾಷಿಂಗ್ಟನ್ ಯಾತ್ರೆಗೆ ಕರಿಯರಲ್ಲದೆ ಮಾನವ ಘನತೆಯಲ್ಲಿ ನಂಬಿಕೆಯಿಟ್ಟ ಬಿಳಿಯರೂ ಮೆರವಣಿಗೆಯಲ್ಲಿ ಸೇರಿದ್ದರು. ಪ್ರಭುತ್ವ ಇಪ್ಪತ್ತೈದು ಸಾವಿರ ಕೂಡಬಹುದೆಂದು ಭಾವಿಸಿತ್ತು. ಅದು ಸುಳ್ಳಾಗಿ ಎರಡೂವರೆ ಲಕ್ಷ ಜನಸಾಗರ ಸೃಷ್ಟಿಯಾಯಿತು. ಅಲೆ ಅಲೆಯಾಗಿ ಬಂದ ಜನ ವಾಷಿಂಗ್ಟನ್‌ನ ಲಿಂಕನ್ ಸ್ಮಾರಕದ ಬಳಿ ನೆರೆಯಿತು. ಲಿಂಕನ್ ಸ್ಮಾರಕದ ಭವ್ಯ ಸ್ತಂಭಗಳ ಎದುರಿನಲ್ಲಿ ನೆರೆದ ಜನಸ್ತೋಮವನ್ನು ಉದ್ದೇಶಿಸಿ ಅನೇಕರು ಮಾತನಾಡಿದ ನಂತರ ಕಿಂಗ್ ಎದ್ದು ನಿಂತ. ಇನ್ನೂ ೩೪ ವರ್ಷದ ತರುಣ ಕಿಂಗ್ ತನ್ನ ಭಾಷಣವನ್ನು ಎಚ್ಚರಿಕೆಯಿಂದ ಸಿದ್ಧಪಡಿಸಿದ್ದ. ಜನರ ಹೃದಯ ಪರಿವರ್ತನೆಗೆ ಸೂಕ್ತವಾದ ಪದಗಳನ್ನು ಹೆಣೆದಿದ್ದ. ಆದರೆ ಜನರನ್ನು ಕಂಡು ಭಾವಪರವಶನಾದ ಕಿಂಗ್ ತನ್ನ ಟಿಪ್ಪಣಿಗಳನ್ನು ಎಸೆದು ಹೃದಯದ ಆಳಕ್ಕೆ ಹೊಕ್ಕು ತನ್ನ ಭಾವನೆಗಳನ್ನೇ ಮಾತಾಗಿ ಪರಿವರ್ತಿಸಿದ. ಅಂದು ನಾಗರಿಕ ಹಕ್ಕುಗಳ ಮಹತ್ವ ಕುರಿತ ಶ್ರೇಷ್ಠವಾದ, ಚಾರಿತ್ರಿಕವಾದ ಭಾಷಣ ಹೊಮ್ಮಿತು. ಮಾರನೆಯ ದಿನ ಭಾಷಣವನ್ನು ವರದಿ ಮಾಡಿದ ಅನೇಕ ಜನಪ್ರಿಯ ಪತ್ರಿಕೆಗಳು ಕಿಂಗ್‌ನನ್ನು ಅಮೆರಿಕಾದ ಅಧಿಕೃತ ಅಧ್ಯಕ್ಷನೆಂದು ಹೊಗಳಿ ಬರೆದವು. ಆ ಭಾಷಣದ ಪೂರ್ಣ ಪಠ್ಯ ಇಲ್ಲಿದೆ.

ನನಗೊಂದು ಕನಸಿದೆ!

ಡಾ. ಕೆ ಪುಟ್ಟಸ್ವಾಮಿ

ನಮ್ಮ ದೇಶದ ಚರಿತ್ರೆಯಲ್ಲಿ ಮಾನವನ ಸ್ವಾತಂತ್ರ್ಯಕ್ಕಾಗಿ ನಡೆದ ಬಹುದೊಡ್ಡ ಜನಾಂದೋಲನ ಎಂಬ ಖ್ಯಾತಿಯ ಘಟನೆ ಇಂದು ಜರುಗಲಿದೆ. ಈ ಚರಿತ್ರಾರ್ಹ ದಿನದಂದು ನಿಮ್ಮ ಜೊತೆ ಸೇರಲು ನನಗೆ ತುಂಬಾ ಸಂತೋಷವಾಗುತ್ತಿದೆ.

ನೂರು ವರ್ಷಗಳ ಹಿಂದೆ ಅಮೆರಿಕಾದ ಮಹಾನು ಭಾವನೊಬ್ಬ ಕರಿಯರ ಬಿಡುಗಡೆಗಾಗಿ ವಿಮೋಚನಾ ಘೋಷಣೆಗೆ ಸಹಿಹಾಕಿದ. ಇಂದು ಆತನ ನೆರಳಿನಡಿಯಲ್ಲಿ ನಾವು ಒಗ್ಗೂಡಿದ್ದೇವೆ. ಅನ್ಯಾಯದ ಜ್ವಾಲೆಯಲ್ಲಿ ಸುಟ್ಟು ಹೋಗುತ್ತಿದ್ದ ಲಕ್ಷಾಂತರ ನೀಗ್ರೋ ಗುಲಾಮರಿಗೆ ಆ ಚಾರಿತ್ರಿಕ ಶಾಸನವು ಭರವಸೆಯ ಕಿರಣವಾಗಿ ಹೊಮ್ಮಿತು. ಕರಿಯರ ಬಾಳ ಬಂಧನದ ಕಾಳರಾತ್ರಿಯು ಕಳೆದು ಬಿಡುಗಡೆಯ ಹರುಷದ ಮುಂಜಾನೆಯ ರೂಪಕ, ಆ ಶಾಸನ.

ಆದರೆ ಒಂದುನೂರು ವರ್ಷಗಳ ನಂತರವೂ ಕರಿಯರು (ನೀಗ್ರೋ) ಇನ್ನೂ ಸ್ವತಂತ್ರರಾಗಿಲ್ಲ. ವಿಮೋಚನೆಯ ಶಾಸನ ಘೋಷಣೆಯಾದ ಒಂದು ಶತಮಾನದ ನಂತರವೂ ಜನಾಂಗ ಬೇಧದ ಸಂಕೋಲೆಯಲ್ಲಿ ಮತ್ತು ಪ್ರತ್ಯೇಕತಾವಾದದ ಬೇಡಿಯಲ್ಲಿ ಸಿಲುಕಿರುವ ಕರಿಯ ಹೆಳವನಾಗಿದ್ದಾನೆ.



ಒಂದು ನೂರು ವರ್ಷಗಳ ತರುವಾಯ ಭೌತಿಕ ಸಂಪತ್ತಿನ ಸಾಗರದ ನಡುವೆ ಇರುವ ದಾರಿದ್ರ್ಯದ ಒಂಟಿ ದ್ವೀಪದಲ್ಲಿ ಕರಿಯ ದಿನ ದೂಡುತ್ತಿದ್ದಾನೆ. ಒಂದು ನೂರು ವರ್ಷಗಳ ನಂತರ ಅಮೆರಿಕಾ ಸಮಾಜದ ಮೂಲೆಯೊಂದರಲ್ಲಿ ನೋವಿನಿಂದ ಅಳುತ್ತಾ ತನ್ನದೇ ನಾಡಿನಲ್ಲಿ ಬಹಿಷ್ಕೃತನಾಗಿದ್ದಾನೆ. ಅಂಥ ನಾಚಿಕೆಯ ಸನ್ನಿವೇಶವೊಂದಕ್ಕೆ ನಾಟಕೀಯ ರೂಪ ನೀಡಲು ನಾವೆಲ್ಲ ಇಲ್ಲಿ ಸೇರಿದ್ದೇವೆ.

ಒಂದರ್ಥದಲ್ಲಿ ಒಂದು ಚೆಕ್ ಅನ್ನು ನಗದಾಗಿ ಪರಿವರ್ತಿಸಿಕೊಳ್ಳಲು ನಾವು ನಮ್ಮ

> **ಸಾಗರದ ನಡುವೆ ಇರುವ ದಾರಿದ್ರ್ಯದ ಒಂಟಿ ದ್ವೀಪದಲ್ಲಿ ಕರಿಯ ದಿನ ದೂಡುತ್ತಿದ್ದಾನೆ. ಒಂದು ನೂರು ವರ್ಷಗಳ ನಂತರ ಅಮೆರಿಕಾ ಸಮಾಜದ ಮೂಲೆ ಯೊಂದರಲ್ಲಿ ನೋವಿನಿಂದ ಅಳುತ್ತಾ ತನ್ನದೇ ನಾಡಿನಲ್ಲಿ ಬಹಿಷ್ಕೃತನಾಗಿದ್ದಾನೆ. ಅಂಥ ನಾಚಿಕೆಯ ಸನ್ನಿವೇಶವೊಂದಕ್ಕೆ ನಾಟಕೀಯ ರೂಪ ನೀಡಲು ನಾವೆಲ್ಲ ಇಲ್ಲಿ ಸೇರಿದ್ದೇವೆ. ಒಂದರ್ಥದಲ್ಲಿ ಒಂದು ಚೆಕ್ ಅನ್ನು ನಗದಾಗಿ ಪರಿವರ್ತಿಸಿಕೊಳ್ಳಲು ನಾವು ನಮ್ಮ ದೇಶದ ರಾಜಧಾನಿಗೆ ಬಂದಿದ್ದೇವೆ. ನಮ್ಮ ಗಣರಾಜ್ಯದ ರೂವಾರಿಗಳು ಅಮೋಘವಾದ ಪದಗಳಿಂದ ಸಂವಿಧಾನವನ್ನು ಮತ್ತು ಸ್ವಾತಂತ್ರ್ಯದ ಘೋಷಣೆಯನ್ನು ರಚಿಸಿದಾಗ ಒಂದು ವಾಗ್ದಾನ ಪತ್ರಕ್ಕೆ ಸಹಿ ಮಾಡಿದ್ದರು. ಆ ವಾಗ್ದಾನಕ್ಕೆ ಅಮೆರಿಕನ್ನರೆಲ್ಲರೂ**

ದೇಶದ ರಾಜಧಾನಿಗೆ ಬಂದಿದ್ದೇವೆ. ನಮ್ಮ ಗಣರಾಜ್ಯದ ರೂವಾರಿಗಳು ಅಮೋಘವಾದ ಪದಗಳಿಂದ ಸಂವಿಧಾನವನ್ನು ಮತ್ತು ಸ್ವಾತಂತ್ರ್ಯದ ಘೋಷಣೆಯನ್ನು ರಚಿಸಿದಾಗ ಒಂದು ವಾಗ್ದಾನ ಪತ್ರಕ್ಕೆ ಸಹಿ ಮಾಡಿದ್ದರು. ಆ ವಾಗ್ದಾನಕ್ಕೆ ಅಮೆರಿಕನ್ನರೆಲ್ಲರೂ ಬಾಧ್ಯಸ್ಥರು. ಈ ವಾಗ್ದಾನ ಪತ್ರವು ಸಕಲರಿಗೂ-ಹೌದು ಕರಿಯರು ಮತ್ತು ಬಿಳಿಯರು ಇಬ್ಬರಿಗೂ-ಬದುಕಿನ ಸಮಾನ ಹಕ್ಕುಗಳನ್ನು ವಾಗ್ದಾನ ಮಾಡಿತ್ತು; "ಬದುಕು, ವಿಮೋಚನೆ ಮತ್ತು ಸುಖವನ್ನು ಅರಸುವ" ಅನಿರ್ಬಂಧಿತ ಹಕ್ಕುಗಳ ಖಾತರಿಯನ್ನು ನೀಡಿತ್ತು.

ಮನುಷ್ಯನ ಚರ್ಮದ ಬಣ್ಣಕ್ಕೆ ಸಂಬಂಧಿಸಿದಂತೆ ಅಮೆರಿಕಾವು ಈ ವಾಗ್ದಾನ ಪತ್ರವನ್ನು ಉಪೇಕ್ಷಿಸಿರುವುದು ಸ್ಪಷ್ಟವಾಗಿದೆ. ನೀಗ್ರೋ (ಕರಿಯ) ಜನಾಂಗಕ್ಕೆ ಅಮೆರಿಕಾ ನಗದು ಮಾಡಿಕೊಳ್ಳಲಾಗದ, "ಹಣದ ಕೊರತೆಯಿದೆ"ಯೆಂದು ಅಂಕಿತ ಹಾಕಿಸಿಕೊಂಡು ವಾಪಸ್ಸು ಬಂದ ಚೆಕ್ ಅನ್ನು ನೀಡಿದೆ.

ಆದರೆ ನ್ಯಾಯದ ಬ್ಯಾಂಕು ದಿವಾಳಿಯಾಗಿರುವುದನ್ನು ನಂಬಲು ನಾವು ತಯಾರಿಲ್ಲ. ಈ ರಾಷ್ಟ್ರದ ಅವಕಾಶಗಳ ಗುಪ್ತನಿಧಿಯಲ್ಲಿ ಹಣವಿಲ್ಲವೆಂಬುದನ್ನು ನಂಬಲು ತಯಾರಿಲ್ಲ. ಹಾಗಾಗಿ ಸ್ವಾತಂತ್ರ್ಯದ ಶ್ರೀಮಂತಿಕೆಯನ್ನು ಮತ್ತು ನ್ಯಾಯದ ಭದ್ರತೆಯನ್ನು ನಮಗೆ ನೀಡುವ ಈ ಚೆಕ್ ಅನ್ನು ನಗದು ಮಾಡಿಕೊಳ್ಳಲು ಬಂದಿದ್ದೇವೆ.

ಪರಿಸ್ಥಿತಿಯ ತೀವ್ರತೆ ಮತ್ತು ಗಾಂಭೀರ್ಯವನ್ನು ಅಮೆರಿಕಾಗೆ ಮನವರಿಕೆ ಮಾಡಿಕೊಳ್ಳಲು ನಾವು ಈ ಪವಿತ್ರ ತಾಣಕ್ಕೆ ಬಂದಿದ್ದೇವೆ. ವಿಶ್ರಾಂತಿ ತೆಗೆದುಕೊಳ್ಳುವಂಥ ಸುಖಭೋಗದ ಸಮಯ ಇದಲ್ಲ. ಕಾಲಕ್ರಮೇಣ ಎಲ್ಲವೂ ಸರಿಹೋಗುತ್ತದೆಂಬ ನಿಧಾನ ನೀತಿಯನ್ನು ಅನುಸರಿಸಲು ಇದು ಸಮಯವಲ್ಲ. ಉದ್ವೇಗಕ್ಕೆ ಉಪಶಮನ ಔಷಧಿಯನ್ನು ಸೇವಿಸುವ ಸಮಯವೂ ಇದಲ್ಲ. ಪ್ರಜಾತಂತ್ರವು ನೀಡಿದ ವಚನಗಳನ್ನು ಸಾಕಾರಗೊಳಿಸುವ ಕಾಲವಿದು. ಇದು ಪ್ರತ್ಯೇಕವಾದವೆಂಬ ಪಾಳುಬಿದ್ದ ಮತ್ತು ಕತ್ತಲು ತುಂಬಿದ ಕಮರಿಯಿಂದ ಮೇಲೆ ಹತ್ತಿ ಜನಾಂಗೀಯ ನ್ಯಾಯದ ಬೆಳಕಿನ ದಾರಿಯಲ್ಲಿ ನಡೆಯಬೇಕಾದ ಕಾಲ. ಜನಾಂಗೀಯ ಅನ್ಯಾಯದ ಕಳ್ಳ ಉಸುಕಿನಲ್ಲಿ ಹೂತುಹೋಗುತ್ತಿರುವ ನಮ್ಮ ರಾಷ್ಟ್ರವನ್ನು ಹಿಡಿದೆತ್ತಿ ಭ್ರಾತೃತ್ವದ ಗಟ್ಟಿ ಬಂಡೆಯ ಮೇಲೆ ಇಡಬೇಕಾದ ಕಾಲ. ದೇವರ ಎಲ್ಲ ಮಕ್ಕಳಿಗೂ ನ್ಯಾಯವು ಸಮಾನವಾದದ್ದು ಎಂದು ಮನವರಿಕೆ ಮಾಡಿಕೊಡಬೇಕಾದ ಕಾಲ.

ಈ ಕ್ಷಣದ ತುರ್ತನ್ನು ಉಪೇಕ್ಷಿಸಿದರೆ ಅದು ರಾಷ್ಟ್ರಕ್ಕೆ ಅಪಾಯಕಾರಿ. ಸ್ವಾತಂತ್ರ್ಯ ಮತ್ತು ಸಮಾನತೆಯೆಂಬ ಉಲ್ಲಾಸದ ಶರತ್ಕಾಲವು ಸಾಕಾರವಾಗುವವರೆಗೆ ನೀಗ್ರೋ ಜನಾಂಗದವರ ಉರಿಬೇಸಗೆಯಂಥ ಅತೃಪ್ತಿ ಉಪಶಮನವಾಗದು. ೧೯೬೩ ನೇ ಇಸವಿ ಅಂತ್ಯವಲ್ಲ. ಅದು ಆರಂಭ. ಕರಿಯರನ್ನು ಉಪೇಕ್ಷಿಸುವುದೇ ಸೂಕ್ತವೆಂಬ ನಂಬಿಕೆಯಿಂದ ಸಂತುಷ್ಟರಾಗಿರುವ ಜನರಿಗೆ ಆಘಾತ ಕಾದಿದೆ. ಕರಿಯರಿಗೆ ನಾಗರಿಕ ಹಕ್ಕುಗಳು ಪ್ರಧಾನವಾಗುವವರೆಗೆ ಅಮೆರಿಕದಲ್ಲಿ ವಿಶ್ರಾಂತಿಯಾಗಲೀ, ನೆಮ್ಮದಿಯಾಗಲೀ ಇರದು. ನ್ಯಾಯದ ಬೆಳಕಿನ ದಿನ ಉದಯವಾಗುವವರೆಗೆ ಬಂಡಾಯದ ಸುಂಟರಗಾಳಿ ನಮ್ಮ ರಾಷ್ಟ್ರದ ತಳಹದಿಯನ್ನು ಅಲುಗಾಡಿಸುತ್ತಲೇ ಇರುತ್ತದೆ.

ನ್ಯಾಯದ ಅರಮನೆಗೆ ಮುನ್ನಡೆಸುವ ದಿಡ್ಡಿಬಾಗಿಲಿನಲ್ಲಿ ನಿಂತಿರುವ ನನ್ನ ಜನರಿಗೆ ಕೆಲವು ವಿಷಯಗಳನ್ನು ಹೇಳಲೇಬೇಕು. ನಮ್ಮ ನ್ಯಾಯಯುತ ಹಕ್ಕನ್ನು ಪಡೆಯುವ ಪ್ರಕ್ರಿಯೆಯಲ್ಲಿ ಕುಕೃತ್ಯಗಳ ಪಾಪಪ್ರಜ್ಞೆಗೆ ನಾವು ಈಡಾಗಬಾರದು. ನಮ್ಮ ಸ್ವಾತಂತ್ರ್ಯದ ದಾಹವನ್ನು ಕಹಿ ಮತ್ತು ದ್ವೇಷದ ಬಟ್ಟಲಿನಲ್ಲಿರುವ ದ್ರವದಿಂದ ತಣಿಸಿಕೊಳ್ಳದಿ ರೋಣ. ನಾವು ನಮ್ಮ ಸಂಘರ್ಷವನ್ನು ಸದಾ ಉನ್ನತವಾದ ಘನತೆ ಮತ್ತು ಶಿಸ್ತಿನಿಂದ ನಡೆಸೋಣ. ನಮ್ಮದು ಸೃಜನ ಶೀಲ ಪ್ರತಿಭಟನೆ. ಅದನ್ನು ಭೌತಿಕ ಹಿಂಸೆಯ ರೂಪಕ್ಕೆ ಕುಗ್ಗಿಸದಿರೋಣ. ನಾನು ಮತ್ತೆ ಮತ್ತೆ ಒತ್ತಿ ಹೇಳುತ್ತಿದ್ದೇನೆ-ಭೌತಿಕ ಬಲವನ್ನು ಆತ್ಮದ ಬಲದಿಂದ ಎದುರಿಸುವಂತಹ ಉದಾತ್ತ ಮಟ್ಟಕ್ಕೆ ನಾವು ಏರಬೇಕು.

ನೀಗ್ರೋ ಸಮುದಾಯವನ್ನು ಆವರಿಸಿಕೊಂಡಿರುವ ಈ ಹೊಸ ಬಗೆಯ ಅಮೋಘವಾದ ಕಿಚ್ಚು ಎಲ್ಲ ಬಿಳಿಯ ಜನರ ಅಪನಂಬಿಕೆಯಲ್ಲಿ ಬೇಯಿಸಬಾರದು. ಅನೇಕ ಬಿಳಿಯ ಜನರು ಇಲ್ಲಿ ಬಂದಿದ್ದಾರೆ. ಅಂಥ ಬಿಳಿಯ ಸೋದರರು ತಮ್ಮ ಭವಿಷ್ಯವೂ ಕರಿಯರ ಭವಿಷ್ಯದೊಡನೆ ತಳುಕುಹಾಕಿಕೊಂಡಿದೆಯೆಂಬ ನಂಬಿಕೆಯಿಂದ ಬಂದಿದ್ದಾರೆ. ಅವರು ಬಿಳಿಯರ ಬಿಡುಗಡೆಯು ಕರಿಯರ ವಿಮೋಚನೆಯೊಡನೆ ಬಿಡಿಸಲಾಗದ ಬಂಧನದಿಂದ ಕೂಡಿರುವುದನ್ನು ಅರಿತುಕೊಳ್ಳಲು ಬಂದಿದ್ದಾರೆ.

ನಾವು ಏಕಾಂಗಿಯಾಗಿ ನಡೆಯಲಾರೆವು.

ನಾವು ನಡೆದರೆ ಸದಾ ಮುನ್ನಡೆಯಲೇಬೇಕು ಎಂಬ ಪ್ರತಿಜ್ಞೆಯನ್ನು ಮಾಡೋಣ.

ನಾವು ಹಿಂದಕ್ಕೆ ಬರಲಾರೆವು.

"ನಿಮಗೆ ಯಾವಾಗ ತೃಪ್ತಿಯಾಗುತ್ತದೆ?" ಎಂದು ನಾಗರಿಕ ಹಕ್ಕುಗಳ ಭಕ್ತರನ್ನು ಪ್ರಶ್ನಿಸುವ ಜನರಿದ್ದಾರೆ. ಪೊಲೀಸರ ಅವರ್ಣನೀಯ ಕ್ರೌರ್ಯಕ್ಕೆ ನೀಗ್ರೋಗಳು ಬಲಿಯಾಗುವುದು ನಿಲ್ಲುವವರೆಗೆ ನಮಗೆ ತೃಪ್ತಿಯಿಲ್ಲ. ಪ್ರಯಾಣದಿಂದ ಬಳಲಿದ ನಮ್ಮ ದೇಹಕ್ಕೆ ಆಯಾಸ ಪರಿ ಹರಿಸಿಕೊಳ್ಳಲು ಹೆದ್ದಾರಿಯ ವಸತಿ ಗೃಹಗಳಲ್ಲಿ, ನಗರದ ಹೋಟೆಲುಗಳಲ್ಲಿ ಮುಕ್ತ ಸ್ಥಳಾವಕಾಶ ದೊರೆಯುವವರೆಗೆ ನಮಗೆ ತೃಪ್ತಿಯಿಲ್ಲ. "ಬಿಳಿಯರಿಗೆ ಮಾತ್ರ" ಎಂಬ ಫಲಕವು ನಮ್ಮ ಮಕ್ಕಳ ಸ್ವಾಭಿಮಾನವನ್ನು ಅಳಿಸಿ ಹಾಕಿ, ಅವರ ಘನತೆಯನ್ನು ಕೊಳ್ಳೆಹೊಡೆಯುವುದನ್ನು ನಿಲ್ಲಿಸುವವರೆಗೆ ನಮಗೆ ತೃಪ್ತಿ ಎಂಬುದಿಲ್ಲ. ಎಲ್ಲಿಯವರೆಗೆ ಮಿಸಿಸಿಪಿಯ ಒಬ್ಬ ನೀಗ್ರೋ ಮತದಾನ ಮಾಡಲಾರನೋ ಮತ್ತು ಮತ ಹಾಕುವುದರಿಂದ ನನಗೇನೂ ಪ್ರಯೋಜನವಿಲ್ಲ ಎಂದು ಒಬ್ಬ ಕರಿಯ ನ್ಯೂಯಾರ್ಕ್‌ನಲ್ಲಿ ನಂಬುತ್ತಾನೋ ಅಲ್ಲಿಯವರೆಗೆ ನಮಗೆ ತೃಪ್ತಿಯಿಲ್ಲ. ಎಲ್ಲಿಯ ವರೆಗೆ ನ್ಯಾಯವೆಂಬ ನೀರು ಪ್ರಶಾಂತವಾಗಿ ಹರಿಯುವು ದಿಲ್ಲವೋ, ಸನ್ನಡತೆಯು ನದಿಯು ಆರ್ಭಟಿಸಿ ಧುಮ್ಮಿಕ್ಕು ವುದಿಲ್ಲವೋ ಅಲ್ಲಿಯವರೆಗೆ ನಮಗೆ ತೃಪ್ತಿಯಾಗದು.

ಇಲ್ಲಿಗೆ ಬಂದಿರುವ ಅನೇಕರು ಸಂಕಷ್ಟಗಳನ್ನೆ ಉಂಡು ಬಂದಿರುವುದನ್ನು ನಾನು ಕಡೆಗಣಿಸುತ್ತಿಲ್ಲ. ಕಿರಿದಾದ ಜೈಲಿನಿಂದ ಈಗ ತಾನೆ ಕೆಲವರು ಹೊರಬಂದಿದ್ದೀರಿ. ಸ್ವಾತಂತ್ರ್ಯದ ಹುಡುಕಾಟದಲ್ಲಿರುವವರು ಕಿರುಕುಳದ ಬಿರುಗಾಳಿಯ ಹೊಡೆತದಿಂದ ನಲುಗಿದ್ದಾರೆ. ಪೊಲೀಸರ ಕ್ರೌರ್ಯಕ್ಕೆ ತತ್ತರಿಸಿದ್ದಾರೆ. ಅಂಥ ಹುಡುಕಾಟದಲ್ಲಿ ನಿರತರಾಗಿದ್ದ ಹಲವರು ಆಗಮಿಸಿದ್ದೀರಿ. ಸೃಜನಶೀಲ ವೇದನೆಯ ಅನುಭವಗಳಿಂದ ಹಣ್ಣಾಗಿರುವ ಹಲವರು ಇಲ್ಲಿದ್ದೀರಿ. ಸಂಕಷ್ಟದ ಅನುಭವವೇ ವಿಮೋಚನೆಯ ದಾರಿ ಎಂಬ ದೃಢ ನಿಷ್ಠೆಯ ನಿಮ್ಮ ಕಾಯಕವನ್ನು ಮುಂದುವರೆಸಿ. ಈ ಪರಿಸ್ಥಿತಿಯು ಯಾವುದಾದರೊಂದು ರೀತಿಯಲ್ಲಿ ಬದಲಾಗುತ್ತದೆಂಬ ನಂಬಿಕೆಯಿಂದ ಮಿಸಿಸಿಪಿಗೆ ಹಿಂದುರಿಗಿ, ಅಲಬಾಮಾಗೆ ಹಿಂದಿರುಗಿ ಹೋಗಿ, ಸೌತ್ ಕ್ಯಾರೊಲೀನಾಗೆ ಮರಳಿ ಹೋಗಿ. ಜಾರ್ಜಿಯಾಗೆ ನಡೆಯಿರಿ. ಲೂಸಿಯಾನಾಗೆ ಹೋಗಿ. ಉತ್ತರ ಪ್ರಾಂತ್ಯದ ನಗರಗಳ ಕೊಳಚೆ ಪ್ರದೇಶಗಳಿಗೆ ಮರಳಿ ಹೋಗಿ.

ನನ್ನ ಗೆಳೆಯರೇ, ಇಂದು ಹೇಳುತ್ತೇನೆ-ನಾವು ಈ ಹತಾಶೆಯ ಕಮರಿಯಲ್ಲೇ ಉರುಳಾಡದಿರೋಣ.

ಇಂದು ಮತ್ತು ನಾಳೆ ನಾವು ಸಂಕಷ್ಟಗಳನ್ನು ಎದುರಿಸಿದರೂ ಇನ್ನೂ ನನಗೊಂದು ಕನಸಿದೆ. ಅದು ಅಮೆರಿಕಾದ ಕನಸಿನಲ್ಲಿ ಬೇರೂರಿರುವ ಕನಸು.

ಒಂದಲ್ಲ ಒಂದು ದಿನ ಈ ರಾಷ್ಟ್ರವು "ಎಲ್ಲ ಜನರೂ ಸಮಾನವಾಗಿ ಸೃಷ್ಟಿಯಾಗಿದ್ದಾರೆ" ಎಂಬ ತನ್ನ ರಾಷ್ಟ್ರಧರ್ಮದ ನಿಜವಾದ ಅರ್ಥಕ್ಕೆ ಸಮಾನವಾಗಿ ಎದ್ದು ನಿಲ್ಲುತ್ತದೆ ಎಂಬ ಕನಸಿದೆ.

ಜಾರ್ಜಿಯಾದ ರೆಡ್‌ಹಿಲ್ಸ್‌ನಲ್ಲಿ ಮಾಜಿ ಗುಲಾಮರ ಮಕ್ಕಳು ಮತ್ತು ಅವರ ಮಾಜಿ ಯಜಮಾನರ ಮಕ್ಕಳು ಎಂದಾದರೊಂದು ಒಂದು ದಿನ ಭ್ರಾತೃತ್ವದ ಮೇಜಿನ ಎದುರು ಕುಳಿತುಕೊಳ್ಳುತ್ತಾರೆಂಬ ಕನಸಿದೆ.

ಅನ್ಯಾಯದ ಬಾಣಲೆಯಲ್ಲಿ ಬೇಯುತ್ತಿರುವ, ದಮ ನದಲ್ಲಿ ತೊಡಗಿರುವಂಥ ಮಿಸಿಸಿಪಿ ರಾಜ್ಯವೂ ಒಂದು ದಿನ ಸ್ವಾತಂತ್ರ್ಯ ಮತ್ತು ನ್ಯಾಯದ ಜೀವಸೆಲೆಯಾಗಿ ಪರಿವರ್ತನೆಯಾಗಬಹುದು ಎಂಬ ಕನಸಿದೆ.

ಒಂದಲ್ಲ ಒಂದು ದಿನ ಮೈಬಣ್ಣದ ಬದಲು ತಾವು ಮೈಗೂಡಿಸಿಕೊಂಡ ಸದ್ಗುಣ

(೪೯ನೇ ಪುಟಕ್ಕೆ)

ಅಮೆರಿಕಾದ ಎಲ್ಲ ದೊಡ್ಡ ನಗರಗಳಲ್ಲಿ ಒಂದು ರಸ್ತೆ ಇಲ್ಲವೇ ಸರ್ಕಾರದ ಶಾಲೆಗಳಿಗೆ ಮಾರ್ಟಿನ್ ಲೂಥರ್ ಕಿಂಗ್ ಜೂ. ಹೆಸರನ್ನಿಡಲಾಗಿದೆ. ಅವರ ಜನ್ಮ ದಿನವನ್ನು ರಾಷ್ಟ್ರೀಯ ರಜೆ ಎಂದು ಘೋಷಿಸಲಾಗಿದೆ. ಈ ಭಾಗ್ಯ ವಾಷಿಂಗ್ಟನ್ ಅಥವಾ ಅಬ್ರಹಾಂ ಲಿಂಕನ್ ಅವರಿಗೂ ಸಿಕ್ಕಿಲ್ಲ. ಅಂದ ಮೇಲೆ ನಲವತ್ತು ವಯಸ್ಸಿಗೂ ಮೊದಲೇ ಹಂತಕನ ಗುಂಡಿಗೆ ಬಲಿಯದ ಕಿಂಗ್ ಅವರು ಅಮೆರಿಕದ ಮೇಲೆ ಬೀರಿರುವ ಪ್ರಭಾವ ವ್ಯಕ್ತವಾಗುತ್ತದೆ. ಆದರೆ ಈ ಘನ ವ್ಯಕ್ತಿಯನ್ನು ಅಮೆರಿಕಾದ ಜನತೆ ತುಂಬ ತಪ್ಪಾಗಿ ಭಾವಿಸಿದೆ. ಭಾರತದಲ್ಲಿ ಬಾಬಾ ಸಾಹೇಬರನ್ನು ದಲಿತರ ನಾಯಕ, ಉದ್ಧಾರಕನಾಗಿ ಬಿಂಬಿಸಿರುವ ರೀತಿಯಲ್ಲೇ ಮಾರ್ಟಿನ್ ಲೂಥರ್ ಕಿಂಗ್ ಜೂ. ಅವರನ್ನು ಕಪ್ಪು ಜನಾಂಗದ ನಾಯಕ ಎಂದು ನಂಬಿಸಲಾಗಿದೆ. ವಿಚಿತ್ರವೆಂದರೆ ಅಲ್ಲಿನ ಕಪ್ಪು ಸಮುದಾಯವೂ ಹಾಗೆಂದು ಭಾವಿಸಿದೆ.

೧೯೬೮ರ ಏಪ್ರಿಲ್ ನಾಲ್ಕರಂದು ಮಾರ್ಟಿನ್ ಲೂಥರ್ ಕಿಂಗ್ ಜೂ. ಅವರು ಟೆನೆನ್ಸಿ ಪ್ರಾಂತ್ಯದ ಮೆಂಫಿಸ್ ಪಟ್ಟಣದ ಹೋಟೆಲ್‌ನ ಬಾಲ್ಕನಿಯಲ್ಲಿ ನಿಂತಿದ್ದಾಗ ಹಂತಕನ ಗುಂಡಿಗೆ ಬಲಿಯಾದರು. ಆಗ ಅವರಿಗೆ ಮೂವತ್ತೊಂಬತ್ತು ವರ್ಷ. ಅದಾಗಿ ನಾಲ್ಕು ದಶಕಗಳು ಕಳೆದಿವೆ. ಈಗಲೂ ಆತನನ್ನು ಕರಿಯರ ಸಮಾನತೆಗಾಗಿ ಹೋರಾಡಿದ ನಾಯಕ ಎಂದೇ ಹೇಳುತ್ತಾರೆ. ಘನ ವ್ಯಕ್ತಿತ್ವದ ಕಾಣಿಕೆಯನ್ನು ಅಪಮೌಲ್ಯಗೊಳಿಸುವ ಕುತಂತ್ರವಿದು. ಕರಿಯರನ್ನು ದಾಸ್ಯದ ನೊಗದಿಂದ ಬಿಡುಗಡೆಗೊಳಿಸಲು ಕಿಂಗ್ ಹೋರಾಡಿದ್ದು ನಿಜ. ಅದೇ ವೇಳೆ ಶತಮಾನಗಳ ಕಾಲ ಜನಾಂಗವಾದ ಮತ್ತು ಗುಲಾಮ ಪದ್ಧತಿಯ ಮೂಲಕ ಒಂದು ಸಮುದಾಯವನ್ನೇ ಶೋಷಿಸಿ ಸಾಮ್ರಾಜ್ಯ ಕಟ್ಟಿದ ಬಿಳಿಯರನ್ನು ಪಾಪದ ನರಕದಿಂದ ವಿಮೋಚನೆಗೊಳಿಸಿದ ಕಾರ್ಯಕ್ಕಾಗಿ ಬಿಳಿಯರೂ ಕಿಂಗ್ ಅವರಿಗೆ ಕೃತಜ್ಞರಾಗ ಬೇಕಿದೆ. ಇಂದು ಯಾವುದೇ ಪಾಪ ಪ್ರಜ್ಞೆಯಿಲ್ಲದೆ ಅಮೆರಿಕಾ ಸಂಸ್ಥಾನವು ತಾನು ವ್ಯಕ್ತಿ ಸ್ವಾತಂತ್ರ್ಯದ ಚಾಂಪಿಯನ್ ಎಂದು ಬೀಗಲು ಕಿಂಗ್ ಅವರು ಮುನ್ನಡೆಸಿದ ಚಳವಳಿಗಳ ಕಾರಣದಿಂದಾಗಿ. ಅವರ ಹಿಂದೆ ನಡೆದ ಕರಿಯರು ಮತ್ತು ಬಿಳಿಯರು ತಮ್ಮ ಆಂದೋಲನಗಳಲ್ಲಿ ವಿಫಲರಾಗಿದ್ದರೆ ಜನಾಂಗಬೇಧ ನೀತಿಯಡಿ ನಲುಗಿದ್ದ ದಕ್ಷಿಣ ಆಫ್ರಿಕ ದೇಶಕ್ಕೂ ಮತ್ತು ಅಮೆರಿಕದ ದಕ್ಷಿಣ ಪ್ರಾಂತ್ಯಕ್ಕೂ ಯಾವುದೇ ವ್ಯತ್ಯಾಸ ಇರುತ್ತಿರಲಿಲ್ಲ. ಮಾನವ ಘನತೆ ಹಾಗೂ ವ್ಯಕ್ತಿ ಸಮಾನತೆಯಲ್ಲಿ ನಂಬಿಕೆಯಿಟ್ಟ ಯಾವುದೇ ರಾಷ್ಟ್ರದ ಮುಂದೆ ತಲೆಯೆತ್ತಿ ನಿಲ್ಲುವ ನೈತಿಕತೆಯೆ ಅದಕ್ಕಿರಲಿಲ್ಲ.

ಸಾಂದರ್ಭಿಕವಾಗಿ ಹೇಳುವುದದರೆ ಅಂಬೇಡ್ಕರ್ ವಿಷಯದಲ್ಲೂ ಅಷ್ಟೆ. ಅವರನ್ನು

ಮಾರ್ಟಿನ್ ಲೂಥರ್ ಕಿಂಗ್ ಜೂ. ಅವರು ಅಮೋಘ ಧೈರ್ಯಶಾಲಿ. ರೋಸಾಪಾರ್ಕ್ಸ್ ಬಂಧನ ವಿರೋಧಿಸಿ ೧೯೫೫ರಲ್ಲಿ ಮಾಂಟ್ಗೊಮೆರಿಯ ಬಸ್ ಬಹಿಷ್ಕಾರ ಕಾರ್ಯಕ್ರಮದಿಂದ ಆರಂಭವಾದ ಅವರ ಬದುಕು ಹದಿಮೂರು ವರ್ಷಗಳ ತರುವಾಯ ಹಂತಕ ಹಾರಿಸಿದ ಗುಂಡಿನಲ್ಲಿ ಅಂತ್ಯಕಂಡಿತು. ಈ ಅವಧಿಯಲ್ಲಿ ಅವರ ಮೇಲೆ ಅನೇಕ ಹಲ್ಲೆ, ಕೊಲೆಯ ಯತ್ನಗಳಾದವು. ನೂರಾರು ಬೆದರಿಕೆಯ ಕರೆಗಳು ಬಂದವು.ಅವರ ಹೆಂಡತಿ ಮತ್ತು ಮಕ್ಕಳು ಮನೆಯಲಿದ್ದಾಗಲೇ ಬಾಂಬ್ ದಾಳಿ ನಡೆಯಿತು. ಅಮೆರಿಕದ ಗೂಢಚಾರ ಸಂಸ್ಥೆ ಎಫ್ ಬಿಐ ಅವರ ಮನೆಯ, ಹೋಟೆಲಿನ ಟೆಲಿಫೋನ್ ಕರೆಗಳನ್ನು ಕದ್ದಾಲಿಸಿ ಅವರ ಚಾರಿತ್ರ್ಯವಧೆಯನ್ನು ನಿರಂತರ ವಾಗಿ ಮಾಡಿತು. ಆ ಸಂಸ್ಥೆಯ ಮುಖ್ಯಸ್ಥ ಎಡ್ಗರ್ ಹೋವರ್ ಅವರನ್ನು ಯಾವ ಮಟ್ಟದಲ್ಲಿ ಬೇಟೆಯಾಡಿದ ನೆಂದರೆ ೧೯೬೪ರಲ್ಲಿ ಮೂವತ್ತೈದು ವರ್ಷದ ಕಿಂಗ್ ಅವರಿಗೆ ನೋಬೆಲ್ ಪಾರಿತೋಷಕ ಪ್ರಕಟವಾದಾಗ ಆತ್ಮ ಹತ್ಯೆಯ ಯೋಚನೆಯಲ್ಲಿದ್ದರು. ಅಷ್ಟೊಂದು ಕೀಳು ಮಟ್ಟದ ಅಪಪ್ರಚಾರ ಅವರ ವಿರುದ್ಧ ನಡೆದಿತ್ತು. ಕಿಂಗ್ ಅವರು ಮೊದಲ ಪ್ರತಿಭಟನೆಯನ್ನು ಆರಂಭಮಾಡಿದಾಗ ತಾನೊಬ್ಬ ಹೋರಾಟಗಾರನಾಗುತ್ತೇನೆಂದು ಕನಸಿರಲಿಲ್ಲ. ಬಿಳಿಯನೊಬ್ಬನ ಬೆದರಿಕೆ ಅವರ ಸಂಕಲ್ಪಶಕ್ತಿಯನ್ನು ದೃಡ ಗೊಳಿಸಿತು.





ಕ್ರಾಂತಿಕಾರ ಸ್ಫೂರ್ತಿ ಕಿಂಗ್ ಜೂ.

ಕೇವಲ ಶೋಷಿತರ ನಾಯಕ ಎಂದು ಗುರುತಿಸಲಾಗಿದೆ. ಅವರ ಜನ್ಮದಿನವನ್ನು ದಲಿತರ ಹಬ್ಬವೆಂದೇ ಆಚರಿಸಲಾಗುತ್ತಿದ್ದೆ. ಶತಮಾನಗಳ ಕಾಲ ಮೂಕವಾಗಿದ್ದ ಜನಸ್ತೋಮಕ್ಕೆ ಅಂಬೇಡ್ಕರ್ ಅವರು ದನಿ ನೀಡಿದ್ದು ನಿಜ. ಆದರೆ ಅದಕ್ಕೆ ದಲಿತರು ಮಾತ್ರ ಕೃತಜ್ಞರಾಗಿರಬೇಕಿಲ್ಲ. ಅಮಾನುಷವಾದ ಆಚರಣೆಗಳನ್ನು ಮುಂದುವರಿಯದಂತೆ ಮಾಡಿ ತಮ್ಮನ್ನು ನರಕದಿಂದ ಪಾರು ಮಾಡಿದ ಶ್ರೇಷ್ಠ ಕಾರ್ಯಕ್ಕೆ ಎಲ್ಲ ಮೇಲ್ಜಾತಿಯವರೂ ಅಂಬೇಡ್ಕರ್‌ರವರಿಗೆ ಋಣಿಯಾಗಬೇಕು.

ಇರಲಿ, ಕರಿಯರಿಗೆ ಸಂಬಂಧಿಸಿದಂತೆ ಅಮೆರಿಕಾ ಚರಿತ್ರೆಯೇ ವಿಚಿತ್ರವಾದದ್ದು. ಅದು ಅಗಮಿಕರ ನಾಡು. ಸ್ಥಳೀಯ ಜನಾಂಗವನ್ನು ಮೂಲೆಗೆ ಸರಿಸಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದ ಯೂರೋಪಿಯನ್ನರ ಬೀಡು. ಸ್ಥಳೀಯ ರೆಡ್ ಇಂಡಿಯನ್ನರನ್ನು ಸೇವಕರನ್ನಾಗಿ ಮಾಡಿ ಕೊಂಡಿದ್ದ ಅವರು ಹೊಲಗಳಲ್ಲಿ ದುಡಿಯಲು ಆಫ್ರಿಕದಿಂದ ಗುಲಾಮರನ್ನು ಕೊಂಡು ತಂದರು. ತಮ್ಮ ಮೂಲ ನಾಡಿನ ಪ್ರಭುತ್ವದ ವಿರುದ್ಧ ಬಿಡುಗಡೆಗಾಗಿ ಹೋರಾಡಿ ಯಶಸ್ವಿಯಾದರು. ಆದರೆ ತಮ್ಮಂತೆ ಮೂಲ ನಾಡಿನಿಂದ ಎಳೆತಂದಿದ್ದ ಕರಿಯರನ್ನು ಗುಲಾಮಗಿರಿಯಲ್ಲೆ ಮುಂದುವರೆಸಿದರು. ರೆಡ್ ಇಂಡಿಯನ್ನರಿಗೆ ತೋರಿಸಿದ ವಿನಾಯಿತಿಗಳೂ ಅವರಿಗೆ ದಕ್ಕಲಿಲ್ಲ. ಹಂದಿಗೂಡಿನಂಥ ಕೇಬಿನ್‌ಗಳಲ್ಲಿ ಬದುಕು ದೂಡಿ ಅಮೆರಿಕನ್ನರ ಹೊಲ, ಗಣಿಗಳಲ್ಲಿ ದುಡಿದು ಸಂಪತ್ತನ್ನು ಸೃಷ್ಟಿಸಿದ ಅವರಿಗೆ ಸಿಕ್ಕಿದ್ದು ದಾರಿದ್ರ್ಯ ಮತ್ತು ಅಪಮಾನ. ಅವರ ವಿಮೋಚನೆಗೆ ದುಡಿದ ಲಿಂಕನ್ ಹುತಾತ್ಮರಾಗಬೇಕಾಯಿತು. ಉತ್ತರ ಪ್ರಾಂತ್ಯ ಗುಲಾಮಗಿರಿಯನ್ನು ತ್ಯಜಿಸಲು ಒಪ್ಪಿಕೊಂಡರೂ ದಕ್ಷಿಣದ ಒಕ್ಕೂಟ ರಾಷ್ಟ್ರಗಳು ಅದನ್ನು ಮುಂದುವರೆಸಲು ಸ್ವತಂತ್ರ ರಾಷ್ಟ್ರಗಳೆಂದು ಘೋಷಿಸಿಕೊಂಡವು. ಕೊನೆಗೂ ಸಿವಿಲ್ ವಾರ್‌ನಲ್ಲಿ ಸೋತು ಅರೆ ಮನಸ್ಸಿನಿಂದ ವಿಮೋಚನಾ ಘೋಷಣೆಯನ್ನು ಒಪ್ಪಿಕೊಂಡವು. ಕರಿಯರು ಸ್ವತಂತ್ರರಾದರೂ ಜಿಂ ಕ್ರೌವ್ ನಿಯಮಗಳ ಮೂಲಕ ಸಾಮಾಜಿಕ ಸಮಾನತೆಯನ್ನು ನಿರಾಕರಿಸುತ್ತಲೇ ಬಂದವು. ೧೯೫೪ರಲ್ಲಿ ಅಮೆರಿಕದ ಸುಪ್ರೀಂ ಕೋರ್ಟ್ ಸಾಮಾಜಿಕ ಪ್ರತ್ಯೇಕತೆಯನ್ನು ನಿಷೇಧಿಸಿದರೂ ಈಗ ನಾವು ಕರೆಯುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯಂತಹ ಅಪರಾಧಗಳು ಅಮೆರಿಕದಲ್ಲಿ ಕಾನೂನುಬದ್ಧವಾಗಿಯೇ ನಡೆಯುತ್ತಿದ್ದವು. ಮಾರ್ಟಿನ್ ಲೂಥರ್ ಕಿಂಗ್ ಜೂ. ಮತ್ತು ಇತರರು ಮಾನವ ಸಮಾನತೆಗಾಗಿ ಆಂದೋಲನಗಳನ್ನು ಆರಂಭಿಸುವ ಮೊದಲು ನಡೆದ ಮುಂದಿನ ಮೂರು ಘಟನೆಗಳೇ ಅಮೆರಿಕದ ಸ್ಥಿತಿಯನ್ನು ಹೇಳುತ್ತವೆ.

೧೯೫೫ರಲ್ಲಿ ಹಗಲೆಲ್ಲ ದುಡಿದು ಸುಸ್ತಾಗಿದ್ದ ರೋಸಾ ಪಾರ್ಕ್ಸ್ ಎಂಬ ದರ್ಜಿ ಮಹಿಳೆಯೊಬ್ಬಳು ತುಂಬಿದ್ದ ಅಲಬಾಮ ಬಸ್‌ನಲ್ಲಿ ಬಿಳಿಯರಿಗೆ ಮೀಸಲಿಟ್ಟದ್ದ ಆಸನದಲ್ಲಿ ಕುಳಿತುಕೊಂಡಿದ್ದಳು.ಇನು ಎರಡು ಆಸನಗಳು ಖಾಲಿಯಿದ್ದವು. ಆದರೂ ಬಿಳಿಯನೊಬ್ಬ ಬಂದಾಗ ಆಸನ ಬಿಟ್ಟು ಏಳದ ಅಪರಾಧಕ್ಕಾಗಿ ಅವಳನ್ನು ಬಂಧಿಸಿ ಜೈಲಿಗೆ ತಳ್ಳಿ ಜುಲ್ಮನೆ ವಿಧಿಸಲಾಯಿತು. ಮಿಸಿಸಿಪಿಯ ಬಿಳಿಯರ ಗ್ಯಾಂಗ್ ಒಂದು ಎಮೆಟ್ ಟಿಲ್ ಎಂಬ ಹದಿನಾಲ್ಕು ವರ್ಷದ ಹುಡುಗನನ್ನು ಬೇಟೆಯಾಡಿ ಕೊಂದಿತು. ಅವನು ಮಾಡಿದ ಅಪರಾಧ–ಬಿಳಿಯ ಮಹಿಳೆಯೊಬ್ಬಳನ್ನು ಚುಡಾಯಿಸಿದ್ದು. ಬಿಳಿಯ ಹುಡುಗಿಯರು ಹೋಗುವ ಶಾಲೆಯಲ್ಲೇ ಕಲಿಯಲು ಹಠ ಹಿಡಿದ ಕಾರಣಕ್ಕಾಗಿ ರೂಬಿ ಬ್ರಿಡ್ಜೆಸ್ ಎಂಬ ಆರು ವರ್ಷದ ಕರಿಯ ಬಾಲೆಯನ್ನು ನ್ಯೂ ಅರ್ಲಿಯಾನ್ಸ್‌ನ ಗುಂಪೊಂದು ಹಿಡಿದು ಚಚ್ಚಿ ಮುಖದ ಮೇಲೆ ಉಗುಳಿ ಅವಮಾನಿಸಿತು. ಸುಶಿಕ್ಷಿತ ಕರಿಯರಿಗೂ ಮತದಾನ ಮಾಡದಂತೆ ತಡೆಯೊಡ್ಡುವುದು ಮತ್ತು ಜ್ಯೂರಿಗಳಲ್ಲಿ ಸದಸ್ಯರಾಗುವುದನ್ನು ಅಡ್ಡಿಪಡಿಸುವುದು ಸರ್ವೇಸಾ ಮಾನ್ಯವಾಗಿತ್ತು. ಬಿಳಿಯರು ಹೋಗುವ ಹೋಟೆಲುಗಳಿಗೆ ಪ್ರವೇಶ ನಿಷಿದ್ಧವಾಗಿತ್ತು. ಬಿಳಿಯರಿಗಾಗಿಯೇ ಪ್ರತ್ಯೇಕ ವಿಶ್ರಾಂತಿ ಕೊಠಡಿಗಳಿದ್ದವು. ಬಿಳಿಯರು ಇರುವ ವಸತಿ ಪ್ರದೇಶಗಳಲ್ಲಿ ಕರಿಯರಿಗೆ ಬಾಡಿಗೆಗೆ ಮನೆ ಸಿಗುತ್ತಿರಲಿಲ್ಲ. ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಫೂಟ್ ಪಾತಿನಲ್ಲಿ ಬಿಳಿಯನೊಬ್ಬ ಎದುರು ಬಂದರೆ ಅವನ ಕಣ್ಣಿಗೆ ಬೀಳದಂತೆ ಕರಿಯರು ಅಡಗಿಕೊಳ್ಳುವಂತಹ ಪರಿಸ್ಥಿತಿಯಿತ್ತು.

ಮಾರ್ಟಿನ್ ಲೂಥರ್ ಕಿಂಗ್ ಜೂ. ಮುನ್ನಡೆಸಿದ ಆಂದೋಲನವು ಈ ಎಲ್ಲ ಅನಾಚಾರಗಳಿಗೆ ಇತಿಶ್ರೀ ಹಾಡಿತು. ಎರಡು ಶತಮಾನಗಳ ಕಾಲ ಸ್ವಾಭಿಮಾನ ಮತ್ತು ಸಮಾನತೆಗಾಗಿ ಅನೇಕ ಕರಿಯ ನಾಯಕರು ನಡೆಸಿದ ಹೋರಾಟ ಮಾರ್ಟಿನ್ ಲೂಥರ್ ಕಿಂಗ್ ಜೂ. ಅವರ ಹೋರಾಟದಲ್ಲಿ ಅಂತ್ಯ ಕಂಡಿತು. ಕರಿಯರ ಸ್ವಾಭಿಮಾನದ ಹೋರಾಟದ ಚರಿತ್ರೆಯನ್ನು ಮಾರ್ಟಿನ್ ಲೂಥರ್ ಕಿಂಗ್ ಜೂ. ಅವರನ್ನು ಬಿಟ್ಟು ಕಟ್ಟಲು ಸಾಧ್ಯವೇ ಇಲ್ಲ. ಸರಿಯಾದ ಸಂದರ್ಭದಲ್ಲಿ ಸರಿಯಾದ ವ್ಯಕ್ತಿ ಆಂದೋಲನ ಮುನ್ನಡೆಸಿದ್ದು ಕರಿಯರ ಗೆಲುವಿಗೆ ಕಾರಣವಾಯಿತು.

ಮಾರ್ಟಿನ್ ಲೂಥರ್ ಕಿಂಗ್ ಜೂ. ಅವರ ಗೆಲು ವಿಗೆ ಅನೇಕ ಕಾರಣಗಳಿವೆ. ಅವರೊಬ್ಬ ಉಪದೇಶಿಯಾಗಿ ದ್ದರು. ಬೈಬಲ್ಲಿನ ಸುವಾರ್ತೆಗಳ ಮೂಲಕ ಮನುಷ್ಯನ ಅಂತರಂಗಕ್ಕೆ ಲಗ್ಗೆಯಿಟ್ಟು ಕರಣಾ ಭಾವವನ್ನು ಉದ್ದೀಪಿಸ ಬಲ್ಲವರಾಗಿದ್ದರು. ದಾಸ್ಯದಲ್ಲಿ ನಲುಗಿದ್ದ ತನ್ನ ಧರ್ಮದ ಮೂಲಜನರನ್ನು ಈಜಿಪ್ಟಿನಿಂದ ದೇವರ ನಾಡಾದ ಇಸ್ರೇಲಿಗೆ ಮುನ್ನಡೆಸಿದ ಮೋಸೆಸ್ ಮತ್ತು ಪಾಪದ ಸುಳಿಯಿಂದ ಮನುಕುಲವನ್ನು ವಿಮೋಚನೆಗೊಳಿಸಿದ ಏಸು ಅವರ ಮೇಲೆ ಪ್ರಭಾವ ಬೀರಿದ್ದರು. ಈ ತಾತ್ವಿಕರ ಸ್ಫೂರ್ತಿಯೊಡನೆ ಹೆನ್ರಿ ಡೇವಿಡ್ ಥೋರೋ ಅವರ ಅಸಹಕಾರ ಚಳವಳಿಯನ್ನು ಮತ್ತು ಗಾಂಧೀಜಿಯ ಅಹಿಂಸಾ ವಿಧಾನದ



ಹೋರಾಟ ಮಾರ್ಗವನ್ನು ಬೆರೆಸಿದ ಅವರು ಎದುರಾಳಿ ಯನ್ನು ಪ್ರೀತಿಯಿಂದ ಗೆದ್ದರು. ಜೊತೆಗೆ ಈಗ ಅಮೆರಿಕದಲ್ಲಿ ಅತ್ಯಂತ ಶಕ್ತಿಶಾಲಿ ಸಂಸ್ಥೆಯಲ್ಲೊಂದಾದ ಕರಿಯರ ಚರ್ಚ್‌ಗಳ ನೆರವನ್ನು ಪಡೆದು ಹೋರಾಟವನ್ನು ಯಶಸ್ವಿಗೊಳಿಸಿದರು.

ಮಾರ್ಟಿನ್ ಲೂಥರ್ ಕಿಂಗ್ ಜೂ. ಅವರು ಅಮೋಘ ಧೈರ್ಯಶಾಲಿ. ರೋಸಾ ಪಾರ್ಕ್ಸ್ ಬಂಧನ ವಿರೋಧಿಸಿ ೧೯೫೫ರಲ್ಲಿ ಮಾಂಟ್ಗೊಮೆರಿಯ ಬಸ್ ಬಹಿಷ್ಕಾರ ಕಾರ್ಯಕ್ರಮದಿಂದ ಆರಂಭವಾದ ಅವರ ಬದುಕು ಹದಿಮೂರು ವರ್ಷಗಳ ತರುವಾಯ ಹಂತಕ ಹಾರಿಸಿದ ಗುಂಡಿನಲ್ಲಿ ಅಂತ್ಯಕಂಡಿತು. ಈ ಅವಧಿಯಲ್ಲಿ ಅವರ ಮೇಲೆ ಅನೇಕ ಹಲ್ಲೆ, ಕೊಲೆಯ ಯತ್ನಗಳಾದವು. ನೂರಾರು ಬೆದರಿಕೆಯ ಕರೆಗಳು ಬಂದವು.ಅವರ ಹೆಂಡತಿ ಮತ್ತು ಮಕ್ಕಳು ಮನೆಯಲಿದ್ದಾಗಲೇ ಬಾಂಬ್ ದಾಳಿ ನಡೆಯಿತು. ಅಮೆರಿಕದ ಗೂಢಚಾರ ಸಂಸ್ಥೆ ಎಫ್ ಬಿಐ ಅವರ ಮನೆಯ, ಹೋಟೆಲಿನ ಟೆಲಿಫೋನ್ ಕರೆಗಳನ್ನು ಕದ್ದಾಲಿಸಿ ಅವರ ಚಾರಿತ್ರ್ಯವಧೆಯನ್ನು ನಿರಂತರವಾಗಿ ಮಾಡಿತು. ಆ ಸಂಸ್ಥೆಯ ಮುಖ್ಯಸ್ಥ ಎಡ್ಗರ್ ಹೋವರ್ ಅವರನ್ನು ಯಾವ ಮಟ್ಟದಲ್ಲಿ ಬೇಟೆಯಾಡಿದ ನೆಂದರೆ ೧೯೬೪ರಲ್ಲಿ ಮೂವತ್ತೈದು ವರ್ಷದ ಕಿಂಗ್ ಅವರಿಗೆ ನೋಬೆಲ್ ಪಾರಿತೋಷಕ ಪ್ರಕಟವಾದಾಗ ಆತ್ಮಹತ್ಯೆಯ ಯೋಚನೆಯಲ್ಲಿದ್ದರು. ಅಷ್ಟೊಂದು ಕೀಳು ಮಟ್ಟದ ಅಪಪ್ರಚಾರ ಅವರ ವಿರುದ್ಧ ನಡೆದಿತ್ತು. ಕಿಂಗ್ ಅವರು ಮೊದಲ ಪ್ರತಿಭಟನೆಯನ್ನು ಆರಂಭಮಾಡಿದಾಗ ತಾನೊಬ್ಬ ಹೋರಾಟಗಾರನಾಗುತ್ತೇನೆಂದು ಕನಸಿರಲಿಲ್ಲ. ಬಿಳಿಯನೊಬ್ಬನ ಬೆದರಿಕೆ ಅವರ ಸಂಕಲ್ಪಶಕ್ತಿಯನ್ನು ದೃಡ ಗೊಳಿಸಿತು.

ಒಂದು ನಡುರಾತ್ರಿ ಅವರಿಗೊಂದು ಟೆಲಿಫೋನ್ ಕರೆ ಬಂತು. ಆ ಕಡೆಯಿಂದ "ಏಯ್ ಕರಿ ಸೂಳೆಮಗನೆ, ನಿನ್ನಿಂದ ನಮಗೆ ಸಾಕಾಗಿ ಹೋಗಿದೆ. ಮೂರುದಿನಗಳಲ್ಲಿ ನೀನು ಜಾಗ ಖಾಲಿ ಮಾಡದಿದ್ದರೆ ನಿನ್ನ ಮೆದುಳನ್ನು ಹುಡಿಹಾರಿಸಿಬಿಡುತ್ತೇವೆ. ನಿನ್ನ ಮನೆಯನ್ನು ಧ್ವಂಸಗೊಳಿಸುತ್ತೇವೆ." ಬೆದರಿಕೆಯ ಕರೆಯಿಂದ ನಡುಗಿದ ಕಿಂಗ್ ಪ್ರಾರ್ಥಿಸಲು ಅಡುಗೆ ಮನೆಗೆ ಹೋದರು. "ಪ್ರಾರ್ಥಿಸುವಾಗ ನನಗೊಂದು ಅಂತರಂಗದ ದನಿ ಕೇಳಿಸಿತು. 'ಹೆದರಬೇಡ. ಒಳ್ಳೆಯದರ ಪರ ಎದ್ದು ನಿಲ್ಲು.' ನ್ಯಾಯದ ಪಕ್ಷ ವಹಿಸು. ಹೋರಾಡು. ಸತ್ಯದ ಪರ ನಿಲ್ಲು. ಜಗತ್ತು ಕೊನೆ ಯಾಗುವವರೆಗೆ ನಾನು ನಿನ್ನ ಜೊತೆ ಇರುತ್ತೇನೆ.' ಆಗ ನನ್ನ ಸಂಕಲ್ಪ ದೃಢವಾಯಿತು". ಆ ಧೈರ್ಯ ಮತ್ತು ಮಾನಸಿಕ ದೃಢತೆಯಿಂದ ಅವರು ಜಗ್ಗದೆ ಹೋರಾಟ ಮುಂದುವರೆಸಿದರು.

ಕಿಂಗ್ ಅಸಾಧಾರಣ ಭಾಷಣಕಾರ. ಎದುರಾಳಿಗಳನ್ನು ಮೋಡಿ ಮಾಡುವ ಕಲೆ ಕರಗತವಾಗಿತ್ತು. ಗಾಂಧೀಜಿಯ ಅಹಿಂಸಾಮಾರ್ಗದಿಂದ ಮಾತ್ರ ತಮ್ಮ ಉದ್ದೇಶಿತ ಗುರಿ ಸಾಧನೆ ಸಾಧ್ಯ ಎಂದು ನಂಬಿ ಅದರಂತೆ ನಡೆದರು. ಕುಸಿದು ಹೋಗಿದ್ದ ಅಮೆರಿಕದ ಬಿಳಿಯರಿಗೆ ನೈತಿಕತೆಯನ್ನು ಮರಳಿಗಳಿಸಿಕೊಟ್ಟರು. ಕಿಂಗ್ ಅವರ ಜೊತೆ ಮಾನವ ಸ್ವಾತಂತ್ರ್ಯದಲ್ಲಿ ನಂಬಿಕೆಯಿಟ್ಟ ಬಿಳಿಯರೂ ಜೊತೆಗೂಡಿದ್ದರಿಂದ ಮಾನವ ಹಕ್ಕುಗಳ ಹೋರಾಟಕ್ಕೆ ಹೊಸ ಆಯಾಮ ದಕ್ಕಿತು. ಕರುಣೆಯಿಂದಲೇ ಮನುಕುಲವನ್ನು ತಿದ್ದಬಹುದೆಂದು ನಂಬಿದ ಬುದ್ಧ, ಏಸುವಿನ ಪರಂಪರೆಯನ್ನು ಮುಂದುವರೆಸಿದ ಆಧುನಿಕ ಯುಗದ ನಾಯಕರಲ್ಲಿ ಕಿಂಗ್ ಅವರದು ವಿಶಿಷ್ಟ ವ್ಯಕ್ತಿತ್ವ. ಗುಂಡೇಟಿಗೆ ಬಲಿಯಾಗಿ ನಾಲ್ಕು ದಶಕಗಳ ನಂತರವೂ ಅಮೆರಿಕಾ ಅವರನ್ನು ವಿಶೇಷವಾಗಿ ನೆನೆದಿದೆ. □

ಪುಸ್ತಕ ಅವಲೋಕನ

ಮೌಲಿಕವಾದ 'ಕುವೆಂಪುಯುಗ'

ಕುವೆಂಪು ಮಲೆನಾಡಿನ ನಿತ್ಯ ಹರಿದ್ವರ್ಣದ ಕಾಡು [illegible]. ಅವರ ಕಾದಂಬರಿಗಳಾದ ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಇವು 'ಕರ್ನಾಟಕ ಹೃದಯ ಶಿವನ ಎರಡು ಕಣ್ಣುಗಳು; ಅವರ ಮಹಾಕಾವ್ಯ ಶ್ರೀರಾಮಾಯಣ ದರ್ಶನಂ ಅಮೃತ ಕಳಸ; ಅವರ ಭಾವ ಗೀತೆಗಳು ನಾಟಕಗಳು, ಸಣ್ಣಕತೆ, ಪ್ರಬಂಧ ಹಾಗೂ ವಿಚಾರ ಸಾಹಿತ್ಯ-ಇವು ಆ ಹೃದಯ ಶಿವನ ಇತರೇತರ ಅಂಗೋಪಾಂಗಗಳು-ಇದ್ದಂತೆ. ಹೀಗೆ ಕುವೆಂಪು ಒಬ್ಬ ವ್ಯಕ್ತಿ [illegible] ಎಂಬಂತೆ ಕನ್ನಡ ನೆಲ [illegible], ಕಾಡು ಹಾಗೂ ಭಾಷಾ ಸಂಸ್ಕೃತಿಯಲ್ಲಿ ಅದ್ವೈತಗೊಂಡು ಬಿಟ್ಟಿದ್ದಾರೆ.

ಕುವೆಂಪು ಕುರಿತು ಅವರ ಸಮಕಾಲೀನ ಕನ್ನಡದ ಇನ್ನೊಬ್ಬ ಮಹಾಕವಿ ದ.ರಾ ಬೇಂದ್ರೆಯವರು 'ಯುಗದಕವಿ ಜಗದಕವಿ' ಎಂದದ್ದು ಉತ್ಪ್ರೇಕ್ಷೆಯಲ್ಲ ಸು. ೧೨ ಸಾವಿರಕ್ಕೂ ಹೆಚ್ಚು ಪುಟಗಳಷ್ಟಿರುವ ಕುವೆಂಪು ಸಾಹಿತ್ಯ ಗಾತ್ರದಲ್ಲಷ್ಟೇ ಅಲ್ಲಿ, ಪಾತ್ರದಲ್ಲೂ ಅದನ್ನು ಸರಿಗಟ್ಟುವ ಇನ್ನೊಬ್ಬ ಲೇಖಕನ ಸಾಹಿತ್ಯ ರಾಶಿಯಿಲ್ಲ. ಅವರ ಸಾಹಿತ್ಯ ರಾಶಿ ಎದುರು ನಿಂತರೆ, ಇಷ್ಟೆಲ್ಲವನ್ನೂ ಒಬ್ಬನೇ ವ್ಯಕ್ತಿ ಬರೆಯ ಬಲ್ಲನೆ ಎಂಬ ವಿಸ್ಮಯ ಹುಟ್ಟುತ್ತದೆ. ಅವರೊಬ್ಬ ರಾಜರ್ಷಿತ ಪ್ರಜ್ಞಾವಂತ ವಿಚಾರವಾದಿ; ದಾರ್ಶನಿಕ ಕವಿ, ಸಹೃದಯಿ ವಿಮರ್ಶಕ ಹಾಗೂ ಚಿಂತಕ. ಮಲೆನಾಡಿನ ಕಾಡು ಹಳ್ಳಿಯಲ್ಲಿ ಹುಟ್ಟಿ ಬೆಳೆದೂ ಮೈಸೂರಿನಂತ ನವ ನಾಗರಿಕ ಪಟ್ಟಣದಲ್ಲಿ ವಿದ್ಯೆ ಕಲಿತೂ-ಆದರೆ ಅದರ ಥಳಕು ಬಳುಕಿಗೆ ಮಾರು ಹೋಗದೆ, ಉದಯ ರವಿಯಲ್ಲೆ ನೆಲಸಿ ಕ್ರಾಂತಿ ಯೋಗಿಯಂತೆ ಸದಾ ಲೋಕಹಿತಾರ್ಥ ಸಾಹಿತ್ಯ ರಚನೆ ಮಾಡಿದವರು ಕುವೆಂಪು. ಅವರ ಓದು ಎಂದರೆ ಪುಂಡುದನ ತುಂಡು ಮೇವಂತೆ, ಆಯ್ಕೆ ಮಾಡಿಕೊಂಡು ಕ್ಲಾಸಿಕ್ ಕೃತಿಗಳನ್ನು ಅಧ್ಯಯನ ಮಾಡಿದವರು; ಕನ್ನಡ, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಗಳನ್ನು ಶ್ರಮದಿಂದ ಓದಿ ಪಾಂಡಿತ್ಯಗಳಿಸಿಕೊಂಡವರು. ಆಡು ಮುಟ್ಟದ ಗಿಡ ಇಲ್ಲ ಎಂಬಂತೆ ಮಹಾಕಾವ್ಯ, ಭಾವಗೀತೆ, ಕಥೆ, ಕಾದಂಬರಿ, ನಾಟಕ, ಪ್ರಬಂಧ ಮುಂತಾಗಿ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದರು. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ೨೦ನೇ ಶತಮಾನದ ಮುಕ್ಕಾಲು ಭಾಗದುದ್ದಗಲಕ್ಕೂ ಗೊಮ್ಮಟನಂತೆ ಬೆಳೆದು ನಿಂತರವರು.

'ಕುವೆಂಪುಯುಗ' ಎಂಬ ತಮ್ಮ ಕೃತಿಯಲ್ಲಿ ಭಗವಾನ್ ಅವರೆಂದಂತೆ ಕುವೆಂಪು ಆಧುನಿಕ ಕನ್ನಡ ಸಾಹಿತ್ಯದ ಮೊಟ್ಟ ಮೊದಲ ಬಂಡಾಯ ಧ್ವನಿ. ಭಾರತೀಯರ ಹಿನ್ನೆಡೆಗೆ ಮೊದಲ ಕಾರಣ ಮೌಢ್ಯವನ್ನು ಬಿತ್ತಿ ಬೆಳೆವ ಪುರೋಹಿತಶಾಹಿ ಎಂಬುದನ್ನು ಮುಲಾಜಿಲ್ಲದೆ ಅವರು ಕೊಡವಿ ಬಿಸಾಡಿದರು;

ಎರಡನೆಯದಾಗಿ ಮೇಲ್ವರ್ಗದ ಶೂದ್ರರಲ್ಲಿರುವ ಊಳಿಗಮಾನ್ಯ ಧೋರಣೆ, ಹುಂಬತನ, ಹಾಗೂ ಪುರೋಹಿತರ ಕಾಲೊತ್ತುವ ಕೀಳರಿಮೆಯನ್ನು ಸಹ ಬಯಲಿಗೆಳೆದು ಛೇಡಿಸಿದರು; ಮೂರನೆಯದಾಗಿ ದನಿಯಿಲ್ಲದವರ ದನಿಯಾಗಿ, ದಲಿತ ಲೋಕದ ದಿಟ್ಟ ಚಿತ್ರಣವನ್ನು ಕೊಡುವ ಮೂಲಕ ಮಾನವೀಯ ಅನುಕಂಪ ಮೆರೆದರು. ಉದಾಹರಣೆಗೆ ಅವರ ಕರಿಸಿದ್ಧ, ನಾಗ, ಗೊಬ್ಬರ ಮುಂತಾದ ಭಾವಗೀತೆಗಳು, ಸಾಲದಮಗು, ಧನ್ವಂತರಿ ಚಿಕಿತ್ಸೆ ಮುಂತಾದ ಕಥೆಗಳು; ಜಲಗಾರ, ಶೂದ್ರ ತಪಸ್ವಿಯಂಥ ನಾಟಕಗಳು ಹಾಗೂ ಅವರ ಎರಡೂ ಕಾದಂಬರಿಗಳು ಸಾಕ್ಷಿ ನಿಲ್ಲುತ್ತವೆ. ಇಲ್ಲಿ ಚಿತ್ರಿತವಾಗಿರುವ ಮತಮೌಢ್ಯ, ಜಾತಿಭೇದ, ವರ್ಗತಾರತಮ್ಯ ಇವು ಲೋಕದಲ್ಲಿರುವವರೆಗೆ ನಿಲ್ಲಬಲ್ಲ ಮಾದರಿ ಚಿತ್ರಣಗಳಾಗಿವೆ- ಎಂಬುದನ್ನು ಈ ಲೇಖಕರು ಅನೇಕ ನಿದರ್ಶನಗಳ ಮೂಲಕವಾಗಿ ತೋರಿಸಿಕೊಡುತ್ತಾರೆ. ದಲಿತರ ಆ ಕತ್ತಲ ಲೋಕದ ಚಿತ್ರಣ ಮಾಡಬೇಕಾದರೆ ಅಲ್ಲಿಂದ ಹುಟ್ಟಿ ಬಂದವರಿಂದ ಮಾತ್ರ ಸಾಧ್ಯ; ದಲಿತ ಪ್ರಜ್ಞೆ ಕುವೆಂಪು ಅವರಿಗಿಲ್ಲ- ಎಂಬ ಆರೋಪಗಳನ್ನು ಅಲ್ಲಗಳೆವ ಪ್ರೊ|| ಭಗವಾನ್ ಕುವೆಂಪು ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ದಲಿತ ಬದುಕಿನ ದಾರುಣ ಚಿತ್ರಗಳನ್ನು ಬಿಡಿಸುತ್ತ ಸಮರ್ಥಿಸಿಕೊಳ್ಳುತ್ತಾರೆ. ಹುಟ್ಟು ಆಕಸ್ಮಿಕ. ಕುವೆಂಪು ಮಲೆನಾಡಿನ ಒಕ್ಕಲಿಗ ಮನೆತನದಲ್ಲಿ ಹುಟ್ಟಿದರು -ಎಂ ಮಾತ್ರಕ್ಕೆ ಅವರಿಗೆ ದಲಿತ 'ಲೋಕದ ಬದುಕು ಕೈಗೆಟುಕುವುದಿಲ್ಲ' ಎಂದು ಬಿ. ಕೃಷ್ಣಪ್ಪನಂಥ ದಲಿತ ಸಂಘರ್ಷ ಸಮಿತಿಯನೇತಾರರು ಆರೋಪಿಸಿದ್ದು ಅನ್ಯಾಯ; ಅದು ಪೂರ್ವಗ್ರಹ ಪೀಡಿತ ಖಂಡ ದೃಷ್ಟಿ. ಆದರೂ ಇಂಥ ಟೀಕೆ ಟಿಪ್ಪಣಿಗಳಿಗೆ ಸೊಪ್ಪು ಹಾಕದೆರೆ, ಯಾರನ್ನೂ ಮೆಟ್ಟಿ ಹಾಕದೆ ಮುಂದುವರಿದ ಗಜರಾಜ ಕುವೆಂಪು ಎಂಬುದನ್ನು ಭಗವಾನ್ ತೋರಿಸಿಕೊಡುತ್ತಾರೆ.

ಹಾಗೆ ನೋಡಿದರೆ, ಕುವೆಂಪು ಯುಗದಲ್ಲಿ ಸಂಕಲನವಾಗಿರುವ ಕುವೆಂಪು ಅವರ ಗದ್ಯ, ಕಾನೂರು ಹೆಗ್ಗಡತಿ ಮತ್ತು ಬಂಡಾಯ, ಕುವೆಂಪು ಕಂಡ ದಲಿತ ಜೀವನ ಹಾಗೂ ಕುವೆಂಪು-ಅಳವಡಿಕೆ ಈ ಮುಂತಾದ ಲೇಖನಗಳು ಭಗವಾನರ ಒಳನೋಟಕ್ಕೆ, ವಿಮರ್ಶನಾ ಸಾಮರ್ಥ್ಯಕ್ಕೆ ಸಾಕ್ಷಿ ನಿಲ್ಲುತ್ತವೆ. ಇವರು ವೃಥಾ ಕುವೆಂಪು ಕುರಿತ ಉತ್ಪ್ರೇಕ್ಷೆಗಾಗಲಿ, ಓಲೈಕೆಗಾಗಲಿ, ಭಜನೆಗಾಗಲಿ ತೊಡಗುವವರಲ್ಲ. ಆದ್ದರಿಂದ ಕುವೆಂಪು ಬಗ್ಗೆ ಕನ್ನಡ ವಿಮರ್ಶನ ಲೋಕ ಎತ್ತಿರುವ ಪ್ರಶ್ನೆಗಳಿಗೆ ಇವರ ಕೃತಿ ಕೊಟ್ಟಿರುವ ಉತ್ತರಗಳು, ಯಥಾರ್ಥವಾಗಿವೆ. ಕನ್ನಡ ವಿಮರ್ಶಾಸಾಹಿತ್ಯ ಸಂದರ್ಭದಲ್ಲಿ ವಿಮರ್ಶಕ ಎನ್. ಬೋರಲಿಂಗಯ್ಯ ನೋಡಿ; ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು ಹಾಗೂ ಭಗವಾನರು ಕುವೆಂಪು ಅವರನ್ನು ವಿವರಿಸಿಕೊಂಡ ರೀತಿ ನ್ಯಾಯ ಬದ್ಧವಾಗಿದೆ. ನವ್ಯರ ಕಾಲದಲ್ಲಿ. ಉದಯ ರವಿ ಸಾಹಿತ್ಯ ಸೂರ್ಯನನ್ನು ದರ್ಶಿಸಿ ಆಸ್ವಾದಿಸಲು ಹನುಮಾನ್ ಪ್ರತಿಭೆಯೇ ಬೇಕು. ಅಂಥ ಹನುಮದ್ವಿಲಾಸವನ್ನು ಈ ವಿಮರ್ಶಕರಲ್ಲಿ ಕಾಣಬಹುದು.

ಭಗವಾನರ 'ಕುವೆಂಪುಯುಗ'ದ ಬಗ್ಗೆ ಕವಿ ಚನ್ನ ವೀರ ಕಣವಿಯವರು ಉದ್ಗರಿಸುವಂತೆ 'ಇದನ್ನು ಓದಿ ಮುಗಿಸಿದ ಮೇಲೆ

ಕುವೆಂಪುಯುಗ
ಲೇ: ಭಗವಾನ್
ಬೆಲೆ: ರೂ. ೧೫೦/-
ಪ್ರಕಾಶಕರು: ಮಹಿಮ ಪ್ರಕಾಶನ ಮೈಸೂರು

ಹಿಂಸೆಗೊಳಗಾಗಿ ನೋವನ್ನು ಅನುಭವಿಸುವ ಜನ ಜಗತ್ತಿನ ಯಾವ ಮೂಲೆಯಲ್ಲಿರಲಿ ಅವರೆಲ್ಲ ದಲಿತರೇ ಎಂಬ ವಿಶಾಲ ಭೂಮಿಕೆಯಿಂದ ಕುವೆಂಪು ಸಾಹಿತ್ಯವನ್ನು ನಾವು ಪರಿಶೀಲಿಸಬೇಕು ಎಂದು ಭಗವಾನ್ ಸಲಹೆ ಮಾಡುವುದು ಸರ್ವ ಸೂಕ್ತವೇ. ಹಾಗೆ ನೋಡಿದಾಗ ಕುವೆಂಪು ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಕಲ್ಲಯ್ಯಗೌಡ (ಮದುಮಗಳು) ಹಾಗೂ ಚಂದ್ರಯ್ಯಗೌಡ (ಹೆಗ್ಗಡತಿ) ಇವರು ಊಳಿಗ ಮಾನ್ಯ ಶೋಷಕ ಜನರಿಗೆ ಪ್ರತಿನಿಧಿಗಳಾದರೆ, ಬೈರ ಹುಡುಗ, ಸೋಮ, ಅಣ್ಣಯ್ಯಗೌಡ, ಅವನ ಮಗ ಓಬಯ್ಯಗೌಡ ಮುಂತಾದವರು ಸಹ ದಲಿತರ ಕಕ್ಷೆಗೇ ಬರುತ್ತಾರೆಂಬುದನ್ನು ಗುರ್ತಿಸುತ್ತಾರೆ. ಹಾಗೆಯೇ ಮಾಡಂಕಿಲ-ಬಾಗಿ, ಸೇಸಿ-ದೊಡ್ಡ ಚೀರ, ಚೀಂಕ್ರ-ದೇಯಿ, ಪಿಜಣಿ, ಅಕ್ಕಣಿ, ಪಿತ ಮತ್ತು ಪೀಂಚಲು, ನಾಯಿ ಗುತ್ತಿ ಮತ್ತು ತಿಮ್ಮಿ (ಮದುಮಗಳು) ಈ ಎಲ್ಲ ದಲಿತ ಕುಟುಂಬಗಳ ಒಳ ಹೊರಗನ್ನು ಕುವೆಂಪು ಆಪ್ತವಾಗಿ ಬಲ್ಲರು.

ಪ್ರೊ|| ಶಿವರಾಮಯ್ಯ

ಯಾರಿಗಾದರೂ ಅದರ ಬಗ್ಗೆ ಬರೆ ಯದೆ ಇರಲು ಸಾಧ್ಯವೇ ಇಲ್ಲ' (ಬೆನ್ನುಡಿ) ಎನ್ನುವಷ್ಟು ಇದು ಮೌಲಿಕವಾಗಿದೆ. ೧೯೯೦ರಲ್ಲಿ ಮೊದಲು ಮುದ್ರಣ ಕಂಡ ಈ ಕೃತಿ ಈಗ ಪರಿಷ್ಕೃತಗೊಂಡು (೨೦೦೭) ಬಂದಿದೆ. ಇಲ್ಲಿ ಒಟ್ಟು ಒಂಭತ್ತು ಲೇಖನಗಳು ಸಂಕಲನಗೊಂಡಿವೆ. ಅವುಗಳಲ್ಲಿ ಗಮನಾರ್ಹವಾದುವುಗಳೆಂದರೆ ಕುವೆಂಪು ಅವರ ಗದ್ಯ, ಕಾನೂರು ಹೆಗ್ಗಡತಿ ಮತ್ತು ಬಂಡಾಯ ಹಾಗೂ ಕುವೆಂಪು ಕಂಡ ದಲಿತ ಜೀವನ ಮತ್ತು ಕುವೆಂಪು ಅಳವಡಿಕೆ-ಮುಂತಾದುವು. ರಕ್ತಾಕ್ಷಿ ಮತ್ತು ಹ್ಯಾಮ್ಲೆಟ್ ಹಾಗೂ ಬಿರುಗಾಳಿ ಮತ್ತು ಟೆಂಪೆಸ್ಟ್-ಇವು ಮೂಲ ಕೃತಿಗಳೊಂದಿಗೆ ಮಾಡಿರುವ ತುಲನಾತ್ಮಕ ವಿಮರ್ಶೆಗಳು. ಇವುಗಳಲ್ಲಿ ಮುಖ್ಯವಾಗಿ ಷೇಕ್‌ಸ್ಪಿಯರ್‌ನ ನಾಟಕಗಳನ್ನು ಕನ್ನಡ ನೆಲಕ್ಕೆ ನಾಟುವಂತೆ ಮಾಡಿರುವ ಕುವೆಂಪು ಅವರ ಅಭಿಜಾತ ಪ್ರತಿಭೆಯನ್ನಿಲ್ಲಿ ಪ್ರಶಂಸಿಸಲಾಗಿದೆ. ಇನ್ನೊಂದು ಲೇಖನ ಕುವೆಂಪು ಮತ್ತು ರೊಮೆಯ್ನ ರೋಲಾಂಡ್-ಎಂಬುದರಲ್ಲಿ ಹೆಸರಾಂತ ಈ ಇಬ್ಬರು ಜೀವನ ಚರಿತ್ರೆಕಾರರು ವಿಶ್ವಗುರು ಸ್ವಾಮಿ ವಿವೇಕಾನಂದರನ್ನು ಕುರಿತು ಹೇಗೆ ಸಮಾನ ಶ್ರದ್ಧಾಸಕ್ತಿಗಳಿಂದ ಚಿತ್ರಿಸಿದ್ದಾರೆ ಎಂಬುದನ್ನು ಪರಿಚಯಿಸಲಾಗಿದೆ. ನೋಬಲ್ ಪ್ರಶಸ್ತಿ ವಿಜೇತ ರೋಲಾಂಡ್ ಒಬ್ಬ ಫ್ರಾನ್ಸಿನ ಮಹಾಲೇಖಕ.

ಮುಖ್ಯವಾಗಿ ಈ ಕೃತಿಯಲ್ಲಿರುವ ೨,೩,೪ ಲೇಖನಗಳನ್ನು ಪರಿಶೀಲಿಸಿದರೆ ನವ್ಯವಿಮರ್ಶೆ ಕುವೆಂಪು ಅವರನ್ನು ಕತ್ತಲಲ್ಲಿಡಲು ಹೇಗೆ ಹೇಗೆ ಶ್ರಮಿಸಿದೆ ಎಂಬುದು ಸುವ್ಯಕ್ತವಾಗುತ್ತದೆ. ನವ್ಯವಿಮರ್ಶಕರ ಸಾಹಿತ್ಯ ರಾಜಕಾರಣದ ಹುನ್ನಾರಗಳು ಯಾವುವು? ಯಾವ ಕಾರಣಕ್ಕಾಗಿ ಅವು ಉದ್ಭವವಾದವು? ಇತ್ಯಾದಿ ಪ್ರಶ್ನೆಗಳನ್ನು ಈ ಲೇಖನಗಳು ಕೈಗೆತ್ತಿಕೊಂಡು ಸೂಕ್ತ ನಿದರ್ಶನಗಳ ಮೂಲಕ ಆ ಎಲ್ಲವನ್ನೂ ಸಾರಾಸಗಟಾಗಿ ಅಲ್ಲಗೆಳೆದು, ಕುವೆಂಪು ಅವರಿಗೆ ಅಂಟಿಸಿದ್ದ ಆರೋಪಗಳನ್ನು ವರಸಿ ಹಾಕುತ್ತವೆ. ಭಗವಾನರು ಮುಮ್ಮಾತಿನಲ್ಲಿ ಸಾದರಪಡಿಸಿರುವಂತೆ, ಈ ಪ್ರಬಂಧಗಳು ಪ್ರಕಟವಾದ ನಂತರ ಕುವೆಂಪು ಕೃತಿಗಳ ಬಗ್ಗೆಯುಕ್ತದೃಷ್ಟಿ ಮೂಡಿರುವುದನ್ನು ಗಮನಿಸಬಹುದು. ಅದು ಕುವೆಂಪು ಶತಮಾನೋತ್ಸವ ಸಂದರ್ಭದಲ್ಲಿ (೨೦೦೪) ನಿಚ್ಚಳವಾಗಿಯೇ ಕಂಡುಬಂದದ್ದು ನಿಜ.

ಹಿಂದೆ ಹಸಿಬಿಸಿ ಓದಿನಿಂದ ಕುವೆಂಪು ದಲಿತ ವಿರೋಧಿ, ಅವರಿಗೆ ದಲಿತ ಪ್ರಜ್ಞೆ ಇಲ್ಲ ಎಂದಿದ್ದವರೆ ಆಮೇಲೆ ಅವರ ಕರಿಸಿದ್ದ, ಸಾಲದ ಮಗು, ಸಾಗಿ, ಧನ್ವಂತರಿ ಚಿಕಿತ್ಸೆ, ಜಲಗಾರ, ಶೂದ್ರ ತಪಸ್ವಿ ಮುಂತಾದ ಕೃತಿಗಳನ್ನು ಮೆಚ್ಚಿಕೊಂಡಿದ್ದು ಈಗ ಇತಿಹಾಸ. ಹೆಸರಾಂತ ನವ್ಯ ವಿಮರ್ಶಕರಾದ ಪ್ರೊ. ಜಿ.ಎಚ್. ನಾಯಕರು ನಾನಾಗ ಕುವೆಂಪು ಸಾಹಿತ್ಯದ ಬಗ್ಗೆ ಸೂಕ್ತ ನ್ಯಾಯ ಸಲ್ಲಿಸಲಿಲ್ಲವೆಂದು ವ್ಯಥೆಗೊಂಡು ಮಾತನಾಡಿದರು. ಅದು ಅವರ ಪ್ರಾಂಜಲ ಮನಃಸ್ಥಿತಿಗೆ ಸಾಕ್ಷಿ ನುಡಿ, ಬಹುಶಃ ಬಿ. ಕೃಷ್ಣಪ್ಪನವರಿದ್ದರೂ ತಮ್ಮ 'ಕುವೆಂಪು ಅವರಿಗೆ ದಲಿತ ಪ್ರಜ್ಞೆ ಇರಲಿಲ್ಲವೆಂಬ ಆರೋಪವನ್ನು ತಿದ್ದಿಕೊಳ್ಳುತ್ತಿದ್ದರೆನಿಸುತ್ತದೆ. ಈ ಸಂದರ್ಭದಲ್ಲಿ ಭಗವಾನರ ಮಾತುಗಳು ಹೀಗಿವೆ;

ಚಿರಂತನ ಸಾಹಿತ್ಯದಲ್ಲಿ ಭದ್ರವಾಗಿ ಬೇರೂರಿ ಬೆಳೆದಿರುವ ಕುವೆಂಪು ತಮ್ಮ ವಾಙ್ಞಯ ಬದುಕಿನ ಪ್ರಾರಂಭದಿಂದಲೂ ದಲಿತ ಜೀವನದ ಬಗ್ಗೆ ವಿಶೇಷ ಒಲವನ್ನೂ ಆಸಕ್ತಿಯನ್ನು ತೋರುತ್ತ ಬಂದಿದ್ದಾರೆ. 'ಕರಿಸಿದ್ಧ' ಮತ್ತು 'ಸಾಗಿ' ಕಥನ ಕವನಗಳು ಸರಳವಾದರೂ ತೀವ್ರವಾಗಿವೆ,' ಮನಕಲಕುವಂತಿವೆ 'ಸಾಲದಮಗು' ಕಥೆಯಲ್ಲಿ ಜೀತ ಪದ್ಧತಿಯ ಕರಾಳ ರೂಪವನ್ನು ಕಡೆದಿರುವರು ಊಳಿಗ ಮಾನ್ಯ ಪದ್ಧತಿಯನ್ನು ಪ್ರತಿನಿಧಿಸುವ ಶ್ರೀಮಂತಗೌಡ ತಬ್ಬಲಿ ಹುಡುಗನನ್ನು ಜೀತಕ್ಕೆ ಇರಿಸಿಕೊಂಡು ದುಡಿಸುವ ರೀತಿ ಭೀಕರವಾಗಿದೆ. ಸುಲಿಗೆ ಮಾಡುವ ಸಿರಿವಂತರಿಗೆ ಮನುಷ್ಯತ್ವವಿಲ್ಲ' (ಕುವೆಂಪು ಯುಗ-ಪುಟ.೮೫)

ಭಗವಾನರ 'ಕುವೆಂಪುಯುಗ'ದ ಬಗ್ಗೆ ಕವಿ ಚನ್ನವೀರ ಕಣವಿಯವರು ಉದ್ಗರಿಸುವಂತೆ 'ಇದನ್ನು ಓದಿ ಮುಗಿಸಿದ ಮೇಲೆ ಯಾರಿಗಾದರೂ ಅದರ ಬಗ್ಗೆ ಬರೆಯದೆ ಇರಲು ಸಾಧ್ಯವೇ ಇಲ್ಲ' (ಬೆನ್ನುಡಿ) ಎನ್ನುವಷ್ಟು ಇದು ಮೌಲಿಕವಾಗಿದೆ. ೧೯೯೦ರಲ್ಲಿ ಮೊದಲು ಮುದ್ರಣ ಕಂಡ ಈ ಕೃತಿ ಈಗ ಪರಿಷ್ಕೃತಗೊಂಡು (೨೦೦೭) ಬಂದಿದೆ. ಇಲ್ಲಿ ಒಟ್ಟು ಒಂಭತ್ತು ಲೇಖನಗಳು ಸಂಕಲನಗೊಂಡಿವೆ. ಅವುಗಳಲ್ಲಿ ಗಮನಾರ್ಹವಾದುವುಗಳೆಂದರೆ ಕುವೆಂಪು ಅವರ ಗದ್ಯ, ಕಾನೂರು ಹೆಗ್ಗಡತಿ ಮತ್ತು ಬಂಡಾಯ ಹಾಗೂ ಕುವೆಂಪು ಕಂಡ ದಲಿತ ಜೀವನ ಮತ್ತು ಕುವೆಂಪು ಅಳವಡಿಕೆ-ಮುಂತಾದುವು. ರಕ್ತಾಕ್ಷಿ ಮತ್ತು ಹ್ಯಾಮ್ಲೆಟ್ ಹಾಗೂ ಬಿರುಗಾಳಿ ಮತ್ತು ಟೆಂಪೆಸ್ಟ್-ಇವು ಮೂಲ ಕೃತಿಗಳೊಂದಿಗೆ ಮಾಡಿರುವ ತುಲನಾತ್ಮಕ ವಿಮರ್ಶೆಗಳು.

ಕತೆ, ಕವನಗಳಿಗಿಂತ ತಮ್ಮ ಕಾದಂಬರಿಗಳಲ್ಲಿ ಕುವೆಂಪು ದಲಿತ ಬದುಕನ್ನು ವ್ಯಾಪಕವಾಗಿ ಚಿತ್ರಿಸಿರುವುದನ್ನು ಭಗವಾನರು ಕೆಲವರು ನಿದರ್ಶನಗಳ ಮೂಲಕ ಎತ್ತಿ ತೋರಿಸುತ್ತಾರೆ. ದಲಿತ ಎಂದರೆ ಯಾರು? ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುವ ಈ ಲೇಖಕರು ಹಾಗೆಂದರೆ ಕೇವಲ' ಹೊಲಯ-ಮಾದಿಗ 'ಎಂಬರ್ಥ/ಸೀಮಿತಗೊಳಿಸುವುದು ಸರಿಯಲ್ಲವೆಂದು ಹೇಳಿ, 'ದಲಿತ' ಎಂದರೆ ಯಾರು ಸತತ ಹಿಂಸೆಗೆ, ಅವಮಾನಕ್ಕೆ, ತುಳಿತಕ್ಕೆ ಸಿಕ್ಕಿ ನಿರಂತರ ನೋವನ್ನು ಅನುಭವಿಸುವರೋ ಅವರೆಲ್ಲರೂ ದಲಿತರೇ ಎಂದು ವ್ಯಾಖ್ಯಾನಿಸಿರುವುದು ಅವರ ಜನಪರ ಕಾಳಜಿಗೆ ನಿದರ್ಶನ. ಈ ಪ್ರಕಾರ ಹಿಂಸೆಗೊಳಗಾಗಿ ನೋವನ್ನು ಅನುಭವಿಸುವ ಜನ ಜಗತ್ತಿನ ಯಾವ ಮೂಲೆಯಲ್ಲಿರಲಿ ಅವರೆಲ್ಲ ದಲಿತರೇ ಎಂಬ ವಿಶಾಲ ಭೂಮಿಕೆಯಿಂದ ಕುವೆಂಪು ಸಾಹಿತ್ಯವನ್ನು ನಾವು ಪರಿಶೀಲಿಸಬೇಕು ಎಂದು ಭಗವಾನ್ ಸಲಹೆ ಮಾಡುವುದು ಸರ್ವಸೂಕ್ತವೇ, ಹಾಗೆ ನೋಡಿದಾಗ ಕುವೆಂಪು ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಕಲ್ಲಯ್ಯಗೌಡ (ಮದುಮಗಳು) ಹಾಗೂ ಚಂದ್ರಯ್ಯಗೌಡ (ಹೆಗ್ಗಡತಿ) ಇವರು ಊಳಿಗ ಮಾನ್ಯ ಶೋಷಕ ಜನರಿಗೆ ಪ್ರತಿನಿಧಿಗಳಾದರೆ, ಬೈರ ಹುಡುಗ, ಸೋಮ, ಅಣ್ಣಯ್ಯಗೌಡ, ಅವನ ಮಗ ಓಬಯ್ಯಗೌಡ ಮುಂತಾದವರು ಸಹ ದಲಿತರ ಕಕ್ಷೆಗೇ ಬರುತ್ತಾರೆಂಬುದನ್ನು ಗುರ್ತಿಸುತ್ತಾರೆ. ಹಾಗೆಯೇ ಮಾಡಂಕಿಲ-ಬಾಗಿ, ಸೇಸಿ-ದೊಡ್ಡ ಬೀರ, ಚೇಂಕ್ರ-ದೇಯಿ, ಪಿಜಿಣಿ, ಅಕ್ಕಣಿ, ಪಿತ ಮತ್ತು ಪೀಂಚಲು, ನಾಯಿ ಗುತ್ತಿ ಮತ್ತು ತಿಮ್ಮಿ ಮದುಮಗಳು) ಈ ಎಲ್ಲ ದಲಿತ ಕುಟುಂಬಗಳ ಒಳ ಹೊರಗನ್ನು ಕುವೆಂಪು ಆಪ್ತವಾಗಿ ಬಲ್ಲರು. (ಮತ್ತು 'ಧನ್ವಂತರಿ ಚಿಕಿತ್ಸೆ' ಎಂಬ ಕಥೆಯಲ್ಲಿ ಹಾಗೂ 'ರೈತನ ದೃಷ್ಟಿ' ಎಂಬ ಕವನದಲ್ಲಿ ರೈತನ ಹೆಣಭಾರ ಬದುಕಿನ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಭಗವಾನ್ ಈ ಬಗ್ಗೆ ಪ್ರಸ್ತಾಪಿಸಿಲ್ಲ

ದಲಿತರಿಗೆ ಹಿಟ್ಟು-ಬಟ್ಟೆ ದೊರೆತರೆ ಸಾಲದು. ಅವರಿಗೆ ವಿದ್ಯೆ-ಬುದ್ಧಿಯೂ ಅತ್ಯಗತ್ಯವೆಂಬುದನ್ನು ಹೆಗ್ಗಡತಿಯ ಮುಕ್ತಾಯ ಎತ್ತಿ ಹಾಡುತ್ತದೆ. ಸಮಾಜಕ್ಕೆ ಬುದ್ಧ ಮಾರ್ಗವಲ್ಲದೆ ಬೇರೆ ಮಾರ್ಗ ಇಲ್ಲ ಎಂಬುದನ್ನು ೧೯೩೬ ರಷ್ಟು ಹಿಂದೆಯೇ ಕುವೆಂಪು ಸೂಚಿಸಿರುವುದು ಆಶ್ಚರ್ಯ. ಮುಂದೆ ೧೯೫೬) ಡಾ॥ ಅಂಬೇಡ್ಕರ್ ಬೌದ್ಧಕ್ಕೆ ಧರ್ಮಾಂತರಗೊಂಡದನ್ನು ಇಲ್ಲಿ ನೆನೆದರೆ ಕುವೆಂಪು ಅವರ ಭವಿಷ್ಯತ್ ದೃಷ್ಟಿ ನಮಗೆ ತಿಳಿದೀತು. ಒಟ್ಟಾರೆ ಅವರ ವೈಚಾರಿಕ ಮೇಲ್ಮೆಗೆ ಸರಿಸಾಟಿಯಾದ ಇನ್ನೊಬ್ಬ ಕನ್ನಡ ಲೇಖಕನಿಲ್ಲ ಎಂದರೆ ಉತ್ಪ್ರೇಕ್ಷೆಯಲ್ಲ. ಭಗವಾನರದು ಪ್ರಧಾನತಃ ಸಮಾಜವಾದಿ ನೆಲೆಯ ವಿಮರ್ಶೆ, ಆದ್ದರಿಂದ ಕುವೆಂಪು ಸಾಹಿತ್ಯದ ಕೇಳ್ದು ಜನ ಬದುಕ ಬೇಕೆಂಬ ಆಶಯವನ್ನೂ ಅನಾವರಣ ಮಾಡಿ ಮೌಲ್ಯಮಾಪನ ಮಾಡುವಲ್ಲಿ ಯಶಸ್ವಿಯಾಗಿದೆ ಎಂದೇ ಹೇಳಬಹುದು.

ಕುವೆಂಪು ಅವಿರತವಾಗಿ ಕೈಗೊಂಡ ಮತ್ತೊಂದು ವೈಚಾರಿಕ ನಿಲುವು ಎಂದರೆ ಪರಾವಲಂಬಿ ಪುರೋಹಿತಶಾಹಿಯ ಹುಟ್ಟು ಹಾಕಿದ ಮತ-ಮೌಢ್ಯವನ್ನು ಬೇರು ಸಮೇತ ಕಿತ್ತು ಹಾಕಲು ಪಟ್ಟ ಪ್ರಯತ್ನ. ಈ ಸಂದರ್ಭದಲ್ಲಿ ಭಗವಾನರು ಕನ್ನಡದ ಇನ್ನಿತರ ಹೆಸರಾಂತ ಲೇಖಕರೊಂದಿಗೆ ಕುವೆಂಪು ಅವರನ್ನಿರಿಸಿ ಹೋಲಿಸುತ್ತಾರೆ. ಉದಾಹರಣೆಗೆ ಎಸ್.ಎಲ್ ಭೈರಪ್ಪ ಅವರ 'ದಾಟು' ಕಾದಂಬರಿಯ ಪಾತ್ರಗಳು ಕ್ರಾಂತಿ ವೀರರಂತೆ ಮೇಲ್ನೋಟಕ್ಕೆ ಕಂಡು ಬಂದರೂ ಕಡೆಯಲ್ಲಿ ಪುರೋಹಿತಶಾಹಿ ಹುನ್ನಾರಕ್ಕೆ ಮಣಿದು ದುರಂತಕ್ಕೀಡಾಗುತ್ತಾರೆ. ಸತ್ಯಭಾಮೆ, ಮೋಹನದಾಸ, ಶ್ರೀನಿವಾಸ-ಮೋದಿ-ಇವರೆಲ್ಲರನ್ನೂ ಕಷ್ಟ ಬಂದ ಕಾಲಕ್ಕೆ ತಾಳಿಕೊಳ್ಳುವ, ಮೀರಬಲ್ಲವರನ್ನಾಗಿ ಚಿತ್ರಿಸುವ ಬದಲು ಲೇಖಕರು ಕೊನೆಗಾಣಿಸಿ ಬಿಡುತ್ತಾರೆ. ದೇವಾಲಯ ಪ್ರವೇಶ ಮಾಡಿದ ಮೋಹನ ದಾಸನಂಥ ದಲಿತರು ಯಾರೂ ಪಾಪಪ್ರಜ್ಞೆಯಿಂದ ಸತ್ತ ಪ್ರಕರಣ ಇತಿಹಾಸದಲ್ಲಿ ದಾಖಲಾಗಿಲ್ಲ. ವಾಸ್ತವವಾಗಿ ಅಂಬೇಡ್ಕರ್ ಜೀವನವೇ ಅದಕ್ಕೆ ಜ್ವಲಂತ ಉದಾಹರಣೆ. ಹಾಗಿದ್ದೂ ಮೋಹನ ದಾಸ ಯಾಕೆ ಸತ್ತ? ಎಂದರೆ ಲೇಖಕರ ಮತಮೌಢ್ಯ ಪ್ರತಿಪಾದನೆಯ ಪ್ರಾತಿನಿಧಿಕ ಸ್ವರೂಪವೇ ಇದು. ಇದು ಪ್ರತಿಗಾಮಿ ದೃಷ್ಟಿ ಎಂಬುದನ್ನು ಭಗವಾನರು 'ಅನಾವರಣ' ಮಾಡುತ್ತಾರೆ. 'ದಾಟು' ಕಾದಂಬರಿಯಲ್ಲಿ 'ದಾಟಿದ್ದು ಏನಿಲ್ಲ' 'ದಾಟ' ಬಾರದು ಎಂಬ ವ್ಯವಸ್ಥೆಯ ಭಾರವೇ ಬಿದ್ದಿದೆ. ಅಲ್ಲಿ ಹಾಗೆಯೇ ಕಾರಂತರ 'ಚೋಮನದುಡಿ'ಯ ಚೋಮನೂ ಸಹ ಮತಮೌಢ್ಯದಿಂದ ಪಾರಾಗದೆ ಕಡೆಗೆ ಭೂತಕ್ಕೆ ಹೆದರಿ ಪ್ರಾಣ ಬಿಡುವುದು ಪ್ರಗತಿಪರ, ಜೀವಪರವಲ್ಲ-ಎಂಬುದನ್ನು ಭಗವಾನರು ನಿರ್ಧಾಕ್ಷಿಣ್ಯವಾಗಿ ಬಯಲು ಮಾಡುತ್ತಾರೆ.

ಅವರ ಪ್ರಕಾರ ಕುವೆಂಪು ಕೃತಿಗಳ ನಾಯಕರಾದ ಹೂವಯ್ಯ, ಮುಕುಂದಯ್ಯ, ಗೋವಯ್ಯ ಮುಂತಾದವರು ತಮ್ಮ ಶಕ್ತಿ ಮೀರಿ ವ್ಯವಸ್ಥೆಯನ್ನು ಬದಲಿಸಿ ಬದುಕಬಲ್ಲವರಾಗಿದ್ದಾರೆ. ಜ್ಞಾನ-ವಿಜ್ಞಾನವನ್ನು ಯಾವ ಮೂಲೆಯಿಂದ ಬಂದರೂ ಸ್ವಾಗತಿಸಬಲ್ಲ ಈ ಪಾತ್ರಗಳು ಯಾವತ್ತೂ ಪುರೋಹಿಶಾಹಿಯ ಪಾದ ಒತ್ತುವ ಕೀಳರಿಮೆಗೆ ತುತ್ತಾದವರಲ್ಲ; ಆಧುನಿಕತೆಗೆ ಮಾದರಿಗಳು ಇವರು. ಒಟ್ಟಾರೆ, ಕುವೆಂಪು ತನ್ನ ಸಮಕಾಲೀನ ಚಳವಳಿಗಳು, ಸ್ವಾತಂತ್ರ್ಯ ಚಳವಳಿ, ಗಾಂಧಿಸತ್ಯಾಗ್ರಹ, ಹಿಂದುಳಿದ ವರ್ಗಗಳ ಚಳವಳಿ ಇತ್ಯಾದಿ-ಇವುಗಳ ದಿಕ್ಕು ದೆಸೆಯನ್ನು ದೂರದಿಂದ ನೋಡಿ ಗ್ರಹಿಸುತ್ತಿದ್ದರು. ಆದರೆ ಈ ದೇಶದ ರಾಜಕೀಯ ಸ್ವಾತಂತ್ರ್ಯಕ್ಕಿಂತ ಸಮಾಜದ ಬಲಹೀನರು, ದಲಿತರು, ಮಕ್ಕಳು, ಮಹಿಳೆಯರು, ವೃದ್ಧರು-ಇವರೆಲ್ಲರು ಹಿಂಸೆಯಿಂದ, ಅವಮಾನದಿಂದ ನೋವಿನಿಂದ ಮುಕ್ತರಾಗಬೇಕೆಂದು ಅವರು ಬಯಸಿದರು. ಆದ್ದರಿಂದ ಅವರು ಸಮಾತಾವಾದವನ್ನು ಮಾನವತಾವಾದವನ್ನು ಮುಂಚೂಣಿಗೆ ತಂದರು. ಹೀಗಾಗಿ ಭಗವಾನ್ ಗುರ್ತಿಸಿರುವಂತೆ ಕುವೆಂಪು ಕಾದಂಬರಿಗಳು ಪ್ರಗತಿಪರರಿಗೆ ಗೀತೆ-ಬೈಬಲ್-ಕುರಾನ್‌ಗಳಾಗಿವೆ ಎಂದರೆ ಅತಿಶಯೋಕ್ತಿಯಲ್ಲ.

ಲೇಖಕರು ಕುವೆಂಪು ಗದ್ಯವನ್ನು ಕುರಿತು ಮಾತನಾಡುತ್ತ, ತಮ್ಮ ಪ್ರವೇಶದ ಇತಿಮಿತಿಗಳನ್ನು ಅಡಿ ಟಿಪ್ಪಣಿಗಳಲ್ಲಿ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾ, ಕುವೆಂಪು ಗದ್ಯ ಪಾರಮ್ಯವನ್ನು ಮನಂಬುಗುವಂತೆ ವರ್ಣಿಸುತ್ತಾರೆ, ಅವರ ಗದ್ಯ ವಿಸ್ತಾರವಾಗಿದೆ; ವೈವಿಧ್ಯ ಮಯವಾಗಿದೆ ಎಂಬುದನ್ನು ಅನೇಕಾನೇಕ ಕಂಡಿಕೆ ನಿದರ್ಶನಗಳೊಂದಿಗೆ ಸಾದರಪಡಿಸುತ್ತಾರೆ. ೧೯೫೫ರಷ್ಟು ಹಿಂದೆಯೇ ಕುವೆಂಪು ಯುವ ಜನರನ್ನುದ್ದೇಶಿಸಿ 'ನಿರಂಕುಶ ಮತಿಗಳಾಗಿ' ಎಂದು ಕರೆ ಕೊಟ್ಟು ಅವರ ವೈಚಾರಿಕ ನಿಲುವನ್ನು ಶ್ಲಾಘಿಸುತ್ತಾರೆ. ಈ ಕರೆ ೧೯೩೬ರಲ್ಲಿ ಮಾವೋತ್ಸೆತುಂಗ್ ವ್ಯವಸ್ಥೆಯನ್ನು ಮೀರಿ ಎಂದು ಯುವ ಜನರಿಗೆ ಕೊಟ್ಟಕರೆಗೆ ಸಮಾನವಾಗಿದೆ. ಎಂಬುದನ್ನು ಸ್ಮರಿಸಿಕೊಳ್ಳುತ್ತಾರೆ.

ಕುವೆಂಪು ಭಾಷೆ ಕನ್ನಡದ ವೈವಿಧ್ಯವನ್ನೆಲ್ಲ ಕೊಳ್ಳೆ ಹೊಡೆದು ಹೆಮ್ಮರವಾಗಿ ಬೆಳೆದಿದೆ ಎನ್ನುವ ಲೇಖಕರು ಅದು ಅತಿ ನರಳವೂ ಅಲ್ಲ, ಅತಿ ಪಾಂಡಿತ್ಯ ಪೂರ್ಣವೂ ಅಲ್ಲ-ಎಂದು ಅನೇಕ ಕಂಡಿಕೆಗಳಿಂದ ಸಮರ್ಥಿಸುತ್ತಾರೆ.

ಮೊದಲಿಗೆ, ಕುವೆಂಪು ತತ್ವಜ್ಞಾನಿ ಹಾಗೂ ದಾರ್ಶನಿಕ ದೃಷ್ಟಿಯುಳ್ಳವರಾದ್ದರಿಂದ ಒಮ್ಮೊಮ್ಮೆ ಸಂಸ್ಕೃತ ಶಬ್ಧ ಭೂಯಿಷ್ಠ ಕ್ಲಿಷ್ಟತೆ ಅವರಲ್ಲಿದೆ ಎಂಬುದನ್ನೂ ಎತ್ತಿ ತೋರಿಸುತ್ತಾರೆ. ಕೆಲವೊಮ್ಮೆ ಅವರ ಗದ್ಯ ಶೈಲಿ (ಕಪೋನಂದನ-ಮಹಾಶ್ವೇತೆಯ ತಪಸ್ಸು ನೋಡಿ) ಭಾವಗ್ರಹಣಕ್ಕೆ ಬಹಳ ಕಡಿದು. ಎಂಬುದನ್ನೂ ಸಹ ಇವರು ಗುರ್ತಿಸಿ, ಹೀಗಾದುದಕ್ಕೆ ಅನ್ಯ ಮಾಡಿದಂತೆ, ಅವರು ಸಾಹಿತ್ಯ ಕೈಗೊಳ್ಳುವ ಸಾಮಾಜಿಕ ಪಾತ್ರದತ್ತ ಗಮನ ಹರಿಸದಿರುವುದೇ ಕಾರಣವಿರಬಹುದೆಂದು ಹಾಗೂ 'ಆತ್ಮ ಸಾಧನೆ' ಎಂದು ತಮ್ಮ ಬಿಡುಗಡೆಗೆ ಮಾತ್ರ ಆಲೋಚಿಸಿದ್ದೇ ಇದ್ದಿರಬ ಹುದೆಂದೂ. ಕುವೆಂಪು ಗದ್ಯದ ಮಿತಿಗಳನ್ನು ಗುರ್ತಿಸುತ್ತಾರೆ. ಆದರೂ ಕುವೆಂಪು ಸಾಹಿತ್ಯ ವಿಮರ್ಶೆ ಕೂಡ ಸೃಜನ ಶೀಲವೇ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಕಪೋನಂದನದ ಲೇಖನಗಳೇ ಈ ಮಾತಿಗೆ ನಿದರ್ಶನ.

ಕುವೆಂಪು ಅವರ ಕಥನ ಗದ್ಯ ಅತ್ಯಂತ ಸೃಜನಶೀಲ ಎಂಬುದರಲ್ಲಿ ಎರಡು ಮಾತಿಲ್ಲ. ಆದ್ದರಿಂದಲೇ ಅವರ ಕಾದಂಬರಿಗಳು ಮಹಾಕಾವ್ಯದ ಎತ್ತರಕ್ಕೆ ಮುಟ್ಟುವ ಒಲ್ಮೆಯನ್ನು ಹೊಂದಿವೆ-ಎಂಬುದನ್ನು ಭಗವಾನ್ ಕೈವಾರಿಸುತ್ತಾರೆ. ಕಾನೂರು ಹೆಗ್ಗಡತಿಯ ಗದ್ಯ ಶೈಲಿ ಸರ್ವಶ್ರೇಷ್ಠವೆಂದು ಪ್ರತಿಪಾದಿಸುವ ಈ ಲೇಖಕರು ನಿದರ್ಶನಕ್ಕಾಗಿ ಅನೇಕ ಕಂಡಿಕೆಗಳನ್ನು ಎತ್ತಿ ಕೊಡುತ್ತಾರೆ. ಉದಾಹರಣೆಗೆ ಭೈರನ ಮಗ ಗಂಗ ಹುಡುಗ ಮಂತ್ರಿಸಿದ ತೆಂಗಿನ ಕಾಯಿಯನ್ನು ಮುಟ್ಟಿ ಹೆದರುವ ಸನ್ನಿವೇಶವನ್ನು (ಹೆಗ್ಗಡಿರೆ) ಇಲ್ಲಿ ಅವಲೋಕಿಸಬಹುದು. ಇಲ್ಲಿ ಬಳಸಿರುವ ಮಾಂತ್ರಿಕಶೈಲಿಗೆ ಜಾನಪದ ಜಗತ್ತು ಬೆಚ್ಚಿ ಕಿಟ್ಟನೆ ಕಿರುಚಿಕೊಳ್ಳಬೇಕು (ಪುಟ ೩೨) ಹಾಗಿದೆ.

ಕುವೆಂಪು ಕಾದಂಬರಿಗಳಲ್ಲಿ ಅನೇಕ ರೂಪಕ-ಪ್ರತಿಮೆಗಳು ವರ್ಣಿಕವಾಗಿವೆ. ಅವು ಕುವೆಂಪು ಒಬ್ಬ ಪ್ರಜ್ಞಾವಂತ ಕಲೆಗಾರ ಎಂಬುದನ್ನು ಸಾಬೀತು ಪಡಿಸುತ್ತದೆ. ಉದಾಹರಣೆಗೆ ಹೆಗ್ಗಡಿತಿಯಲ್ಲಿ ಚಿತ್ರಿತವಾಗಿರುವ ಎಳೆಯ ಬಾಳೆ ಸಸಿ ಮತ್ತು ಎಳೆಗರು-ಈ ರೂಪಕಗಳು ಸೀತೆಯ ಕೋಮಲತೆ ಹಾಗೂ ಅಸಹಾಯಕತೆಯನ್ನು ಸಮರ್ಥವಾಗಿ ಹಿಡಿದಿಟ್ಟವೆ. ಮಾವಿನ ಹಣ್ಣನ್ನು ಗಿಳಿ ತನಗೆ ಬೇಕಾದಷ್ಟನ್ನು ಮಾತ್ರ ತಿಂದು ಬಿಟ್ಟು-ಹೋಗುವಂತೆ-ಎಂಬ ರೂಪ ಕೋಪಮೆ ಸೇರೆಗಾರ ರಂಗಪ್ಪಶೆಟ್ಟಿ ಸುಬ್ಬಮ್ಮನನ್ನು ಬಳಸಿ ಬಿಸಾಡಿದ ಬಗೆಯನ್ನು ಸೆರೆ ಹಿಡಿಯುತ್ತದೆ. 'ಅಣ್ಣೆಕಟ್ಟು' ಎಂಬ ಪ್ರತಿಮೆ ಸೀತೆ ಮತ್ತು ಹೂವಯ್ಯ ಇವರ ಬದುಕಿನ ಸಂಕೇತವಾಗುತ್ತದೆ (ಪುಟ-೩೮) ಹೀಗೆ ಇನ್ನೂ ಅನೇಕ ಸನ್ನಿವೇಶಗಳಿವೆ.

ಸುಮಾರು ಮುಕ್ಕಾಲು ಶತಮಾನದ ಹಿಂದೆಯೇ ಕಾನೂರು ಹೆಗ್ಗಡತಿಯ ಮೂಲಕ ಕುವೆಂಪು ನಮ್ಮ ಇಂದಿನ ಗ್ರಾಮೀಣ ಸಮಸ್ಯೆಗಳನ್ನೂ ಮತ್ತು ಅವುಗಳ ಪರಿ ಹಾರೋಪಾಯಗಳನ್ನೂ ಸೂಚಿಸಿದ್ದಾರೆ ಎಂಬುದು ಆಶ್ಚರ್ಯಕರ ಸಂಗತಿ. ರೈತರ ಸಮಸ್ಯೆ, ಗ್ರಾಮೀಣಾಭಿವೃದ್ಧಿ, ಸರ್ಕಾರದ ಸುಲಿಗೆ, ಪೋಲೀಸರ ಕಾಟ, ನಾಟಾಕಳ್ಳರ ಹಾವಳಿ, ಕದ್ದು ಕಳ್ಳು ಕಟ್ಟುವುದು-ಇತ್ಯಾದಿ ಸಮಸ್ಯೆಗಳತ್ತ ಅವರ ಕಾದಂಬರಿಕ್ಷಕಿರಣ ಚೆಲ್ಲುತ್ತದೆ. ಕಡೆಯದಾಗಿ ಕೊಳಕು ಪುರೋಹಿತ ಶಾಹಿಯ ಹಾಗೂ ಬುದ್ಧ ಮಾರ್ಗದ ಮಂಡನೆ ಹೆಗ್ಗಡತಿಯನ್ನು ಸದಾ ಎತ್ತರದಲ್ಲಿಯೇ ನಿಲ್ಲಿಸುತ್ತದೆ-ಎಂದು ಭಗವಾನರು ಹೇಳುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. 'ಕುವೆಂಪು ಅಳವಡಿಕೆ' ಎಂಬ ಲೇಖನದಲ್ಲಿ ಇದುವರೆಗೆ ಕನ್ನಡ ನವ್ಯ ಕವಿ ಲೇಖಕರೂ ಕುವೆಂಪು ಪ್ರಭಾವಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಿಕ್ಕಲೆ ಇಲ್ಲ ಎಂಬುದನ್ನು ಹಲವಾರು ಸಾಕ್ಷ್ಯಾಧಾರಗಳಿಂದ ಸ್ಪಷ್ಟಪಡಿಸುತ್ತಾರೆ.

ದಲಿತ-ಬಂಡಾಯ ಸಾಹಿತ್ಯ ಸಮ್ಮೇಳನ ೧೯೭೯ರಲ್ಲಿ ಜರುಗಿತು. ಭಗವಾನರ 'ಕಾನೂರು ಹೆಗ್ಗಡಿತಿ ಮತ್ತು ಬಂಡಾಯ' ಎಂಬ ಲೇಖನ ೧೯೮೦ರಲ್ಲಿ ಬರೆಯಲ್ಪಟ್ಟಿದೆ. ಇದರೊಂದಿಗೆ ಆ ಮುಂಚಿನ ನವೋದಯ ಸಾಹಿತ್ಯ ಕುರಿತ ಪುನರ್ ಮಾಲೀಕರಣ ಪ್ರಕ್ರಿಯೆ ಕೂಡ ಆರಂಭಗೊಂಡಿತು. ಈ ಸಂದರ್ಭದಲ್ಲಿ ನಡೆದುಬಂದ ದಾರಿಯತ್ತ ತಿರುಗಿ ನೋಡಿದರೆ, ಈ ದಲಿತ-ಬಂಡಾಯ ಲೇಖಕರಿಗೆ ಯಾವ ನೆಲೆಯಿಂದ ನೋಡಿದರೂ ಕೂಡ ಕುವೆಂಪು ಮಾತ್ರ ಪ್ರಸ್ತುತವಾದದ್ದು ಮತ್ತು ಇಂದಿಗೂ ಸಹ ಅದೇ ವಾಸ್ತವ ಆಗಿದೆ. ಆದ್ದರಿಂದ ಕುವೆಂಪು ಸಾಹಿತ್ಯ ಆ ಮೊದಲೆ ಈ ನೆಲದ ಗಾಳಿ ಗಂಧ ಗೊಬ್ಬರಗಳಿಂದ ಬನಿಯಾದದ್ದು ಸುಳ್ಳಲ್ಲ. ಅಲ್ಲಿಂದೀಚೆಗೆ 'ಕನ್ನಡಕ್ಕೊಬ್ಬನೇ ಕುವೆಂಪು' ಎನ್ನುವಷ್ಟರ ಮಟ್ಟಿಗೆ ಅವರು ಬೆಳದು ನಿಂತಿದ್ದಾರೆ-ನಿತ್ಯಹರಿದ್ವರ್ಣದ ಮಲೆನಾಡಿನಂತೆ. ಹೀಗಾಗಿ ಭಗವಾನರು ಸ್ಥಾಪಿಸುವಂತೆ ಕನ್ನಡ ಮೊಟ್ಟ ಮೊದಲ ಬಂಡಾಯಗಾರರೆಂದರೆ ಕುವೆಂಪು ಎಂಬ ಮಾತು ಸುಳ್ಳಲ್ಲ. ಈ ನೆಲೆಯಿಂದ ಭಗವಾನ್ ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಕಂಡು ಬರುವ ಬಂಡಾಯದ ಧ್ವನಿಯನ್ನು ಗುರ್ತಿಸಲು ತೊಡಗುತ್ತಾರೆ.

ಕನ್ನಡ ಸಾಹಿತ್ಯ ಪರಂಪರೆಯನ್ನು ಬಲ್ಲವರಿಗೆ ಬಂಡಾಯವೆಂಬ ಮಾತು ಹೊಸತಾದರೂ ಆ ಮನೋಧರ್ಮ ಹೊಸತೇನಲ್ಲ. ಸಾವಿರಾರು ವರ್ಷಗಳಿಂದ ನಮ್ಮ ಸಾಹಿತ್ಯದಲ್ಲಿ ಸಂಗಮಿಸಿ ಬಂದಿದೆ. ಹಾಗೆ ನೋಡಿದರೆ ಪಂಪ ಮೊದಲುಗೊಂಡು, ಶರಣರು, ದಾಸರು ಎಲ್ಲರಲ್ಲಿಯೂ ಬಂಡಾಯದ ಎಂದರೆ ವ್ಯವಸ್ಥೆಯ ವಿರುದ್ಧ ದನಿ ಎತ್ತಿರುವುದನ್ನು ಕಾಣಬಹುದು ಅದು ನವೋದಯದಲ್ಲಿ ಪಾಶ್ಚಾತ್ಯ ಸಾಹಿತ್ಯ ಸಂಸರ್ಗದಿಂದ ಇನ್ನುಷ್ಟು ಗಟ್ಟಿಗೊಂಡಿತಷ್ಟೆ. ಬಂಡಾಯವೆಂದರೆ ಜೀವ ವಿರೋಧಿ ವ್ಯವಸ್ಥೆಯನ್ನು ಪ್ರತಿರೋಧಿಸುವುದು; ಜೊತೆಗೆ ಜೀವಪರ ಮೌಲ್ಯಗಳನ್ನು ನಾಟಿಸಿ ಬೆಳೆಸುವುದೇ ಆಗಿದೆ. ಉದಾಹರಣೆಗೆ ಮಂತ್ರ ಮಾಂಗಲ್ಯ, ಅಂತರ್‌ಜಾತಿ ವಿವಾಹಗಳನ್ನು ಕುರಿತು ಭಾಷಣ ಮಾಡುವುದಕ್ಕಿಂತ ಆಚರಣೆಯಲ್ಲಿ ಹಾಗೆ ಮಾಡಿ ತೋರಿಸುವುದು ನಿಜವಾದ ಬಂಡಾಯ. ಇದು ಪರ್ಯಾಯ ವ್ಯವಸ್ಥೆ ಎಂಬುದನ್ನು ಸಮಾಜ ಅರಿಯಬೇಕು. ಈ ನೆಲೆಯಿಂದ ಭಗವಾನರು ಹೆಗ್ಗಡತಿ ಕಾದಂಬರಿಯನ್ನು ಪರಿಶೀಲಿಸುವರು. ಇದು ವ್ಯವಸ್ಥೆಯನ್ನು ಮೀರಲು ತುಡಿಯುವ ಕೃತಿ. ಅದನ್ನು ಹೂವಯ್ಯನ ಪಾತ್ರದ ಮೂಲಕ ಕುವೆಂಪು ಇಂಡಿಯಾದ ಸರ್ವಾನಿಷ್ಟಗಳಿಗೂ ಮೂಲ ಕಾರಣ ಪುರೋಹಿತಶಾಹಿ; ಕಾದಂಬರಿಕಾರರ ಸೂಕ್ಷ್ಮ ದೃಷ್ಟಿ ಕೃತಿಯ ಮೊದಲೇ ಅದನ್ನು ಗ್ರಹಿಸಿಬಿಟ್ಟಿದೆ; ಎರಡನೆಯದು ತಮ್ಮ ವರ್ಗದ ಜನರು (ವಕ್ಕಲಿಗೌಡರು) ಮಾಡುವ ಸುಲಿಗೆ ಹಾಗೂ ಅವರ ಸಾಂಸ್ಕೃತಿಕ ಶೂನ್ಯತೆ; ಮೂರನೆಯದು ಈಗಾಗಲೇ ಪ್ರಸ್ತಾಪಿಸಿದಂತೆ ದಲಿತರನ್ನು ಮಾನವೀಯವಾಗಿ ಕಂಡು ಆದರಿಸುವುದು (ಕುವೆಂಪು ಯುಗ ಪುಟ-೩೩) ಈ ಮೂರು ಕಾರ್ಯಾಚರಣೆಯಲ್ಲಿ ಕಾದಂಬರಿ ಮುಂದುವರಿಯುತ್ತದೆ.

ನಿದರ್ಶನಕ್ಕಾಗಿ 'ಚಂದ್ರಯ್ಯಗೌಡರು ದರ್ಬಾರು' ಎಂಬ ಅಧ್ಯಾಯವನ್ನು ನೋಡಬಹುದು. ಇಲ್ಲಿ ವೆಂಕಪ್ಪ ಜೋಯಿಸರ ಪ್ರವೇಶವಿದೆ. ಕಾದಂಬರಿಯಲ್ಲಿ ಘಟಿಸುವ

ಎಲ್ಲಾ ದುರಂತಗಳಿಗೆ ಈ ಮನುಷ್ಯನೇ ಪರೋಕ್ಷಕಾರಣ ವೆಂಬುದು ಮೊದಲೇ ತಿಳಿದು ಬಿಡುತ್ತದೆ. ಅವರ ಮೊದಲ ಸಲಹೆ ಎಂದರೆ ವಿದ್ಯೆ ಕಲಿಸುವುದರಿಂದ ಮಕ್ಕಳು ಹಾಳಾ ಗುತ್ತವೆ; ಅವರಿಗೆ ಹೆಚ್ಚು ಓದಿಸಬಾರದು–ಎಂಬುದು. ಇದ ರಿಂದ ಹೂವಯ್ಯ–ರಾಮಯ್ಯರ ಓದು ನಿಂತು ಹೋಗು ತ್ತದೆ; ಎರಡನೆಯದಾಗಿ ಸೀತೆ–ಹೂವಯ್ಯ ಇವರ ಜಾತಕ ಗಳು ಕೂಡಿ ಬರುವುದಿಲ್ಲವೆಂದು ಹೇಳಿ ಅವರಿಬ್ಬರ ಲಗ್ನ ವನ್ನು ಮುರಿದರು; ಮೂರನೆಯದಾಗಿ ಹೂವಯ್ಯನ ಧ್ಯಾನದಲ್ಲಿ ಪರವಶಳಾದ ಸೀತೆಗೆ, ಹುಲಿಪಾಲಾದ ಸಿಂಗಪ್ಪ ಗೌಡರ ಮಗ ಕೃಷ್ಣಯ್ಯನ ದೆವ್ವ ಮೆಟ್ಟಿಕೊಂಡಿದೆಯೆಂದು ಹೇಳಿ ಅವಳಿಗೆ ಗೌಡರಿಂದ ಬರೆ ಹಾಕಿಸಿದ್ದು–ಹೀಗೆ ಕಾನೂರು ಮನೆಯ ಸಕಲ ದುರಂತಗಳಿಗೂ ಆ ಜೋಯಿಸರೇ ಮೂಲ ಕಾರಣರಾಗುತ್ತಾರೆ. ಆದರೆ ಹೂವಯ್ಯ ಮಾತ್ರ ಜೋಯಿಸರ ಈ ಮತ ಮೌಢ್ಯ ಶಾಸ್ತ್ರ ದಿಂದ ಹುಟ್ಟಿದ ತಂತ್ರಗಾರಿಕೆಗಳನ್ನು ಪ್ರಶ್ನಿಸುತ್ತಲೇ ಅದಕ್ಕೆ ಪರ್ಯಾಯಗಳನ್ನು ಸೂಚಿಸುತ್ತಲೇ ಬೆಳೆಯುತ್ತಾನೆ. ಅವನು ಹೊಲ ಗದ್ದೆಗಳಲ್ಲಿ ಶ್ರಮಿಕನಾಗಿ ದುಡಿಯುತ್ತಾನೆ; ದಲಿತ ರಿಗೆ ವಿದ್ಯೆ–ಬುದ್ಧಿ ಕಲಿಸಲು ಆಶ್ರಯ ಸ್ಥಾಪಿಸಿ, ಸೀತೆ ಯನ್ನು ಜೊತೆಗೂಡಿಸಿಕೊಂಡು ದಲಿತ ಶಿಕ್ಷಣಕ್ಕೆ ಬುದ್ಧ ಮಾರ್ಗ ತೆರೆಯುತ್ತಾನೆ. ಅವರ ಹಟ್ಟಿಗಳಿಗೆ ಹೋಗಿ ಕಷ್ಟ ಸುಖ ಕೇಳಿ ನಿವಾರಿಸುತ್ತಾನೆ– ಇತ್ಯಾದಿ.

ಹೀಗೆ ಹೂವಯ್ಯ ಗಾಂಧೀಜಿಯ ಗ್ರಾಮ ಸ್ವರಾ ಜ್ಯದ ಕನಸನ್ನು ಸಾಕಾರಗೊಳಿಸಲು ಸರ್ವ ಪ್ರಯತ್ನ ಮಾಡುತ್ತಾನೆ. ಅವನೊಬ್ಬ ಬುದ್ಧ ಮಾರ್ಗದ ಸಾಂಸ್ಕೃತಿಕ ಹರಿಕಾರನಾಗಿ ಚಿತ್ರಿತನಾಗಿದ್ದಾನೆ. ಅಂತೂ ಅವನು ಪುರೋಹಿತಶಾಹಿ ಹೆಬ್ಬುಲಿಯ ನೆತ್ತಿಗೆ ನೇರ ಗುರಿಯಿಟ್ಟು ಹೊಡೆದ ಈಡುಗಾರನಾಗಿ ಕಂಡು ಬರುತ್ತಾನೆ.

ಎರಡನೆಯದಾಗಿ ಚಂದ್ರಯ್ಯಗೌಡರು ಕೆಳ ಕಾನೂರು ಅಣ್ಣಯ್ಯಗೌಡರ ಇದ್ದಬಿದ್ದ ಆಸ್ತಿಯನ್ನು ಮುಟ್ಟು ಗೋಲು ಹಾಕಿಕೊಳ್ಳುವುದು ಮತ್ತು ಶೂದ್ರ ಸಂಘದ ಮಹಾ ಸಭೆಯಲ್ಲಿ ಮಲೆನಾಡಿನ ಗೌಡರುಗಳು ಕಳ್ಳು ಕುಡಿ ಯುವುದಿಲ್ಲವೆಂದು ಪೊಳ್ಳು ಭರವಸೆ ನೀಡುವುದು ಹಾಗೂ ಹಾದರ ಮಾಡುವುದು– ಇತ್ಯಾದಿ ಸಂದರ್ಭ ಗಳನ್ನು ವರ್ಣಿಸುವಾಗ ಕುವೆಂಪು ವಿಡಂಬನೆ, ಟೀಕೆ, ಕೊಂಕು, ವ್ಯಂಗ್ಯ, ಪರಿ ಹಾಸ್ಯ, ಹೇಲಿ ಅನುಪಮವಾಗಿ ಅಚ್ಚೊತ್ತುತ್ತವೆ. (ಕುವೆಂಪುಯುಗ ಪುಟ–೯೫) ಕನ್ನಡದ ಬೇರಾವ ಸಾಹಿತಿಯೂ ಹೀಗೆ ತನ್ನ ವರ್ಗದ ಜನರನ್ನು ಕುರಿತು ಇಷ್ಟು ನಿರ್ವಿಕಾರವಾಗಿ, ನಿರ್ದಾಕ್ಷಿಣ್ಯವಾಗಿ ಹರಾಜು ಹಾಕಿಲ್ಲ. (ಪುಟ–೯೯) ಮಲೆನಾಡಿನ ಗೌಡರ ಮೌಢ್ಯ, ಕುಡುಕುತನ, ಹಾದರ, ಕ್ರೌರ್ಯ, ದಬ್ಬಾಳಿಕೆ ಹಾಗೂ ಪುರೋಹಿತರ ಎದುರು ಕೀಳರಿಮೆ, ಹೆಂಗಸರು ಮಕ್ಕಳ ಮೇಲೆ ತೋರಿಸುವ ದರ್ಪ, ದೌರ್ಜನ್ಯ ಇತ್ಯಾದಿಗಳನ್ನು ಕುವೆಂಪು ಯಾವ ರಿಯಾಯಿತಿಯೂ ಇಲ್ಲದೆ ಝಾಡಿಸಿ, ಅವರ ಸಾಂಸ್ಕೃತಿಕ ಶೂನ್ಯತೆಯನ್ನು ಅನುಪಮವೆಂಬಂತೆ ದಾಖಲಿಸಿದ್ದಾರೆ. ಹೆಗ್ಗಡತಿ ಪ್ರಕಟವಾದ ಸಂದರ್ಭದಲ್ಲಿ ಈ ಕಾರಣದಿಂದ ಮಲೆನಾಡಿನ ಗೌಡರಿಗೆ ಕುವೆಂಪು ಎಂದರೆ ಇರಿಸು–ಮುರಿಸು ಭಾವನೆ ಬೆಳೆದಿದ್ದು ಸುಳ್ಳಲ್ಲ–ಎಂಬು ದನ್ನು ಭಗವಾನರು ಕೆಲವರ ಬಾಯಿಂದ ಕೇಳಿದ್ದಾರೆ. ಮೂರನೆಯದಾಗಿ ವಿದ್ಯಾವಂತನಾದ ಯುವಕ ಹೂವಯ್ಯ ಮಾಡಿದ ಸಾಹಸಯಾತ್ರೆಯನ್ನು ಕುರಿತು ಕೃತಿಯ ಮುಕ್ತಾಯ ಪರಮಾತ್ಮಕವಾಗಿ ಚಿತ್ರಿಸುತ್ತದೆ. 'ಹತ್ತು ವರ್ಷ ಗಳಾದ ಮೇಲೆ' ಎಂಬ ಈ ಅಧ್ಯಾಯ ಹೂವಯ್ಯನ

ನಿದರ್ಶನಕ್ಕಾಗಿ 'ಚಂದ್ರಯ್ಯಗೌಡರು ದರ್ಬಾರು' ಎಂಬ ಅಧ್ಯಾಯವನ್ನು ನೋಡಬಹುದು. ಇಲ್ಲಿ ವೆಂಕಪ್ಪ ಜೋಯಿಸರ ಪ್ರವೇಶವಿದೆ. ಕಾದಂಬರಿ ಯಲ್ಲಿ ಘಟಿಸುವ ಎಲ್ಲಾ ದುರಂತಗಳಿಗೆ ಈ ಮನುಷ್ಯನೇ ಪರೋಕ್ಷಕಾರಣ ವೆಂಬುದು ಮೊದಲೇ ತಿಳಿದು ಬಿಡುತ್ತದೆ. ಅವರ ಮೊದಲ ಸಲಹೆ ಎಂದರೆ ವಿದ್ಯೆ ಕಲಿಸುವುದರಿಂದ ಮಕ್ಕಳು ಹಾಳಾಗುತ್ತವೆ; ಅವರಿಗೆ ಹೆಚ್ಚು ಓದಿಸಬಾರದು– ಎಂಬುದು. ಇದರಿಂದ ಹೂವಯ್ಯ– ರಾಮಯ್ಯರ ಓದು ನಿಂತು ಹೋಗುತ್ತದೆ; ಎರಡನೆಯದಾಗಿ ಸೀತೆ–ಹೂವಯ್ಯ ಇವರ ಜಾತಕಗಳು ಕೂಡಿ ಬರುವುದಿಲ್ಲ ವೆಂದು ಹೇಳಿ ಅವರಿಬ್ಬರ ಲಗ್ನವನ್ನು ಮುರಿದರು; ಮೂರನೆಯದಾಗಿ ಹೂವ ಯ್ಯನ ಧ್ಯಾನದಲ್ಲಿ ಪರವಶಳಾದ ಸೀತೆಗೆ, ಹುಲಿಪಾಲಾದ ಸಿಂಗಪ್ಪಗೌಡರ ಮಗ ಕೃಷ್ಣಯ್ಯನ ದೆವ್ವ ಮೆಟ್ಟಿಕೊಂಡಿದೆಯೆಂದು ಹೇಳಿ ಅವಳಿಗೆ ಗೌಡರಿಂದ ಬರೆ ಹಾಕಿ ಸಿದ್ದು–ಹೀಗೆ ಕಾನೂರು ಮನೆಯ ಸಕಲ ದುರಂತಗಳಿಗೂ ಆ ಜೋಯಿಸರೇ ಮೂಲ ಕಾರಣರಾಗುತ್ತಾರೆ.

ಸಾಧನೆಗೆ ಇಟ್ಟ ಕಿರೀಟದಂತಿದೆ. ಕೃತಿಯ ಈ ಆಶಯ ವನ್ನೇ ಅರಿಯದ ಕನ್ನಡ ವಿಮರ್ಶೆ ಹೂವಯ್ಯನನ್ನು 'ಭಾವ ಜೀವಿ' ಕನಸುಣಿ ಎಂದು ಬರೆದದ್ದು ಅನುಚಿತ ಭಗವಾನ್ ತೆರೆದು ತೋರಿಸುತ್ತಾ ನವ್ಯವಿಮರ್ಶಕರ ಹುನ್ನಾರಗಳನ್ನು ಖಂಡಿಸುತ್ತಾರೆ.

ಸುಮಾರು ಮುಕ್ಕಾಲು ಶತಮಾನದ ಹಿಂದೆಯೇ ಕಾನೂರು ಹೆಗ್ಗಡತಿಯ ಮೂಲಕ ಕುವೆಂಪು ನಮ್ಮ ಇಂದಿನ ಗ್ರಾಮೀಣ ಸಮಸ್ಯೆಗಳನ್ನೂ ಮತ್ತು ಅವುಗಳ ಪರಿ ಹಾರೋಪಾಯಗಳನ್ನೂ ಸೂಚಿಸಿದ್ದಾರೆ ಎಂಬುದು ಆಶ್ಚ ರ್ಯಕರ ಸಂಗತಿ. ರೈತರ ಸಮಸ್ಯೆ, ಗ್ರಾಮೀಣಾಭಿವೃದ್ಧಿ, ಸರ್ಕಾರದ ಸುಲಿಗೆ, ಪೊಲೀಸರ ಕಾಟ, ನಾಟಾಕಳ್ಳರ ಹಾವಳಿ, ಕದ್ದು ಕಳ್ಳು ಕಟ್ಟುವುದು–ಇತ್ಯಾದಿ ಸಮಸ್ಯೆಗಳತ್ತ ಅವರ ಕಾದಂಬರಿ ಕ್ಷಕಿರಣ ಚೆಲ್ಲುತ್ತದೆ. ಕಡೆಯದಾಗಿ ಕೊಳಕು ಪುರೋಹಿತ ಶಾಹಿಯ ಹಾಗೂ ಬುದ್ಧ ಮಾರ್ಗದ ಮಂಡನೆ ಹೆಗ್ಗಡತಿಯನ್ನು ಸದಾ ಎತ್ತರದ ಲ್ಲಿಯೇ ನಿಲ್ಲಿಸುತ್ತದೆ–ಎಂದು ಭಗವಾನರು ಹೇಳುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ.

'ಕುವೆಂಪು ಅಳವಡಿಕೆ' ಎಂಬ ಲೇಖನದಲ್ಲಿ ಇದು ವರೆಗೆ ಕನ್ನಡ ನವ್ಯ ಕವಿ ಲೇಖಕರೂ ಕುವೆಂಪು ಪ್ರಭಾ ವಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಿಕ್ಕಲೆ ಇಲ್ಲ ಎಂಬು ದನ್ನು ಹಲವಾರು ಸಾಕ್ಷ್ಯಾಧಾರಗಳಿಂದ ಸ್ಪಷ್ಟಪಡಿಸುತ್ತಾರೆ. ಹಾಗೆ ನೋಡಿದರೆ ನವೋದಯ, ಪ್ರಗತಿಶೀಲ, ನವ್ಯ, ದಲಿ ತ–ಬಂಡಾಯ ಈ ಎಲ್ಲ ಪ್ರಕಾರಗಳ, ಕಾಲ ಘಟ್ಟಗಳ ಮೇಲೂ ಕುವೆಂಪು ಮುದ್ರೆ ಬಿದ್ದಿದೆ. ಅವರವಾರಿಗೆಯ ಕವಿ ದ.ರಾ. ಬೇಂದ್ರೆಯವರೇ ಕುವೆಂಪು ಅವರನ್ನು 'ಜಗದ ಕವಿ–ಯುಗದ ಕವಿ' ಎಂದು ಸ್ವೀಕರಿಸಿದ್ದಾರೆ ಅಲ್ಲಿಂದ ಮರಳುಗೊಂಡು ದಲಿತ ಕವಿ ಸಿದ್ಧಲಿಂಗಯ್ಯ ನವರವರೆಗೆ ಕುವೆಂಪು ಅವರನ್ನು ಮೆಚ್ಚಿಕೊಂಡಿದ್ದಾರೆ. ೧೯೭೪ರಲ್ಲಿ ಕುವೆಂಪು ಬರಹಗಾರರ ಮತ್ತು ಕಲಾವಿದರ ಒಕ್ಕೂಟವನ್ನು ಉದ್ಘಾಟಿಸಿ ಮಾಡಿದ ಭಾಷಣದ ತರು ವಾಯ ರಾಜ್ಯದಲ್ಲಿ ದಲಿತ ಸಂಘರ್ಷ ಸಮಿತಿ ಹಾಗೂ ರೈತ ಸಂಘಟನೆಗಳು ನೈತಿಕ ಕೆಚ್ಚಿನಿಂದ ತಲೆ ಎತ್ತಿದವು– ಎಂಬುದು ಸುಳ್ಳಲ್ಲ. ಬಸವಲಿಂಗಪ್ಪನವರ ಬೂಸಾ ಪ್ರಕ ರಣವನ್ನು ಕುವೆಂಪು ಬೆಂಬಲಿಸಿದರು. ಮಧ್ವ ಸಿದ್ಧಾಂತದ ಇಬ್ಬಂದಿ ತಾತ್ವಿಕತೆಯನ್ನು ಕುವೆಂಪು ಜಾಲಾಡಿಸಿ ಬಿಟ್ಟರು. ಆಗ ಬ್ರಾಹ್ಮಣವಟುಗಳು ಎಷ್ಟೇ ಹಾರಾಡಿದರೂ ಕುವೆಂಪು ಗಜ ಗಾಂಭೀರ್ಯದಿಂದ ತೆಪ್ಪಗಿದ್ದರು. ಕೆ.ಡಿ. ಕುರ್ತುಕೋಟಿ ಯವರೂ ಹಿಂದೆ ನಡೆದುಬಂದ ದಾರಿಯಲ್ಲಿ ಕುವೆಂಪು ಅವರ ಮಹಾಕಾವ್ಯದ ಬಗ್ಗೆ ಲಘುವಾಗಿ ಬರೆದಿದ್ದರೂ ಆ ಮೇಲೆ ಅದನ್ನು ತಿದ್ದಿಕೊಳ್ಳುವ ಸಹೃದಯತೆಯನ್ನು ಮೆರೆ ದದ್ದು. ಭಗವಾನರ ವಿಮರ್ಶೆ ಪ್ರಕಟಗೊಂಡತ ರುವಾ ಯವೇ ಎಂಬುದನ್ನು ನೆನೆಯಬೇಕು.

ಒಟ್ಟಾರೆ ಕುವೆಂಪು ಒಂದು ಮೇರು ಸಹ್ಯಾದ್ರಿ ಶಿಖರ. ಅದು ಕನ್ನಡ ಬದುಕಿನ ಮೇಲೆ ಮಾಡಿದ ಪ್ರಭಾವ ಅಪಾರ. ಭಗವಾನರ ಕುವೆಂಪು ಯುಗದ ಲೇಖನಗಳು ಆ ಕೃತಿ ರಾಶಿಯ ಬಗ್ಗೆ ಇದ್ದ ಕೆಲವರ ತಪ್ಪು ಗ್ರಹಿಕೆಗ ಳನ್ನು ನಿವಾರಿಸಿರುವ ರೀತಿ ಅನನ್ಯ. ಒಂದರ್ಧ ಶತಮಾನ ಪೂರ್ತಿ ಕರ್ನಾಟಕದ ಎಲ್ಲ ಕ್ಷೇತ್ರದ ಬದುಕಿನ ಮೇಲೆ ಕುವೆಂಪು ಅವರ ವಿದ್ಯುತ್ ಪರಿಣಾಮ ಆಗಿದೆ ಎಂಬ 'ಚಂಪಾ' ಅವರ ಮಾತು ಯಥಾರ್ಥ. ಕುವೆಂಪುಯುಗದ ವಿಮರ್ಶಾಲೇಖನಗಳ ಹೆಚ್ಚುಗಾರಿಕೆಯೆಂದರೆ ಇಲ್ಲಿ ವ್ಯಕ್ತವಾ ಗುವ ಲೇಖಕರ ಸಮಾಜೊ–ಆರ್ಥಿಕ, ಸಾಹಿತ್ಯರಾಜ ಕಾರಣ ಹಾಗೂ ಧಾರ್ಮಿಕ ದೃಷ್ಟಿ ಇವುಗಳನ್ನು ಪರಿಶೀಲಿ ಸಿದರೆ ಕುವೆಂಪು ಯಾರ ಪರ ಇದ್ದರು ಎಂಬುದನ್ನು ನಿಚ್ಚಳವಾಗಿ ಪ್ರತಿಪಾದಿಸುವಂತಿವೆ. ಆ ಕವಿಯ ಧಾತು– ಧಾಷ್ಟ್ಯಗಳು, ಒಲುಮೆ–ಬಲ್ಮೆ ಯಾವ ಮಟ್ಟದ್ದಾಗಿದೆ ಎಂಬುದನ್ನು ಭಗವಾನರ ಒಳ ನೋಟದ ವಿಮರ್ಶೆ ಸಾಮಾಜಿಕ ಬದ್ಧತೆಯ ಆಯಾಮದಲ್ಲಿ ಮೌಲ್ಯ ಮಾಪನ ಮಾಡುತ್ತಿರುವುದು ಸ್ವಾಗತಾರ್ಹ ನಿಲುವು. ಈ ಹೊಸ ಕೀಲಿಕೈ ಹಿಡಿದು ಕುವೆಂಪು ಕೃತಿ ರಾಶಿಯನ್ನು ಪ್ರವೇಶಿ ಸಲು ಓದುಗನಿಗೆ ಅನುಕೂಲವಾಗಿದೆ. ಈ ಹಿಂದೆ ಕೆಲವು ತೋಮು ವಿಮರ್ಶಕರು ಈ ಕಾಡುಕವಿಯ ವರ್ಚಸ್ಸಿಗೆ ಮಸುಕು ಕವಿಯುವಂತೆ ಮಾತಾಡಿದ್ದುಂಟು. ಆದರೆ ಕುವೆಂಪುಯುಗದ ಲೇಖನಗಳು ಅದನ್ನು ತೆಗೆದು ನೇರ್ಪ ಡಿಸಿವೆ. ಆ ಕೆಲಸವನ್ನು ಪ್ರೊ॥ ಭಗವಾನರು ಅತ್ಯಂತ ಪ್ರೀತಿಯಿಂದ, ಶ್ರದ್ಧಾಸಕ್ತಿಯಿಂದ, ಅಭಿಮಾನದಿಂದ, ಅತ್ಯು ಕ್ತಿಗೆ ಎಡೆಕೊಡದೆ, ಸಮಚಿತ್ತತೆಯಿಂದ ನಿರ್ವಹಿಸಿದ್ದಾರೆ. ಆದ ಪ್ರಯುಕ್ತವೇ ಸ್ವತಃ ಕುವೆಂಪು ಇವರ ವಿಮ ರ್ಶೆಯನ್ನು ನೋಡಿ 'ನನಗೆ ತುಂಬ ಸಂತೋಷವಾಗಿದೆ. ನನ್ನ ಸಾಹಿತ್ಯ ಕುರಿತು ಯಾರೂ ಇಷ್ಟು ಚೆನ್ನಾಗಿ ಬರೆದಿ ರಲಿಲ್ಲ' ಎಂದು ಪ್ರಶಂಸಿದ್ದಾರೆ. (ಮುಮ್ಮಾತು) ಒಬ್ಬ ಸಹೃ ದಯಿ ವಿಮರ್ಶಕನಿಗೆ ಇದಕ್ಕಿಂತ ಬೇರೆ ಧನ್ಯತೆ ಯಾವು ದಿದೆ? □

ರಾಜಕೀಯ ಪ್ರಾತಿನಿಧ್ಯತೆ ಮತ್ತು ಮಹಿಳಾ ಸಬಲೀಕರಣ

ಡಾ॥ ಅನಂತ ಎಸ್.

ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ರಾಜಕೀಯ ಸಬಲೀಕರಣಕ್ಕೆ ನೆರವಾದ ಒಂದು ಪ್ರಮುಖ ಘಟ್ಟವೆಂದರೆ ಮಹಿಳೆಯರಿಗೆ ಮತದಾನದ ಹಕ್ಕನ್ನು ವಿಶ್ವದ ಬಹುತೇಕ ರಾಷ್ಟ್ರಗಳು ಹಂತಹಂತವಾಗಿ ನೀಡುತ್ತಾ ಬಂದಿದ್ದು ಎಂದು ಹೇಳಬಹುದಾಗಿದೆ. ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡುವಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳು ಏಕ ರೀತಿಯ ಅಭಿಪ್ರಾಯವನ್ನು ಹೊಂದಿರಲಿಲ್ಲ. ಇದಕ್ಕೆ ಸಂಬಂಧಿಸಿದಂತೆ ಪಶ್ಚಿಮ ಯುರೋಪ್ ಮತ್ತು ಉತ್ತರ ಅಮೆರಿಕಾ ರಾಷ್ಟ್ರಗಳಲ್ಲಿ ಲಿಂಗ ಸಮಾನತೆ ಮೊದಲು ಪ್ರಾರಂಭಗೊಂಡಿತು. ಇಲ್ಲಿ ಮಹಿಳೆಯರ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಮಹತ್ವದ ಶಾಸನಗಳ ರಚನೆಯಾಯಿತು. ಆದರೆ ೧೮ನೇ ಶತಮಾನದಲ್ಲಿ ಜಾರಿಗೆ ತರಲಾದ ಎಲ್ಲಾ ಶಾಸನಗಳೂ ಮಹಿಳೆಯರಿಗೆ ಮತಾಧಿಕಾರ ನೀಡುವುದರಿಂದ ಹೊರತಾಗಿದ್ದವು. ಆದರೆ ೧೮೯೩ರಲ್ಲಿ ಮೊದಲ ಬಾರಿಗೆ ನ್ಯೂಜಿಲ್ಯಾಂಡ್‌ನಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನು ಒದಗಿಸಲಾಯಿತು.

ಮಹಿಳಾ ಸಬಲೀಕರಣ ಎಂಬ ವಿಷಯವನ್ನು ಕುರಿತು ಚರ್ಚಿಸುವಾಗ ಮಹಿಳಾ ಸಬಲೀಕರಣ ಎಂದರೇನು ಎಂಬುದನ್ನು ತಿಳಿಯುವುದು ಸೂಕ್ತ. ಮಹಿಳಾ ಸಬಲೀಕರಣವೆಂದರೆ ಆರ್ಥಿಕ ಸಬಲೀಕರಣವೇ? ರಾಜಕೀಯ ಸಬಲೀಕರಣವೇ? ಸಾಮಾಜಿಕ ಸಬಲೀಕರಣವೇ? ಶೈಕ್ಷಣಿಕ ಸಬಲೀಕರಣವೇ? ಅಥವಾ ಸಾಂಸ್ಕೃತಿಕ ಸಬಲೀಕರಣವೇ ಎಂಬ ಪ್ರಶ್ನೆ ಎದುರಾಗುತ್ತದೆ. ಸಬಲೀಕರಣವೆಂದರೆ ಈ ಮೇಲೆ ಎತ್ತಿರುವ ಯಾವುದೇ ಒಂದು ರೀತಿಯ ಸಬಲೀಕರಣವನ್ನು ಸಬಲೀಕರಣ ಎಂದು ಹೇಳಲು ಸಾಧ್ಯವಿಲ್ಲ. ಸಬಲೀಕರಣ ಎಂದು ಹೇಳಬೇಕಾದ ಮೇಲೆ ಪ್ರಸ್ತಾಪಿಸಿರುವ ಎಲ್ಲಾ ರೀತಿಯ ಅಂಶಗಳು ಕ್ರೋಢೀಕೃತಗೊಂಡಾಗ ಮಾತ್ರ ಪರಿಪೂರ್ಣ ಮಹಿಳಾ ಸಬಲೀಕರಣವನ್ನು ಸಾಧಿಸಲು ಸಾಧ್ಯ. ಈ ಹಿನ್ನೆಲೆಯಲ್ಲಿ ಮಹಿಳೆಯರನ್ನು ಸಬಲೀಕರಣಗೊಳಿಸುವಲ್ಲಿ ರಾಜಕೀಯ ಪ್ರಾತಿನಿಧ್ಯತೆಯು ಯಾವ ರೀತಿ ಸಹಕಾರಿಯಾಗಿದೆ ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಇಂದು ಜಗತ್ತಿನ ಬಹುತೇಕ ರಾಷ್ಟ್ರಗಳು ಪ್ರಜಾಪ್ರಭುತ್ವ ರಾಷ್ಟ್ರಗಳಾಗಿವೆ. ಪ್ರತಿಯೊಂದು ರಾಷ್ಟ್ರಗಳಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗಿದೆ. ಈ ಪ್ರಾಶಸ್ತ್ಯವನ್ನು ಕೇವಲ ಪುರುಷ ಸಮುದಾಯಕ್ಕೆ ಮಾತ್ರ ನೀಡದೆ ಮಹಿಳಾ ಸಮುದಾಯಕ್ಕೂ ನೀಡುತ್ತಾ ಬರಲಾಗಿದ್ದು, ಕಾಲದಿಂದ ಕಾಲಕ್ಕೆ ಯಾವ ರೀತಿ ನೀಡುತ್ತಾ ಬರಲಾಗಿದೆ ಎಂಬುದನ್ನು ಕೂಡ ಸೂಕ್ಷ್ಮವಾಗಿ ವಿಶ್ಲೇಷಿಸುವ ಉದ್ದೇಶ ಹೊಂದಲಾಗಿದೆ.

ಸಮಾಜದಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಅರಿಯಬೇಕಾದರೆ ಅವರ ರಾಜಕೀಯ ಸ್ಥಾನಮಾನವನ್ನು ಅವಲೋಕಿಸಬೇಕಾಗುತ್ತದೆ. ಏಕೆಂದರೆ ರಾಜಕೀಯ ಸ್ಥಾನಮಾನ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನದೊಂದಿಗೆ ಆಂತರಿಕ ಸಂಬಂಧ ಹೊಂದಿರುತ್ತದೆ. ಇದಲ್ಲದೆ ರಾಜಕೀಯ ಅಧಿಕಾರವು ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಾನಮಾನವನ್ನು ಬದಲಾಯಿಸುವ ಸಾಮರ್ಥ್ಯವನ್ನು ಪಡೆದಿರುತ್ತದೆ. ಆದ್ದರಿಂದ ಮಹಿಳೆಯರು ಸಬಲೀಕರಣಗೊಳ್ಳಬೇಕಾದರೆ ಮೊದಲು ಅವರು ರಾಜಕೀಯ ಕ್ಷೇತ್ರದಲ್ಲಿ ಪ್ರಬುದ್ಧತೆ ಸಾಧಿಸಬೇಕಾದ ಅಗತ್ಯತೆ ಇದೆ ಎಂಬುದನ್ನು ಇಂದು ವಿಶ್ವದಾದ್ಯಂತ ಸಾರ್ವತ್ರಿಕವಾಗಿ ಒಪ್ಪಲಾಗುತ್ತಿದೆ. ಈ ರೀತಿಯ ಸಾರ್ವತ್ರಿಕ ನಿಲುವಿಗೆ ಕಾರಣವೇನು ಎಂಬುದನ್ನು ಅವಲೋಕಿಸಿದಾಗ ೧೯೬೮ರ ಕೈಗಾರಿಕಾ ಕ್ರಾಂತಿ ಸಂಭವಿಸುವ ಮೊದಲು ವಿಶ್ವದಾದ್ಯಂತ ಮಹಿಳೆಯರ ಸ್ಥಾನ ಸರಿಸುಮಾರು ಏಕ ರೀತಿಯಲ್ಲಿಯೇ ಇತ್ತು. ಅಂದರೆ ಯಾವುದೇ ರಾಷ್ಟ್ರದಲ್ಲಿಯೂ ಕೂಡ ಮಹಿಳೆಯರಿಗೆ ನಿರೀಕ್ಷಿತ ಪ್ರಮಾಣದಲ್ಲಿ ಸ್ವಾತಂತ್ರ್ಯವನ್ನು ನೀಡಿರಲಿಲ್ಲ. ಇದಕೆ ಪೂರಕವೆಂಬಂತೆ ಪ್ಲೇಟೋ ತನ್ನ ರಿಪಬ್ಲಿಕ್ ಗ್ರಂಥದಲ್ಲಿ ಗ್ರೀಕ್ ರಾಜ್ಯದಲ್ಲಿ ಮಹಿಳೆಯರು ಪುರುಷರಿಗೆ ಅಧೀನರಾಗಿದ್ದರು ಎಂಬುದಾಗಿ ಉಲ್ಲೇಖಿಸುತ್ತಾರೆ. ಆದರೆ ಊಳಿಗಮಾನ್ಯ ಸಮಾಜದಲ್ಲಿ ಅಂದರೆ ಯುರೋಪಿಯನ್ ಸಮಾಜಗಳಲ್ಲಿ ಸ್ವಲ್ಪ ಮಟ್ಟಿಗೆ ಮಹಿಳೆಯರ ಸ್ಥಿತಿಗತಿ ಉತ್ತಮವಾಗಿತ್ತು. ಆದರೆ ಅವರ ಆರ್ಥಿಕ ಸ್ಥಾನಮಾನವು ನಿಕೃಷ್ಟವಾಗಿತ್ತು. ಯಾವುದೇ ರೀತಿಯ ಪಾಲುದಾರಿಕೆ ಹಾಗೂ ಆರ್ಥಿಕ ವಿಚಾರಗಳಲ್ಲಿ ಮತ್ತು ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವಿಕೆಯ ಅವಕಾಶ ಮಾತ್ರ ಮಹಿಳೆಯರಿಗೆ ಇರಲಿಲ್ಲ. ಚೈನಾ, ಭಾರತ, ರೋಮ್, ನಾಗರಿಕತೆಗಳಲ್ಲಿ ಮತ್ತು ಪಶ್ಚಿಮ ಯುರೋಪಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಪುನರುಜ್ಜೀವನ ಉಂಟಾದ ಕಾರಣ ಮಹಿಳೆಯರ ಗುಂಪುಗಳು ಪ್ರವರ್ಧಮಾನಕ್ಕೆ ಬರಲು ಪ್ರಾರಂಭಗೊಂಡವು. ಈ ರೀತಿಯ ಪ್ರವರ್ಧಮಾನವನ್ನು ೧೯ನೇ ಶತಮಾನದ ನಂತರದಲ್ಲಿ ಮಾತ್ರ ಗುರುತಿಸಬಹುದಾಗಿದೆ. ಇದನ್ನು ಪ್ರಮುಖವಾಗಿ ಶಿಕ್ಷಣದಲ್ಲಿ ಸಮಾನತೆ, ಆಸ್ತಿಯ ಹಕ್ಕು, ಉದ್ಯೋಗ ಸ್ವಾತಂತ್ರ್ಯ, ಇತ್ಯಾದಿ ಕ್ಷೇತ್ರಗಳಲ್ಲಿ ನಿಧಾನವಾಗಿ ಬದಲಾವಣೆಗಳು ಆಗಿರುವುದರಿಂದಾಗಿ ೧೯ನೇ ಶತಮಾನದಲ್ಲಿ ಮಹಿಳಾ ಸಬಲೀಕರಣ ಪ್ರಕ್ರಿಯೆಗೆ ನಿಖರವಾದ ಚಾಲನೆ ದೊರೆತಂತಾಯಿತು.

ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ರಾಜಕೀಯ ಸಬಲೀಕರಣಕ್ಕೆ ನೆರವಾದ ಒಂದು ಪ್ರಮುಖ ಘಟ್ಟವೆಂದರೆ ಮಹಿಳೆಯರಿಗೆ ಮತದಾನದ ಹಕ್ಕನ್ನು ವಿಶ್ವದ ಬಹುತೇಕ ರಾಷ್ಟ್ರಗಳು ಹಂತಹಂತವಾಗಿ ನೀಡುತ್ತಾ ಬಂದಿದ್ದು ಎಂದು ಹೇಳಬಹುದಾಗಿದೆ. ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡುವಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳು ಏಕ ರೀತಿಯ ಅಭಿಪ್ರಾಯವನ್ನು ಹೊಂದಿರಲಿಲ್ಲ. ಇದಕ್ಕೆ ಸಂಬಂಧಿಸಿದಂತೆ ಪಶ್ಚಿಮ ಯುರೋಪ್ ಮತ್ತು ಉತ್ತರ ಅಮೆರಿಕಾ ರಾಷ್ಟ್ರಗಳಲ್ಲಿ ಲಿಂಗ ಸಮಾನತೆ ಮೊದಲು ಪ್ರಾರಂಭಗೊಂಡಿತು. ಇಲ್ಲಿ ಮಹಿಳೆಯರ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಮಹತ್ವದ ಶಾಸನಗಳ ರಚನೆಯಾಯಿತು. ಆದರೆ ೧೮ನೇ ಶತಮಾನದಲ್ಲಿ ಜಾರಿಗೆ ತರಲಾದ ಎಲ್ಲಾ ಶಾಸನಗಳೂ ಮಹಿಳೆಯರಿಗೆ ಮತಾಧಿಕಾರ ನೀಡುವುದರಿಂದ ಹೊರತಾಗಿದ್ದವು. ಆದರೆ ೧೮೯೩ರಲ್ಲಿ ಮೊದಲ ಬಾರಿಗೆ ನ್ಯೂಜಿಲ್ಯಾಂಡಿನಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನು ಒದಗಿಸಲಾ

ಯಿತು. ಆ ನಂತರದಲ್ಲಿ ೧೯೦೮ರಲ್ಲಿ ಆಸ್ಟ್ರೇಲಿಯಾ, ಕೆನಡಾಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಲಾಯಿತು. ೧೯೧೩ರಲ್ಲಿ ನಾರ್ವೆ, ೧೯೧೫ರಲ್ಲಿ ಸ್ವ್ಯಾನಿಷ್, ೧೯೨೩ರಲ್ಲಿ ಅಮೆರಿಕಾ, ೧೯೬೦ರ ನಂತರ ಮಧ್ಯ ಏಷ್ಯಾ, ಜೋರ್ಡಾನ್, ಕುವೈತ್, ಸೌದಿ ಅರೇಬಿಯಾ ಮತ್ತು ೧೯೭೧ರಲ್ಲಿ ಸ್ವಿಡ್ಜರ್‌ಲ್ಯಾಂಡ್ ರಾಷ್ಟ್ರಗಳು ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿದವು. ಇದಕ್ಕೆ ಪೂರಕವೆಂಬಂತೆ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಚೀನಾ, ಭಾರತದಂತಹ ರಾಷ್ಟ್ರಗಳಲ್ಲಿ ಮಹಿಳೆಯರ ಸ್ಥಿತಿಗತಿ ಅತ್ಯಂತ ಕೆಳಸ್ಥರದಲ್ಲಿತ್ತು. ಆದರೆ ಬರ್ಮಾ ಮತ್ತು ಥೈಲ್ಯಾಂಡ್ ರಾಷ್ಟ್ರದ ಮಹಿಳೆಯರು ಈ ರಾಷ್ಟ್ರದ ಮಹಿಳೆಯರಿಗಿಂತ ಅಧಿಕ ಸ್ವಾತಂತ್ರ್ಯ ಹೊಂದಿದ್ದರು. ಏಕೆಂದರೆ ಥೈಲ್ಯಾಂಡ್ ಮಹಿಳೆಯು ೧೯೩೨ರಲ್ಲಿ ಬರ್ಮಾದ ಮಹಿಳೆಯು ೧೯೩೫ರಲ್ಲಿ ಮತಾಧಿಕಾರವನ್ನು ಪಡೆದು ನಂತರ ೧೯೪೭ರಲ್ಲಿ, ಚೀನಾ ಮತ್ತು ಜಪಾನ್ ಮಹಿಳೆಯು ೧೯೬೦ರಲ್ಲಿ ಶ್ರೀಲಂಕಾ ಮತ್ತು ಆಫ್ರಿಕಾಗಳಲ್ಲಿನ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಲಾಯಿತು. ಆದರೆ ದಕ್ಷಿಣ ಆಫ್ರಿಕಾದಲ್ಲಿ ಮಾತ್ರ ಕರಿಯರಿಗೆ ೧೯೯೪ರ ನಂತರದಲ್ಲಿ ಮತದಾನದ ಹಕ್ಕನ್ನು ನೀಡಲಾಯಿತು.

ಮಹಿಳಾ ರಾಜಕೀಯ ಮತಾಧಿಕಾರಕ್ಕೆ ಸಂಬಂಧಿಸಿದಂತೆ ಭಾರತದಲ್ಲಿನ ಮಹಿಳೆಯರ ಸ್ಥಾನಮಾನದ ಬಗ್ಗೆ ಅವಲೋಕಿಸಿದಾಗ ೧೭ ಮತ್ತು ೧೮ನೇ ಶತಮಾನದ ಅವಧಿಯಲ್ಲಿ ಭಾರತದಲ್ಲಿ ನಡೆದ ಜ್ಞಾನ ಪುನರುಜ್ಜೀವನ ಚಳವಳಿ ಮತ್ತು ವಸಾಹತುಶಾಹಿ ಆಡಳಿತವು ಭಾರತದಲ್ಲಿನ ಸ್ತ್ರೀಯರ ಸ್ಥಾನಮಾನವನ್ನು ಸುಧಾರಿಸುವಲ್ಲಿ ನೆರವಾಯಿತು. ಇದಕ್ಕೆ ಪೂರಕವೆಂಬಂತೆ ೧೯ನೇ ಶತಮಾನದ ಆರಂಭದಲ್ಲಿಯೇ ಪ್ರಾರಂಭಗೊಂಡ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಮಹಿಳೆಯರ ಭಾಗವಹಿಸುವಿಕೆ ಇದ್ದು ೧೯೧೭ರಲ್ಲಿ ಶ್ರೀಮತಿ ಅನಿಬೆಸೆಂಟ್ ಅವರು ಕಾಂಗ್ರೆಸ್‌ನ ಮಹಿಳಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಉಲ್ಲೇಖಗಳು ಇವೆ. ಮಹಿಳೆಯರಿಗೆ ೧೯೨೧ರಲ್ಲಿ ಮೊದಲ ಬಾರಿಗೆ ಮದ್ರಾಸ್ ಪ್ರಾಂತ್ಯ ಸರ್ಕಾರ ಮತಾಧಿಕಾರವನ್ನು ನೀಡಿತು. ಆ ನಂತರದಲ್ಲಿ ೧೯೩೫ರ ಭಾರತ ಸರ್ಕಾರ ಕಾಯಿದೆಯು ಮಹಿಳಾ ಮತಾಧಿಕಾರವನ್ನು ರಾಷ್ಟ್ರಾದ್ಯಂತ ವಿಸ್ತರಿಸಿತು. ಆದರೆ ೧೯೫೦ರಲ್ಲಿ ಸ್ವತಂತ್ರ ಭಾರತ ಸಂವಿಧಾನ ಅಸ್ತಿತ್ವಕ್ಕೆ ಬಂದ ನಂತರ ೨೧ ವರ್ಷ ವಯೋಮಿತಿ ಹೊಂದಿದ ಎಲ್ಲಾ ಸ್ತ್ರೀಯರಿಗೆ ಮತದಾನದ ಹಕ್ಕನ್ನು ನೀಡಿತು. ಆದರೆ ಈ ವಯೋಮಿತಿಯನ್ನು ಈಗ ೧೮ ವರ್ಷಕ್ಕೆ ಇಳಿಸಲಾಗಿದೆ. ಭಾರತದಲ್ಲಿ ಮಹಿಳೆಯರಿಗೆ ಈ ರೀತಿಯ ಉದಾರವಾದಿ ರಾಜಕೀಯ ಅವಕಾಶಗಳನ್ನು ದೊರಕಿಸಿಕೊಡುವಲ್ಲಿ ಗಾಂಧಿಯವರ ಚಿಂತನೆಗಳ ಪ್ರಭಾವವೇ ಪ್ರಮುಖ ಕಾರಣ ಎಂದು ವಿಶ್ಲೇಷಿಸುವವರೂ ಇದ್ದಾರೆ.

ಮಹಿಳಾ ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮತ್ತು ಅಂತಾರರಾಷ್ಟ್ರೀಯ ಮಟ್ಟದಲ್ಲಿ ಪ್ರಯತ್ನವನ್ನು ನಡೆಸಲಾಯಿತು. ಹಾಗೂ ಸಂಘಟನಾತ್ಮಕ ಹೋರಾಟಗಳನ್ನು ನಡೆಸಲಾಯಿತು ಎಂಬುದನ್ನು ಅವಲೋಕಿಸಿದಾಗ ಒಂದನೇ ಪ್ರಪಂಚದ ಮಹಾಯುದ್ಧಕ್ಕೆ ಮುನ್ನ ಯಾವುದೇ ಒಂದು ಅಂತಾರರಾಷ್ಟ್ರೀಯ ಸಂಘಟನೆಗಳಿಂದ ಮಹಿಳಾ ಸಬಲೀಕರಣದ ಬಗ್ಗೆ ಕಾರ್ಯ ಪ್ರವೃತ್ತಿಯಾಗಲಿಲ್ಲ. ಆದರೆ ಎರಡನೇ ಪ್ರಪಂಚದ ಮಹಾಯುದ್ಧದ ನಂತರ ಸ್ಥಾಪನೆಗೊಂಡ ವಿಶ್ವ ಸಂಸ್ಥೆಯ ನಾಯಕತ್ವವನ್ನು ಮಾನವ ಹಕ್ಕುಗಳನ್ನು ರಕ್ಷಣೆ ಮಾಡುವ ಮೂಲ ಉದ್ದೇಶದೊಂದಿಗೆ ಮಹಿಳಾ ಹಕ್ಕುಗಳನ್ನು ರಕ್ಷಣೆಗೆ ಮೊದಲ ಆದ್ಯತೆ ದೊರಕಿತು. ಇದು ಯಾವ ಮಟ್ಟದ ಆದ್ಯತೆಯಾಗಿತ್ತೆಂದು ವಿಶ್ವ ಸಂಸ್ಥೆ ಮಾನವ ಹಕ್ಕುಗಳ ಆಯೋಗದ ರೀತಿಯಲ್ಲಿಯೇ ಮಹಿಳೆಯರ ಸ್ಥಾನಮಾನದ ಬಗ್ಗೆ ಒಂದು ಮಹಿಳಾ ಆಯೋಗವನ್ನು ರಚಿಸಿತು. ಇದು ೧೯೪೬ರ ನಂತರ ವಿಶ್ವ ಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯ ಶಾಶ್ವತ ಅಂಗ ಸಂಸ್ಥೆಯಾಗಿ ರೂಪುಗೊಂಡಿತು.

ವಿಶ್ವ ಸಂಸ್ಥೆಯ ಸ್ಥಾಪನೆಯೊಂದಿಗೆ ಮಹಿಳಾ ಹಕ್ಕುಗಳ ರಕ್ಷಣೆಗೆ ಒಂದು ರೀತಿಯ ವಿಧ್ಯುಕ್ತ ಚಾಲನೆ ದೊರೆಯಿತು. ವಿಶ್ವಸಂಸ್ಥೆ ಸ್ಥಾಪನೆಗೊಂಡ ಸಂದರ್ಭದಲ್ಲಿ ಇದ್ದ ೫೧ ಸದಸ್ಯ ರಾಷ್ಟ್ರಗಳಲ್ಲಿ ಹೆಚ್ಚಿನ ರಾಷ್ಟ್ರಗಳು ಮಹಿಳೆಯರಿಗೆ ಮತಾಧಿಕಾರವನ್ನು ನೀಡಿದ್ದವು. ಇದಲ್ಲದೆ ವಿಶ್ವ ಸಂಸ್ಥೆಯು ೧೯೫೨ರಲ್ಲಿ ಮಹಿಳೆಯರ ರಾಜಕೀಯ ಹಕ್ಕುಗಳ ನಡಾವಳಿಯನ್ನು ಸಾಮಾನ್ಯ ಸಭೆಯಲ್ಲಿ ಅನುಮೋದಿಸಿತು. ಈ ನಡಾವಳಿಯ ಪ್ರಕಾರ ಮಹಿಳೆಯರು ರಾಷ್ಟ್ರೀಯ ಕಾನೂನಿನ ಮೂಲಕ ಸ್ಥಾಪಿತವಾಗುವ ಎಲ್ಲಾ ಸಾರ್ವಜನಿಕ ಹುದ್ದೆಗಳನ್ನು ಪುರುಷರಿಗೆ ಸರಿಸಮಾನವಾಗಿ ಹೊಂದಿರುವ ಮತ್ತು ಎಲ್ಲ ರೀತಿಯ ಸಾರ್ವಜನಿಕ ಕಾರ್ಯಗಳನ್ನು ನಿರ್ವಹಿಸುವ ಹಕ್ಕನ್ನು ನೀಡಲಾಯಿತು. ಇದು ವಿಶ್ವವ್ಯಾಪಿಯಾಗಿ ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸುವ ಗುರಿ ಹೊಂದಿದ ಮೊದಲ ಅಂತಾರರಾಷ್ಟ್ರೀಯ ಕಾನೂನು ಪ್ರಯತ್ನವಾಗಿ ರೂಪುಗೊಂಡಿತು. ನಂತರ ವಿಶ್ವಸಂಸ್ಥೆ ೧೯೭೫ನೇ ವರ್ಷವನ್ನು ಅಂತಾರರಾಷ್ಟ್ರೀಯ ಮಹಿಳಾ ವರ್ಷ ಎಂದು ಘೋಷಿಸಿತು. ನಂತರ ೧೯೭೫ ರಿಂದ ೧೯೮೫ರ ದಶಕವನ್ನು ವಿಶ್ವ ಸಂಸ್ಥೆಯ ಸದಸ್ಯ ರಾಷ್ಟ್ರಗಳು ಮಹಿಳೆಯರ ಅಭಿವೃದ್ಧಿ ದಶಕ ಎಂದು ಘೋಷಿಸಿದವು. ಈ ಕಾಲಾವಧಿಯಲ್ಲಿ ಎಲ್ಲಾ ಸದಸ್ಯ ರಾಷ್ಟ್ರಗಳು ಮಹಿಳೆಯರ ಸಮಸ್ಯೆಗಳನ್ನು ಗುರುತಿಸಿ ಅವರ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಒದಗಿಸುವ ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸುವ

ಕೋಷ್ಟಕ ೧

ಶಾಸಕಾಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯತೆ

ರಾಷ್ಟ್ರ	ಮಹಿಳೆಯರು	ಶೇಕಡಾವಾರು
ಸ್ವೀಡನ್	158	45.3
ಡೆನ್ಮಾರ್ಕ್	64	37.9
ಫಿನ್‌ಲ್ಯಾಂಡ್	75	37.5
ನಾರ್ವೆ	64	37.9
ನೆದರ್‌ಲ್ಯಾಂಡ್	55	36.7
ಐಸ್ ಲ್ಯಾಂಡ್	21	33.3
ಜರ್ಮನಿ	195	31.8
ನ್ಯೂಜಲ್ಯಾಂಡ್	39	32.2
ಇಂಗ್ಲೆಂಡ್	118	17.9
ಭಾರತ	44	8.2

ಮೂಲ: Inter Parliamentary Union, 2005

ನಿರ್ಣಯವನ್ನು ಕೈಗೊಂಡವು. ಈ ರೀತಿಯಲ್ಲಿ ವಿಶ್ವ ಸಂಸ್ಥೆಯ ನೆವಿನೊಂದಿಗೆ ಅಂತಾರರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವಾರು ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಎಲ್ಲಾ ಅಭಿವೃದ್ಧಿ ಪ್ರಕ್ರಿಯೆಗಳು ಅಂದರೆ ರಾಷ್ಟ್ರವಾರು ಮತ್ತು ಅಂತಾರರಾಷ್ಟ್ರೀಯವಾರು ಕೈಗೊಂಡಿರುವ ಪ್ರಯತ್ನಗಳು ಮಹಿಳೆಯರ ರಾಜಕೀಯ ಪ್ರಾತಿನಿಧ್ಯತೆ ಮತ್ತು ಅವರ ಮೂಲಕ ಅವರುಗಳ ಸಬಲೀಕರಣದ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರಿವೆ ಎಂಬುದನ್ನು ವಿಶ್ಲೇಷಿಸುವ ಅಗತ್ಯತೆ ಇದ್ದು ಅದನ್ನು ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಅಂತಾರರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರ ರಾಜಕೀಯ ಪ್ರಾತಿನಿಧ್ಯತೆಯು ಹೇಗೆ ಇದೆ ಎಂಬುದನ್ನು ಆಯಾ ರಾಷ್ಟ್ರಗಳ ಶಾಸಕಾಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯತೆ ಯಾವ ಪ್ರಮಾಣದಲ್ಲಿದೆ ಎಂಬುದನ್ನು ವಿಶ್ಲೇಷಿಸುವ ಮೂಲಕ ತಿಳಿಯಬಹುದಾಗಿದೆ. ಈ ಮೂಲಕ ಮಹಿಳಾ ರಾಜಕೀಯ ಸಬಲೀಕರಣದ ಮಟ್ಟವನ್ನು ಗುರುತಿಸಬಹುದಾಗಿದೆ. ಇದಕ್ಕೆ ಸಂಬಂಧಿಸಿದಂತೆ ವಿಶ್ವದ ಆಯ್ದ ಕೆಲವು ರಾಷ್ಟ್ರಗಳ ಶಾಸಕಾಂಗದಲ್ಲಿ ಮಹಿಳಾ ಪ್ರಾತಿನಿಧ್ಯತೆಯನ್ನು ಈ ಕೆಳಗಿನ ಕೋಷ್ಟಕದ ಸಹಾಯದಿಂದ ತಿಳಿಯಬಹುದಾಗಿದೆ.

ಕೋಷ್ಟಕ–೧ ಶಾಸಕಾಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯತೆ

ಈ ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ಇಡೀ ವಿಶ್ವದಲ್ಲಿಯೇ ಹೆಚ್ಚು ಅಂದರೆ ಶೇ. ೪೫.೩ರಷ್ಟು ಮಹಿಳಾ ಪ್ರಾತಿನಿಧ್ಯತೆ ಸ್ವೀಡನ್ನಿನಲ್ಲಿ ಇದ್ದರೆ ಉಳಿದಂತೆ

೧೮ನೇ ಶತಮಾನದ ಅವಧಿಯಲ್ಲಿ ಭಾರತದಲ್ಲಿ ನಡೆದ ಜ್ಞಾನ ಪುನರುಜ್ಜೀವನ ಚಳವಳಿ ಮತ್ತು ವಸಾಹತುಶಾಹಿ ಆಡಳಿತವು ಭಾರತದಲ್ಲಿನ ಸ್ತ್ರೀಯರ ಸ್ಥಾನ ಮಾನವನ್ನು ಸುದಾರಿಸುವಲ್ಲಿ ನೆರವಾಯಿತು. ಇದಕ್ಕೆ ಪೂರಕವೆಂಬಂತೆ ೧೯ನೇ ಶತಮಾನದ ಆರಂಭದಲ್ಲಿಯೇ ಪ್ರಾರಂಭಗೊಂಡ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಮಹಿಳೆಯರ ಭಾಗವಹಿಸುವಿಕೆ ಇದ್ದು ೧೯೧೭ರಲ್ಲಿ ಶ್ರೀಮತಿ ಅನಿಬೆಸೆಂಟ್ ಅವರು ಕಾಂಗ್ರೆಸ್‌ನ ಮಹಿಳಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಉಲ್ಲೇಖಗಳು ಇವೆ. ಮಹಿಳೆಯರಿಗೆ ೧೯೨೧ರಲ್ಲಿ ಮೊದಲ ಬಾರಿಗೆ ಮದ್ರಾಸ್ ಪ್ರಾಂತ್ಯ ಸರ್ಕಾರ ಮತಾಧಿಕಾರವನ್ನು ನೀಡಿತು. ಆ ನಂತರದಲ್ಲಿ ೧೯೩೫ರ ಭಾರತ ಸರ್ಕಾರ ಕಾಯಿದೆಯು ಮಹಿಳಾ ಮತಾಧಿಕಾರವನ್ನು ರಾಷ್ಟ್ರಾದ್ಯಂತ ವಿಸ್ತರಿಸಿತು. ಆದರೆ ೧೯೫೦ರಲ್ಲಿ ಸ್ವತಂತ್ರ ಭಾರತ ಸಂವಿಧಾನ ಅಸ್ತಿತ್ವಕ್ಕೆ ಬಂದ ನಂತರ ೨೧ ವರ್ಷ ವಯೋಮಿತಿ ಹೊಂದಿದ ಎಲ್ಲಾ ಸ್ತ್ರೀಯರಿಗೆ ಮತದಾನದ ಹಕ್ಕನ್ನು ನೀಡಿತು. ಆದರೆ ಈ ವಯೋಮಿತಿಯನ್ನು ಈಗ ೧೮ ವರ್ಷಕ್ಕೆ ಇಳಿಸಲಾಗಿದೆ.

ಡೆನ್ಮಾರ್ಕ್‌ನಲ್ಲಿ ಶೇ. ೩೬.೯, ಫಿನ್‌ಲ್ಯಾಂಡ್‌ನಲ್ಲಿ ೩೬.೫, ನಾರ್ವೆಯಲ್ಲಿ ಶೇ. ೩೬.೪, ನೆದರ್‌ಲ್ಯಾಂಡ್ಸ್‌ನಲ್ಲಿ ೩೬.೭, ಐಸ್‌ಲ್ಯಾಂಡ್‌ನಲ್ಲಿ ಶೇ. ೩೩.೩, ಜರ್ಮನಿಯಲ್ಲಿ ಶೇ. ೩೧.೮, ನ್ಯೂಜಿಲ್ಯಾಂಡ್‌ನಲ್ಲಿ ಶೇ. ೨೨.೨, ಇಂಗ್ಲೆಂಡ್‌ನಲ್ಲಿ ಶೇ. ೧೭.೯, ಭಾರತದಲ್ಲಿ ಶೇ. ೮.೨ರಷ್ಟು ಪ್ರಾತಿನಿಧ್ಯತೆ ಇರುವುದು ಕಂಡುಬರುತ್ತದೆ. ಈ ಕೋಷ್ಟಕದಲ್ಲಿನ ಅಂಕಿ ಸಂಖ್ಯೆಗಳನ್ನು ಒಟ್ಟಾರೆಯಾಗಿ ಗಮನಿಸಿದಾಗ ವಿಶ್ವದ ವಿವಿಧ ರಾಷ್ಟ್ರಗಳ ಶಾಸಕಾಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯತೆಯ ಪ್ರಮಾ ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರದ ನಡುವೆ ಭಿನ್ನತೆಯಿಂದ ಕೂಡಿರುವುದು ತಿಳಿದುಬರುತ್ತದೆ. ಇದಲ್ಲದೆ ಯಾವುದೇ ಒಂದು ರಾಷ್ಟ್ರದಲ್ಲಿ ಮಹಿಳೆಯರ ಪ್ರಾತಿನಿಧ್ಯತೆ ಶೇ. ೫೦ಕ್ಕಿಂತ ಹೆಚ್ಚಾಗಿಲ್ಲದಿರುವುದನ್ನು ಗಮನಿಸಿದಾಗ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣದಲ್ಲಿ ಸುಧಾರಣೆಯಾಗಬೇಕಾದ ಅಗತ್ಯತೆ ಇರುವುದು ಕೂಡ ಕಂಡುಬರುತ್ತದೆ. ಅದರಲ್ಲಿಯೂ ಪ್ರಮುಖವಾಗಿ ಭಾರತದಂತಹ ರಾಷ್ಟ್ರಗಳಲ್ಲಿನ ಶಾಸಕಾಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯತೆ ಅತ್ಯಂತ ಕಡಿಮೆ ಇದ್ದು, ಈ ಪ್ರಮಾಣ ಕಾಲದಿಂದ ಕಾಲಕ್ಕೆ ಯಾವ ರೀತಿಯ ಬದಲಾವಣೆಗಳೊಂದಿಗೆ ಸಾಗುತ್ತಾ ಬಂದಿದೆ ಎಂಬುದನ್ನು ಈ ಕೆಳಗಿನ ಕೋಷ್ಟಕದ ಸಹಾಯದಿಂದ ತಿಳಿಯಬಹುದಾಗಿದೆ.

ಭಾರತದ ಸಂಸತ್ತಿನಲ್ಲಿ ಮಹಿಳಾ ಪ್ರತಿನಿಧಿಗಳ ಪ್ರಾತಿನಿಧ್ಯತೆಯ ಪ್ರಮಾಣ

ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ಸ್ವಾತಂತ್ರ್ಯಾ ನಂತರ ೧೯೫೨ರಿಂದ ೨೦೦೪ರವರೆಗೆ ನಡೆದ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರ ಆಯ್ಕೆಯ ಪ್ರಮಾಣ ಯಾವ ಮಟ್ಟದಲ್ಲಿದೆ ಎಂಬುದನ್ನು ತಿಳಿಯಬಹುದಾಗಿದೆ. ಮೊದಲನೆಯದಾಗಿ, ಲೋಕಸಭೆ ಮತ್ತು ರಾಜ್ಯ ಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯತೆಯನ್ನು ತುಲನಾತ್ಮಕವಾಗಿ ಅವಲೋಕಿಸಿದಾಗ ಪ್ರತಿ ಚುನಾವಣೆಯಲ್ಲಿಯೂ ಮಹಿಳೆಯರ ಪ್ರಾತಿನಿಧ್ಯತೆಯ ಪ್ರಮಾಣ ಲೋಕಸಭೆಗಿಂತ ರಾಜ್ಯ ಸಭೆಯಲ್ಲಿಯೇ ಹೆಚ್ಚಾಗಿರುವುದು ಕಂಡುಬರುತ್ತದೆ. ಇದರ ನಂತರ ಒಟ್ಟಾರೆ ಪ್ರಮಾಣವನ್ನು ಗಮನಿಸಿದಾಗ ಲೋಕಸಭೆಯಲ್ಲಿ ಇದುವರೆಗೆ ಮಹಿಳೆಯರ ಪ್ರಾತಿನಿಧ್ಯತೆ ಶೇ. ೯ಕ್ಕಿಂತ (೧೯೯೯) ಹೆಚ್ಚಾಗಿ ಇಲ್ಲದಿರುವುದು ಕಂಡುಬರುತ್ತದೆ. ಹಾಗೆಯೇ ರಾಜ್ಯಸಭೆಯಲ್ಲಿ ಇದುವರೆಗೆ ಶೇ. ೫೧.೫೧ (೧೯೯೧)ರ ಪ್ರಮಾಣವೇ ಗರಿಷ್ಠ ಪ್ರಮಾಣದ ಪ್ರಾತಿನಿಧ್ಯತೆಯಾಗಿದೆ.

ಕೋಷ್ಟಕ ೨

ಭಾರತದ ಸಂಸತ್ತಿನಲ್ಲಿ ಮಹಿಳಾ ಪ್ರತಿನಿಧಿಗಳ ಪ್ರಾತಿನಿಧ್ಯತೆಯ ಪ್ರಮಾಣ

ವರ್ಷ	ಲೋಕಸಭೆ			ರಾಜ್ಯಸಭೆ		
	ಸ್ಥಾನಗಳು	ಮಹಿಳೆಯರು	ಶೇಕಡಾವಾರು	ಸ್ಥಾನಗಳು	ಮಹಿಳೆಯರು	ಶೇಕಡಾವಾರು
1952	499	22	4.41	219	16	7.31
1957	500	27	5.40	237	18	7.59
1962	503	34	6.76	238	18	7.56
1967	523	31	5.93	240	20	8.33
1971	521	22	4.22	243	17	7.0
1977	544	19	3.49	244	25	10.25
1980	544	28	5.15	244	24	9.84
1984	544	44	8.09	244	28	11.48
1989	517	27	5.22	245	24	9.80
1991	544	39	7.17	245	38	15.51
1996	543	39	7.18	223	19	8.52
1998	543	43	7.92	245	15	6.12
1999	543	49	9.0	245	19	7.8
2004	539	44	8.2	245	28	11.4
ಸರಾಸರಿ	529	33	6.29	239	22	9.17

ಮೂಲ: Inter Parliamentary Union, 2005

ಭಾರತದಲ್ಲಿನ ಶಾಸಕಾಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯ ತೆಯ ಸ್ಥಾನಮಾನ ಅತ್ಯಂತ ಕೆಳಹಂತದಲ್ಲಿ ಇರುವುದು ಕಂಡುಬರುತ್ತದೆ. ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯತೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗಿರುವುದಕ್ಕೆ ಬದಲಾಗಿ ಹೆಚ್ಚಿನ ಏರು ಪೇರುಗಳಿಂದ ಕೂಡಿರುವುದು ಒಂದು ಗಮನಾರ್ಹವಾದ ಸಂಗತಿಯಾಗಿ ಕಂಡುಬರುತ್ತದೆ. ಮಹಿಳಾ ಪ್ರಾತಿನಿಧ್ಯತೆಯ ಸರಾಸರಿ ಪ್ರಮಾಣವನ್ನು ಅವಲೋಕಿಸಿದಾಗ ಲೋಕಸಭೆ ಯಲ್ಲಿ ಶೇ. ೬.೨೯ ಸರಾಸರಿ ಪ್ರಮಾಣವಿದ್ದರೆ ರಾಜ್ಯ ಸಭೆಯಲ್ಲಿ ಇದರ ಪ್ರಮಾಣ ಶೇ. ೯.೧೭ ರಷ್ಟಿದ್ದು ಕೊಂಚ ಹೆಚ್ಚಾಗಿರುವುದು ಕಂಡು ಬರುತ್ತದೆ. ಹೀಗೆ ಅಂತಾರ ರಾಷ್ಟ್ರೀಯ ಮಟ್ಟದಲ್ಲಿ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರ ರಾಜಕೀಯ ಪ್ರಾತಿನಿಧ್ಯತೆಯನ್ನು ಗಮನಿಸಿದಾಗ ಒಂದು ರೀತಿಯ ನಿರಾಶಾದಾಯಕ ಪರಿಸ್ಥಿತಿ ಕಂಡುಬರುತ್ತದೆ.

ಈ ಪ್ರಮಾಣದ ಪ್ರಾತಿನಿಧ್ಯತೆಯನ್ನು ಗಮನಿಸಿದಾಗ ಭಾರತದಲ್ಲಿನ ಶಾಸಕಾಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯತೆಯ ಸ್ಥಾನಮಾನ ಅತ್ಯಂತ ಕೆಳಹಂತದಲ್ಲಿ ಇರುವುದು ಕಂಡುಬರುತ್ತದೆ. ಮುಂದುವರೆದು ಅವಲೋಕಿಸಿದಾಗ ಭಾರತದ ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯತೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗಿರುವುದಕ್ಕೆ ಬದಲಾಗಿ ಹೆಚ್ಚಿನ ಏರುಪೇರುಗಳಿಂದ ಕೂಡಿರುವುದು ಒಂದು ಗಮನಾರ್ಹವಾದ ಸಂಗತಿಯಾಗಿ ಕಂಡುಬರುತ್ತದೆ. ಮಹಿಳಾ ಪ್ರಾತಿನಿಧ್ಯತೆಯ ಸರಾಸರಿ ಪ್ರಮಾಣವನ್ನು ಅವಲೋಕಿಸಿದಾಗ ಲೋಕಸಭೆಯಲ್ಲಿ ಶೇ. ೬.೨೯ ಸರಾಸರಿ ಪ್ರಮಾಣವಿದ್ದರೆ ರಾಜ್ಯ ಸಭೆಯಲ್ಲಿ ಇದರ ಪ್ರಮಾಣ ಶೇ. ೯.೧೭ ರಷ್ಟಿದ್ದು ಕೊಂಚ ಹೆಚ್ಚಾಗಿರುವುದು ಕಂಡುಬರುತ್ತದೆ. ಹೀಗೆ ಅಂತಾರ ರಾಷ್ಟ್ರೀಯ ಮಟ್ಟದಲ್ಲಿ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರ ರಾಜಕೀಯ ಪ್ರಾತಿನಿಧ್ಯತೆಯನ್ನು ಗಮನಿಸಿದಾಗ ಒಂದು ರೀತಿಯ ನಿರಾಶಾದಾಯಕ ಪರಿಸ್ಥಿತಿ ನಿರ್ಮಾಣವಾಗಿದ್ದು ಮಹಿಳಾ ರಾಜಕೀಯ ಭಾಗವಹಿಸುವಿಕೆ ಅಥವಾ ಪ್ರಾತಿನಿಧ್ಯತೆ ಸುಧಾರಿಸಬೇಕಾದ ಅಗತ್ಯತೆ ಹೆಚ್ಚಾಗಿರುವುದು ಕಂಡುಬರುತ್ತದೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಕಾವ್ಯ

ನಾನಿದ್ದ ಜೈಲಿನಲ್ಲಿ

ಹಾಸುಗೆ ಹಿಡಿದ ತಂದೆಯ ನೆನಪು
ಹೆಸರಿಡದ ಹಸುಗೂಸಿನ ನೆನಪು
ಮೊದಲ ಸಲ ನಡೆಯಲು ಬಂದ ಹೆಂಡತಿಯ ನೆನಪು
ತನ್ನ ರಟ್ಟೆಯನ್ನೇ ನಂಬಿ ಬದುಕುವ ಕುಟುಂಬದ ನೆನಪು
ಬೆಳಗಾಗುವ ಹೊತ್ತಿಗೆ
ಎಲ್ಲ ನೆನಪುಗಳು ಗಂಟಲಾಚೆಗೆ ಬಂದು
ಬಂಧಿಖಾನೆಯ ಕಂಬಿಗಳು ಒದ್ದೆ
ಒಂದಷ್ಟು ಖೈದಿಗಳ ಕಣ್ಣೂ ಒದ್ದೆ ಒದ್ದೆ
ಇಲ್ಲಿಗೆ ಒಂದೆಷ್ಟು ದಿನವಾಯಿತೆಂದು
ಅವರ್‍ಯಾರು ನೆನಪಿಟ್ಟಿಲ್ಲ
ಹುಣ್ಣಿಮೆ-ಅಮವಾಸ್ಯೆಗಳ ಎಣಿಕೆಯಲ್ಲಿ
ಕಳೆದ ಕಾಲದ-ಲೆಕ್ಕವಿಲ್ಲ
ಇಷ್ಟಕ್ಕೂ ಅವರಿಗೆ
ಯಾವ ಅಪರಾಧಕ್ಕೆ ತಮ್ಮನ್ನಿಲ್ಲಿಗೆ
ತರಲಾಗಿದೆ ಎಂಬುದೂ ತಿಳಿದಿಲ್ಲ
ಕೇಳಿದರೆ
ಅವರನ್ನೇಕೆ ಹಿಡಿದು ತಂದಿದ್ದೇವೆಂದೀಗ
ಪೊಲೀಸರಿಗೂ ಗೊತ್ತಿಲ್ಲ!
ಕನಿಷ್ಠ ವಿಚಾರಣೆಯ
ನಾಟಕವೂ ನಡೆಯದೆ
ಅವರೀಗ ಗತದ ನೆನಪಿನಲ್ಲಿ
ವರ್ತಮಾನದ ಕಣ್ಣೀರಿನಲ್ಲಿ ಉಸಿರಾಡುತ್ತಿದ್ದಾರೆ.
ಜೀವವಿರುವ ಗೊಂಬೆಯ ಹಾಗೆ
ಬಂಧಿಖಾನೆಯ ಕಂಬಿಗಳ ನಡುವೆ
ಕಾಲದ ಕೊಲೆಗಾರನಿಗೆ ಕಾನೂನಿನಲ್ಲಿ ಶಿಕ್ಷೆಯಿಲ್ಲ
ಯಾವ ಅರಿವೂ ಇಲ್ಲದೆ ಬಂಧಿಖಾನೆಯಲ್ಲಿ
ಸಂಜೆ
ದಿನವೊಂದು ಜೀವ ಕಳೆದುಕೊಳ್ಳುತ್ತದೆ.

○ ಬಸವರಾಜ ಸೂಳಿಭಾವಿ

ಕನಕದಾಸರ 'ಮೋಹನ ತರಂಗಿಣಿ'ಯಲ್ಲಿ ಚಾರಿತ್ರಿಕ ಮತ್ತು ಸಮಾಜದ ಸುಧಾರಕ ನೆಲೆ

ಡಾ. ಶ್ರೀಧರ ಪಿಸ್ಸೆ

'ಮೋಹನ ತರಂಗಿಣಿ'ಯ ಕಥಾ ಚೌಕಟ್ಟು ಪುರಾಣ ಜಗತ್ತಿಗೆ ಸೇರಿದೆ. ರಾಮಾಯಣ ಮತ್ತು ಶಿವ ಪುರಾಣಗಳ 'ಮನ್ಮಥ ಪ್ರಸಂಗ, ವಿಷ್ಣು ಪುರಾಣ ಮತ್ತು ಭಾಗವತಗಳಲ್ಲಿರುವ 'ಶುಂಭರಾಸುರ ವಧೆ' ಮತ್ತು 'ಬಾಣಾಸುರ ವಧೆ-ಉಷಾನಿರುದ್ಧರ ವಿವಾಹ ಪ್ರಸಂಗ'ಗಳನ್ನು ಇಲ್ಲಿ ಒಟ್ಟಾಗಿ ಸೇರಿಸಿ ಕಥೆಯ ಹಂದರ ಹೆಣೆಯಲಾಗಿದೆ. ಹೀಗಿದೊಂದು ಪೌರಾಣಿಕ ಕಾವ್ಯವಾಗಿದೆ. ಕಾವ್ಯದ ಪೀಠಿಕೆಯಲ್ಲಿ ಇದನ್ನು 'ಕೃಷ್ಣ ಚರಿತೆ'ಯೆಂದು ಕರೆಯಲಾಗಿದೆ. ಹಾಗಾಗಿಯೆ ಕನಕದಾಸರ ಇಷ್ಟದೈವವಾದ ಶ್ರೀಕೃಷ್ಣ ಕಥೆಯೂ ಆತನ ಸಮಕಾಲೀನ ದೊರೆಯಾದ ಶ್ರೀಕೃಷ್ಣ ದೇವರಾಯನ ಚರಿತೆಯೂ ಆಗಿ ಮೇಳವಿಸಿದೆ. ಈ ಕಾವ್ಯದ ಕಥೆ ಶ್ರೀಕೃಷ್ಣ ಮತ್ತು ಅವನ ಮಗ ಮನ್ಮಥ/ಪ್ರದ್ಯುಮ್ನ, ಪ್ರದ್ಯುಮ್ನನ ಮಗ ಅನಿರುದ್ಧರ ಕೌಟುಂಬಿಕ ಅಥವಾ ವಿವಾಹ ಸಮಸ್ಯೆಗೆ ಸಂಬಂಧಿಸಿದೆ. ಅಂದರೆ ಶ್ರೀಕೃಷ್ಣನ ಕುಟುಂಬದ ಸಮಸ್ಯೆಯ ಭಾಗವಾಗಿದೆ. ಹಾಗಾಗಿ ಇದನ್ನು ಕೌಟುಂಬಿಕ ಕಥೆಯೆಂದು ಕರೆಯಬಹುದು.

ಕನಕದಾಸರ 'ಮೋಹನ ತರಂಗಿಣಿ'ಯ ಆಯ್ದ ಭಾಗವನ್ನು ಗುಲಬರ್ಗಾ ವಿಶ್ವವಿದ್ಯಾನಿಲಯ ಪಠ್ಯವಾಗಿ ನಿಗದಿಪಡಿಸಿತ್ತು. ಆಗ ಅದರ ವಿರುದ್ಧ ಅಶ್ಲೀಲತೆಯ ಕಾರಣ ನೀಡಿ ಉಗ್ರ ಹೋರಾಟ ನಡೆಸಲಾಯಿತು ಮತ್ತು ಆ ಪಠ್ಯವನ್ನು ಹಿಂಪಡೆಯುವಂತೆ ಮಾಡಲಾಯಿತು. ಇದರ ಹಿಂದಿರುವ ನಿಲುವೇನು? ಇದೇನು ಓದುಬಾರದ ಮುಟ್ಟಬಾರದ ಕಾವ್ಯವೆ? 'ಮೋಹನ ತರಂಗಿಣಿ' ಶೃಂಗಾರ ಕಾವ್ಯ. ಶ್ರೀಕೃಷ್ಣನ ಕುರಿತ ಅತಿಶಯವಾದ ಭಕ್ತಿಯನ್ನೂ ವೈಷ್ಣವ ಮತ್ತು ಶೈವರ ನಡುವಿನ ಹೊಂದಾಣಿಕೆಯ ಅನಿವಾರ್ಯತೆಯನ್ನೂ ವಿಜಯನಗರದ ಶ್ರೀಕೃಷ್ಣದೇವರಾಯನ ಕಾಲಾವಧಿಯ ಕನ್ನಡಿಗರ ಜನ ಜೀವನದ ಚರಿತೆಯನ್ನೂ ಕಟ್ಟಿಕೊಡುವ ಕಾವ್ಯವೆಂದು ಈಗಾಗಲೆ ಗುರುತಿಸಲಾಗಿದೆ.

ಬೆಟಗೇರಿ ಕೃಷ್ಣಶರ್ಮ ತಮ್ಮ 'ಕರ್ನಾಟಕದ ಜನ ಜೀವನ' ಪುಸ್ತಕದ 'ಕನಕದಾಸರು ಕಂಡ ವಿಜಯನಗರ' ಲೇಖನದಲ್ಲಿ ಸಾಂಗತ್ಯದಲ್ಲಿ ರಚಿತವಾದ ಈ ಮಹಾಕಾವ್ಯ ಸಂಪ್ರದಾಯಿಕ ಪಂಡಿತರ ಮನ್ನಣೆಗೆ ಪಾತ್ರವಾಗಿಲ್ಲವೆಂದೂ ಅದರಿಂದಾಗಿ ಇದರ ಹೊಗಳಿಕೆ ನಮ್ಮ ಸಾಹಿತ್ಯ ಪ್ರಪಂಚದಲ್ಲಿ ಅಷ್ಟೊಂದು ಬೆಳೆದು ಬಂದಿಲ್ಲವೆಂದೂ ಹಾಗಾಗಿ ಇದನ್ನು ಓದಿ ನೋಡಬೇಕೆಂಬ ಬುದ್ಧಿ ಬಹುಜನರಿಗಾಗಿಲ್ಲವೆಂದೂ ವ್ಯಸನ ಪಟ್ಟಿದ್ದಾರೆ. ಹಾಗೆಯೆ ಕನಕದಾಸರು ಈ ಕೃತಿಯಲ್ಲಿ ತಮ್ಮ ಸಮಕಾಲೀನ ಚರಿತ್ರೆಯನ್ನು ಹೇಗೆ ಕಟ್ಟಿಕೊಟ್ಟಿದ್ದಾರೆಂದು ವಿಶದವಾಗಿ ಮನಗಾಣಿಸಿದ್ದಾರೆ.

ಶೃಂಗಾರ ಪ್ರಧಾನವಾದ 'ಮೋಹನ ತರಂಗಿಣಿ'ಯಲ್ಲಿ ವರ್ಣನೆಯೆ ಕಾವ್ಯದ ಜೀವಾಳವೆಂದು ಆರ್.ಸಿ. ಹಿರೇಮಠರು ಗುರುತಿಸಿದ್ದಾರೆ, 'ವರ್ಣನೆ' ಈ ಕಾವ್ಯದಲ್ಲಿ ಪಡೆದುಕೊಳ್ಳುವ ಮಹತ್ತರ ಪಾತ್ರವನ್ನು ಇದು ಸೂಚಿಸುತ್ತದೆ. ಸೌರಾಷ್ಟ್ರ ವರ್ಣನೆ, ದ್ವಾರಕಾಪುರ ವರ್ಣನೆ, ಬಾಣಾಸುರನ ಶೋಣಿತಪುರದ ವರ್ಣನೆ, ಬಾಣಾಸುರನ ಶಿವಪೂಜೆ, ಬಾಣಾಸುರನ ಭೋಗಲೀಲೆ, ಉಷಾದೇವಿಯ ಶೃಂಗಾರ, ಉಷಾ ಚಿತ್ರಲೇಖೆಯರ ಸರಸ, ಉಷೆಯ ವಿರಹ, ಶ್ರೀಕೃಷ್ಣನು ಉಷಾನಿರುದ್ಧರನ್ನು ಕಂಡುದು, ಶ್ರೀಕೃಷ್ಣನು ದ್ವಾರಕೆಗೆ ಬಂದುದು, ಮೊದಲಾದ ಸಂಧಿಗಳಲ್ಲಿ ಕಥೆಯ ಎಳೆ ಗೌಣವಾಗಿದ್ದು ವರ್ಣನೆಯೆ ಪ್ರಧಾನವಾಗಿದೆ. ವರ್ಣಕ ಕಾವ್ಯವಾದ ಈ ಹಾಡುಗಬ್ಬವನ್ನು ಕನಕದಾಸರು ಉದ್ದೇಶಪರ್ವಕವಾಗಿ ವರ್ಣನೆಗಳ ಮೂಲಕ ಕಟ್ಟಿದ್ದಾರೆಯೆ? ಶೃಂಗಾರ ವರ್ಣನೆ ಮೂಲಕ ಸ್ವಂತಿಕೆಯನ್ನು ಮೆರೆದಿದ್ದಾರೆಯೆ? ಈ ಅಭಿವ್ಯಕ್ತಿ ಕ್ರಮ ಅವರ ಪ್ರಬುದ್ಧಾವಸ್ಥೆಯ ಪರಿಣಾಮವೇ? ಇವುಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಇಲ್ಲಿನದು.

'ಮೋಹನ ತರಂಗಿಣಿ'ಯ ವರ್ಣನೆಗಳೆಂದರೆ ಇಡಿಕಿರಿದ ಜೀವನ ಚಿತ್ರಗಳೆಂಬುದು ದೇವೇಂದ್ರ ಕುಮಾರ ಹಕಾರಿ ನಿಲುವು. ಇಲ್ಲಿನ ವೈವಿಧ್ಯಪೂರ್ಣ ಪ್ರಸಂಗಗಳು, ಹತ್ತಾರು ಬಗೆಯ ಚೆಲ್ಲುಚೆಲ್ಲಾದ ಉನ್ಮತ್ತ, ಉತ್ತೇಜಕ ಶೃಂಗಾರ ಚಿತ್ರಗಳು, ಅಂತಃಪುರ ಮೊದಲುಗೊಂಡು ಕೇರಿ ಕೇರಿಯ ಕಡು ವಿಲಾಸದ ಘಾಟು ಚಿತ್ರಗಳು, ಒಪ್ಪವಿಟ್ಟ ಗಟ್ಟಿಯಾದ ಯುದ್ಧದ ವರ್ಣನೆ ಮಾಲೆ ಮಾಲೆಯಾಗಿ ಬಂದಿದ್ದು ಇದನ್ನೊಂದು ಜೀವಂತ ಮನೋಹರ ಕಾವ್ಯವಾಗಿ ಮಾಡಿದೆಯೆನ್ನುವ ಅವರ ಕೃತಿನಿಷ್ಠ ದೃಷ್ಟಿಕೋನ ಕನಕದಾಸರ ಶೃಂಗಾರ ವರ್ಣನೆಯ ವೈಖರಿಯನ್ನು ಆಕ್ಷೇಪರಹಿತವಾಗಿ ಕಟ್ಟಿಕೊಡುತ್ತದೆ. ಕನಕದಾಸರು ಶೃಂಗಾರ ಜೀವನವನ್ನು ಕಟ್ಟಿಕೊಡುವ ಶೈಲಿ ಸಾಂಪ್ರದಾಯಿಕ ಪಂಡಿತರಿಗೆ ಅಪಥ್ಯವಾಗಿರುವುದನ್ನು ಬೆಟಗೇರಿ ವ್ಯಕ್ತಪಡಿಸಿದ್ದಾರೆ. 'ಮೋಹನ ತರಂಗಿಣಿ'ಯ ಪಠ್ಯಭಾಗಕ್ಕೆ ಕಂಡುಬಂದ ಪ್ರತಿರೋಧ ಸಾಂಪ್ರದಾಯಿಕ ಪಂಡಿತರ ಅಭಿಪ್ರಾಯ ಇಂದಿಗೂ ಚಾಲ್ತಿಯಲ್ಲಿರುವುದರ ಸೂಚಕವಾಗಿದೆ. ಹಾಗಾಗಿ ಈ ಕಾವ್ಯ ಓದಲು ಅರ್ಹವೆ? ಅನರ್ಹವೆ? ಕನಕದಾಸರ ಬಿಚ್ಚು ನುಡಿಗಳ ಶೃಂಗಾರ ವರ್ಣನೆ ಕಾಲಾಭಿವ್ಯಕ್ತಿಯ ಭಾಗವೇ? ಶೃಂಗಾರ ವರ್ಣನೆಯ ಪ್ರಕ್ರಿಯೆ ಮತ್ತು ನೆಲೆ ಯಾವುದು? ಈ ಪ್ರಶ್ನೆಗಳಿಗೆ ಹುಡುಕಿಕೊಳ್ಳುವ ಉತ್ತರದ ಆಧಾರದ ಮೇಲೆ ಈ ಕೃತಿಯ ಓದಿನ ಯೋಗ್ಯತೆ ನಿಂತಿದೆಯೆ? ಶೀಲ-ಅಶ್ಲೀಲಗಳ ನೆಲೆ ಯಾವುದು? ಅದನ್ನು ಖಚಿತ ಪಡಿಸಲು ಸಾಧ್ಯವೆ?

'ಮೋಹನ ತರಂಗಿಣಿ'ಯಲ್ಲಿರುವ ಶೃಂಗಾರ ವರ್ಣನೆಯ ಬಗೆ ಯಾವುದೆಂದು ಕಂಡುಕೊಳ್ಳುವುದೆ ಇಲ್ಲಿಯ ಮಿತಿಯೂ ಉದ್ದೇಶವೂ ಆಗಿದೆ. ಇದನ್ನು ಚಾರಿತ್ರಿಕ ಮತ್ತು ಸಮಾಜ ಸುಧಾರಕ ನೆಲೆಗಳಿಂದ ನೋಡಬಹುದು.

೧. ಚಾರಿತ್ರಿಕ ನೆಲೆ

'ಮೋಹನ ತರಂಗಿಣಿ'ಯ ಕಥಾ ಚೌಕಟ್ಟು ಪುರಾಣ ಜಗತ್ತಿಗೆ ಸೇರಿದೆ. ರಾಮಾಯಣ ಮತ್ತು ಶಿವ ಪುರಾಣಗಳ 'ಮನ್ಮಥ ಪ್ರಸಂಗ, ವಿಷ್ಣು ಪುರಾಣ ಮತ್ತು ಭಾಗವತಗಳಲ್ಲಿರುವ 'ಶುಂಭರಾಸುರ ವಧೆ' ಮತ್ತು 'ಬಾಣಾಸುರ ವಧೆ-ಉಷಾನಿರುದ್ಧರ ವಿವಾಹ ಪ್ರಸಂಗ'ಗಳನ್ನು ಇಲ್ಲಿ ಒಟ್ಟಾಗಿ ಸೇರಿಸಿ ಕಥೆಯ ಹಂದರ ಹೆಣೆಯಲಾಗಿದೆ. ಹೀಗಿದೊಂದು ಪೌರಾಣಿಕ ಕಾವ್ಯವಾಗಿದೆ. ಕಾವ್ಯದ ಪೀಠಿಕೆಯಲ್ಲಿ ಇದನ್ನು 'ಕೃಷ್ಣ ಚರಿತೆ'ಯೆಂದು ಕರೆಯಲಾಗಿದೆ. ಹಾಗಾಗಿಯೆ ಕನಕದಾಸರ ಇಷ್ಟದೈವವಾದ ಶ್ರೀಕೃಷ್ಣ ಕಥೆಯೂ ಆತನ ಸಮಕಾಲೀನ ದೊರೆಯಾದ ಶ್ರೀಕೃಷ್ಣ ದೇವರಾಯನ ಚರಿತೆಯೂ ಆಗಿ ಮೇಳವಿಸಿದೆ. ಈ ಕಾವ್ಯದ ಕಥೆ ಶ್ರೀಕೃಷ್ಣ ಮತ್ತು ಅವನ ಮಗ ಮನ್ಮಥ/ಪ್ರದ್ಯುಮ್ನ, ಪ್ರದ್ಯುಮ್ನನ ಮಗ ಅನಿರುದ್ಧರ ಕೌಟುಂಬಿಕ ಅಥವಾ ವಿವಾಹ ಸಮಸ್ಯೆಗೆ ಸಂಬಂಧಿಸಿದೆ. ಅಂದರೆ ಶ್ರೀಕೃಷ್ಣನ ಕುಟುಂಬದ ಸಮಸ್ಯೆಯ ಭಾಗವಾಗಿದೆ. ಹಾಗಾಗಿ ಇದನ್ನು ಕೌಟುಂಬಿಕ ಕಥೆಯೆಂದು ಕರೆಯಬಹುದು.

ಈ ಕಾವ್ಯದ ವರ್ಣನೆಗಳು ಕನಕದಾಸರ ಸಮಕಾಲೀನ ಸಮಾಜದ ವರ್ಣನೆಗಳಾಗಿ ಹೇಗೆ ಮೂಡಿವೆ ಎಂದು ಬೆಟಗೇರಿ ಕೃಷ್ಣಶರ್ಮ ಅವರು ಸಮರ್ಥವಾಗಿ ತೋರಿಸಿಕೊಟ್ಟಿದ್ದಾರೆ. ಇದು ವಿಜ

ಯನಗರ ಸಾಮ್ರಾಜ್ಯದ ಶ್ರೀಕೃಷ್ಣದೇವರಾಯನ ಕಾಲದ ಸಾಮಾಜಿಕ ಚರಿತ್ರೆಯ ನೆಲೆಯನ್ನು ಪರಿಚಯಿಸುತ್ತದೆ. ಅಂದಿನ ಕಾಲದ ಜನಜೀವನ, ಪ್ರಚಲಿತ ಪರಿಸ್ಥಿತಿ ಕಲ್ಪಿತ ಲೋಕದ ಭಾವವಾಗಿರದೆ ತನ್ನ ಸುತ್ತಲ ಜಗತ್ತಿನ ಭಾಗವಾಗಿದೆ ಎಂದು ಕಾಣಿಸಿದೆ. ಇಲ್ಲಿ ಬರುವ ವರ್ಣನೆಗಳನ್ನು ಶೃಂಗಾರ, ವೀರ, ಕರುಣ-ಭಕ್ತಿ ರಸಗಳೆಂದು ಗುರುತಿಸಲಾಗಿದೆ. ವೀರತ್ವ ಮತ್ತು ಕರುಣೆ ಮಧ್ಯಕಾಲೀನ ಯುಗದ ಜೀವನ ಮೌಲ್ಯಗಳಾಗಿವೆ. 'ಮೋಹನ ತರಂಗಿಣಿ'ಯಲ್ಲಿ ವೀರ ಮತ್ತು ಕರುಣ ರಸಗಳಿದ್ದರೂ ಶೃಂಗಾರ ಪ್ರಧಾನವಾಗಿದೆ. ಇದೇ ರೀತಿ ರತ್ನಾಕರವರ್ಣಿ ತನ್ನ 'ಭರತೇಶ ವೈಭವ'ದಲ್ಲೂ ಭೋಗ ಜೀವನದ ಪ್ರಾಧಾನ್ಯತೆಯನ್ನು ಚಿತ್ರಿಸಿದ್ದಾನೆ. ಪುರುಂದರದಾಸರ ಕೀರ್ತನೆಗಳಲ್ಲಿ ಕಡು ಶೃಂಗಾರ/ಭೋಗ ಜೀವನದ ಚಿತ್ರಣ ಮತ್ತು ಅದರ ನಿರಾಕರಣ ನೋಡಬಹುದು. ಅದೇ ರೀತಿ ಕನಕದಾಸರ ಕೀರ್ತನೆಗಳಲ್ಲೂ ಇಂಥ ಚಿತ್ರ ನಮಗೆ ಕಾಣಸಿಗುತ್ತದೆ. ಉದಾ: 'ಕಲಿಯುಗದ ಮಹಿಮೆಯನು ಕಂಡಷ್ಟು ಪೇಳುವೆನು' ಎಂಬ ಕೀರ್ತನೆಯ ಚರಣವೊಂದನ್ನು ನೋಡಬಹುದು.

ಪತಿವೃತೆಯರೆಂಬುವರು ಶತ ಸಹಸ್ರಕೊಬ್ಬರು
ಮೀತಿಮೀರಿ ಇಹರಯ್ಯ ಇತರ ಜನರು
ಮತಿಗೆಟ್ಟು ಮನಸೋತು ಅನ್ಯ ಪುರುಷರು ಕೂಡಿ
ಗತಿಗೆಟ್ಟು ಹೋಗುವರು ಮೂರು ತೊರೆದು

ಕುಟುಂಬದ ಪರಿಧಿಯಲ್ಲಿ ಸ್ತ್ರೀ-ಪುರುಷರಿಗೂ ಲೈಂಗಿಕ ಜೀನದ ನೈತಿಕ ನೆಲೆ ಇಲ್ಲದಿದ್ದುದನ್ನು ಕನಕದಾಸರು ಸೂಚಿಸಿದ್ದಾರೆ. ಸಮಕಾಲೀನ ಸಮಾಜದ ಸ್ತ್ರೀ-ಪುರುಷರಿಬ್ಬರೂ ಸಮಾನರಾಗಿ ವಿವಾಹೇತರ ಸಂಬಂಧಗಳಲ್ಲಿ ಆಸಕ್ತರಾಗಿದ್ದರೆಂದು ಕಾಣಿಸಿದ್ದಾರೆ. ಅಂದಿನ ಜೀವನ ಮೌಲ್ಯವಾಗಿದ್ದ ಶೃಂಗಾರ ಜೀವನವನ್ನು ಅಪಮೌಲ್ಯೀಕರಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಇದರಿಂದ ಕನಕದಾಸರ ಕಾಲದಲ್ಲಿ ಶೃಂಗಾರವೆ ಜೀವನದ ಪ್ರಧಾನ ಪಾತ್ರವಾಗಿತ್ತೆಂದು ತಿಳಿದುಬರುತ್ತದೆ. ಅಂದಿನ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಮೇಲುವರ್ಗಗಳು ತಮ್ಮ ಮೋಜು, ಘನತೆ, ಪ್ರತಿಷ್ಟೆಗಳಿಗಾಗಿ ಶೃಂಗಾರ ಜೀವನಕ್ಕೆ ಆದ್ಯತೆ ನೀಡಿದ್ದು, ಒಬ್ಬರಿಗಿಂತ ಹೆಚ್ಚು ಪತ್ನಿಯರನ್ನು ಹೊಂದಿರುತ್ತಿದ್ದರು. ಕುಟುಂಬದ ಆಚೆಗೂ ಶೃಂಗಾರ ಜೀವನ ನಡೆಸಲು ಸೂಕ್ತ ಸಾಮಾಜಿಕ ವ್ಯವಸ್ಥೆ ರೂಪಿಸಿಕೊಂಡಿದ್ದರು. ಇದಕ್ಕೆ ಪೂರಕವಾಗಿ ವಾರನಾರಿಯರು, ದೇವದಾಸಿಯರು ಮತ್ತು ವೇಶ್ಯೆಯರ ಜೀವನ ವ್ಯವಸ್ಥೆ ರೂಪುಗೊಂಡಿದ್ದ ಬಗ್ಗೆ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ. ಈ ಹಿನ್ನೆಲೆಯಲ್ಲಿ 'ಮೋಹನ ತರಂಗಿಣಿ'ಯ ಶೃಂಗಾರ ವರ್ಣನೆಯನ್ನು ನೋಡಬಹುದು. ಸೌರಾಷ್ಟ್ರ ವರ್ಣನೆ ಸಂಧಿಯ ಶೃಂಗಾರ ವರ್ಣನೆಯನ್ನು ಮಾತ್ರ (ಪುಟಗಳ ಮಿತಿ ಗಮನಿಸಿ) ಇಲ್ಲಿ ಉಲ್ಲೇಖಿಸಲಾಗಿದೆ.

ಕುಟಿಲ ಕುಂತಳದೊಳು ಮಧುಪಾನ ತೊಂಡೆವ
ಣ್ದುಟಿಯೊಳು ಕಠಿನ ಕಾಂತೆಯರ
ಘಟಕುಚದೊಳಗಲ್ಲದೀ ನುಡಿಗಳು ಸಂ
ಘಟಿಸವು ಸೌರಾಷ್ಟ್ರದಲ್ಲಿ ೨. ೨೪

ಓಡಿವರು ವಾರನಾರಿಯರ ಬಲ್ಮೊಲೆಗಳ
ಕಡಿವರು ಚೆಂದುಟಿಗಳನು
ಉಡಿಗೆಯ ಸುಲಿವರು ಪಲ್ಲವಾಧರೆಯರ
ಪೊಡವಿಯೊಳತಿಖಳರಿಲ್ಲ ೨.೨೫

ಅಂಬರದಲ್ಲಿ ಪ್ರತಿಬಿಂಬಿಸುತಿಹ ಕುಚ
ಕುಂಭ ತತ್ಕುಂಭವೆಂಬಂತೆ
ಕುಂಭಾನ್ವಿತ ಕರಕಮಲದಿ ಸ್ತ್ರೀ ನಿಕು
ರುಂಬ ನೀರ್ವಿಡಿದು ನಿಂದಿಹುದು ೨. ೨೬

ಕಳಶಸ್ತನ ಬಾಹುಮೂಲ ನಿರ್ಮಲಿನ ಕೌಂ
ಕುಳ ತೋಲ ನೆಗಹಿ ನೀರೆರೆಯೆ
ಗಳತೃಷ್ಣ ಪರಿದೊಡಮೀಂಟುವ ನೆವದಿ ಹೆಂ
ಗಳ ಮುದ್ದು ಮೊಗ ನಿಟ್ಟಿಪರು ೨. ೩೦

ಕಡುರೂಪು ಕಣ್ಗೆ ಮೈಗಂಪು ಮೂಗಿಗೆ ಮೆ
ಲ್ನುಡಿ ಕೊಡಕೆಗೆ ಹೆಂಗಳೆರೆವ
ಕುಡಿನೀರಿನಿಂಪು ಜಿಹ್ವೆಗೆ ಶೈತ್ಯ ತನುವಿಂ
ಗಿಡಿದುದು ಬಳಲಿ ಬಂದವರಿಗೆ ೨. ೩೧

ಮಡಿಗಳ ಕಾವ ಪುಳಿಂದಿನಿಯರ ರೂಪ
ಪಡಿಗಟ್ಟಬಲ್ಲವರಾರು
ಮುಡಿ ತೋರಮೊಲೆಯ ಭಾರಗಳಿಂದ ಉಂಗುರ
ವಿಡಿ ನಡು ಬಳಕುವಂತಿಹರು ೨. ೪೨

ಕಾವನ ಮುಂಗೈಯ ಗಿಳಿಯಂತೆ ನುಡಿದುರೆ
ಕಾವನ ಬಿಲ್ಗೋಲ ಪಿಡಿದು
ಕಾವನ ರಥರಾಜಿ ಭುಂಜಿಸದಂತೆ ಕೈ
ಗಾವ ಪಾಮರಿಯರೊಪ್ಪಿದರು ೨. ೪೩

ಬಾಲೆಯ ಕೊರಲು ಹೊನ್ನೊರಲು ಸುಸ್ವರ ಕಣೆ
ಲೀಲೆಗತ್ತರಿ ಕುರುಳ್ಗೊಂಕು
ಪಾಲಿರ್ದ ಕುಚ ಕೊಪ್ಪರಿಗೆ ನಿಟ್ಟೆಸಳ್ಗ
ಣ್ಣಾಲೆಯ ಮನೆಗಳೊಪ್ಪಿದುವು ೨. ೫೦

ಈ ಮೊದಲು ಉಲ್ಲೇಖಿಸಿದ ಕನಕದಾಸರ ಕೀರ್ತನೆಯಲ್ಲಿ ಅವರು ತಮ್ಮ ಕಾಲದ ಜನರ ನಡೆತೆಯನ್ನು ತಿದ್ದುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಉದ್ದೇಶ ಕೀರ್ತನೆಯ ಪ್ರತಿ ಸಾಲು, ಪದದಲ್ಲೂ ನೇರವಾಗಿ, ಸರಳವಾಗಿ ಪ್ರಕಟವಾಗಿದೆ. ಕೀರ್ತನೆಯ ಭಾವಾರ್ಥ ಹಾದಿಹೋಕರ ಕಿವಿಗಳನ್ನು ತಲುಪಿ ಅವರಿಗೆ ಬೋಧೆ ಉಂಟು ಮಾಡುವ ಮಿತಿಗೊಳಪಟ್ಟಿರುವುದರಿಂದ ನೀತಿ ನಿರೂಪಣೆ ಮಾಡುವ ಶೈಲಿಯಲ್ಲಿದೆ. 'ಮೋಹನ ತರಂಗಿಣಿ'ಯಲ್ಲಿ ಶೃಂಗಾರ ವರ್ಣನೆ ಅಷ್ಟದಶಾ ವರ್ಣನೆಯ ಭಾಗವಾಗಿದೆ. ಪಂಡಿತ ಪಾಮರರಿಬ್ಬರಿಗೂ ತಲುಪುವ ಉದ್ದೇಶ ಹೊಂದಿದೆ. ತನ್ನ ಸಮಕಾಲೀನ ಸಮಾಜದ ಯಥಾವತ್ತದ ಮನಸ್ಥಿತಿಯನ್ನು ಆ ಸಮಾಜದ ಜೀವನ ಮೌಲ್ಯಗಳನ್ನು ಅನುಸರಿಸಿ ರಂಜಿಸುವ ರೀತಿಯಲ್ಲಿ ಮೂಡಿದೆ.

ಸಮಕಾಲೀನ ಸಮಾಜದ ಮನಸ್ಥಿತಿಯನ್ನು ಅದೇ ಕಾಲದ ಜನಮನ ರಂಜಿಸುವ ಶೈಲಿ ಅಂದಿನವರಿಗೆ ಅಶ್ಲೀಲಕರವಾಗಿರಲಿಕ್ಕಿಲ್ಲ. ಕಾರಣ ಅದು ಅಂದಿನ ಜೀವನ ಮೌಲ್ಯವಾಗಿತ್ತು. ಅಂದಿನ ಜೀವನದ ಭಾಗವಾಗಿದ್ದ ಜೀವನ ಮೌಲ್ಯಗಳು ಅಪರಿಚಿತ ಅಥವಾ ಅನೂಹ್ಯವಾಗಿರದೆ ಅನ್ಯ ಭಾವ ಉತ್ಪತ್ತಿಗೆ ಕಾರಣವಾಗಲು ಸಾಧ್ಯವಿಲ್ಲ. ಆದರೆ ಅಂದಿನ ಕಾಲಕ್ಕಿಂತ ಭಿನ್ನ ಜೀವನಮೌಲ್ಯ ಮತ್ತು ಕಾಲಘಟ್ಟದಲ್ಲಿರುವ ಜನರಿಗೆ ಈ ವರ್ಣನೆ ಮನಸ್ಸಿಗೆ ಅಹಿತ ಉಂಟುಮಾಡಬಹುದು. ಆಧುನಿಕ ಸಮಾಜದ ಸಂಪ್ರದಾಯ ಮನಸ್ಥಿತಿಗೆ ಈ ವರ್ಣನೆ ಅದಕ್ಕೆ ವಿರುದ್ಧವಾದ ಆಚಾರ ವಿಚಾರಗಳನ್ನು ಒಳಗೊಂಡಂತೆ ಕಾಣುತ್ತದೆ ಮತ್ತು ಅಸಹ್ಯ-ಜುಗುಪ್ಸೆ ಭಾವನೆಯನ್ನೂ ಮುಟ್ಟಬಾರದ,

ಕುಟುಂಬದ ಪರಿಧಿಯಲ್ಲಿ ಸ್ತ್ರೀ-ಪುರುಷರಿಗೂ ಲೈಂಗಿಕ ಜೀನದ ನೈತಿಕ ನೆಲೆ ಇಲ್ಲದಿದ್ದುದನ್ನು ಕನಕದಾಸರು ಸೂಚಿಸಿದ್ದಾರೆ. ಸಮಕಾಲೀನ ಸಮಾಜದ ಸ್ತ್ರೀ-ಪುರುಷರಿಬ್ಬರೂ ಸಮಾನರಾಗಿ ವಿವಾಹೇತರ ಸಂಬಂಧಗಳಲ್ಲಿ ಆಸಕ್ತರಾಗಿದ್ದರೆಂದು ಕಾಣಿಸಿದ್ದಾರೆ. ಅಂದಿನ ಜೀವನ ಮೌಲ್ಯವಾಗಿದ್ದ ಶೃಂಗಾರ ಜೀವನವನ್ನು ಅಪಮೌಲ್ಯೀಕರಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಇದರಿಂದ ಕನಕದಾಸರ ಕಾಲದಲ್ಲಿ ಶೃಂಗಾರವೆ ಜೀವನದ ಪ್ರಧಾನ ಪಾತ್ರವಾಗಿತ್ತೆಂದು ತಿಳಿದುಬರುತ್ತದೆ. ಅಂದಿನ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಮೇಲುವರ್ಗಗಳು ತಮ್ಮ ಮೋಜು, ಘನತೆ, ಪ್ರತಿಷ್ಟೆಗಳಿಗಾಗಿ ಶೃಂಗಾರ ಜೀವನಕ್ಕೆ ಆದ್ಯತೆ ನೀಡಿದ್ದು, ಒಬ್ಬರಿಗಿಂತ ಹೆಚ್ಚು ಪತ್ನಿಯರನ್ನು ಹೊಂದಿರುತ್ತಿದ್ದರು. ಕುಟುಂಬದ ಆಚೆಗೂ ಶೃಂಗಾರ ಜೀವನ ನಡೆಸಲು ಸೂಕ್ತ ಸಾಮಾಜಿಕ ವ್ಯವಸ್ಥೆ ರೂಪಿಸಿಕೊಂಡಿದ್ದರು. ಇದಕ್ಕೆ ಪೂರಕವಾಗಿ ವಾರನಾರಿಯರು, ದೇವದಾಸಿಯರು ಮತ್ತು ವೇಶ್ಯೆಯರ ಜೀವನ ವ್ಯವಸ್ಥೆ ರೂಪುಗೊಂಡಿದ್ದ ಬಗ್ಗೆ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ.

ಶೃಂಗಾರದ ನಿರಾಕರಣ ಮತ್ತು ನಿಷೇಧ ಭಾವನೆಯನ್ನೂ ಬೆಳಸುವುದು ಸಹಜವಾಗಿದೆ.

ವಿಪರ್ಯಾಸದ ಸಂಗತಿಯೆಂದರೆ ಮಧ್ಯಕಾಲೀನ ಜೀವನ ಮೌಲ್ಯ ಮತ್ತು ಸಮಾಜ ವ್ಯವಸ್ಥೆಯನ್ನು ರಾಜ ಮತ್ತು ಪುರೋಹಿತ ವ್ಯವಸ್ಥೆಯೆ ಪ್ರಧಾನವಾಗಿ ರೂಪಿಸಿದ್ದು, ತನ್ನ ಹಿಂದಿನ ವ್ಯವಸ್ಥೆಯನ್ನು ಬದಲಾದ ಕಾಲಘಟ್ಟದಲ್ಲಿ ಅದೇ ಸಂಪ್ರದಾಯ ಮನಸ್ಸು ನಿರಾಕರಣ ಮನೋಭಾವ ಬೆಳೆಸಿಕೊಂಡು ಅದನ್ನು ತನ್ನದಲ್ಲದ್ದೆಂದು ಸಾಬೀತು ಪಡಿಸಲು ಮುಂದೆ ನಿಂತಿರುವುದು ಈ ಮನಸ್ಥಿತಿ 'ಮೋಹನ ತರಂಗಿಣಿ' ಸಂಬಂಧದಲ್ಲೂ ಕೆಲಸ ಮಾಡಿದೆ. ಹದಿನೆಂಟು ಮತ್ತು ಹತ್ತೊಂಭತ್ತನೆಯ ಶತಮಾನದಲ್ಲಿ ಭಾರತೀಯ ಸಮಾಜದ ಮೇಲುವರ್ಗ ಮತ್ತು ಬ್ರಿಟಿಷರು ರೂಪಿಸಿದ ಚರಿತ್ರೆಗಿಂತ ಇದು ಭಿನ್ನ ಬಗೆಯ ಜೀವನ ವಿಧಾನ ಮತ್ತು ಚರಿತ್ರೆಯನ್ನು ಒಳಗೊಂಡಿದೆ.

ಕೀರ್ತನೆಯಲ್ಲಿ ಎದ್ದು ಕಾಣುವ ಜನಮನ ತಿದ್ದುವ ಧೋರಣೆ ಮಹಾಕಾವ್ಯದ ವಿಸ್ತರವಾದ ಚೌಕಟ್ಟಿನಲ್ಲಿ ಇರಲು ಸಾಧ್ಯವಿಲ್ಲ. ಕೀರ್ತನೆ ಹೇಳಬೇಕಾದ ಉದ್ದೇಶವನ್ನು ಹಲವು ಚರಣಗಳಲ್ಲಿ ನೇರವಾಗಿ ಮತ್ತು ಸರಳವಾಗಿ ಮುಟ್ಟಿಸುವ ಒತ್ತರ ಮತ್ತು ತುರ್ತಿಗೆ ಒಳಪಟ್ಟಿದೆ. ವರ್ಣಕ ಮಹಾಕಾವ್ಯವಾದ 'ಮೋಹನ ತರಂಗಿಣಿ'ಯಲ್ಲಿ ಕವಿ ಬರಿಯ ವರ್ಣನೆಯ ಹಂತದಲ್ಲೆ ತನ್ನ ಆಶಯವನ್ನು ಪ್ರಕಟಪಡಿಸುವ ಇರಾದೆ ಇಟ್ಟುಕೊಳ್ಳಲು ಸಾಧ್ಯವಿಲ್ಲ, ವರ್ಣನೆಗಳೆಲ್ಲ ಕಾವ್ಯದ ಮೇಲು ಮೈಯಾಗಿದ್ದು, ಓದುವ ವರ್ಗದ ರಂಜನೆಯನ್ನೆ ಮುಖ್ಯವಾಗಿರಿಸಿಕೊಂಡಿರುತ್ತದೆ. ಕಾವ್ಯದ ಉದ್ದೇಶಿತ ನಿಲುವು ಕಾವ್ಯದ ಆಶಯಗಳೊಂದಿಗೆ ತಳುಕು ಹಾಕಿಕೊಂಡಿರುವುದರಿಂದ ಅದು ವರ್ಣನೆಗಳಲ್ಲಿ ಪ್ರಕಟವಾಗಬಹುದು, ಕಾವ್ಯ ಬಂಧ ಮೊದಲಾದ ಅನ್ಯ ರೂಪದಲ್ಲಿ ಪ್ರಕಟವಾಗಬಹುದು. ಅದರ ಔಚಿತ್ಯವನ್ನು ಕವಿ ತನ್ನ ಕಲಾವಂತಿಕೆಯ ದೃಷ್ಟಿಕೋನದಿಂದ ನಿರ್ಧರಿಸುತ್ತಾನೆ.

ಆದರೂ ಕನಕದಾಸರು ಸಮಕಾಲೀನ ಜೀವನದ ವರ್ಣನೆಯನ್ನೆ ತಮ್ಮ ಕಾವ್ಯದ ಪ್ರಧಾನ ಅಭಿವ್ಯಕ್ತಿ ಕ್ರಮವನ್ನಾಗಿ ಮಾಡಿಕೊಂಡಿದ್ದಾರೆ. ಬೆಟಗೇರಿಯವರು ಇಟಲಿಯ ನಿಕೊಲೊಕೊಂಟಿ ವರ್ಣಿಸಿರುವ ವಿಜಯನಗರದ ಉತ್ಸವ ಹಬ್ಬಗಳು ಮತ್ತು ಅಂದಿನ ಕಾಮನಹಬ್ಬಗಳನ್ನು 'ಮೋಹನ ತರಂಗಿಣಿ' ವಸಂತೋತ್ಸವದೊಂದಿಗೆ ಸಮೀಕರಿಸಿದ್ದಾರೆ. ದೇಶ-ಪುರವರ್ಣನೆಯ ಭಾಗವಾಗಿ ಬ್ರಾಹ್ಮಣ ಕೇರಿ ವರ್ಣನೆ, ವ್ಯಾಪಾರೀ ಅಂಗಡಿಗಳ ವರ್ಣನೆ, ಕೋಟೆ ಕೊತ್ತಳಗಳ ವರ್ಣನೆಗಳೆಲ್ಲ ವಿಜಯನಗರದ ವರ್ಣನೆಯೆ ಆಗಿದೆ ಎಂದು ತೋರಿಸಿಕೊಟ್ಟಿದ್ದಾರೆ. ಹಾಗೆಯೆ ಕಾವ್ಯದ ವಸ್ತುವಾದ ಶೃಂಗಾರ ಜೀವನವೂ ಸಮಕಾಲೀನ ಜೀವನಕ್ಕೆ ಸಂಬಂಧಿಸಿದೆ.

ಸ್ತ್ರೀ-ಪುರುಷರ ಪ್ರೇಮ-ಕಾಮ-ಮೋಹ ಭಾವ ಜೀವನ ರೂಪುಗೊಂಡಿರುವ ಮತ್ತು ರೂಪುಗೊಳ್ಳಬೇಕಾದ ಕ್ರಮವನ್ನು ಶ್ರೀಕೃಷ್ಣನ ಕುಟುಂಬದ ಸದಸ್ಯರ ಮತ್ತು ಶ್ರೀಕೃಷ್ಣದೇವರಾಯನ ಕಾಲದ ಜನಜೀವನದ ಸಮಸ್ಯೆಯಾಗಿ ಕಂಡರಿಸಲಾಗಿದೆ. ಕಾವ್ಯದಲ್ಲಿ ಹೆಜ್ಜೆ ಹೆಜ್ಜೆಗೂ ವರ್ಣಿತವಾಗಿರುವ ಶೃಂಗಾರ ವರ್ಣನೆ ಕನಕದಾಸರ ಸಮಕಾಲೀನ ಜೀವನದ ಭಾಗವಾಗಿದೆಯೆಂದು ಮನವರಿಕೆಯಾಗುತ್ತದೆ. ಹೀಗಿದು ಪುರಾಣ ಕಥೆಗಳ ಕಲ್ಪಿತ ಕಥಾ ಹಂದರವುಳ್ಳ ಕಲ್ಪಿತ ವರ್ಣನೆಗಳನ್ನೊಳಗೊಂಡ ಕವಿಯ ಶೃಂಗಾರ ಕಲ್ಪನೆಯನ್ನು ಚಿತ್ರಿಸದೆ ತನ್ನ ಸಮಕಾಲೀನ ಶೃಂಗಾರ ಜೀವನವನ್ನು ಕಲಾಕೃತಿಯಾಗಿ ಪಡಿಮೂಡಿಸಿದೆ.

ಈ ಮೂಲಕ ಕವಿ ತನ್ನ ಸಮಕಾಲೀನ ಸಮಾಜ-ವಿಶೇಷವಾಗಿ ಸ್ತ್ರೀ-ಪುರುಷ ಸಂಬಂಧ ಮತ್ತು ಜನ ಸಮುದಾಯಗಳ ಕುರಿತ ಸ್ಪಂದಿಸಿದ, ಚಿಂತಿಸಿದ ಕ್ರಮವನ್ನು-ಕಟ್ಟಿಕೊಡುತ್ತದೆ.

೨. ಸಮಾಜ ಸುಧಾರಕ ನೆಲೆ

'ಮೋಹನ ತರಂಗಿಣಿ' ಕಥೆಯನ್ನು ಒಂದು ಕೌಟುಂಬಿಕ ಕಥೆಯೆಂದು ಈಗಾಗಲೆ ಗುರುತಿಸಲಾಗಿದೆ. ಇದೇ ಕಥೆಯನ್ನು ಅದರ ಉದ್ದೇಶ ಮತ್ತು ಬಂಧಕ್ಕೆ ಅನುಗುಣವಾಗಿ ಕೆಲವೇ ಮಾತುಗಳಲ್ಲಿ ಹೀಗೆ ಹೇಳಬಹುದು. ದೇವತೆಗಳ ಬೋಧೆಗೆ ಅನುಗುಣವಾಗಿ ಮನ್ಮಥನು ಶಿವನ ಮೇಲೆ ದಂಡೆತ್ತಿ ಹೋಗಿ ಯುದ್ಧಮಾಡಿ ಶಿವನಿಂದ ಸುಟ್ಟು ಹೋಗುವನು. ರತಿ ಹೆಣ್ಣಿನ ಮುತ್ತೈದೆತನವನ್ನು ಪ್ರತಿಪಾದಿಸಿ ಪಾರ್ವತಿಯನ್ನು ಒಪ್ಪಿಸುವಳು. ಶಿವನು ರತಿಯನ್ನು ಸಂತೈಸಿ ಹೆಣ್ಣಿಗೆ ವೈಧವ್ಯ ಲಕ್ಷಣವಿಲ್ಲವೆಂದು ಹರಸುವನು. ಮನ್ಮಥನಿಗೆ ಮನಸಿಜನಾಗಿ ಜೀವಿಸಲು ಅವಕಾಶಕೊಟ್ಟು ರತಿಗೆ ಮುತ್ತೈದೆತನ ನೀಡುವನು. ಇದರ ಪರಿಣಾಮವಾಗಿ ಮನ್ಮಥ ಕೃಷ್ಣ-ರುಕ್ಮಿಣಿಯರಲ್ಲಿ ಪ್ರದ್ಯುಮ್ನನಾಗಿ ಹುಟ್ಟುವನು. ಗಂಡನಿಲ್ಲದ ರತಿಯನ್ನು ಶಂಬರಾಸುರ ಬಯಸುವನು. ರತಿ ತನ್ನ ಪತಿವ್ರತೆತನವನ್ನು ಪ್ರತಿಪಾದಿಸುವಳು. ಶಂಬರಾಸುರನ ಹೆಂಡತಿ ತನ್ನ ಗಂಡನಿಗೆ ಗಂಡನುಳ್ಳವಳ ಆಸೆ ಮಾಡಬೇಡವೆಂದು ಬುದ್ಧಿ ಹೇಳುವಳು. ಮಗು ಪ್ರದ್ಯುಮ್ನನನ್ನು ಕೊಲ್ಲಲು ಶಂಬರಾಸುರನನ್ನು ನಾರದ ಪ್ರಚೋದಿಸಿ ಅದನ್ನು ಅಪಹರಿಸುವಂತೆ ಮಾಡುವನು. ಅವನು ಮಗುವನ್ನು ಅಪಹರಿಸಿ ಸಮುದ್ರದ ಮೇಲೆ ಹೊತ್ತೊಯ್ಯುವಾಗ ಕೃಷ್ಣನಿಂದ ಪ್ರೇರಿತನಾಗಿ ಅನ್ಯಮನಸ್ಕ ಸ್ಥಿತಿಯಲ್ಲಿ ಮಗುವನ್ನು ಸಮುದ್ರದಲ್ಲಿ ಚೆಲ್ಲುವನು. ಆ ಮಗುವನ್ನು ನುಂಗಿದ ಸಮುದ್ರದ ಮೀನನ್ನು ಹಿಡಿದ ಬೆಸ್ತನೊಬ್ಬ ಅದನ್ನು ತಂದು ಶಂಬರಾಸುರನಿಗೆ ಕಾಣಿಕೆಯಾಗಿ ಕೊಡುವನು. ಶಂಬರಾಸುರನ ತೊತ್ತಾಗಿದ್ದ ರತಿ ಅದರ ಅಡುಗೆ ಮಾಡಲು ಹೊಟ್ಟೆ ಬಗಿದಾಗ ಆ ಮಗುವನ್ನು ಕಾಣುವಳು. ಆ ಮಗುವೆ ಅವಳ ಪತಿಯೆಂದು ಅಶರೀರವಾಣಿಯಾಗುವುದು. ರತಿ ಆ ಮಗುವನ್ನು ಕಾಪಾಡಿ ಬೆಳೆಸಿ ಸಕಲ ವಿದ್ಯೆಗಳನ್ನು ನೀಡಿ ಶಂಬರಾಸುರನ ವಧೆ ಮಾಡಿಸುವಳು. ನಂತರದಲ್ಲಿ ಪ್ರದ್ಯುಮ್ನನೊಂದಿಗೆ ರತಿಯ ವಿವಾಹವಾಗುವುದು. ವಿವಾಹದ ಭಾಗವಾಗಿ ಮನೆ ತುಂಬಿಸಿಕೊಳ್ಳುವ ಮತ್ತು ಗರ್ಭದಾನ ಮಾಡುವ ಆಚರಣೆಗಳು ನಡೆಯುವುವು. ವಸಂತೋತ್ಸವ. ಜಲಕ್ರೀಡೆ ನಡೆದು ಅನಿರುದ್ಧನ ಜನನವಾಗುವುದು. ಅನಿರುದ್ಧನು ದೊಡ್ಡವನಾಗಿ ಬೆಳೆದು ಜಾರ ಚೋರರನ್ನು ಶಿಕ್ಷಿಸುವೆ ಎನ್ನುವ ರೀತಿಯಲ್ಲಿ ನಗರ ಶೋಧನೆ ನಡೆಸುವನು. ಅನಂತರ ಬೇಟೆಗೆ ಹೊರಟು ನತಜನರನ್ನು ಉನ್ನತದತ್ತ ಕೊಂಡೊಯ್ಯುವ ವೀರನೆಂಬ ಹೊಗಳಿಕೆಗೆ ಪಾತ್ರನಾಗುವನು.

ಶೋಣಿತಪುರದ ಬಾಣಾಸುರ ಶಿವಭಕ್ತ ಅವನೊಬ್ಬ ಶೃಂಗಾರಲೋಲ ಮತ್ತು ಅಪ್ರತಿಮ ಭಕ್ತ. ಅವನಿಗೆ ಉಷಾ ಎಂಬ ಮಗಳು. ಅವಳು ಶಿವನಿಗೆ ಪ್ರಿಯಕರನನ್ನು ನೀಡುವಂತೆ ಕೋರಿ ವರ ಬೇಡುವಳು. ಕನಸಿನಲ್ಲಿ ಬಂದು ಮಿಲನವಾಗುವ ಪುರುಷನೇ ಅವಳ ಪ್ರಿಯಕರನೆಂದು ತಿಳಿಯುವುದು. ಉಷೆ ಈ ಕನಸು ಕಂಡಂದಿನಿಂದ ಪ್ರಿಯಕರನ ವಿಷಯದಲ್ಲಿ ಅವಳ ವಿರಹ ಹೆಚ್ಚುವುದು. ಅವಳು ಪ್ರಿಯಕರನ ಚಿತ್ರಪಟವನ್ನು ತಯಾರಿಸಿ, ಗೆಳತಿ ಚಿತ್ರಲೇಖೆಯ ಸಹಾಯದಿಂದ ಅವನನ್ನು ಪತ್ತೆ ಹಚ್ಚಿ ತನ್ನಲಿಗೆ ಕರೆಸಿಕೊಳ್ಳುವಳು. ಅವರಿಬ್ಬರೂ ಏಕಾಂತ ನಿಲಯದಲ್ಲಿ ವಿವಾಹವಾಗುವರು. ಬಾಣಾಸುರನಿಗೆ ಈ ವಿಷಯ ತಿಳಿದು ಅನಿರುದ್ಧನ ಮೇಲೆ ಯುದ್ಧ ಮಾಡಲು ತನ್ನ ಮಂತ್ರಿ ಕುಂಭಾಂಡನನ್ನು ಕಳುಹಿಸುವನು. ನಂತರ ಕುಂಭಾಂಡ ಮತ್ತು ಅನಿರುದ್ಧರ ನಡುವೆ ಯುದ್ಧ ನಡೆದು ಬಾಣಾಸುರನು ಅನಿರುದ್ಧನನ್ನು ಬಂಧಿಸಿ ಸೆರೆಯಲ್ಲಿಡುವನು. ಸುದ್ದಿ ತಿಳಿದ ಶ್ರೀಕೃಷ್ಣ ಸೈನ್ಯ ಸಮೇತನಾಗಿ ದಂಡೆತ್ತಿ ಬಂದು ಯುದ್ಧ ಮಾಡುವನು. ಮೊದಲಿಗೆ ಹರಿ-ಹರರ ನಡುವೆ ಯುದ್ಧ ನಡೆಯುವುದು. ಅವರಿಬ್ಬರೂ ಯುದ್ಧದಲ್ಲಿ ಸಮಾನ ಬಲಶಾಲಿಗಳಾಗಿ ಸಮಾನತೆ ಮೆರೆಯುವರು. ನಂತರ ಶ್ರೀಕೃಷ್ಣ ಮತ್ತು ಬಾಣಾಸುರನ ನಡುವೆ ಯುದ್ಧ ನಡೆಯುವುದು. ಬಾಣಾಸುರನು ತನ್ನ ಮಗಳಾದ ಉಷಾದೇವಿಯನ್ನು ಅನಿರುದ್ಧನಿಗೆ ಕೊಟ್ಟು ವಿವಾಹ ಮಾಡಲು ಒಪ್ಪಿಕೊಂಡು ಶಿವಗಣ ಪದವಿಯನ್ನು ಪಡೆಯುವನು. ಶ್ರೀಕೃಷ್ಣನು ಉಷಾ ಅನಿರುದ್ಧರನ್ನು ಕರೆದುಕೊಂಡು ದ್ವಾರಕೆಗೆ ಬರುವನು.

ಈ ಕಥಾಬಂಧದಲ್ಲಿ ಶಿವನು ರತಿಯ ವೈಧವ್ಯವನ್ನು ನಿರಾಕರಿಸುವ ಚಿತ್ರ ಮತ್ತು ವಿಧವೆಯಾಗಿದ್ದ ರತಿ, ಕೃಷ್ಣನ ಮಗ ಪ್ರದ್ಯುಮ್ನನನ್ನು ಮರುಮದುವೆಯಾಗುವ ಸಂದರ್ಭ ಸೇರಿಕೊಂಡಿದೆ. ಗಂಡ ಸತ್ತ ಹೆಣ್ಣುಮಕ್ಕಳು ಮರುಮದುವೆಯಾಗದ ವಿಧವೆಯರಾಗುವುದು ಮತ್ತು ಅವರ ವಿವಾಹಕ್ಕೆ ಒತ್ತು ನೀಡುವ ಮೂಲಕ ಆದರ್ಶೀಕರಿಸಿದ್ದು ಕಾಣುತ್ತದೆ. ಗಂಡ ಸತ್ತ ಹೆಣ್ಣು ವಿಧವೆಯಲ್ಲವೆಂಬ ವಿಚಾರವನ್ನು ಶಿವನು ಎತ್ತಿ ಹಿಡಿದರೆ, ಅಂಥ ಹೆಣ್ಣುಮಕ್ಕಳ ಮರುಮದುವೆಗೆ ಶ್ರೀಕೃಷ್ಣ ಮುಂದಾಳುತ್ವ ವಹಿಸುತ್ತಾನೆ. ಗಂಡ ಸತ್ತ ಹೆಣ್ಣನ್ನು ತನ್ನ ಮಗನಿಗೆ ತಂದುಕೊಂಡು ಆದರ್ಶ ಮೆರೆಯುತ್ತಾನೆ. ಈ ಮೂಲಕ ಪುರುಷ ಪ್ರಧಾನ ಸಮಾಜದಲ್ಲಿ ನಲುಗುತ್ತಿರುವ ಹೆಣ್ಣಿನ ಜೀವನಕ್ಕೊಂದು ಹೊಸ ಬೆಳಕು ತರುವ ಪ್ರಯತ್ನ ಕಾಣುತ್ತದೆ. ಅಂದಿನ ಸಮಾಜದಲ್ಲಿ

> **ವಿಪರ್ಯಾಸದ ಸಂಗತಿಯೆಂದರೆ ಮಧ್ಯಕಾಲೀನ ಜೀವನ ಮೌಲ್ಯ ಮತ್ತು ಸಮಾಜ ವ್ಯವಸ್ಥೆಯನ್ನು ರಾಜ ಮತ್ತು ಪುರೋಹಿತ ವ್ಯವಸ್ಥೆಯೆ ಪ್ರಧಾನವಾಗಿ ರೂಪಿಸಿದ್ದು, ತನ್ನ ಹಿಂದಿನ ವ್ಯವಸ್ಥೆಯನ್ನು ಬದಲಾದ ಕಾಲಘಟ್ಟದಲ್ಲಿ ಅದೇ ಸಂಪ್ರದಾಯ ಮನಸ್ಸು ನಿರಾಕರಣ ಮನೋಭಾವ ಬೆಳೆಸಿಕೊಂಡು ಅದನ್ನು ತನ್ನದಲ್ಲದ್ದೆಂದು ಸಾಬೀತು ಪಡಿಸಲು ಮುಂದೆ ನಿಂತಿರುವುದು ಈ ಮನಸ್ಥಿತಿ 'ಮೋಹನ ತರಂಗಿಣಿ' ಸಂಬಂಧದಲ್ಲೂ ಕೆಲಸ ಮಾಡಿದೆ. ಹದಿನೆಂಟು ಮತ್ತು ಹತ್ತೊಂಭತ್ತನೆಯ ಶತಮಾನದಲ್ಲಿ ಭಾರತೀಯ ಸಮಾಜದ ಮೇಲುವರ್ಗ ಮತ್ತು ಬ್ರಿಟಿಷರು ರೂಪಿಸಿದ ಚರಿತ್ರೆಗಿಂತ ಇದು ಭಿನ್ನ ಬಗೆಯ ಜೀವನ ವಿಧಾನ ಮತ್ತು ಚರಿತ್ರೆಯನ್ನು ಒಳಗೊಂಡಿದೆ.**

ವ್ಯಾಪಕವಾಗಿ ವಿಧವೆ ಮತ್ತು ವಿಧವಾ ವಿವಾಹ ವಿರೋಧ ಕಲ್ಪನೆ ಇದರ ಪರಿಣಾಮವಾಗಿ ಸಮಾಜದ ಎಲ್ಲ ಹೆಣ್ಣುಮಕ್ಕಳ ಕುರಿತ ಜೀವನ ಮೌಲ್ಯಗಳನ್ನು ಬದಲಾಯಿಸುವ ಪ್ರಯತ್ನವನ್ನು ರೂಢಿಗತ ಪೌರಾಣಿಕ ಕಥೆಗಳ ಮರುಜೋಡಣೆ ಮಾಡಿದೆ. ಇದಕ್ಕಾಗಿ ವೈದಿಕ ದೈವಗಳಾದ ಹರಿ–ಹರರಿಗೆ ಮುಂಚೂಣಿಯ ಸ್ಥಾನ ನೀಡಿದೆ. ಅಂದು ಪ್ರಭಾವಶಾಲಿಗಳಾಗಿದ್ದ ಈ ವೈದಿಕ ದೈವಗಳೆ ಸಾಮಾಜಿಕ ಜೀವನ ಮೌಲ್ಯಗಳ ಬದಲಾವಣೆಗೆ ಮೂಲ ಕಾರಣಕರ್ತರೆಂದು ಬಿಂಬಿಸಲಾಗಿದೆ.

ಜನಸಮುದಾಯಗಳ ಸುಪ್ತಮನದಲ್ಲಿರುವ ಹೆಣ್ಣಿನ ಪಾವಿತ್ರ್ಯ ಮತ್ತು ಸಂಕರ ಕುರಿತ ನಂಬಿಕೆಗಳನ್ನು ಪರಿಷ್ಕರಿಸುವ ಸಲುವಾಗಿ ವೈದಿಕ ದೈವಗಳ ಕೈಯಲ್ಲೆ ಈ ಆಚರಣೆಗಳು ರೂಢಿಗೆ ತರುವ ಕಥೆಯನ್ನು ಅಭಿವ್ಯಕ್ತಿಸಲಾಗಿದೆ. ಸಮಾಜದ ಕಟ್ಟುಪಾಡುಗಳು ಮತ್ತು ಸ್ವೇಚ್ಛಾ ಪ್ರವೃತ್ತಿಗಳಿಂದ ಗಂಡ ಸತ್ತ ಹೆಣ್ಣುಮಕ್ಕಳು ನರಳುತ್ತಿದ್ದು, ಗಂಡುಮಕ್ಕಳಂತೆ ಸಮಾನ ಪ್ರಕೃತಿ ಪ್ರವೃತ್ತಿ ಪಡೆದ ಇವರ ಬಾಳಿನ ಗೋಳಿಗೆ ಪರಿಹಾರ ಹುಡುಕಲು ಯತ್ನಿಸಲಾಗಿದೆ. ಹೆಣ್ಣುಮಕ್ಕಳಿಗೆ ಗಂಡ ಸತ್ತ ಮೇಲೆ ಮರುಮದುವೆಗೆ ಅವಕಾಶ ನೀಡದಿದ್ದಲ್ಲಿ ಸಾಮಾಜಿಕ ಸಮಸ್ಯೆಗಳು ಉಂಟಾಗಿ ಹೆಣ್ಣಿನ ಜೀವನ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೀನಾಯವಾಗುತ್ತದೆ. ಇದನ್ನು ತಪ್ಪಿಸಿ ಹೆಣ್ಣಿನ ಸಾಮಾಜಿಕ ಸ್ಥಿತಿ ಎತ್ತರಿಸುವ ಮತ್ತು ಸಮಾಜದ ಮನೋಸ್ವಾಸ್ಥ್ಯ ಬೆಳೆಸುವ ದೃಷ್ಟಿಯನ್ನು ಕನಕದಾಸರ ಈ ಕಾವ್ಯದಲ್ಲಿ ಕಾಣಬಹುದು. ಅದಕ್ಕಾಗಿ ಸಮಾಜ ಸುಧಾರಣೆಯ ಮೂಲ ಆಶಯವನ್ನು ವೈದಿಕ ದೈವಗಳ ಪುರಾಣ ಕಥೆಗಳ ಮರು ಜೋಡಣೆಯಲ್ಲಿ ಕಂಡು ಅರಸಲಾಗಿದೆ.

ಶ್ರೀಕೃಷ್ಣನ ಮೊಮ್ಮಗನೂ ವಿಧವಾ ವಿವಾಹವಾದ ರತಿಯ ಮಗನೂ ಆದ ಅನಿರುದ್ಧ ಈ ಪರಂಪರೆಯನ್ನು ಮುಂದುವರೆಸುವಂತೆ ನಗರ ಶೋಧನೆ ಮತ್ತು ಬೇಟೆಯ ವರ್ಣನೆಗಳು ಬಿಂಬಿಸುತ್ತವೆ. ರಾಜ್ಯ ಮತ್ತು ಸಮಾಜೋಭಿವೃದ್ಧಿ ಕಾರ್ಯವನ್ನು ರಾಜ್ಯದ ಮುಖ್ಯಸ್ಥನಾದ ರಾಜನೇ ಮಾಡಬೇಕಾದ ಕಾರ್ಯವಾಗಿದ್ದು, ರಾಜ್ಯದ ಪ್ರತಿನಿಧಿತ್ವ ಪಡೆದ ಯುವರಾಜ ಅನಿರುದ್ಧ ಜನರ ಸಮಸ್ಯೆಗಳನ್ನು ತಿಳಿಯಲು ನಗರಶೋಧ ಕಾರ್ಯ ಕೈಗೊಳ್ಳುತ್ತಾನೆ. ಸಾಮಾಜಿಕ ಸಮಸ್ಯೆಗಳ ಕೇಂದ್ರವಾದ ವೇಶ್ಯವಾಟಿಕೆಯ ಕೇರಿಗಳಲ್ಲಿ ಅವನ ಸಂಚಾರ ಸಾಗುತ್ತದೆ. ಅವನು ಜಾರ–ಚೋರರನ್ನು ಶಿಕ್ಷಿಸುವ ರೀತಿಯಲ್ಲಿ ನಗರ ಶೋಧನೆ ನಡೆಸುತ್ತಾನೆ. ಜಾರ–ಚೋರರು ಸಾಮಾಜಿಕ ಸಮಸ್ಯೆಗಳ ಮೂಲ ವ್ಯಕ್ತಿಗಳಾಗಿದ್ದು, ಇದರಿಂದ ಹೆಣ್ಣಿನ ಸ್ಥಿತಿ ಕೇವಲವಾಗುವುದನ್ನು ತಪ್ಪಿಸುವ ಯೋಜನೆ ಹೊಂದಿರುವುದು ಕಾಣುವುದು.

ಬೇಟೆಯ ವರ್ಣನೆಯ ಭಾಗದಲ್ಲಿ ಅನಿರುದ್ಧ ಕಾಡಿಗೆ ಭೇಟಿಕೊಟ್ಟು ಅಲ್ಲಿದ್ದ ಬುಡಕಟ್ಟು ಜನರ ಆತಿಥ್ಯ ಸ್ವೀಕರಿಸುತ್ತಾನೆ. ಅಲ್ಲಿ ಮೂಲಭೂತ ಅಗತ್ಯಗಳಿಂದ ವಂಚಿತರಾದ ಅವರ ಜೀವನದ ಪರಿಚಯವಾಗುತ್ತದೆ. ಕಾಡಿನೊಳಗೆ ದೊರಕುವ ಆಹಾರ ಸಾಮಗ್ರಿಗಳಲ್ಲೆ ತಮ್ಮ ಜೀವನವನ್ನು ಸಮೃದ್ಧಗೊಳಿಸಿಕೊಂಡು ತೃಪ್ತರಾಗಿ ಬದುಕುವ ಅವರ ಜೀವನ ಶೈಲಿ ಅವರ ಬಗೆಗೆ ಪ್ರೀತಿಯನ್ನು ಉಂಟುಮಾಡುತ್ತದೆ. ಅವರು ಅನಿರುದ್ಧನಿಗಾಗಿ ಕುಣಿದು ಸ್ವಾಗತಿಸಿ ಗೌರವ ತೋರುವುದು, ಅವನ ಬರುವಿಕೆಗಾಗಿ ಸಂತೋಷಪಡುವುದು, ರಾಜ್ಯದ ಯುವರಾಜನಿಗೆ ಕಾಡಿನ ಫಲಗಳನ್ನು ಅರ್ಪಿಸಿ ಆತಿಥ್ಯ ನೀಡುವುದು, ತಮ್ಮ ಬೇಟೆಯ ಅತ್ಯುತ್ತಮ ವಸ್ತುಗಳನ್ನು ಕಾಣಿಕೆ ನೀಡಿ ಸನ್ಮಾನಿಸುವುದು, ತಮ್ಮ ಅಧೀನತೆಯನ್ನು ಒಪ್ಪಿಕೊಂಡು ತಮ್ಮ ಕಷ್ಟ ಸಂಕಷ್ಟಗಳಿಗೆ ಪರಿಹಾರವನ್ನು ರಾಜ ವ್ಯವಸ್ಥೆ ಮಾಡಬೇಕೆಂದು ಪರೋಕ್ಷವಾಗಿ ಅರುಹುವುದು, ಅದಕ್ಕನುಗುಣವಾಗಿ "ನಂದನಂದನ ಸುಪ್ವಿ ನತಜನಹಿತ ಸುಪ್ವಿ ಎಂದವರೊಲಿದು" ಹೊಗಳುವುದು ಕಾಣುತ್ತದೆ. ಪ್ರಧಾನ ಸಮಾಜದ ವ್ಯವಸ್ಥೆಯಿಂದ ಆಚೆಗಿರುವ ಬುಡಕಟ್ಟು ಜನರನ್ನು ಮೇಲಕ್ಕೆತ್ತುವ ಆಶಯ ಇಲ್ಲಿ ಬಿಂಬಿತವಾಗಿದೆ.

> **ವಿಜಯನಗರ ನೆಲೆಸಿದ್ದ ಮೂಲ ಕ್ಷೇತ್ರ ಹಂಪೆಯಾಗಿದ್ದು ಅದು ಶೈವ ಕ್ಷೇತ್ರವಾಗಿತ್ತು. ಅಲ್ಲಿ ಕಾಲಕ್ರಮೇಣ ವೈಷ್ಣವರು ಮೇಲುಗೈ ಸಾಧಿಸಿದರು. ವೈಷ್ಣವರು ರಾಜಕೀಯಾಧಿಕಾರದ ಮುಖ್ಯಸ್ಥಾನದಲ್ಲಿದ್ದು ತಮ್ಮ ಪಂಥವನ್ನು ನೆಲೆಗೊಳಿಸುವಲ್ಲಿ ವಹಿಸಿದ ಪ್ರಧಾನ ಪಾತ್ರ ಶೈವರಲ್ಲಿ ಅಸಮಾಧಾನಕ್ಕೆ ಎಡೆಕೊಟ್ಟಿತ್ತು.**

ಅನಿರುದ್ಧ ಮತ್ತು ಉಷೆಯರ ವಿವಾಹದ ಸಂಬಂಧದಲ್ಲಿ ಶ್ರೀಕೃಷ್ಣನು ಅದನ್ನು ಆಗುಗೊಳಿಸಲು ಅವರ ಪರವಾಗಿ ನಿಂತು ಯುದ್ಧದಲ್ಲಿ ಹೋರಾಡುತ್ತಾನೆ. ಇವರಿಬ್ಬರು ಕ್ರಮವಾಗಿ ವೈದಿಕ ಧರ್ಮದ ವೈಷ್ಣವ ಮತ್ತು ಶೈವ ಪಂಥಗಳನ್ನೂ ಸುರ ಅಸುರರನ್ನೂ ಬ್ರಾಹ್ಮಣ ಅಬ್ರಾಹ್ಮಣರನ್ನೂ ಪ್ರತಿನಿಧಿಸುತ್ತಿದ್ದು ಅವರ ನಡುವಿನ ಅಂತರ, ತಾರತಮ್ಯ ಮತ್ತು ವೈರತ್ವವನ್ನು ಮದುವೆಯ ಮೂಲಕ, ರಕ್ತ ಸಂಬಂಧವನ್ನಾಗಿ ಬೆಸೆಯುವ ಮೂಲಕ ಹೋಗಲಾಡಿಸಿ ಸಮನ್ವಯ ಸಾಧಿಸಲು ನಡೆಯುವ ಹೋರಾಟದ ಹಾಗೆಯೂ ಕಾಣುತ್ತದೆ. ವಿಜಯನಗರ ನೆಲೆಸಿದ್ದ ಮೂಲ ಕ್ಷೇತ್ರ ಹಂಪೆಯಾಗಿದ್ದು ಅದು ಶೈವ ಕ್ಷೇತ್ರವಾಗಿತ್ತು. ಅಲ್ಲಿ ಕಾಲಕ್ರಮೇಣ ವೈಷ್ಣವರು ಮೇಲುಗೈ ಸಾಧಿಸಿದರು. ವೈಷ್ಣವರು ರಾಜಕೀಯಾಧಿಕಾರದ ಮುಖ್ಯಸ್ಥಾನದಲ್ಲಿದ್ದು ತಮ್ಮ ಪಂಥವನ್ನು ನೆಲೆಗೊಳಿಸುವಲ್ಲಿ ವಹಿಸಿದ ಪ್ರಧಾನ ಪಾತ್ರ ಶೈವರಲ್ಲಿ ಅಸಮಾಧಾನಕ್ಕೆ ಎಡೆಕೊಟ್ಟಿತ್ತು. ವಿಜಯನಗರದ ಅವನತಿಗೆ ಮೂಲವಾದ ಹಲವು ಕಾರಣಗಳಲ್ಲಿ ಇದೂ ಒಂದೆಂದು ಗುರುತಿಸಿದ್ದು ಇತಿಹಾಸದ ಪುಟಗಳಲ್ಲಿ ಕಾಣಬಹುದು. ಇದು ಸಮಾಜದಲ್ಲಿ ಅಂದು ನೆಲೆಸಿದ್ದ ಧಾರ್ಮಿಕ ಪಂಥಗಳು, ಸಾಮಾಜಿಕ ಸಮುದಾಯಗಳು, ಜಾತಿ ಸಮುದಾಯಗಳ ನಡುವಿನ ಅಸಮಾನತೆಯನ್ನು ಎತ್ತಿ ತೋರಿಸುತ್ತದೆ. 'ಮೋಹನ ತರಂಗಿಣಿ' ಅವನ್ನು ತೊಡೆದು ಹಾಕಿ ಅವುಗಳ ನಡುವೆ ಸಾಮರಸ್ಯವನ್ನು ಸಾಧಿಸುವ ನಿಲುವು ಹೊಂದಿದೆ.

ಹೀಗೆ ಈ ಕೃತಿ ತನ್ನ ಸಮಕಾಲೀನ ಸಮಾಜದ ವರ್ಣನೆಯನ್ನು ಅದರ ಸಂವೇದನೆಗೆ ಇಚ್ಛೆಯಾಗುವ ರೀತಿಯಲ್ಲಿ ಮಂಡಿಸುತ್ತಲೇ ಅದರ ವಿರುದ್ಧ ನಡೆಯಲ್ಲಿ ಸಮಾಜ ಸುಧಾರಣೆಯ ನಿಲುವನ್ನು ಅನಾವರಗೊಳಿಸಿದೆ. ಇದು ಕನಕದಾಸರ ಸಮಾಜ ಚಿಂತಕನ ದಾರ್ಶನಿಕತೆಯನ್ನು ನಮ್ಮ ಮುಂದೆ ಬಿಚ್ಚಿಡುತ್ತದೆ. ಇಡೀ ಕಾವ್ಯದ ಆಶಯಕ್ಕೆ ವಿರುದ್ಧ ನಡೆಯ್ಲಲಿ ಕಾವ್ಯದ ಮೇಲುತೋರಿಕೆಯ ವರ್ಣನೆ ಮಾಡಲಾಗಿದೆ. ಇದು ಈ ಕೃತಿಯ ವಸ್ತು ಮತ್ತು ಬಂಧದ ಬಿಗಿ ನೇಯ್ಗೆಯಲ್ಲಿ ಆಶಯದ ಮಹತ್ವ ಅಡಗಿರುವುದನ್ನು ಮನಗಾಣಿಸುತ್ತದೆ. □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ನಾಲ್ಕು ಶತಮಾನಗಳ ಹಿಂದೆ ಅಂದರೆ ಕ್ರಿ.ಶ.೧೬೧೯ರಲ್ಲಿ ಸಂಕೋಲೆಯಿಂದ ಬಂಧಿಸಿ, ಅವರ ಇಚ್ಛೆಗೆ ವಿರುದ್ಧವಾಗಿ ಒಂದು ಬ್ಯಾಚ್ ಕಪ್ಪುಜನರನ್ನು ಆಫ್ರಿಕಾದಿಂದ ಈಗ ಅಮೆರಿಕ ಎಂದು ಕರೆಲಾಗಿರುವ ಹೊಸ ಜಗತ್ತಿಗೆ ಒಯ್ಯಲಾಗಿತ್ತು. ಈಗ ಆಫ್ರಿಕಾ ಮೂಲದ ಅಮೆರಿಕನ್ನರೆಂದು ಸರ್ಕಾರಿ ಪರಿಭಾಷೆಯಲ್ಲಿ ಕರೆಯಲಾಗುತ್ತಿರುವ ಕಪ್ಪು ಜನ ೧೯೫೫ರ ತನಕ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಪ್ರತ್ಯೇಕವಾಗಿ ಕೂರುವ ವ್ಯವಸ್ಥೆ ಇತ್ತು. ಹೀಗಿರುವಾಗ ೧೯೫೫ರಲ್ಲಿ ರೋಸಾ ಪಾರ್ಕ್‌ರ ಹೋರಾಟ ಈ ಅವಮಾನಕರ ವ್ಯವಸ್ಥೆಯನ್ನು ಕೊನೆಗಾಣಿಸಿತು. ಇದಾದ ಕೇವಲ ಅರ್ಧಶತಮಾನ ಕಳೆಯುವಷ್ಟರಲ್ಲೇ ಬಾರಾಕ್ ಒಬಾಮ ಎನ್ನೋ ಕಪ್ಪು ಜನರ ವ್ಯಕ್ತಿ ಅಮೆರಿಕಾದ ಅಧ್ಯಕ್ಷ ಸ್ಥಾನವನ್ನ ಲಂಕರಿಸುತ್ತಿದ್ದಾರೆ.

ಅನು : ಡೊಮಿನಿಕ್ ಡಿ

ಎಮ್ಮೆಗಳಿಗೆ ತಮ್ಮ ಸ್ವಾತಂತ್ರ್ಯವನ್ನು ಬಿಟ್ಟುಕೊಡಲು ಪ್ರಮುಖ ಕಾರಣಗಳಿವೆ ಎಂದು ಮೂರು ವರ್ಗದ ಜನ ಭಾವಿಸಿದ್ದಾರೆ. ಒಂದು ವರ್ಗದ ಜನಕ್ಕೆ ತುಂಡು ಭೂಮಿ ಮಾತ್ರವಿದ್ದು ಬೇರಾವುದೇ ಆದಾಯ ಮೂಲ ಇವರಿಗಿಲ್ಲ. ಇವರಿಗೆ ಒಂದು ಜೊತೆ ಎಮ್ಮೆಗಳಿದ್ದಲ್ಲಿ ಅದು ಅವರ ಬದುಕಿನ ಮೂಲವಾಗುತ್ತದೆ.

ಎರಡನೇ ವರ್ಗದ ಜನಕ್ಕೆ ಸಾಕಾಗುವಷ್ಟು ಭೂಮಿಯಿದ್ದು, ಅವರಿಗೆ ಇತರೆ ಆದಾಯದ ಮೂಲವೂ ಇದೆ. ಅವರಿಗೆ ಸ್ಥಳೀಯ ಹಾಲಿನ ಮೇಲೆ ಅಪನಂಬಿಕೆ ಇರುವುದರಿಂದ ಎಮ್ಮೆಗಳನ್ನು ಸಾಕುತ್ತಾರೆ.

ಮೂರನೇ ವರ್ಗದವರಿಗೆ ಅಧಿಕ ಭೂಮಿ ಮತ್ತು ಆದಾಯ ಸಾಕಷ್ಟಿದೆ. ಇಂಥವರಿಗೆ ಎಮ್ಮೆಗಳು ಸಾಂಸ್ಕೃತಿಕ ಅಗತ್ಯವಾಗಿರುತ್ತದೆ. ಆದ್ದರಿಂದ ಅವರು ಎಮ್ಮೆಗಳನ್ನಿಟ್ಟುಕೊಳ್ಳುತ್ತಾರೆ.

ಈ ಹಿಂದಿನ ಅಂಕಣಗಳಲ್ಲಿ ಚರ್ಚಿಸಿರುವಂತೆ ಎಮ್ಮೆಗಳು ಹಿಂದುಳಿದಿರುವಿಕೆ ಮತ್ತು ಹಿಂಸೆಗೆ ಕಾರಣವಾಗಿವೆ. ಎಮ್ಮೆಗಳು ಮತ್ತು ಪ್ರಜಾಪ್ರಭುತ್ವ ಎಂದೂ ಒಟ್ಟಿಗೆ ಇರಲಾರವು. ಅಲ್ಲದೆ, ಎಮ್ಮೆಗಳು ಎಂದೂ ಶಿಕ್ಷಣದ ಬೆಳಕನ್ನು ಕಾಣಲು ನೆರವಾಗುವುದಿಲ್ಲ. ಇದರೊಡನೆ ಗ್ರಾಮೀಣ ಭಾರತದ ಬಡತನಕ್ಕೆ ಅವು ನೇರವಾಗಿ ತಮ್ಮ ಕೊಡುಗೆಯನ್ನು ನೀಡುತ್ತವೆ ಮತ್ತು ತಮ್ಮ ಗುಲಾಮಿ ಮಾಲೀಕರಿಂದ ಹಣ ಚಲಾವಣೆಗೆ ಬಾರದಂತೆ ತಡೆಯುತ್ತವೆ.

ಗ್ರಾಮೀಣ ಭಾರತದತ್ತ ರಸಗೊಬ್ಬರ ಸಬ್ಸಿಡಿ, ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ, ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ, ಮಧ್ಯಾಹ್ನದ ಊಟ ಯೋಜನೆ, ಸಾರ್ವಜನಿಕ ವಿತರಣಾ ವ್ಯವಸ್ಥೆ ಎಂದು ಹತ್ತು ಹಲವು ಯೋಜನೆಗಳ ಮೂಲಕ ಅಧಿಕ ಹಣ ಹರಿಯುತ್ತಿದೆ. ಆದರೆ ಇವೆಲ್ಲಾ ಅಂತಿಮವಾಗಿ ಎಮ್ಮೆ ರಾಷ್ಟ್ರೀಯವಾದಿಗಳ ಕೈ ಸೇರುತ್ತವೆ.

ನಾನು ಉತ್ತರ ಪ್ರದೇಶದಲ್ಲಿ ಗಮನಿಸಿದಂತೆ ಭಾರತದ ಕೈಗಾರೀಕರಣ, ನಗರೀಕರಣ, ಆಧುನಿಕತೆ ಮತ್ತು ಪ್ರಜಾಪ್ರಭುತ್ವವನ್ನು ವಿರೋಧಿಸುವವರು ಈ ಎಮ್ಮೆ ರಾಷ್ಟ್ರೀಯವಾದಿಗಳೇ ಆಗಿರುತ್ತಾರೆ. ಹೀಗಿರುವಾಗ ಭಾರತೀಯ ಜೀವಂತ ಬೌದ್ಧಿಕ ವರ್ಗ ಈ ಎಮ್ಮೆ ರಾಷ್ಟ್ರೀಯವಾದಿಗಳನ್ನು ಹಿಮ್ಮೆಟ್ಟಿಸದಿದ್ದರೆ ಭಾರತಕ್ಕೆ ಮತ್ತು ಈ ಎಮ್ಮೆ ಗುಲಾಮಿ ಮಾಲೀಕರಿಗೆ ಯಾವ ಒಳಿತೂ ಸಹ ಆಗುವುದಿಲ್ಲ. ಅಂದರೆ ವೈಯಕ್ತಿವಾಗಿ ಎಮ್ಮೆ ಮಾಲೀಕತ್ವ ಹೊಂದಿರುವುದನ್ನು ಕೊನೆಗಾಣಿಸಲೇಬೇಕಾಗಿದೆ.

ಆದರೆ ಇದು ಹೇಗೆ ಸಾಧ್ಯ? ಹಾಲು ಸರಬರಾಜಿಗೆ ಇದರಿಂದ ತೊಂದರೆಯಾಗುವುದಿಲ್ಲವೇ? ಈ ಎಮ್ಮೆ ಒಡೆತನವನ್ನು ಕಾನೂನಿನ ಮೂಲಕ ತಡೆಯಬಹುದೇ? ಈ ಕಾನೂನು ಅಸ್ಪೃಶ್ಯತೆಯನ್ನು ನಿವಾರಿಸಬಹುದೇ? ಒಬಿಸಿ-ಶೂದ್ರರನ್ನು ಕಾನೂನು ಆಧುನಿಕಗೊಳಿಸಬಹುದೇ? ಎಮ್ಮೆ ರಾಷ್ಟ್ರೀಯತೆಯಾಗಲೀ, ಕೃಷಿಯಾಗಲೀ ಅಥವಾ ದಲಿತ್ ಫೋಬಿಯವಾಗಲೀ ಅಂತಿಮವಾಗಿ ಇವು ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆ ಅಲ್ಲ. ಆದರೆ ಇವೆಲ್ಲಾ ಸಾಮಾಜಿಕ-ಸಾಂಸ್ಕೃತಿಕ ಸಮಸ್ಯೆಗಳಾಗಿವೆ.

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ನಾನು ಅಮೆರಿಕಾ ಮತ್ತು ಯೂರೋಪನ್ನು ನೋಡಿದ್ದೇನೆ. ಅಲ್ಲಿ ಹಾಲಿನ ಉತ್ಪಾದನೆ ಎನ್ನುವುದು ಒಂದು ಕೈಗಾರಿಕೋತ್ಪನ್ನವಾಗಿದೆ. ಕಾರು ಉದ್ಯಮದಂತೆ ಡೈರಿ ಎನ್ನುವುದು ಒಂದು ಉದ್ಯಮವಾಗಿದೆ. ಕಾರು ಮಾಲೀಕರ್‍ಯಾರೂ ಸಹ ಅದರ ತಯಾರಿಕ ಘಟಕವನ್ನು ಹೊಂದಿರುತ್ತಾರೆಯೇ? ಕಾರು ತಯಾರಿಕಾ ಕಂಪನಿಗಳಂತೆ ಕೆಲವೇ ಮಂದಿ ಅಮೆರಿಕನ್ನರು/ಯೂರೋಪಿಯನ್ನರು ಪಶು ಸಂಗೋಪನಾ ಉದ್ಯಮದಲ್ಲಿ ತೊಡಗಿದ್ದಾರೆ. ಆದರೂ ಈ ದೇಶಗಳೆಂದೂ ಸಹ ಹಾಲಿನ ಕೊರತೆಯನ್ನು ಅನುಭವಿಸಿಲ್ಲ. ಬದಲಾಗಿ ನಾವು ವೈಯಕ್ತಿಕವಾಗಿ ಪಶು ಸಂಗೋಪನೆಯಲ್ಲಿ ತೊಡಗಿರುವುದು ಒಂದು ವಿದ್ಯಮಾನವಾಗಿದ್ದರೂ ಸಹ, ಮಿಲಿಯನ್‌ಗಟ್ಟಳೆ ಹಾಲು ಪೌಡರ್‌ನ್ನು ಈ ದೇಶಗಳಿಂದ ಪ್ರತಿವರ್ಷವೂ ಆಮದು ಮಾಡಿಕೊಳ್ಳುತ್ತಿದ್ದೇವೆ.

ಹೀಗಿರುವಾಗ ಈ ವ್ಯಕ್ತಿಗತವಾಗಿರುವ ಎಮ್ಮೆ ಮತ್ತು ದನಗಳನ್ನು ಅಂದರೆ ಅಂತಿಮವಾಗಿ ಎಮ್ಮೆ ರಾಷ್ಟ್ರೀಯತೆಯನ್ನು ಕೊನೆಗಾಣಿಸಬೇಕಾದರೆ ಈ ಕೆಳಗಿನದನ್ನು ಅನುಸರಿಸುವುದು ಸೂಕ್ತವಾದುದು:

ಭಾರತಾದ್ಯಂತ ಕಮ್ಮಿಯೆಂದರೆ ಎರಡು ವಿಭಾಗಗಳಲ್ಲಿ ದೊಡ್ಡ ನಿಗಮೀಕೃತ ಉದ್ಯಮಗಳನ್ನು/ಬ.ರಾ.ಕಂ.ಗಳನ್ನು ತೆರೆದು ಹೈನುಗಾರಿಕೆ ಯಾಂತ್ರೀಕೃತವಾಗಲು ನಾವೆಲ್ಲ ಪ್ರೋತ್ಸಾಹಿಸಬೇಕಾಗಿದೆ. ಇದಕ್ಕಾಗಿ ೫೦೦೦ ಹೆಕ್ಟರ್ ಭೂಮಿಯಲ್ಲಿ ೨೫೦೦೦ ಶ್ರೇಷ್ಠ ತಳಿಯ ಎಮ್ಮೆ/ದನಗಳನ್ನು ಹೊಂದಿರಬೇಕು. ಹೇಗೆ ಮಧ್ಯಾಹ್ನದ ಊಟ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೋ ಅದರಂತೆ ಪ್ರತಿಯೊಂದು ಗ್ರಾಮಪಂಚಾಯತಿಯಲ್ಲೂ ಹಾಲಿನ ಬಾರ್‌ಗಳನ್ನು ತೆರೆಯಲಿ.

ಇದು ಆದಲ್ಲಿ ಎಮ್ಮೆಗಳನ್ನೇ ಆಶ್ರಯಿಸಿ ಬದುಕುತ್ತಿರುವವರಿಗೆ ಏನಾಗುತ್ತದೆ? ಇದಕ್ಕೆ ಉತ್ತರ ಬಹಳ ಸರಳವಾದುದು. ಈ ಹೈನುಗಾರಿಕಾ ಉದ್ಯಮಗಳು ಎಷ್ಟೇ ಯಾಂತ್ರಗಳನ್ನು ಅವಲಂಬಿಸಿದರೂ ಸಹ ಅಲ್ಲಿ ಉತ್ಪಾದನೆಯಿಂದ ಹಿಡಿದು, ಮಾರುಕಟ್ಟೆಗೆ ಹೈನು ಉತ್ಪಾನ್ನಗಳನ್ನು ಸಾಗಿಸಲು ಅಧಿಕ ಮಾನವ ಶ್ರಮ ಬೇಕಾಗಿದೆ. ಈ ಹೈನುಗಾರಿಕಾ ಉದ್ಯಮಗಳಲ್ಲಿ ಎಮ್ಮೆ/ದನ ಹೊಂದಿರುವವರು ಕಾರ್ಮಿಕರಾಗಿ ಸೇರಿಕೊಳ್ಳಲಿ.

ಯಾರು ಸ್ಥಳೀಯ ಹಾಲಿನ ಗುಣಮಟ್ಟದ ಬಗ್ಗೆ ದೂರುತ್ತಾರೋ ಅವರೇ ಈ ಹಾಲು ಬಾರ್‌ಗಳನ್ನು ಕಂಡು ತಾವಾಗಿಯೇ ತಮ್ಮಲ್ಲಿರುವ ಎಮ್ಮೆ ಸಾಕಾಣಿಕೆಯನ್ನು ತೊರೆಯುತ್ತಾರೆ. ಯಾರು ಸಾಂಸ್ಕೃತಿಕವಾಗಿ ಎಮ್ಮೆಗಳನ್ನು ಹೊಂದಿದ್ದಾರೋ ಅವರೂ ಸಹ ಅತ್ಯಾಧುನಿಕ ಮಾರಿಕಟ್ಟೆಯೆದುರು ತಮ್ಮ ಸಂಸ್ಕೃತಿಯನ್ನು ಭಿನ್ನವಾಗಿ ಸಂಘಟಿಸಿಕೊಳ್ಳುತ್ತಾರೆ. ಇದು ವ್ಯಕ್ತಿಗತ ಎಮ್ಮೆ ಹೊಂದಿರುವುದನ್ನು ಕೊನೆಗಾಣಿಸುತ್ತದೆ. ಅಂತಿಮವಾಗಿ ಎಮ್ಮೆ ರಾಷ್ಟ್ರೀಯತೆ ಕೊನೆಯಾಗುತ್ತದೆ.

ಹೀಗೆ ಕೊನೆಗೊಳ್ಳುವ ಎಮ್ಮೆ ರಾಷ್ಟ್ರೀಯತೆಯು ಆಧುನಿಕತೆಯನ್ನು ತೀವ್ರಗೊಳಿಸುತ್ತದೆಯಲ್ಲದೆ, ಜನ ತಮ್ಮ ಹಿಂದುಳಿದಿರುವಿಕೆಯಿಂದ ಬಿಡುಗಡೆಹೊಂದಿರಲು ಸಹಾಯವಾಗುತ್ತದೆ. ಮಹಿಳೆ ಮತ್ತು ಪುರುಷರಿಗೆ ಸಾಕಷ್ಟು ಸಮಯಾವಕಾಶ ದೊರೆತು ತಮ್ಮ ವೈಯಕ್ತಿಕ ಕೆಲಸದಲ್ಲಿ ತೊಡಗಲು ಸಾಧ್ಯವಾಗುತ್ತದೆ. ಮಹಿಳೆಯರು ತಮ್ಮ ಕಂದಮ್ಮಗಳ ಶಿಕ್ಷಣದತ್ತ ಹೆಚ್ಚಿನ ಗಮನ ಕೊಡುವಂತಾಗುತ್ತದೆ. ಯುವಜನ ಕಾಲೇಜು ಶಿಕ್ಷಣ ಮುಗಿಸುವಂತಾಗುತ್ತದೆ. ಹೀಗೆ ಪೋಷಕರು ತಮ್ಮ ಕುಟುಂಬಗಳು ಆಧುನಿಕವಾಗುವುದನ್ನು ಪ್ರೇರೇಪಿಸಿದಂತಾಗುತ್ತದೆ.

ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಅಧಿಕ

ಅಧೀನರಾಗುವಿಕೆ

ನೀರಿದ್ದು, ಫಲವತ್ತಾದ ಭೂಮಿಯೂ ಇದೆ. ಅಲ್ಲಿ ಪಾರಂಪರಿಕವಾದ ಕೃಷಿ ಪಲ್ಲಟಗೊಂಡು ಆಧುನಿಕ ಕೃಷಿ ಅಲ್ಲಿ ಬೆಳೆಯುತ್ತದೆ. ಇದು ಸಾಕ್ಷಾತ್ಕಾರವಾದಲ್ಲಿ ಕೇವಲ ಗಂಗಾ ಬಯಲೇ ದೇಶಕ್ಕೆ ಸಾಕಾಗುವಷ್ಟು ಆಹಾರವನ್ನು ಉತ್ಪಾದಿಸುತ್ತದೆ.

ಅಂದರೆ ಭಾರತ ಆರ್ಥಿಕವಾಗಿ ಸದೃಢಗೊಂಡು ಹಿಂಸಾ ಮುಕ್ತ ಪ್ರಜಾಪ್ರಭುತ್ವವಾಗಬೇಕಾದರೆ ಈ ಎಮ್ಮೆ ರಾಷ್ಟ್ರೀಯತೆಯಿಂದ ಬಿಡುಗಡೆಗೊಳ್ಳುವುದು ಮುಖ್ಯವಾಗುತ್ತದೆ. ಹೀಗೆ ಮಾಡುವ ಮೊದಲು ನಮ್ಮ ಒಬಿಸಿ/ಶೂದ್ರ ನಾಯಕತ್ವವನ್ನು ನಂಬಿಕೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಕಪ್ಪು ಮತ್ತು ಬಿಳಿ ಬಣ್ಣದ ನಡುವೆ

ನಾಲ್ಕು ಶತಮಾನಗಳ ಹಿಂದೆ ಅಂದರೆ ಕ್ರಿ.ಶ.೧೬೧೯ರಲ್ಲಿ ಸಂಕೋಲೆಯಿಂದ ಬಂಧಿಸಿ, ಅವರ ಇಚ್ಛೆಗೆ ವಿರುದ್ಧವಾಗಿ ಒಂದು ಬ್ಯಾಚ್ ಕಪ್ಪುಜನರನ್ನು ಆಫ್ರಿಕಾದಿಂದ ಈಗ ಅಮೆರಿಕ ಎಂದು ಕರೆಲಾಗಿರುವ ಹೊಸಜಗತ್ತಿಗೆ ಹೊಯ್ಯಲಾಗಿತ್ತು. ಈಗ ಆಫ್ರಿಕಾ ಮೂಲದ ಅಮೆರಿಕನ್ನರೆಂದು ಸರ್ಕಾರಿ ಪರಿಭಾಷೆಯಲ್ಲಿ ಕರೆಯಲಾಗುತ್ತಿರುವ ಕಪ್ಪುಜನ ೧೯೫೫ರ ತನಕ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಪ್ರತ್ಯೇಕವಾಗಿ ಕೂರುವ ವ್ಯವಸ್ಥೆ ಇತ್ತು. ಹೀಗಿರುವಾಗ ೧೯೫೫ರಲ್ಲಿ ರೋಸಾ ಪಾರ್ಕ್‌ರ ಹೋರಾಟ ಈ ಅವಮಾನಕರ ವ್ಯವಸ್ಥೆಯನ್ನು ಕೊನೆಗಾಣಿಸಿತು. ಇದಾದ ಕೇವಲ ಅರ್ಧಶತಮಾನ ಕಳೆಯುವಷ್ಟರಲ್ಲೇ **ಬಾರಾಕ್ ಒಬಾಮ** ಎನ್ನೋ ಕಪ್ಪುಜನರ ವ್ಯಕ್ತಿ ಅಮೆರಿಕಾದ ಅಧ್ಯಕ್ಷ ಸ್ಥಾನವನ್ನಲಂಕರಿಸುತ್ತಿದ್ದಾರೆ. ಭಾರತದ ದಲಿತ-ಬ್ರಾಹ್ಮಣ ಸಿದ್ಧಾಂತ ಕ್ರಿಯಾಶೀಲವಾಗಿರುವಂತೆ ಅಮೆರಿಕಾದ ಅಧ್ಯಕ್ಷೀಯ ಚುನಾವಣೆಯಲ್ಲೂ ಘಟಿಸುತ್ತಿದೆ ಎಂದು ಕಾಣುತ್ತಿದೆ.

ನಾನು ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯದಲ್ಲಿ ತಂಗಿರುವಾಗ ಲಾರ್ಡ್ ಮೆಕಾಲೆಯ ಜನನದ ವಾರ್ಷಿಕೋತ್ಸವದ ಅಂಗವಾಗಿ ನಾನೊಂದು ಪಾರ್ಟಿಯನ್ನು ಏರ್ಪಡಿಸಿದ್ದೆ. ಆ ಸಂದರ್ಭದಲ್ಲಿ ಒಬಾಮ ಡೆಮೋಕ್ರಾಟಿಕ್ ಪಕ್ಷದ ಅಭ್ಯರ್ಥಿ ಸ್ಥಾನವನ್ನು ಗೆಲ್ಲುತ್ತಾರೆನ್ನುವ ಆಲೋಚನೆಯನ್ನು ಒಮ್ಮೆಗೆ ತಿರಸ್ಕರಿಸಿದ್ದರು. ಈ ಪಾರ್ಟಿಯಲ್ಲಿ ಪ್ರಾಧ್ಯಾಪಕರನ್ನೊಳಗೊಂಡಂತೆ ಪಿಎಚ್‌ಡಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಆಗ ನಾನು ಒಬಾಮ ಅಧ್ಯಕ್ಷರಾಗುತ್ತಾರೆಂದು ವಾದಿಸಿದ್ದೆ. ಇದಕ್ಕೆ ಕಾರಣವನ್ನು ನಾನು ವಿವರಿಸಿದಾಗ ಅದನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಇದನ್ನು ಕಪ್ಪು ವಿದ್ವಾಂಸರೂ ಸಹ ಅಲ್ಲಗಳೆದಿದ್ದರು. ತದನಂತರದಲ್ಲಿ ಕೆಲವು ವಿದ್ಯಾರ್ಥಿಗಳು ಭಾಷಣದ ನಂತರದಲ್ಲಿ ತುಸು ಆಸಕ್ತರಾಗಿ ಮಾಯಾವತಿಯವರ ದಲಿತ-ಬ್ರಾಹ್ಮಣ ಸಿದ್ಧಾಂತವನ್ನು ಮತ್ತಷ್ಟು ಚರ್ಚೆಗೆ ಒಳಪಡಿಸಿದ್ದರು.

೨೦೦೪ರಲ್ಲಿ ಸೆನೇಟರ್ ಸ್ಥಾನಕ್ಕೆ ಆಯ್ಕೆಯಾಗುವವರೆಗೆ ಒಬಾಮನನ್ನು ಅನೇಕ ಅಮೆರಿಕನ್ನರು ತಿಳಿದಿರಲಿಲ್ಲ. ಆದರೆ ಫೆಬ್ರವರಿ ೨೦೦೭ರಲ್ಲಿ ಆತ ಅಧ್ಯಕ್ಷ ಚುನಾವಣಾ ಪ್ರಚಾರಕ್ಕೆ ತೊಡಗುತ್ತಿದ್ದಂತೆ ಆತ ಹಿಲರಿ ಕ್ಲಿಂಟನ್‌ಗೆ ಪ್ರತಿಸ್ಪರ್ಧಿಯೆಂದು ಜನಜನಿತವಾಗಿಬಿಟ್ಟಿತು. ಅದರಲ್ಲೂ ಕಪ್ಪು ಜನರ ನಡುವೆ ಆತ ಜನಪ್ರಿಯನಾದ ವ್ಯಕ್ತಿಯಾಗಿಬಿಟ್ಟ. ಹೀಗಿರುವಾಗ ಆತನ ಅದ್ಭುತವಾದ ಭಾಷಣಕಲೆ, ನವೀನವಾದಂಥ ಐಡಿಯಾಗಳು ಅಮೆರಿಕದ ಹೆಚ್ಚುಮಂದಿಯನ್ನು ತನ್ನತ್ತ ಸೆಳೆಯಲಾರಂಭಿಸಿತು.

ಅಕ್ಟೋಬರ್ ೨೦೦೭ರಲ್ಲಿ ಎರಡು ಸಾಮಾಜಿಕ ಪಂಗಡಗಳು ಒಬಾಮನಿಗೆ ಬೆಂಬಲ ವ್ಯಕ್ತಡಿಸಿದ್ದವು – ಒಂದು ಬಡ ಕಪ್ಪುಜನತೆ ಹಾಗೂ ಎರಡು ಉನ್ನತ ಶಿಕ್ಷಣ ಪಡೆದ ಬಿಳಿಯರು. ಹಿಸ್ಪಾನಿಯನ್ನರು ಮತ್ತು ಏಶಿಯಾದವರು ಮತ್ತು ಪ್ರಸಿದ್ಧ ಎನ್‌ಆರ್‌ಐಗಳು ಆತನನ್ನು ತಿರಸ್ಕರಿಸಿದ್ದರು. ಇದು ನನ್ನ ಗಮನವನ್ನು ಸೆಳೆಯಿತು. ಆದ್ದರಿಂದಲೇ ನಾನು ದಲಿತ-ಬ್ರಾಹ್ಮಣ ಸಿದ್ಧಾಂತವನ್ನು ಅಲ್ಲಿಗೆ ಅನ್ವಯಿಸಿದಂತೆ ಮಾತನಾಡಿ ಹೇಗೆ ಬಡ ಕಪ್ಪುಜನ ಮತ್ತು ಅನುಕೂಲಸ್ಥ ಬಿಳಿಯರು ಸಮನ್ವಯ ಸಾಧಿಸುತ್ತಿದ್ದಾರೆಂದು ಚರ್ಚಿಸಿದ್ದೆ.

ಎರಡನೇ ಮಹಾಯುದ್ಧದ ನಂತರ ಏಶಿಯಾದವರು ಕಪ್ಪುಜನ ಮತ್ತು ಬಿಳಿಯರ ನಡುವೆ ಒಂದು ಗೋಡೆಯಂತಾಗಿ ನಿಂತರು. ಬಿಳಿಯರಿಗೆ ಏಶಿಯನ್ನರು ಹೆಚ್ಚು ಹತ್ತಿರವಾದರು. ಆದರೆ ಹಿಸ್ಪಾನಿಯನ್ನರು? ಅಮೆರಿಕಾದ ಶೇ.೧೫ರಷ್ಟಿದ್ದ ಹಿಸ್ಪಾನಿಯನ್ನರು ತಮ್ಮ ಮೂಲವನ್ನು ಸ್ಪಾನಿಷ್ ಭಾಷೆಯಲ್ಲಿ ಮತ್ತು ಕ್ಯೂಬಾ, ಮೆಕ್ಸಿಕನ್, ದಕ್ಷಿಣ ಹಾಗೂ ಮಧ್ಯ ಅಮೆರಿಕಾ ಬೇರುಗಳಲ್ಲಿ ಕಂಡುಕೊಂಡಿದ್ದರು. ಅವರು ಬಿಳಿಯರಾದರೂ ಸಹ ತಮ್ಮ ಕಕೇಸಿಯನ್ ಜನಾಂಗಕ್ಕೆ ಸೇರಿದವರಲ್ಲ. ಅಲ್ಲದೆ ಬ್ರಿಟಿಷ್, ಫ್ರೆಂಚ್ ಮತ್ತು ಜರ್ಮನ್ನರಿಗಿಂತ ಭಿನ್ನವಾಗಿ ಗುರುತಿಸಿಕೊಂಡು ಅಮೆರಿಕಾಕ್ಕೆ ವಲಸೆ ಬಂದವರು.

ಆದರೆ ಹಿಸ್ಪಾನಿಯನ್ನರು ಮತ್ತು ಏಶಿಯಾದವರು ಹಾಗೂ ಪ್ರಸಿದ್ಧ ಎನ್‌ಆರ್‌ಐಗಳು ಆತನನ್ನು ತಿರಸ್ಕರಿಸಿದ್ದು ಏಕೆ? ಈ ಏಶಿಯನ್ನರು ಭಾರತೀಯರು ಮತ್ತು ಚೀನಾದವರೆಂದು ವಿವರಿಸಬೇಕಾಗಿಲ್ಲ. ಎರಡನೇ ಮಹಾಯುದ್ಧದ ನಂತರ ಏಶಿಯಾದವರು ಕಪ್ಪುಜನ ಮತ್ತು ಬಿಳಿಯರ ನಡುವೆ ಒಂದು ಗೋಡೆಯಂತಾಗಿ ನಿಂತರು. ಬಿಳಿಯರಿಗೆ ಏಶಿಯನ್ನರು ಹೆಚ್ಚು ಹತ್ತಿರವಾದರು. ಆದರೆ ಹಿಸ್ಪಾನಿಯನ್ನರು? ಅಮೆರಿಕಾದ ಶೇ.೧೫ರಷ್ಟಿದ್ದ ಹಿಸ್ಪಾನಿಯನ್ನರು ತಮ್ಮ ಮೂಲವನ್ನು ಸ್ಪಾನಿಷ್ ಭಾಷೆಯಲ್ಲಿ ಮತ್ತು ಕ್ಯೂಬಾ, ಮೆಕ್ಸಿಕನ್, ದಕ್ಷಿಣ ಹಾಗೂ ಮಧ್ಯ ಅಮೆರಿಕಾ ಬೇರುಗಳಲ್ಲಿ ಕಂಡುಕೊಂಡಿದ್ದರು. ಅವರು ಬಿಳಿಯರಾದರೂ ಸಹ ತಮ್ಮ ಕಕೇಸಿಯನ್ ಜನಾಂಗಕ್ಕೆ ಸೇರಿದವರಲ್ಲ. ಅಲ್ಲದೆ ಬ್ರಿಟಿಷ್, ಫ್ರೆಂಚ್ ಮತ್ತು ಜರ್ಮನ್ನರಿಗಿಂತ ಭಿನ್ನವಾಗಿ ಗುರುತಿಸಿಕೊಂಡು ಅಮೆರಿಕಾಕ್ಕೆ ವಲಸೆ ಬಂದವರು.

ಹೀಗೆ ಗುರುತಿಸಿಕೊಂಡ ಹಿಸ್ಪಾನಿಯನ್ನರು ಅಮೆರಿಕಾ ಎನ್ನುವುದು ರೂಪುಗೊಳ್ಳುವಾಗಲೇ ಅಲ್ಲಿಗೆ ವಲಸೆ ಬಂದಿದ್ದರು. ಕಪ್ಪು ಜನರನ್ನು ಹೊರತು ಪಡಿಸಿದಂತೆ ಈ ಜನರು ತಮ್ಮ ಸ್ವ ಇಚ್ಛೆಯಿಂದಲೇ ಇಲ್ಲಿಗೆ ವಲಸೆ ಬಂದಿದ್ದರು. ಇವರಲ್ಲಿ ಬಹು ಮುಖ್ಯರಾದವರು ಮೆಕ್ಸಿಕನ್ನರು. ಇವರನ್ನು ಅಕ್ರಮ ವಲಸಿಗರೆಂದೇ ಪರಿಗಣಿಸಲಾಗಿತ್ತು. ಇವರು ಬಿಳಿಯರಾಗಿದ್ದರಿಂದ ೧೯ ಮತ್ತು ೨೦ನೇ ಶತಮಾನಗಳುದ್ದಕ್ಕೂ ಇವರು ಬಿಳಿಯರು ಮತ್ತು ಕಪ್ಪುವರ್ಣೀಯರ ನಡುವೆ ಗೋಡೆಯಂತೆ ವರ್ತಿಸಿ ಕಪ್ಪುವರ್ಣೀಯರ ಪ್ರತ್ಯೇಕತೆಗೆ ಕಾರಣರಾಗಿದ್ದರು.

ಆದರೆ ಇತ್ತೀಚೆಗೆ ಒಂದು ದೊಡ್ಡ ಬಿಳಿ ಅಮೆರಿಕನ್ನರು, ಹಿಸ್ಪಾನಿಯನ್ನರು ಮತ್ತು ಏಶಿಯಾದವರ ಬಗ್ಗೆ ಮತ್ತೊಂದು ರೀತಿಯ ಅಭಿಪ್ರಾಯವನ್ನು ತಳೆಯತೊಡಗಿದರು. ಹಿಸ್ಪಾನಿಯನ್ನರು ಮತ್ತು ಏಶಿಯಾದವರು ಬಿಳಿಯರ ಆರ್ಥಿಕ ಏಳ್ಗೆಗೆ ಬೆದರಿಕೆಯಾಗಿ ಕಂಡರು. ಹಿಸ್ಪಾನಿಯನ್ನರು ಮತ್ತು ಏಶಿಯಾಧವರು ಅಮೆರಿಕಾದಲ್ಲಿ ಕಪ್ಪುಜನರಿಗಿದ್ದ ಸಕಾರಾತ್ಮಕ ಕ್ರಿಯೆ/ಮೀಸಲಾತಿಯಿಂದ ಪ್ರಯೋಜನ ಪಡೆದು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಂಡಿದ್ದರು. ಕಪ್ಪುಜನ ಅಮೆರಿಕದಲ್ಲಿ ಕಾಣಿಸಿಕೊಂಡದ್ದು ತಮ್ಮ ಇಚ್ಛೆಗೆ ವಿರುದ್ಧವಾಗಿ. ಆದರೆ ಹಿಸ್ಪಾನಿಯನ್ನರು ಮತ್ತು ಏಶಿಯಾದವರು ಅಮೆರಿಕಾಗೆ ಬಂದದ್ದು ಸ್ವ ಇಚ್ಛೆಯಿಂದ. ಹೀಗಿದ್ದರೂ ಸಹ ಹಿಸ್ಪಾನಿಯನ್ನರಲ್ಲಿ ಬಹುಮಂದಿ ಹಿಂದುಳಿದಿದ್ದು ಶೈಕ್ಷಣಿಕವಾಗಿಯೂ ಸಹ ಏನೇನು ಪ್ರಗತಿ ಕಂಡಿಲ್ಲ. ಹೀಗಿರುವಾಗ ಅವರು ಮೀಸಲಾತಿಯ ಬೇಡಿಕೆಯನ್ನು ವ್ಯಕ್ತಪಡಿಸಿದಾಗ ಅದು ಅತಿರೇಕ ಎಂದು ಪರಿಗಣಿತವಾಗಿತ್ತು. ಇದು ಹೇಗಿದೆಯೆಂದರೆ ಭಾರತದಲ್ಲಿ ಒಬಿಸಿಗಳು ಮೀಸಲಾತಿ ಪಡೆದಂತೆ.

ಇಂದು ಅಮೆರಿಕಾದಲ್ಲಿ ಪ್ರಧಾನವಾಗಿ ಮೂರು ಮುಖ್ಯ ಜನಾಂಗೀಯ ಅಥವಾ ಎತ್ನಿಕ್ ಸಮುದಾಯಗಳು ಇವೆ: ಬಿಳಿ ಅಮೆರಿಕನ್ನರು, ಕಪ್ಪುಜನ (ಭಾರತದ ಎಸ್‌ಸಿ/ಎಸ್‌ಟಿಗಳಿದ್ದಂತೆ) ಮತ್ತು ಹಿಸ್ಪಾನಿಯನ್ನರು ಅಥವಾ ಏಶಿ

[illegible] ([illegible] [illegible]ವಾಗಿ [illegible]ಗಳೆಂದು [illegible]). ಹಾಗೆಯೇ ಶಿಕ್ಷಿತ ಮತ್ತು [illegible] [illegible]ನ್ನು ಬ್ರಾಹ್ಮಣರಿಂದ ಸಂಗಣಿಸಬಹುದು

ಒಬಾಮ ಮಂಚೂಣಿಗೆ ಬರಲು ಅನೇಕ ಕಾರಣಗಳಿವೆ. ಆದರೆ ನನಗೆ ಪ್ರಚೋದನಕಾರಿಯಾಗಿ ಕಂಡ ಸಂಗತಿ ಎಂದರೆ ಯಾವಾಗ ಒಬಾಮ ಅಮೆರಿಕಾದ ಉದ್ದಗಲಕ್ಕೂ ಅಧ್ಯಕ್ಷ ಅಭ್ಯರ್ಥಿಯಾಗಿ ಕಾಣಿಸಿಕೊಳ್ಳಲಾರಂಭಿಸಿದಾಕ್ಷಣ ಹಿಸ್ಪಾನಿಯನ್ನರು ಮತ್ತು ಏಶಿಯಾದವರು ಆತನ ವಿರುದ್ಧ ಸಂಘಟಿತರಾದದ್ದು.

ಯಾವಾಗ ಸಾಂಸ್ಕೃತಿಕ ಎಲೈಟ್ ಜನ – ಭಾರತದ ಬ್ರಾಹ್ಮಣರು ಮತ್ತು ಅಮೆರಿಕಾದ ಬಿಳಿಯರು, ಸಾಮಾಜಿಕ ಪ್ರಾಲಿಟೇರಿಯನ್ಸ್ – ಅಮೆರಿಕಾದ ಕಪ್ಪುಜನ ಮತ್ತು ಭಾರತದ ದಲಿತರು ಒಂದುಗೂಡುತ್ತಾರೋ ಆಗ ಯುದ್ಧ ಮುಗಿಯುತ್ತದೆ ಮತ್ತು ಗೆಲುವು ದಾಖಲಾಗುತ್ತದೆ. ಈ ಅದ್ಭುತವಾದ ವಿದ್ಯಮಾನ ಎಲ್ಲಾ ನಾಗರಿಕತೆಗಳಲ್ಲು ಕಂಡು ಬರುತ್ತದೆ.

ಹೊಸ ಸಹಸ್ರಮಾನ ಉದಯವಾದಂತೆ ಮೂರು ಮುಖ್ಯ ಬೆಳವಣಿಗೆಗಳು ಭಾರತದಲ್ಲಿ ಕಾಣಿಸಿಕೊಂಡಿದೆ: ಒಂದು – ಕೈಗಾರೀಕರಣವನ್ನು ಉತ್ತೇಜಿಸಿದ ಉದಾರೀಕರಣ, ಎರಡು – ಈ ಕಾರಣದಿಂದ ಅನೇಕ ಜಾತಿರಹಿತ ವೃತ್ತಿಗಳು ಕಾಣಿಸಿಕೊಂಡವು. ಮೂರು – ಭಾರತದಲ್ಲಿ ಇಂದು ತೀವ್ರಗತಿಯಲ್ಲಿ ಆಗುತ್ತಿರುವ ನಾಗರೀಕರಣ.

ಈ ಎಲ್ಲಾ ಬದಲಾವಣೆಗಳು ಜಾತಿ ವ್ಯವಸ್ಥೆ ವಿರುದ್ಧ ಎನ್ನುವುದನ್ನು ಗಮನಿಸಲೇಬೇಕಾಗಿದೆ. ಕೃಷಿ ಮೂಲದಿಂದಲೇ ಜಾತಿ ವ್ಯವಸ್ಥೆ ಎನ್ನೋದು ಹುಟ್ಟಿಕೊಂಡದ್ದು. ನಗರ ಭಾರತ ಎನ್ನೋದು ಒಂದು ಹೊಸ ಸೀಮಾವಲಯ. ಇಲ್ಲಿ ಜಾತಿ ವ್ಯವಸ್ಥೆ ಗ್ರಾಮೀಣ ಭಾರತದಲ್ಲಿದ್ದ ಪರಿಣಾಮಕಾರಿಯಾಗಿರುವಂತೆ ಕ್ರಿಯಾಶೀಲವಾಗಿರಲು ಸಾಧ್ಯವಿಲ್ಲ. ಆದರೆ ಈ ವ್ಯವಸ್ಥೆಯನ್ನು ಕಾಯ್ದುಕೊಳ್ಳುತ್ತಿರುವ ಹಿಂದೂಗಳು ಅದನ್ನು ಬಿಡಲು ತಯಾರಿಲ್ಲ. ಇವರಿಗೆ ಈ ಶ್ರೇಣೀಕೃತ ವ್ಯವಸ್ಥೆ ಇಲ್ಲವಾದಲ್ಲಿ ಜೀವನ ಭದ್ರವಾಗಿರುವುದಿಲ್ಲ. ಆದರೂ ಹೀಗೊಂದು ಮಾತಿದೆ: "ಕುದುರೆಗಲ್ಲಿಯದು ಸ್ವಂತ ಇಚ್ಛೆ." ಅಂದರೆ ನಗರೀಕರಣ ತನ್ನ ಸ್ವ ಅಸ್ತಿತ್ವದಿಂದಲೇ ಜಾತಿ ವ್ಯವಸ್ಥೆಯನ್ನು ನಲುಗಿಸುತ್ತದೆ. ಇದಕ್ಕೆ ಯಾರ ನೆರವೂ ಅಗತ್ಯವಿಲ್ಲ. ಆದ್ದರಿಂದ ದಲಿತರು ಇಂಥ ಸನ್ನಿವೇಶಗಳಲ್ಲಿ ಸಮಾಧಾನದ ನಿಟ್ಟುಸಿರು ಬಿಡಬಹುದು.

ಹೀಗಿರುವಾಗ ದಲಿತರ ಶೈಕ್ಷಣಿಕ ಸಾಧನೆಗಳನ್ನು ಗಮನಿಸಿದಲ್ಲಿ ಇವರು ಹೊಸದಾಗಿ ಉದಯಿಸುತ್ತಿರುವ ಆರ್ಥಿಕ ಕ್ಷೇತ್ರಗಳಲ್ಲಿ ಎಲ್ಲಿ ಸೇರುತ್ತಾರೆ? ಅವರ ಆರ್ಥಿಕ ಸ್ಥಿತಿಗತಿಯನ್ನು ಗಮನಿಸುವಾಗ ಉದಯೀಮಾನ ಮಾರುಕಟ್ಟೆಯಲ್ಲಿ ಅವರು ಅನುಕೂಲಕರ ಪ್ರವೇಶವನ್ನು ಪಡೆಯುತ್ತಾರೆನ್ನುವುದು ಪ್ರಶ್ನಾರ್ಹವಾದುದೆ. ಹಾಗಾದರೆ ಅವರು ಕೈಗಾರೀಕರಣವನ್ನು ಮತ್ತು ನಗರೀಕರಣವನ್ನು ತಮ್ಮ ಪ್ರಯೋಜನಕ್ಕೆ ಬಗ್ಗಿಸಬಹುದೇ?

> **ಒಬಾಮ ಮಂಚೂಣಿಗೆ ಬರಲು ಅನೇಕ ಕಾರಣಗಳಿವೆ. ಆದರೆ ನನಗೆ ಪ್ರಚೋದನಕಾರಿಯಾಗಿ ಕಂಡ ಸಂಗತಿ ಎಂದರೆ ಯಾವಾಗ ಒಬಾಮ ಅಮೆರಿಕಾದ ಉದ್ದಗಲಕ್ಕೂ ಅಧ್ಯಕ್ಷ ಅಭ್ಯರ್ಥಿಯಾಗಿ ಕಾಣಿಸಿಕೊಳ್ಳಲಾರಂಭಿಸಿದಾಕ್ಷಣ ಹಿಸ್ಪಾನಿಯನ್ನರು ಮತ್ತು ಏಶಿಯಾದವರು ಆತನ ವಿರುದ್ಧ ಸಂಘಟಿತರಾದದ್ದು. ಯಾವಾಗ ಸಾಂಸ್ಕೃತಿಕ ಎಲೈಟ್ ಜನ – ಭಾರತದ ಬ್ರಾಹ್ಮಣರು ಮತ್ತು ಅಮೆರಿಕಾದ ಬಿಳಿಯರು, ಸಾಮಾಜಿಕ ಪ್ರಾಲಿಟೇರಿಯನ್ಸ್ – ಅಮೆರಿಕಾದ ಕಪ್ಪುಜನ ಮತ್ತು ಭಾರತದ ದಲಿತರು ಒಂದು ಗೂಡುತ್ತಾರೋ ಆಗ ಯುದ್ಧ ಮುಗಿಯುತ್ತದೆ ಮತ್ತು ಗೆಲುವು ದಾಖಲಾಗುತ್ತದೆ. ಈ ಅದ್ಭುತವಾದ ವಿದ್ಯಮಾನ ಎಲ್ಲಾ ನಾಗರಿಕತೆಗಳಲ್ಲು ಕಂಡು ಬರುತ್ತದೆ.**

ದಲಿತರಿಗೆ ಸಹಕಾರಿಯಾಗಿರುವ ಎರಡು ಸನ್ನಿವೇಶಗಳನ್ನು ನಾವು ಗಮನಿಸಬಹುದು. ಮೊದಲನೆಯದು, ಪರಾಂಪರಿಕವಾಗಿ ಪ್ರಬಲಜಾತಿಗಳು ಇಷ್ಟ ಪಡದಂಥ ಅವಕಾಶಗಳನ್ನು ನಗರವನ್ನು ಆಧರಿಸಿದ ಆರ್ಥಿಕತೆಯು ಸೃಷ್ಟಿಸುತ್ತದೆ. ಈ ಸದವಕಾಶಗಳು ಇಂದಪ್ಪು ಸ್ವಾತಂತ್ರ್ಯವನ್ನು ಒದಗಿಸುತ್ತವೆ. ಇವು ಸಾಂಪ್ರದಾಯಿಕ ಧಣಿಗಳಿಗೆ ಬಿಟ್ಟಿ ಚಾಕರಿ ಮಾಡುವುದಕ್ಕಿಂತಲು ಉತ್ತಮವಾದುವು. ಉದಾಹರಣೆಗೆ ಕಳೆದ ವರ್ಷದಿಂದೀಚೆಗೆ ಭಾರತೀಯ ರಸ್ತೆಗಳಲ್ಲಿ ಒಂದು ಮಿಲಿಯನ್‌ಗಿಂತ ಹೆಚ್ಚು ಕಾರುಗಳು ಓಡಾಡುತ್ತಿವೆ. ಅಂದರೆ ಒಂದು ಮಿಲಿಯನ್ ಡ್ರೈವರ್ ಹುದ್ದೆಗಳು ಅದಕ್ಕೆ ಸಹಾಯಕವಾದಂಥ ಇನ್ನೊಂದು ಮಿಲಿಯನ್ ಹುದ್ದೆಗಳು ಸೃಷ್ಟಿಯಾಗಿವೆ. ಇಂಥ ಹಲವಾರು ಹುದ್ದೆಗಳಿಗೆ ಶೈಕ್ಷಣಿಕ ಅರ್ಹತೆಗಳು ಬೇಕಾಗಿಲ್ಲ. ಇದನ್ನು ದಲಿತರು ಬಳಸಿಕೊಳ್ಳಬಹುದಲ್ಲವೇ.

> **ಕೇವಲ ನಗರೀಕರಣ ಎನ್ನುವುದಷ್ಟೆ ದಲಿತರಿಗೆ ಸಾಕಾಗುವುದಿಲ್ಲ. ಕಾರಣ ಅಧಿಕ ಆದಾಯ ಅಲ್ಲಿರುವುದಿಲ್ಲ. ಇದನ್ನು ನಿಭಾಯಿಸಲು ಶಿಕ್ಷಣ ಕೇಂದ್ರಿತ ಒಂದು ನವೀನ ಮಾದರಿಯ ಪ್ರಚಾರಾಂದೋಲನ ಬೇಕಾಗುತ್ತದೆ. ಈ ಮೂಲಕ ಅವರು ಅಗತ್ಯವಾದ ಕೌಶಲ್ಯಗಳನ್ನು ರೂಢಿಸಿಕೊಂಡು ಬದುಕನ್ನು ಮತ್ತಷ್ಟು ಸುಧಾರಿಸಿಕೊಳ್ಳುತ್ತಾರೆ. ಇದಕ್ಕೆ ಅಗತ್ಯವಾಗಿ ಇಂಗ್ಲಿಷ್ ಮತ್ತು ಇತರೆ ಕೌಶಲ್ಯಗಳು ಬೇಕಾಗುತ್ತವೆ.**

ಎರಡನೇ ಸನ್ನಿವೇಶವೆಂದರೆ, ಗ್ರಾಮೀಣ ಪ್ರದೇಶದ ದಲಿತರಲ್ಲಿ ಹೆಚ್ಚಿನ ಭೂಮಿಯೇನೂ ಇಲ್ಲ. ಇದು ಅವರನ್ನು ನಗರಗಳಿಗೆ ವಲಸೆ ಹೋಗುವಂತೆ ಮಾಡುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಅವರಿಗಾಗುವ ಅವಮಾನದಿಂದ ಮುಕ್ತರಾಗಿ ನಗರಗಳಲ್ಲಿ ತಮ್ಮದೇ ಆದ ಬದುಕನ್ನು ಅವರು ಕಟ್ಟಿಕೊಳ್ಳಬಹುದಾಗಿದೆ.

ನಗರಗಳು ಅನೇಕ ಪಾಠಗಳನ್ನು ಕಲಿಸುತ್ತವೆ. ಇಂಥ ಕಡೆ ಬರುವ ದಲಿತರು ತಮ್ಮ ಹಿಂದಿನ ಊರುಗಳಿಗೆ ವಲಸೆ ಹೋಗಲು ಇಚ್ಛಿಸುವುದಿಲ್ಲ. ಬದಲಾಗಿ ವರ್ಷಕ್ಕೊಮ್ಮೆ ತಮ್ಮ ಬಂಧುಗಳನ್ನು ನೋಡಲಷ್ಟೆ ಅವರು ತಮ್ಮ ಊರುಗಳಿಗೆ ಬರುತ್ತಾರೆ. ನಗರಗಳಲ್ಲಿ ಕೆಲಸ ಮಾಡುವಾಗ ಅವರಿಗೆ ಸ್ವಾತಂತ್ರ್ಯ ಮತ್ತು ಘನತೆ ಏನೆಂದು ತಿಳಿಯುತ್ತದೆ. ಅಲ್ಲಿ ಹೊಸದಾದ ಪ್ರಜಾಸತ್ತಾತ್ಮಕವಾದ ಉದ್ಯೋಗಿ–ಉದ್ಯೋಗಸ್ಥ ಸಂಬಂಧಗಳನ್ನು ಕಾಣುತ್ತಾರೆ. ನನಗೆ ತಿಳಿದಿರುವಂತೆ ಗ್ರಾಮೀಣ ಪ್ರದೇಶಗಳಲ್ಲಿ ಯುವಜನ ಪ್ರಬಲ ಜಾತಿಗಳೊಡನೆ ಸಂಘರ್ಷಕ್ಕಿಳಿಯುತ್ತಾರೆ.

ಇಂಥವರು ದಬ್ಬಾಳಿಕೆಯನ್ನು ಸಹಿಸುವುದಿಲ್ಲ. ಇಂಥವರು ತಮ್ಮ ಕುಟುಂಬ ಮತ್ತು ಸಂಬಂಧಿಕರು ಸಿಡಿದೇಳುವಂತೆ ಪ್ರೇರಣೆ ನೀಡುತ್ತಾರೆ. ಹೀಗಿರುವಾಗ ನಗರಗಳಲ್ಲಿ ಅವರು ಒಡ್ಡುವ ಪ್ರತಿರೋಧವನ್ನು ಯಾವುದೇ ಸಾಮಾಜಿಕ ಚಳವಳಿ ಕಟ್ಟಿಕೊಡುವುದಿಲ್ಲ.

ಆದರೂ ಕೇವಲ ನಗರೀಕರಣ ಎನ್ನುವುದಷ್ಟೆ ದಲಿತರಿಗೆ ಸಾಕಾಗುವುದಿಲ್ಲ. ಕಾರಣ ಅಧಿಕ ಆದಾಯ ಅಲ್ಲಿರುವುದಿಲ್ಲ. ಇದನ್ನು ನಿಭಾಯಿಸಲು ಶಿಕ್ಷಣ ಕೇಂದ್ರಿತ ಒಂದು ನವೀನ ಮಾದರಿಯ ಪ್ರಚಾರಾಂದೋಲನ ಬೇಕಾಗುತ್ತದೆ. ಈ ಮೂಲಕ ಅವರು ಅಗತ್ಯವಾದ ಕೌಶಲ್ಯಗಳನ್ನು ರೂಢಿಸಿಕೊಂಡು ಬದುಕನ್ನು ಮತ್ತಷ್ಟು ಸುಧಾರಿಸಿಕೊಳ್ಳುತ್ತಾರೆ. ಇದಕ್ಕೆ ಅಗತ್ಯವಾಗಿ ಇಂಗ್ಲಿಷ್ ಮತ್ತು ಇತರೆ ಕೌಶಲ್ಯಗಳು ಬೇಕಾಗುತ್ತವೆ.

ಹಾಗಾದರೆ ಇಂಥ ಸಂದೇಶವನ್ನು ನಗರದಲ್ಲಿರುವ ದಲಿತರಿಗೆ ಮುಟ್ಟಿಸುವುದು ಹೇಗೆ? ನಾನು ವಿಶ್ವವಿದ್ಯಾಲಯವನ್ನು ಬಿಟ್ಟು ದಲಿತರ ಮಧ್ಯೆ ಕೆಲಸ ಮಾಡಲು ೧೯೯೦ರಲ್ಲಿ ಹೋದಾಗ ನಮ್ಮೆಲ್ಲಾ ಶಕ್ತಿ ಮತ್ತು ಸಮಯ ಸರ್ಕಾರಗಳಿಗೆ ಬೇಡಿಕೆಗಳ ಪತ್ರವನ್ನು ಸಲ್ಲಿಸುವುದರಲ್ಲೇ ಕಳೆದುಬಿಡುವುದನ್ನು ಗಮನಿಸಿದ್ದೇನೆ. ಹೀಗಿರುವಾಗ ದಲಿತ ರಾಜಕಾರಣಿಗಳಾಗಲೀ, ಕಾರ್ಯಕರ್ತರಾಗಲೀ ಮಹತ್ತಾದುದನ್ನು ದಲಿತರಿಗೆ ಮಾಡಿದ್ದಾರೆ ಎಂದು ಭಾವಿಸಲಾಗದು. ಭೋಪಾಲ್ ಸಮ್ಮೇಳನದಲ್ಲಿ ಮಂಡಿತವಾದ ವೈವಿಧ್ಯತೆಯ ನೀತಿ ಬಹುಷಃ ಮುಖ್ಯವಾದ ಘಟನೆಯಾಗಿರಬಹುದು. ಡಾ॥ ಅಂಬೇಡ್ಕರ್‌ರವರು ದಲಿತರಿಗೆ ತಂದುಕೊಟ್ಟ ಹಕ್ಕುಗಳನ್ನು ೧೯೯೦ರ ನಂತರದಲ್ಲಿ ಕಾಯ್ದುಕೊಳ್ಳಲಾಗುತ್ತಿಲ್ಲ.

ಕಾಲ ದಲಿತರ ಪರವಾಗಿದ್ದರೂ ಸಹ ದಲಿತ ನಾಯಕತ್ವ ಇದರ ಬಗ್ಗೆ ಯಾವುದೇ ಸುಳಿವಿಲ್ಲದಂತೆ ಇದೆ. ಸೈದ್ಧಾಂತಿಕವಾಗಿ ಯಾವ ದಿಕ್ಕಿನತ್ತ ಸಾಗಬೇಕೆಂಬುದನ್ನು ದಲಿತ ಚಳವಳಿಯೂ ಸಹ ಖಚಿತವಾಗಿ ತಿಳಿದುಕೊಂಡಂತೆ ಕಾಣುತ್ತಿಲ್ಲ. □

ದಲಿತರೊಂದಿಗಿರುವ ಸಮಯ

ವೈಚಾರಿಕ ಶೂನ್ಯ ತುಂಬುತ್ತಿರುವ ಸಂವಾದಕ್ಕೆ

ಶುಭ ಹಾರೈಕೆಗಳು

ಶ್ರೀ ಮಹೇಂದ್ರ, ಗುತ್ತಿಗೆದಾರರು

ಕೆ.ಆರ್.ಎಸ್

ನನಗೊಂದು ಕನಸಿದೆ!

(೩೧ನೇ ಪುಟದಿಂದ)

ಗಳನ್ನು ಆಧರಿಸಿ ವ್ಯಕ್ತಿತ್ವವನ್ನು ನಿರ್ಧರಿಸುವಂಥ ರಾಷ್ಟ್ರದಲ್ಲಿ ನನ್ನ ನಾಲ್ವರು ಕಂದಮ್ಮಗಳು ಬದುಕುತ್ತಾರೆಂಬ ಕನಸು ನನಗಿದೆ.

ಇಂದು ನನಗೊಂದು ಕನಸಿದೆ!

ವಿಷ ತುಂಬಿಕೊಂಡ ಉಚ್ಚಕುಲವಾದಿಗಳೇ ತುಂಬಿರುವ ಅಲಬಾಮಾದಲ್ಲಿ... 'ಹುಟ್ಟಡಗಿಸುತ್ತೇನೆ' 'ಅಡ್ಡಿಪಡಿಸುತ್ತೇನೆ' ಎಂಬ ಪದಗಳನ್ನೇ ಅರಚುವ ಗವರ್ನರ್ ಇರುವ ಅಲಬಾಮಾದಲ್ಲಿ, ಎಂದಾದರೊಂದು ದಿನ ಪುಟಾಣಿ ಕರಿಯ ಹುಡುಗ-ಹುಡುಗಿಯರು ಪುಟಾಣಿ ಬಿಳಿಯ ಹುಡುಗ-ಹುಡುಗಿಯರ ಕೈಹಿಡಿದುಕೊಂಡು ಸೋದರ ಸೋದರಿಯರಂತೆ ಹೆಜ್ಜೆ ಹಾಕುವುದು ಸಾಧ್ಯವಾಗುತ್ತದೆ ಎಂಬ ಕನಸಿದೆ.

ಇಂದು ನನಗೊಂದು ಕನಸಿದೆ.

ಒಂದು ದಿನ ಆಳವಾದ ಕಮರಿಗಳೆಲ್ಲ ಮೇಲೇಳುತ್ತವೆ; ಉನ್ನತವಾದ ಪರ್ವತಗಳು ಕುಸಿಯುತ್ತವೆ; ಹಳ್ಳದಿಣ್ಣೆಯ ಪ್ರದೇಶಗಳೆಲ್ಲ ಸಮಾನವಾಗುತ್ತವೆ. ವಕ್ರವಾಗಿರುವ ಸ್ಥಳಗಳು ನೇರವಾಗುತ್ತವೆ; ದೇವರ ವೈಭವವು ಅನಾವರಣಗೊಳ್ಳುತ್ತದೆ; ರಕ್ತಮಾಂಸ ತುಂಬಿದ ಎಲ್ಲ ಮಾನವರು ಒಟ್ಟಾಗಿ ಆ ದೈವ ಮಹಿಮೆಯ ದರ್ಶನ ಪಡೆಯುತ್ತಾರೆಂಬ ಕನಸು ನನಗಿದೆ.

ಇದು ನಮ್ಮ ಭರವಸೆ; ಇದೇ ನಂಬಿಕೆಯೊಡನೆ ನಾನು ದಕ್ಷಿಣ ಪ್ರಾಂತ್ಯಕ್ಕೆ ಹಿಂದಿರುಗುತ್ತೇನೆ.

ಈ ನಂಬಿಕೆಯಿಂದ ಸಂಕಷ್ಟದ ಪರ್ವತವನ್ನು ಛಿದ್ರಗೊಳಿಸಿ ಭರವಸೆಯ ಶಿಲೆಗಳನ್ನು ರೂಪುಗೊಳಿಸುವುದು ನಮಗೆ ಸಾಧ್ಯವಾಗುತ್ತದೆ. ಈ ನಂಬಿಕೆಯಿಂದ ನಮ್ಮ ರಾಷ್ಟ್ರದಲ್ಲಿರುವ ವೈಷಮ್ಯದ ಕರ್ಕಶವನ್ನು ಸೋದರತೆಯ ಸ್ವರಮೇಳವನ್ನಾಗಿ ಪರಿವರ್ತಿಸುವುದು ಸಾಧ್ಯವಾಗುತ್ತದೆ. ಈ ನಂಬಿಕೆಯಿಂದ ನಾವೆಲ್ಲ ಒಟ್ಟಾಗಿ ದುಡಿಯುವುದು, ಒಟ್ಟಾಗಿ ಆರಾಧಿಸುವುದು, ಒಟ್ಟಾಗಿ ಹೋರಾಡುವುದು, ಒಟ್ಟಾಗಿ ಸೆರೆಮನೆಗೆ ಹೋಗುವುದು, ಒಂದಲ್ಲ ಒಂದು ದಿನ ನಾವು ಸ್ವತಂತ್ರರಾಗುತ್ತೇವೆಂಬ ಭರವಸೆಯಿಂದ ಸ್ವಾತಂತ್ರ್ಯಕ್ಕಾಗಿ ನಾವು ಒಂದಾಗುವುದು ನಮಗೆ ಸಾಧ್ಯವಾಗುತ್ತದೆ.

ಇವೆಲ್ಲ ಸಾಕಾರವಾದ ಆ ದಿನವೇ...... ಆ ದಿನದಂದು ದೇವರ ಎಲ್ಲ ಮಕ್ಕಳು ಹೊಸ ಅರ್ಥದೊಡನೆ ಹಾಡುವುದು ಸಾಧ್ಯವಾಗುತ್ತದೆ.

ನನ್ನ ರಾಷ್ಟ್ರವೇ, ವಿಮೋಚನೆಯ ಮಧುರನಾಡೇ, ನಿನಗಾಗಿ ನಾನು ಹಾಡುತ್ತೇನೆ.

ನನ್ನ ಪೂರ್ವಿಕರು ಮಡಿದ ಭೂಮಿಯೇ, ಯಾತ್ರಿಗಳ ಹೆಮ್ಮೆಯ ಬೀಡೇ

ಪ್ರತಿಯೊಂದು ಪರ್ವತದ ಓರೆಯಿಂದ ಸ್ವಾತಂತ್ರ್ಯದ ದನಿ ಅನುರಣಿಸಲಿ.

ಅಮೆರಿಕಾವು ಸರ್ವೋತ್ಕೃಷ್ಟ ರಾಷ್ಟ್ರವಾಗಬೇಕಾದರೆ, ಇದು ನಿಜವಾಗಬೇಕು.

ಹಾಗಾಗಿ ನ್ಯೂ ಹ್ಯಾಂಪ್‌ಶೈರ್‌ನ ಅದ್ಭುತ ಶಿಖರಗಳಿಂದ ಸ್ವಾತಂತ್ರ್ಯದ ದನಿ ಮೊಳಗಲಿ

ನ್ಯೂಯಾರ್ಕ್‌ನ ಉನ್ನತ ಪರ್ವತಗಳಿಂದ ಸ್ವಾತಂತ್ರ್ಯದ ಧ್ವನಿ ಪ್ರತಿಧ್ವನಿಸಲಿ

ಪೆನ್ಸಿಲೇವೇನಿಯಾದ ಅಲೆಗೆನೀಸ್‌ನ ಎತ್ತರದಿಂದ ಸ್ವಾತಂತ್ರ್ಯದ ನುಡಿ ಬಿತ್ತರಿಸಲಿ

ಕೊಲರಾಡೋವಿನ ಹಿಮಾಚ್ಛಾದಿತ ಬೆಟ್ಟಗಳಿಂದ ಸ್ವಾತಂತ್ರ್ಯದ ಮಾತು ಇಳಿದು ಬರಲಿ

ಕ್ಯಾಲಿಫೋರ್ನಿಯಾದ ಬಳುಕುವ ಇಳಿಜಾರಿನಿಂದ ಸ್ವಾತಂತ್ರ್ಯದ ಘೋಷ ಉರುಳಿಬರಲಿ.

ಅಷ್ಟೇ ಅಲ್ಲ, ಜಾರ್ಜಿಯಾದ ಬಂಡೆಗಳಿಂದ ಸ್ವಾತಂತ್ರ್ಯದ ಗಾನ ಝಣತ್ಕರಿಸಲಿ

ಟೆನೆಸ್ಸಿಯ ಪರ್ವತ ಸಾಲುಗಳಿಂದ ಸ್ವಾತಂತ್ರ್ಯ ಹಾಡು ತೇಲಿಬರಲಿ

ಮಿಸಿಸಿಪಿಯ ಪ್ರತಿಯೊಂದು ಬೆಟ್ಟ ದಿಬ್ಬಗಳಿಂದ ಸ್ವಾತಂತ್ರ್ಯದ ದನಿ ರಿಂಗಣಿಸಲಿ

ಎಲ್ಲ ಪರ್ವತಗಳಿಂದಲೂ ಸ್ವಾತಂತ್ರ್ಯದ ದನಿ ಮೊಳಗಲಿ ಇದು ಸಂಭವಿಸಿದಾಗ,

ಸ್ವಾತಂತ್ರ್ಯದ ಕಹಳೆ ಮೊಳಗಲು ಅವಕಾಶ ಕಲ್ಪಿಸಿದಾಗ,

ಪ್ರತಿಯೊಂದು ಹಳ್ಳಿ, ಕುಗ್ರಾಮ, ನಗರ, ಪ್ರಾಂತ್ಯದಿಂದ ಸ್ವಾತಂತ್ರ್ಯದ ದನಿ ಅನುರಣಿಸಿದಾಗ ದೇವರ ಎಲ್ಲ ಮಕ್ಕಳು-ಕರಿಯರು ಮತ್ತು ಬಿಳಿಯರು, ಕ್ಯಾಥೋಲಿಕರು ಮತ್ತು ಪ್ರಾಟೆಸ್ಟೆಂಟರು, ಯಹೂದಿಗಳು ಮತ್ತು ಯಹೂದಿಯಲ್ಲದವರು,- ಕೈಜೋಡಿಸಿ ಒಟ್ಟಾಗಿ ಕರಿಯರ ಪುರಾತನ ಆಧ್ಯಾತ್ಮಿಕ ಸ್ತೋತ್ರವನ್ನು ಹಾಡುವ ದಿನವನ್ನು ತ್ವರಿತವಾಗಿ ತಲುಪುವುದು ನಮಗೆ ಸಾಧ್ಯವಾಗುತ್ತದೆ.

ಕೊನೆಗೂ ವಿಮೋಚನೆಯಾಯಿತು! ಕೊನೆಗೂ ವಿಮೋಚನೆಯಾಯಿತು.

ಸರ್ವಶಕ್ತ ಭಗವಂತನೇ ವಂದನೆ, ಕೊನೆಗೂ ನಮಗೆಲ್ಲ ವಿಮೋಚನೆ.

□

ಬುದ್ಧಾಯಣ

೩೫

ಸತ್ಯವನ್ನು ಸತ್ಯವೆಂದು, ಅಸತ್ಯವನ್ನು ಅಸತ್ಯ ವೆಂದು ಒಪ್ಪಿಕೊಳ್ಳುವ ಮನೋಧಾಡ್ಯವನ್ನು ಬೆಳೆಸಿದ್ದ ಅರ್ಥವಾಗದ ವಿಷಯದ ಬಗ್ಗೆ ತನ್ನಲ್ಲಿ ನಿಸ್ಸಂಕೋಚವಾಗಿ ಪ್ರಶ್ನಿ ಸಬೇಕೆಂದು ತಿಳಿದು ಕೊಂಡ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ತಮ್ಮ ಪೂರ್ವಾ ಗ್ರಹಗಳಿಂದ ಮುಕ್ತರಾಗ ಬೇಕೆಂದು ಹೇಳುತ್ತಿದ್ದ ಬುದ್ಧ: 'ಇಲ್ಲಿ ಯಾವುದು ಶಾಶ್ವತವಲ್ಲ. ಎಲ್ಲವೂ ನಾಶ ಹೊಂದುತ್ತವೆ. ಎಲ್ಲವೂ ಬದಲಾವಣೆಗೆ ಬದ್ಧವಾಗಿದೆ. ಬದಲಾಗು ವುದೇ ಪ್ರಗತಿ. ಇಲ್ಲಿ ಯಾವುದು ಅಂತಿಮ ಸತ್ಯವೆಂಬುದು ಇಲ್ಲ. ಸದಾಚಾರ ಮತ್ತು ಆತ್ಮ ವಿಶ್ವಾಸವನ್ನು ಬೆಳೆಸಿ ಕೊಳ್ಳಿ.

ಸಿ.ಎಚ್. ರಾಜಶೇಖರ್

ಬುದ್ಧ ತನ್ನ ಸಂಘಕ್ಕೆ ಸೇರಿದ ಭಿಕ್ಷುಗಳನ್ನು ಗೆಳೆಯರಂತೆ, ಬಂಧುಗಳಂತೆ ಮತ್ತು ಒಡಹುಟ್ಟಿದ ಸಹೋದರರರಂತೆ ನೋಡುಕೊಳ್ಳುತ್ತಿದ್ದ. ಪ್ರತಿಯೊಬ್ಬರನ್ನೂ ಗೆಳೆಯರೆಂದೇ ಸಂಬೋಧಿಸುತ್ತಿದ್ದ. ತನ್ನ ಸಂಘ ಮತ್ತು ಧರ್ಮದ ಆಧಾರಸ್ತಂಭಗಳು ಭಿಕ್ಷುವೇ ಎಂದು ಬಲವಾಗಿ ನಂಬಿದ್ದ. ಯಾರಲ್ಲಿ ದಯೆ, ಕರುಣೆ, ಮಾನವೀಯ ಕಾಳಜಿ ಸಮಾಜ ಸೇವಾಭಾವ ಇರುತ್ತಿತ್ತೋ ಅಂತವರನ್ನು ಭಿಕ್ಷುವಾಗಿ ಆಯ್ದುಕೊಂಡು ದೀಕ್ಷೆ ಕೊಡುತ್ತಿದ್ದ. ಅವರಿಗೆ ಪರಿ ಪರಿಯಾದ ತರಬೇತಿಯನ್ನು ಕೊಟ್ಟು ನಾನಾವಿಧದಲ್ಲಿ ಪರೀಕ್ಷಿಸಿ ನಂತರ ಅವರನ್ನು ಧರ್ಮ ಪ್ರಚಾರಕ್ಕಾಗಿ ಕಳುಹಿಸುತ್ತಿದ್ದ.

ಒಬ್ಬ ಭಿಕ್ಷುವು ಸ್ವಯಂ ಪರಿಪೂರ್ಣನಾಗಿರಬೇಕು ಎಂಬುದೇ ಅವನ ಮೂಲ ತತ್ತ್ವವಾಗಿತ್ತು. ಇಂತಹ ಪರಿಪೂರ್ಣ ಭಿಕ್ಷುವನ್ನು ಧರ್ಮಸೇನಾನಿ ಎಂದು ಪರಿಗಣಿಸುತ್ತಿದ್ದ. ರಣರಂಗದಲ್ಲಿ ಸೈನಿಕನಿಗೆ ಶಸ್ತ್ರವಿದ್ಯೆ ಹೇಗೆ ಮುಖ್ಯವೋ ಹಾಗೆಯೇ ಧರ್ಮಯುದ್ಧದಲ್ಲಿ ಸತ್ಯ, ಸರಳತೆ ಮತ್ತು ಸಮಾನತೆ ಬಹುಮುಖ್ಯ ಎಂದು ತನ್ನ ಭಿಕ್ಷುಗಳಿಗೆ ಹೇಳುತ್ತಿದ್ದ. ಸತ್ಯವನ್ನು ಸತ್ಯವೆಂದು, ಅಸತ್ಯವನ್ನು ಅಸತ್ಯವೆಂದು ಒಪ್ಪಿಕೊಳ್ಳುವ ಮನೋಧಾಡ್ಯವನ್ನು ಬೆಳೆಸಿದ್ದ ಅರ್ಥವಾಗದ ವಿಷಯದ ಬಗ್ಗೆ ತನ್ನಲ್ಲಿ ನಿಸ್ಸಂಕೋಚವಾಗಿ ಪ್ರಶ್ನಿಸಬೇಕೆಂದು ತಿಳಿದುಕೊಂಡ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ತಮ್ಮ ಪೂರ್ವಗ್ರಹಗಳಿಂದ ಮುಕ್ತರಾಗಬೇಕೆಂದು ಹೇಳುತ್ತಿದ್ದ ಬುದ್ಧ:

'ಇಲ್ಲಿ ಯಾವುದು ಶಾಶ್ವತವಲ್ಲ. ಎಲ್ಲವೂ ನಾಶ ಹೊಂದುತ್ತವೆ. ಎಲ್ಲವೂ ಬದಲಾವಣೆಗೆ ಬದ್ಧವಾಗಿದೆ. ಬದಲಾಗುವುದೇ ಪ್ರಗತಿ. ಇಲ್ಲಿ ಯಾವುದು ಅಂತಿಮ ಸತ್ಯವೆಂಬುದು ಇಲ್ಲ. ಸದಾಚಾರ ಮತ್ತು ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಿ, ನಿಮ್ಮ ಅಂತರಂಗದ ಕರೆಗೆ ಓಗೊಡಿ' ಎನ್ನುತ್ತಿದ್ದ ಬುದ್ಧ ಆಗಾಗ ತನ್ನ ಅಸಂಖ್ಯಾತ ಭಿಕ್ಷುಗಳನ್ನು ಒಟ್ಟುಗೂಡಿಸಿ ಚರ್ಚಿಸಿ, ಚಿಂತಿಸಿ, ಮಂಥಿಸಿ, ಪ್ರಶ್ನಿಸಲು ಅನುವು ಮಾಡಿಕೊಡುತ್ತಿದ್ದ ಅಂತಹ ಒಂದು ಸಭೆಯಲ್ಲಿ ಒಬ್ಬ ಭಿಕ್ಷುವು ಹೀಗೆ ಪ್ರಶ್ನೆಯನ್ನು ಕೇಳಲು ಆರಂಭಿಸಿದ:

'ಗುರುದೇವಾ, ಹಳದಿ ವಸ್ತ್ರವನ್ನು ಉಡಲು ಯಾರು ಅನರ್ಹರು ಮತ್ತು ಯಾರು ಅರ್ಹರು?'

'ಗೆಳೆಯಾ, ಯಾವನು ತನ್ನ ಪಾಪವನ್ನು ತೊಳೆದುಕೊಳ್ಳದೆ ಆತ್ಮ ಸಂಯಮವನ್ನು ಸತ್ಯವನ್ನೂ ಕಡೆಗಣಿಸುತ್ತಾನೋ. ಹಳದಿ ವಸ್ತ್ರವನ್ನು ತೊಡಲು ಅನರ್ಹ.'

'ಆದರೆ ಯಾವನು ಪಾಪವನ್ನು ತೊಡೆದುಹಾಕಿ, ಎಲ್ಲ ಸದ್ಗುಣಗಳಲ್ಲಿ ನೆಲೆ ನಿಲ್ಲುತ್ತಾನೋ ಹಾಗೂ ಆತ್ಮ ಸಂಯಮ ಮತ್ತು ಸತ್ಯಶೀಲತೆಯನ್ನು ಬೆಳೆಸಿಕೊಂಡಿರುತ್ತಾನೋ, ಅವನು ನಿಜಕ್ಕೂ ಹಳದಿವಸ್ತ್ರಕ್ಕೆ ಯೋಗ್ಯ'

'ಗುರುದೇವಾ, ಭಿಕ್ಷೆಗೂ ಮತ್ತು ಭಿಕ್ಷುವಿಗೂ ಏನು ವ್ಯತ್ಯಾಸ?'

'ಗೆಳೆಯಾ, ಒಬ್ಬ ಮನುಷ್ಯ ಭಿಕ್ಷೆ ಬೇಡಿದನೆಂಬ ಒಂದೇ ಕಾರಣಕ್ಕೆ ಭಿಕ್ಷುವಾಗಲಾರ.'

'ಯಾರು ಧರ್ಮವನ್ನು ಸಂಪೂರ್ಣವಾಗಿ ಪಾಲಿಸುತ್ತಾರೋ ಅವರು ಭಿಕ್ಷುಗಳೇ ಹೊರತು, ಕೇವಲ ಭಿಕ್ಷೆ ಬೇಡುವವರಲ್ಲ.'

'ಯಾರು ದುಷ್ಟತನದಿಂದ ದೂರವಿರುತ್ತಾರೋ, ಇಂದ್ರಿಯ



ದುಃಖದರಿತ್ಯವೇ ಬಿಡುಗಡೆಯ ಜ್ಞಾನ

ನಿಗ್ರಹ ಮಾಡುತ್ತಾರೋ, ಪ್ರಪಂಚದಲ್ಲಿ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳುತ್ತಾರೋ, ಅವರು ನಿಜವಾಗಿಯೂ ಭಿಕ್ಷುಗಳೆನಿಸಿಕೊಳ್ಳುತ್ತಾರೆ'.

'ಗುರುದೇವಾ, ಆತ್ಮವಿಶ್ವಾಸವನ್ನು ಪಡೆಯುವ ಬಗೆ ಹೇಗೆ?'

'ಗೆಳೆಯಾ, ಕೇವಲ ಶಿಕ್ಷಣ, ವ್ರತಗಳು, ಜ್ಞಾನಾರ್ಜನೆ, ಆನಂದಾತೀಕ ಅಥವಾ ಏಕಾಂಗಿತನದಿಂದ ಪ್ರಾಪಂಚಿಕರಿಗೆ ಗೊತ್ತಿಲ್ಲದ ಮೋಕ್ಷದ ಆನಂದವನ್ನು ಯಾರೊಬ್ಬರೂ ಪಡೆಯಲಾರರು. ಯಾವಾತನು ಆಸೆಗಳನ್ನು ನಿರ್ಮೂಲನೆ ಮಾಡಿದ್ದಾನೋ, ಅವನು ಮಾತ್ರ ಆತ್ಮವಿಶ್ವಾಸವನ್ನು ಗಳಿಸುತ್ತಾನೆ.'

'ಗುರುದೇವಾ, ಮಧುರವಾದ ಮಾತುಗಳು ಯಾವುವು? ಅವು ಹೇಗಿರಬೇಕು?'

'ಗೆಳೆಯಾ, ಯಾವ ಭಿಕ್ಷುವು ತನ್ನ ಬಾಯಿಯನ್ನು ನಿಯಂತ್ರಿಸುತ್ತಾನೋ, ವಿವೇಚನೆ ಮತ್ತು ಶಾಂತಿಯಿಂದ ಮಾತನಾಡುತ್ತಾನೋ, ಯಾವನು ಧರ್ಮದ ಅರ್ಥವನ್ನು ಸತ್ಯ ಮತ್ತು ಸರಳತೆಯಿಂದ ಬೋಧಿಸುತ್ತಾನೋ, ಅಂತಹ ಭಿಕ್ಷುವಿನ ಮಾತುಗಳು ಮಧುರವಾಗಿರುತ್ತವೆ.'

'ಗುರುದೇವಾ, ಧರ್ಮದಿಂದ ವಿಚಲಿನಾಗದೆ ಇರುವ ಬಗೆ ಹೇಗೆ?'

'ಗೆಳೆಯಾ, ಯಾವ ಭಿಕ್ಷುವು ಧರ್ಮದಲ್ಲಿ ನೆಲೆನಿಂತು. ಅದರಲ್ಲಿಯೇ ಸಂತೋಷ ಪಡೆದು, ಅದನ್ನೇ ಕುರಿತು ಧ್ಯಾನಿಸುತ್ತಾ. ಧ್ಯಾನಿಸಿದ್ದನ್ನು ಜ್ಞಾಪಿಸಿಕೊಳ್ಳುತ್ತಾ ಇರುವನೋ, ಅವನು ನಿಜವಾದ ಧರ್ಮದಿಂದ ವಿಚಲಿತನಾಗುವುದಿಲ್ಲ'.

'ಗುರುದೇವಾ, ಮನಃಶಾಂತಿಯ ಮೂಲವೇನು?'

'ಗೆಳೆಯಾ, ದ್ವೇಷದ ಸಂಹಾರವೇ ಮನಃಶಾಂತಿಯ ಮೂಲ'

'ಗುರುದೇವಾ, ಭಿಕ್ಷುಗಳನ್ನು ಕಂಡು ದೇವತೆಗಳೂ ಕೂಡ ಗೌರವಿಸುವಂತಾಗಲು ಏನು ಮಾಡಬೇಕು?'

'ಗೆಳೆಯಾ, ಯಾವಾತ ನಾಮರೂಪಗಳನ್ನು ದಾಟುತ್ತಾನೋ, ಆಗಿ ಹೋಗಿದ್ದರ ಬಗ್ಗೆ ದುಃಖಿಸುವುದಿಲ್ಲವೋ, ತಾನು ಸ್ವಲ್ಪವನ್ನೇ ಪಡೆದಿದ್ದರೂ ಅದನ್ನು ತುಚ್ಛವಾಗಿ ಕಾಣುವುದಿಲ್ಲವೋ, ಸೋಮಾರಿತನವನ್ನು ಮೀರಿ ನಿಂತಿರುತ್ತಾನೋ, ಯಾವ ಭಿಕ್ಷುವಿನ ಜೀವನ ಶುದ್ಧವಾಗಿರುತ್ತದೋ, ಅಂತವನನ್ನು ಕಂಡರೆ ದೇವತೆಗಳು ಶ್ಲಾಘಿಸುತ್ತಾರೆ'.

'ಗುರುದೇವಾ, ನಿರ್ವಾಣ ಪಡೆಯುವ ಬಗೆ ಹೇಗೆ?'

'ಭಿಕ್ಷು ಸಹೋದರರೇ, ಸ್ವಾರ್ಥದಿಂದ ತುಂಬಿರುವ ನಿಮ್ಮ ನಿಮ್ಮ ದೋಣಿಯನ್ನು ತೆರವು ಮಾಡಿ. ತೆರವಾದ

ದೋಣಿಯು ವೇಗವಾಗಿ ಚಲಿಸುತ್ತದೆ. ಆಗ ಮಾತ್ರ ನೀವು ದಯಾಪರರಾಗಿ ವರ್ತಿಸಲು ಸಾಧ್ಯ ಬುದ್ಧನ ತತ್ತ್ವಗಳಿಂದ ಸಂತೋಷ ಪಡೆಲು ಸಾಧ್ಯ ಮನುಷ್ಯ ಸಹಜ ಮೋಹವನ್ನು ನಿರ್ಮೂಲನೆ ಮಾಡಿಕೊಳ್ಳಲು ಸಾಧ್ಯ ಅಂತವನು ನಿರ್ವಾಣವೆಂಬ ಆನಂದವನ್ನು ಪಡೆಯಲು ಸಾಧ್ಯ'

'ಗುರುದೇವಾ, ಮನುಷ್ಯನ ಸಂಕೋಲೆಗಳು ಯಾವುವು? ಆ ಪ್ರವಾಹದಿಂದ ತಪ್ಪಿಸಿಕೊಳ್ಳುವ ಬಗೆ ಹೇಗೆ?'

'ಭಿಕ್ಷುಗಳೇ, ಆಸೆ, ಮೋಹ, ದ್ವೇಷ, ಮಧ ಮತ್ತು ಮತ್ಸರ ಇವೇ ಮನುಷ್ಯನ ಸಹಜ ಶತ್ರುಗಳು. ಈ ಐದು ಸಂಕೋಲೆಗಳಿಂದ ನಿಮ್ಮನ್ನು ನೀವು ಕತ್ತರಿಸಿಕೊಳ್ಳಿ, ಆ ಐದನ್ನು ಇಲ್ಲೇ ಬಿಡಿ. ಆ ಐದನ್ನು ಯಾವಾತ ಮೀರಿ ಮೇಲೇಳುತ್ತಾನೆ, ಅವನು ನಿಜಕ್ಕೂ ಸಂಕೋಲೆಗಳ ಪ್ರವಾಹದಿಂದ ತಪ್ಪಿಸಿಕೊಂಡಾತ'.

'ಗುರುದೇವಾ, ಭಿಕ್ಷುಗಳಾದ ನಾವು ಯಾವುದಕ್ಕೆ ಪ್ರಥಮ ಆದ್ಯತೆ ಕೊಡಬೇಕು?'

'ಭಿಕ್ಷುಗಳೇ, ಎಚ್ಚರ ತಪ್ಪದಿರಿ! ಸುಖ ಕೊಡುವ ವಿಷಯ ಕುರಿತು ಧ್ಯಾನಿಸಬೇಡಿ. ಜ್ಞಾನವಿಲ್ಲದೆ ಚಿಂತನೆ ಇಲ್ಲ. ಚಿಂತನೆ ಇಲ್ಲದೆ ಜ್ಞಾನವಿಲ್ಲ. ಜ್ಞಾನ ಮತ್ತು ಚಿಂತನೆ ಈ ಎರಡಕ್ಕೆ ಪ್ರಥಮ ಆದ್ಯತೆ ಇರಲಿ'

'ಗುರುದೇವಾ, ಹೆಚ್ಚು ಆನಂದವನ್ನು ತರುವ ಉನ್ನತಿಯು ಯಾವುದು?'

'ಭಿಕ್ಷುಗಳೇ, ದುಃಖದ ಅಂತ್ಯವೇ ನಿಜವಾದ ಉನ್ನತಿ. ಸ್ವಾರ್ಥದಿಂದ ತುಂಬಿದ ಭರ್ತಿ ಮನೆಯನ್ನು ತೆರವುಗೊಳಿಸಬೇಕು. ನಿಸ್ವಾರ್ಥವೆಂಬ ಖಾಲಿ ಮನೆಯನ್ನು ಪ್ರವೇಶಿಸಬೇಕು. ಆಗ ನಿಮಗೆ ಶಾಂತಚಿತ್ತತೆ ದೊರೆಯುತ್ತದೆ. ಇದರಿಂದ ಧರ್ಮದ ಸ್ಪಷ್ಟ ಜ್ಞಾನ ತೆರೆದು ನಿಲ್ಲುತ್ತದೆ. ವಿವೇಕಿಯಾದ ಭಿಕ್ಷುವಿಗೆ ಇದೇ ನಿಜವಾದ ಆರಂಭ. ಮುಂದೆ ಅಂತಹ ಭಿಕ್ಷುವು ಇಂದ್ರಿಯಗಳ ಮೇಲೆ ಕಣ್ಣಿಟ್ಟಿರುತ್ತಾನೆ. ಸಮಾಧಾನದಿಂದ ಕೂಡಿರುತ್ತಾನೆ. ಧರ್ಮದ ನಿಯಮಕ್ಕೆ ಒಳಪಟ್ಟಿರುತ್ತಾನೆ. ಶುದ್ಧ ಚಾರಿತ್ರ್ಯವನ್ನು ಹೊಂದಿದವನಾಗಿರುತ್ತಾನೆ. ಕ್ರಿಯಾಶೀಲ ಸ್ನೇಹಿತರನ್ನು ಹೊಂದಿರುತ್ತಾನೆ. ಅಲ್ಲದೆ ಭಿಕ್ಷೆಯಿಂದಲೇ ಜೀವಿಸುತ್ತಾನೆ, ತನ್ನ ಕರ್ತವ್ಯದಲ್ಲಿ ಪರಿಪೂರ್ಣತೆಯತ್ತ ಸಾಗುತ್ತಾನೆ, ಇದೇ ನಿಜವಾದ ಉನ್ನತಿ'.

'ಗುರುದೇವಾ, ಭಿಕ್ಷುಗಳಾದ ನಾವು ಯಾವುದರಲ್ಲಿ ಸದಾ ನೆಲೆ ನಿಲ್ಲಬೇಕು?'

'ಎಲ್ಲೆ ಭಿಕ್ಷುಗಳೇ. ಬುದ್ಧನ ಶಿಷ್ಯರಾದ ತಾವುಗಳು ಯಾವಾಗಲೂ ಹೆಚ್ಚು ಜಾಗರೂಕರಾಗಿರಿ. ಹಗಲು ರಾತ್ರಿ ಬಹುಜನರ ಬಿಡುಗಡೆಗಾಗಿ ಆಲೋಚಿಸಿ. ಸಂಘದಲ್ಲಿ ನೆಲೆ ನಿಲ್ಲಿ. ಧರ್ಮದಲ್ಲಿ ನೆಲೆನಿಲ್ಲಿ, ಶರೀರದಲ್ಲೇ ನೆಲೆನಿಲ್ಲಿ ದಯೆಯಿಂದ ಆನಂದವನ್ನು ಪಡೆಯಿರಿ. ಧ್ಯಾನ ಅಥವಾ ಚಿಂತನೆಯಿಂದ ಆನಂದ ಪಡೆಯಿರಿ. ಸಮಾನತೆಯನ್ನು ಹಂಚಿಕೊಳ್ಳಿ ಸಮಾನತೆಯಲ್ಲಿ ನೆಲೆನಿಲ್ಲಿ'.

'ಗುರುದೇವಾ, ಭಿಕ್ಷುಗಳಿಗೆ ತಮ್ಮ ಅಂತಿಮ ಸಂದೇಶವೇನು?'

'ಭಿಕ್ಷು ಸಹೋದರರೇ, ನಿಮ್ಮನ್ನು ನೀವೇ ಮೇಲೆತ್ತಿಕೊಳ್ಳಬೇಕು. ಏಕೆಂದರೆ, ದೇವರಿಲ್ಲ. ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಬೇಕು. ನಿಮ್ಮ ಸ್ವರಕ್ಷಣೆಯನ್ನು ನೀವೇ ಮಾಡಿಕೊಳ್ಳಬೇಕು. ನಿಮ್ಮ ಜಾಗರೂಕತೆಯನ್ನ ನೀವೇ ಕಾಪಾಡಿಕೊಳ್ಳಬೇಕು. ಏಕೆಂದರೆ, ಮನಸ್ಸಿಗೆ ಮನಸ್ಸೇ ಒಡೆಯ. ಮನಸ್ಸಿಗೆ ಮನಸ್ಸೇ ಆಶ್ರಯ'

'ಆದುದರಿಂದ ವರ್ತಕನು ಹೇಗೆ ಒಳ್ಳೆಯ ಕುದುರೆಯನ್ನು ನಿಯಂತ್ರಿಸುತ್ತಾನೋ, ಹಾಗೆ ನಿಮ್ಮನ್ನು ನೀವೇ ನಿಯಂತ್ರಿಸಿಕೊಳ್ಳಿ. ಅದೇ ಪ್ರಗತಿ. ಅದೇ ಬದಲಾವಣೆ, ಅಥವಾ ಅದೇ ಬಿಡುಗಡೆ!'

'ಆಗ ಬುದ್ಧನ ಅಸಂಖ್ಯಾತ ಭಿಕ್ಷುಗಳು ಒಕ್ಕೊರಳಿನಿಂದ ಹೀಗೆ ಘೋಷಿಸಿದರು:

'ಹೌದು... ಗುರುದೇವಾ, ನಮಗೆ ನಾವೇ! ಏಕೆಂದರೆ ಮನಸ್ಸಿಗೆ ಮನಸ್ಸೇ ಒಡೆಯ!! ಮನಸ್ಸಿಗೆ ಮನಸ್ಸೇ ಆಶ್ರಯ!!!' □



'ಸಂವಾದ' ದೊರೆಯುವ ಸ್ಥಳ

☞ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
✦ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು– ೫೬೦ ೦೦೧, ☎ : ೨೨೨೦೩೫೮೦
✦ಗಾಂಧಿನಗರ, ಬೆಂಗಳೂರು–೫೬೦ ೦೦೯, ☎ : ೨೨೨೫೦೩೮೨, ✦ಸ್ಟೇಷನ್ ರಸ್ತೆ, ಗುಲ್ಬರ್ಗ–೨ ☎ : ೪೨೪೩೦೨
✦ಕೆ.ಎಸ್.ರಾವ್.ರಸ್ತೆ, ಮಂಗಳೂರು–೧, ☎ : ೨೪೪೧೧೦೧೬, ✦ರಾಮಸ್ವಾಮಿ ವೃತ್ತ ಮೈಸೂರು–೨೪, ☎ : ೨೪೨೪೮೯೪
☞ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ೧೧೮/೩ ಮೊದಲ ಮಹಡಿ ೨ನೇ ಮುಖ್ಯ ರಸ್ತೆ, (ನಟರಾಜ್ ಟಾಕೀಸ್ ಪಕ್ಕ) ಶೇಷಾದ್ರಿಪುರಂ ಬೆಂ–೨೦
☞ಕೆ.ಎಸ್.ಆರ್.ಟಿ.ಸಿ. ಬುಕ್ ಸ್ಟಾಲ್, ಫ್ಲಾಟ್ ಫಾಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು
☞ಉದಯ ಕುಮಾರ್ ಅಶೋಕ ಸ್ಟೋರ್, ಹೋಟೆಲ್ ಅಶೋಕ, ವಿಜಯನಗರ ಬೆಂಗಳೂರು–೫೬೦೦೪೦

'SAMVADA' Kannada Monthly, July 2008 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಕಣ್ಣುಗಳಿಗೆ ಹಬ್ಬ! ಮೈಮನಗಳಿಗೆ ಪುಳಕ!
ರೋಮಾಂಚಕ ಅನುಭವ!
ಏಕ ಕಾಲದಲ್ಲಿ ಈ ಎಲ್ಲಾ ಅನುಭವವನ್ನು ನಿಮ್ಮದಾಗಿಸುವ

ಹಂಪಿ

ಹಂಪಿ ಎಂದಾಕ್ಷಣ ಪ್ರತಿಯೊಬ್ಬರ ಮನಸ್ಸಿನಲ್ಲಿ ಮೂಡಿಬರುವ ಚಿತ್ರ ಮುತ್ತು-ರತ್ನಗಳನ್ನು ರಸ್ತೆ ಬದಿಯಲ್ಲಿ ರಾಶಿ ಹಾಕಿ ಮಾರಾಟ ಮಾಡುತ್ತಿದ್ದ ದೃಶ್ಯ. ದೇಶ ವಿದೇಶಿಯರು ಬೆಕ್ಕಸ ಬೆರಗಾಗಿ ವಿಜಯನಗರ ಸಾಮ್ರಾಜ್ಯದ ವೈಭವವನ್ನು ಆನಂದಿಸುತ್ತಿರುವ ಕ್ಷಣಗಳು. ಸುಖ ಸಂತಸದ ಬದುಕು ನಡೆಸುತ್ತಿದ್ದ ಹಸನ್ಮುಖಿ ಪ್ರಜಾ ಸಮುದಾಯ.

ಏನುಂಟು! ಏನಿಲ್ಲ!

ಇಂತಹ ವೈಭವೋಪೇತ ಸಾಮ್ರಾಜ್ಯದ ಅವಶೇಷಗಳೊಂದಿಗೆ ವಿಶಾಲ ಕ್ಷೇತ್ರದಲ್ಲಿ ಸಾಕ್ಷಿಯಾಗಿ, ಸದಾ ಕುತೂಹಲದ ತಾಣವಾಗಿರುವ ಹಂಪಿ ಇಂದು ಜಗತ್ತಿನ ಬೃಹತ್ ತೆರೆದ ವಸ್ತು ಸಂಗ್ರಹಾಲಯ; ವಿಶ್ವ ಪರಂಪರೆಯ ತಾಣ.

ಕರ್ನಾಟಕ ವಾರ್ತೆ
Karnataka Information